# ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿ
# ಇಲಾಖೆಗಳು ಮತ್ತು ಸಾರ್ವಜನಿಕ ವಲಯ ಉದ್ಯಮಗಳ
# ಮೇಲಿನ
# ಅನುಪಾಲನಾ ಲೆಕ್ಕಪರಿಶೋಧನೆ

## ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷ

**ಕರ್ನಾಟಕ ಸರ್ಕಾರ**

*2022ನೇ ವರ್ಷದ ವರದಿ ಸಂಖ್ಯೆ: 7*

## ಪರಿವಿಡಿ


| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| ಮುನ್ನುಡಿ | | v |
| ಸ್ಥೂಲನೋಟ | | vii - xiv |
| **ಭಾಗ–I** | | |
| **ಅಧ್ಯಾಯ–I** | | |
| ಪೀಠಿಕೆ | 1.1 | 1 |
| ಆಯವ್ಯಯ ಚಿತ್ರಣ | 1.2 | 1 |
| ರಾಜ್ಯ ಸರ್ಕಾರದ ಸಂಪನ್ಮೂಲಗಳ ಅನ್ವಯ | 1.3 | 2 |
| ನಿರಂತರ ಉಳಿತಾಯಗಳು | 1.4 | 2 |
| ಭಾರತ ಸರ್ಕಾರದಿಂದ ಸಹಾಯಾನುದಾನಗಳು | 1.5 | 2 |
| ಲೆಕ್ಕಪರಿಶೋಧನೆ ನಡೆಸಲು ಅಧಿಕಾರ | 1.6 | 2-3 |
| ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II), ಕರ್ನಾಟಕ, ಬೆಂಗಳೂರು ಇವರ ಕಛೇರಿಯ ಸಾಂಸ್ಥಿಕ ರಚನೆ | 1.7 | 3 |
| ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ | 1.8 | 3-4 |
| ಪ್ರಮುಖ ಲೆಕ್ಕಪರಿಶೋಧನಾ ಅವಲೋಕನಗಳು ಮತ್ತು ಲೆಕ್ಕಪರಿಶೋಧನೆಗೆ ಪ್ರತಿಕ್ರಿಯೆ | 1.9 | 4 |
| **ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ** | | **4** |
| ಬಾಕಿ ಉಳಿದಿರುವ ತಪಾಸಣಾ ವರದಿಗಳು | 1.10.1 | 4-5 |
| ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣಾ ಕ್ರಮಗಳು | 1.10.2 | 5 |
| ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳು | 1.10.3 | 5 |
| ರಾಜ್ಯ ಶಾಸಕಾಂಗದಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ | 1.11 | 5 |
| **ಅಧ್ಯಾಯ–II** | | |
| **ಇಲಾಖೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು** | | |
| **ನಗರಾಭಿವೃದ್ಧಿ ಇಲಾಖೆ** | | **7** |
| **ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ** | | **7** |
| *ವಸತಿ ಯೋಜನೆಯನ್ನು ಕಾರ್ಯಗತಗೊಳಿಸಿದ್ದು* | 2.1 | 7-10 |
| *ಭೂ ಮಾಲೀಕರುಗಳಿಗೆ ಅನರ್ಹ ಲಾಭಗಳನ್ನು ಕಲ್ಪಿಸಿರುವುದು* | 2.2 | 10-13 |
| *ಪ್ರಾರಂಭಿಕ ಠೇವಣಿಯನ್ನು ನಿಯಮಬಾಹಿರವಾಗಿ ಮರುಪಾವತಿಸಿರುವುದು* | 2.3 | 13-15 |
| **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ** | | **15** |
| *ಕೊಳಚೆ ನೀರು ಕೊಳವೆಗಳಿಗೆ ಸಂರಕ್ಷಣಾ ಲೇಪನವನ್ನು ಒದಗಿಸುವಲ್ಲಿ ಮಾಡಲಾದ ತಪ್ಪಿಸಬಹುದಾಗಿದ್ದ ವೆಚ್ಚ* | 2.4 | 15-17 |
| *ಹೊರಗುತ್ತಿಗೆ ಉದ್ಯೋಗಿಗಳ ಸಂಬಳ/ಕೂಲಿವೇತನ ಪಾವತಿಯಲ್ಲಿನ ನಿಯಮಬಾಹಿರತೆಗಳು* | 2.5 | 18-22 |
| **ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ** | | **22** |
| **ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ** | | **22** |
| *ಗುತ್ತಿಗೆದಾರರುಗಳಿಗೆ ಅನರ್ಹ ಲಾಭಗಳನ್ನು ಮಾಡಿಕೊಟ್ಟಿದ್ದುದು* | 2.6 | 22-24 |

| ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|
| **ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ** | | **24** |
| *ಅನುದಾನವನ್ನು ನಿಯಮಬಾಹಿರವಾಗಿ ಬಿಡುಗಡೆಗೊಳಿಸಿದ್ದು* | 2.7 | 24-26 |
| **ಲೋಕೋಪಯೋಗಿ ಇಲಾಖೆ** | | **26** |
| *ಗುತ್ತಿಗೆದಾರರಿಗೆ ಅಧಿಕ ಪ್ರಮಾಣದಲ್ಲಿ ಪಾವತಿಗಳನ್ನು ಮಾಡಿದ್ದುದು* | 2.8 | 26-29 |
| **ಸಾರಿಗೆ ಇಲಾಖೆ** | | **29** |
| ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಿದ್ದುದು | 2.9 | 29-31 |
| **ಭಾಗ–II** | | |
| **ಅಧ್ಯಾಯ–I** | | |
| **ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯವೈಖರಿ** | | |
| ಸಾಮಾನ್ಯ | 1.1 - 1.2 | 33-34 |
| ಉತ್ತರದಾಯಿತ್ವದ ಚೌಕಟ್ಟು | 1.3 - 1.4 | 34-35 |
| ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ | 1.5 - 1.6 | 35-36 |
| ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆಗಳು | 1.7-1.9 | 36-38 |
| ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ | 1.10-1.12 | 39-40 |
| ಇತ್ತೀಚಿನ ಅಂತಿಮರೂಪಕ್ಕೆ ತರಲಾಗಿರುವ ಲೆಕ್ಕಪತ್ರಗಳ ಅನುಸಾರ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯನಿರ್ವಹಣೆ | 1.13 | 40-42 |
| ಈ ವರದಿಯ ವ್ಯಾಪ್ತಿ | 1.14 | 42 |
| ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ | 1.15 | 42 |
| ಲೆಕ್ಕಪರಿಶೋಧನಾ ವರದಿಗಳಿಗೆ ಸಂಬಂಧಿಸಿದಂತೆ ಅನುಸರಣಾ ಕ್ರಮಗಳು | 1.16-1.18 | 42-44 |
| ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ | 1.19 | 44 |
| **ಅಧ್ಯಾಯ – II** | | |
| **ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು** | | |
| **ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ** | | **45** |
| *ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್‌ನ ಕಾರ್ಯಗತಗೊಳಿಸುವಿಕೆ* | 2.1 | 45-53 |
| **ಸಾರ್ವಜನಿಕ ವಲಯ ಉದ್ದಿಮೆಗಳು** | | **53** |
| *ನಷ್ಟವನ್ನುಂಟು ಮಾಡುತ್ತಿರುವ ಸಾರ್ವಜನಿಕ ವಲಯ ಉದ್ದಿಮೆಗಳು* | 2.2 | 53-73 |
| **ಬೆಂಗಳೂರು ಮಹಾನಗರ ಸಾರಿಗೆ ನಿಗಮ** | | **74** |
| *ಅನುದಾನವನ್ನು ಉಪಯೋಗಿಸಿಕೊಳ್ಳದಿದ್ದ ಕಾರಣ ನಷ್ಟ ಅನುಭವಿಸಿದ್ದು.* | 2.3 | 74-79 |

| ವಿವರಗಳು | | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| **ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ** | | | **79** |
| *ವಿದ್ಯುತ್ ಉತ್ಪಾದನೆಯ ವರಮಾನದಲ್ಲಿ ನಷ್ಟ* | | 2.4 | 79-82 |
| **ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ** | | | **82** |
| *ಸುಬಾಬುಲ್ ಮರಗಿಡಗಳ ಮೇಲೆ ಅನುತ್ಪಾದಕ ಹೂಡಿಕೆ* | | 2.5 | 82-85 |
| **ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ** | | | **85** |
| *ಹೆಚ್ಚಳಗೊಳಿಸಲ್ಪಟ್ಟ ದರಗಳಲ್ಲಿ ಸಾಮಗ್ರಿಗಳ ಖರೀದಿ* | | 2.6 | 85-89 |
| **ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್** | | | **89** |
| *ನದಿ ಮರಳು ಆಮದಿನ ಮೇಲೆ ಅನುತ್ಪಾದಕ ಹೂಡಿಕೆ* | | 2.7 | 89-92 |
| **ಕರ್ನಾಟಕ ರಾಜ್ಯ ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ** | | | **93** |
| *ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ ಅನರ್ಹ ಲಾಭಗಳನ್ನು ಮಾಡಿಕೊಟ್ಟಿದ್ದುದು* | | 2.8 | 93-95 |
| *ಸಂಖ್ಯೆ:* | **ಅನುಬಂಧ** | | |
| **ಭಾಗ–Iರ ಅಧ್ಯಾಯ – I** | | | |
| 1 | ಸತತ ಉಳಿತಾಯಗಳನ್ನು ತೋರಿಸುವ ಅನುದಾನಗಳು | 1.4 | 97 |
| 2 | ಸಿಎಜಿರವರ (ಡಿಪಿಸಿ ಕಾಯ್ದೆ), 1971ರ ಅನುಚ್ಛೇದ 19(2), 19(3) ಮತ್ತು 20(1)ರಡಿಯಲ್ಲಿ ಲೆಕ್ಕಪರಿಶೋಧನೆ ಮಾಡಿದ ಸ್ವಾಯತ್ತ ಸಂಸ್ಥೆಗಳ ವಹಿಸುವಿಕೆಯ ಸಮೀಕ್ಷೆಯ ವಾರ್ಷಿಕ ಸಲ್ಲಿಕೆ | 1.7 ಮತ್ತು 1.11 | 98 |
| 3 | 31 ಮಾರ್ಚ್ 2021ರವರೆಗೆ ಜಾರಿ ಮಾಡಿರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ಬಾಕಿಯ ವರ್ಷಾವಾರು ವಿವರಗಳು | 1.10.1 | 99 |
| 4 | 31 ಡಿಸೆಂಬರ್ 2022ರಲ್ಲಿದ್ದಂತೆ ಬಾಕಿಯಿರುವ ಇಲಾಖಾ ಟಿಪ್ಪಣಿಗಳ ವಿವರಗಳು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) | 1.10.2 | 100 |
| 5 | ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚಿಸಬೇಕಿರುವ ಕಂಡಿಕೆಗಳು | 1.10.3 | 101 |
| **ಭಾಗ–Iರ ಅಧ್ಯಾಯ – II** | | | |
| 6 | ಕಣಿಮಿಣಿಕೆ ಹಂತ I ಅಡಿಯಲ್ಲಿ ಅಪೂರ್ಣ ರಚನೆಗಳನ್ನು ತೋರಿಸುವ ಚಿತ್ರಗಳು | 2.1 | 102 |
| 7 | ಪಾಲಿಮರ್ ರಕ್ಷಣಾತ್ಮಕ ಲೇಪನಕ್ಕಾಗಿ ಭರಿಸಲಾದ ಹೆಚ್ಚುವರಿ ವೆಚ್ಚವನ್ನು ತೋರಿಸುವ ವಿವರಗಳು | 2.4 | 103 - 104 |
| 8 | ಏಜೆನ್ಸಿಯಿಂದ ನೌಕರರ ಭವಿಷ್ಯ ನಿಧಿ ಮತ್ತು ನೌಕರರ ರಾಜ್ಯ ವಿಮೆಯ ಕಡಿಮೆ ಪಾವತಿಯನ್ನು ತೋರಿಸುವ ಕೋಷ್ಟಕ | 2.5.1 | 105-106 |
| 9 | ಹೆಚ್ಚುವರಿಯಾಗಿ ಪಾವತಿಯಾದ ಸೇವಾ ಶುಲ್ಕ ಮತ್ತು ನೌಕರರ ರಾಜ್ಯ ವಿಮೆ ವಂತಿಗೆಯ ಉದ್ಯೋಗಿ ಕೊಡುಗೆಯ ವಿವರಗಳು | 2.5.2 | 107 |

| | ವಿವರಗಳು | ಕಂಡಿಕೆ ಸಂಖ್ಯೆ | ಪುಟ ಸಂಖ್ಯೆ |
|---|---|---|---|
| 10 | ನೌಕರರ ಭವಿಷ್ಯ ನಿಧಿ ವಂತಿಗೆಗೆ ಉದ್ಯೋಗದಾತರ ಕೊಡುಗೆಯ ಹೆಚ್ಚುವರಿ ಪಾವತಿಯ ವಿವರಗಳು | 2.5.3 | 108 |
| 11 | ನೌಕರರ ರಾಜ್ಯ ವಿಮೆಯ ವಂತಿಗೆಗೆ ಉದ್ಯೋಗದಾತರ ಕೊಡುಗೆಯ ಹೆಚ್ಚುವರಿ ಪಾವತಿಯ ವಿವರಗಳು | 2.5.3 | 109 |
| 12 | ತಪ್ಪಾದ ದರಪಟ್ಟಿಯ ಅಳವಡಿಕೆಯ ಕಾರಣ ಗುತ್ತಿಗೆದಾರರಿಗೆ ಪಾವತಿಸಿದ ಹೆಚ್ಚುವರಿಯನ್ನು ತೋರಿಸುವ ಕೋಷ್ಟಕ | 2.6 | 110 |
| 13 A | ತಪ್ಪಾದ ವರ್ಗೀಕರಣದ ಕಾರಣ ಕಡಿಮೆ ತೆರಿಗೆ ತೋರಿಸುವ ಕೋಷ್ಟಕ | 2.9.1 | 111 |
| 13 B | ಕರ್ನಾಟಕ ಮೋಟಾರು ವಾಹನ ನಿಯಮಗಳು 1989 ರ ನಿಯಮ151(2) ಅನ್ನು ಅನುಸರಿಸದ ಕಾರಣ ತ್ರೈಮಾಸಿಕ ತೆರಿಗೆಯ ಮೌಲ್ಯಮಾಪನವನ್ನು ತೋರಿಸುವ ಕೋಷ್ಟಕ | 2.9.1 | 111 |
| **ಭಾಗ–IIರ ಅಧ್ಯಾಯ – I** | | | |
| 14 | ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿ | 1.1 | 112-115 |
| 15 | ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಇಲಾಖಾವಾರು ಬಾಕಿಯಿರುವ ಪರೀಕ್ಷಣಾ ವರದಿಗಳನ್ನು* ತೋರಿಸುವ ತಃಖ್ತೆ | 1.19 | 116 |
| **ಭಾಗ–IIರ ಅಧ್ಯಾಯ – II** | | | |
| 16 | ಸೆಪ್ಟೆಂಬರ್ 2021 ರಂತೆ ಡಾಸ್ ಅಡಿಯಲ್ಲಿ ನೀಡಲಾದ ಕೆಲಸಗಳ ಪೂರ್ಣಗೊಳಿಸುವಿಕೆಯ ಸ್ಥಿತಿ | 2.1.2 | 117-118 |
| 17 | ವಿವಿಧ ಚಟುವಟಿಕೆಗಳಿಗೆ ತೆಗೆದುಕೊಂಡ ಸಮಯ | 2.1.2 | 119 |
| 18 | ಫೆಬ್ರವರಿ 2021 ರಂತೆ ಗ್ರಾಹಕರೊಂದಿಗೆ ಟ್ಯಾಗ್ ಮಾಡಲಾದ ಡಿಟಿಸಿಗಳ ವಿವರಗಳು | 2.1.3.1 | 120 |
| 19 | 2015–16 ರಿಂದ 2020–21 ರ ಅವಧಿಯಲ್ಲಿ ಕರ್ನಾಟಕ ಸರ್ಕಾರದಿಂದ ಸಂದಾಯಿತ ಬಂಡವಾಳದ ವಿವರಗಳು ಮತ್ತು ಮಾರ್ಚ್ 2021 ರ ಹೊತ್ತಿಗೆ ಸಂಚಿತ ಬಂಡವಾಳದ ಹೂಡಿಕೆ ಮತ್ತು ಸಂಚಿತ ನಷ್ಟ | 2.2.1 | 121 |
| 20 | ವಿವಿಧ ರಿಯಾಯಿತಿಗಳ ಕಡೆಗೆ ಸಾರಿಗೆ ನಿಗಮಗಳಿಂದ ಮಾಡಲಾದ ಹಕ್ಕೊತ್ತಾಯ ಮತ್ತು ವಾಸ್ತವಿಕ ಸ್ವೀಕರಣೆ | 2.2.2.2 | 122 |
| 21 | ಸಹಾಯಧನಗಳ ಕಡೆಗೆ ವಿಸಕಂಗಳ ಹಕ್ಕುಗಳು | 2.2.3.1 | 123 |
| | ಪದಕೋಶ | 2.1.2 | 124 |

# ಮುನ್ನುಡಿ

31 ಮಾರ್ಚ್ 2021ಕ್ಕೆ ಕೊನೆಗೊಂಡ ವರ್ಷದ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯನ್ನು ರಾಜ್ಯ ವಿಧಾನಮಂಡಲದಲ್ಲಿ ಮಂಡಿಸಲು ಸಂವಿಧಾನದ 151 (2) ನೇ ವಿಧಿಯ ಅಡಿಯಲ್ಲಿ ಕರ್ನಾಟಕ ರಾಜ್ಯಪಾಲರಿಗೆ ಸಲ್ಲಿಸುವ ಸಲುವಾಗಿ ತಯಾರಿಸಲಾಗಿದೆ.

ಈ ವರದಿಯು ಮಾರ್ಚ್ 2021 ಕ್ಕೆ ಕೊನೆಗೊಂಡ ವರ್ಷಕ್ಕೆ ಸರ್ಕಾರಿ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಲೆಕ್ಕಪರಿಶೋಧನೆಯ ಫಲಿತಾಂಶಗಳನ್ನು ಒಳಗೊಂಡಿದೆ.

ಈ ವರದಿಯು ಎರಡು ಭಾಗಗಳನ್ನು ಒಳಗೊಂಡಿದೆ. ವರದಿಯ ಭಾಗ–I ನಗರಾಭಿವೃದ್ಧಿ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಲೋಕೋಪಯೋಗಿ ಇಲಾಖೆ, ಮತ್ತು ಸಾರಿಗೆ ಇಲಾಖೆಗೆ ಸಂಬಂಧಿಸಿದ ಒಂಬತ್ತು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಒಳಗೊಂಡಿದೆ. ವರದಿಯ ಭಾಗ–II ಇಂಧನ ಇಲಾಖೆ, ಸಾರಿಗೆ ಇಲಾಖೆ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ನಗರಾಭಿವೃದ್ಧಿ ಇಲಾಖೆ ಮತ್ತು ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಗಳ ಆಡಳಿತಾತ್ಮಕ ನಿಯಂತ್ರಣದಲ್ಲಿ ಬರುವ 16 ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ಎಂಟು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಒಳಗೊಂಡಿದೆ.

ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳನ್ನು (ಕಂಪನಿಗಳ ಅಧಿನಿಯಮದ ಅನುವುಗಳ ಅನುಸಾರ ಸರ್ಕಾರಿ ಕಂಪನಿಗಳು ಎಂಬುದಾಗಿ ಭಾವಿಸಲಾಗಿರುವ ಕಂಪನಿಗಳನ್ನೂ ಒಳಗೊಂಡಂತೆ) ಕಂಪನಿಗಳ ಅಧಿನಿಯಮ 1956ರ ಪರಿಚ್ಛೇದ 619 ಹಾಗೂ ಕಂಪನಿಗಳ ಅಧಿನಿಯಮ 2013ರ ಪರಿಚ್ಛೇದಗಳು 139 ಮತ್ತು 143ರ ಅನುವುಗಳ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆಯನ್ನು ನಡೆಸುವರು. ಕಂಪನಿಗಳ ಅಧಿನಿಯಮದ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು (ಚಾರ್ಟರ್ಡ್ ಅಕೌಂಟೆಂಟ್ಸ್) ಪ್ರಮಾಣೀಕರಿಸುವಂತಹ ಲೆಕ್ಕಪತ್ರಗಳು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಅಧಿಕಾರಿಗಳಿಂದ ಪೂರಕ ಲೆಕ್ಕಪರಿಶೋಧನೆಯ ಷರತ್ತಿಗೆ ಒಳಪಟ್ಟಿರುತ್ತವೆ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ತಮ್ಮ ಟೀಕೆಟಿಪ್ಪಣಿಗಳನ್ನು ನೀಡುವರು ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗಳಿಗೆ ಪೂರಕ ವರದಿಗಳನ್ನು ನೀಡುವರು.  ಅಲ್ಲದೆಯೇ, ಈ ಕಂಪನಿಗಳು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪರೀಕ್ಷಾ–ಪರಿಶೀಲನೆಗೂ ಸಹ ಒಳಪಡುತ್ತವೆ.

ಸರ್ಕಾರಿ ಕಂಪನಿ ಅಥವಾ ನಿಗಮದ ಲೆಕ್ಕಪತ್ರಗಳಿಗೆ ಸಂಬಂಧಿಸಿದಂತೆ ವರದಿಗಳನ್ನು, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳ) ಅಧಿನಿಯಮ, 1971ರ ಪರಿಚ್ಛೇದ 19ಎ – ಇದರ ಅನುವುಗಳ ಅಡಿಯಲ್ಲಿ ಕರ್ನಾಟಕದ ರಾಜ್ಯ ಶಾಸಕಾಂಗದ ಮುಂದೆ ಮಂಡಿಸುವ ಸಲುವಾಗಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಸರ್ಕಾರಕ್ಕೆ ಸಲ್ಲಿಸುವರು.

ಈ ವರದಿಯಲ್ಲಿ ತಿಳಿಸಲಾಗಿರುವಂತಹ ದೃಷ್ಟಾಂತಗಳು 2020–21ರ ಅವಧಿಗೆ ನಡೆಸಲಾದ ಪರೀಕ್ಷಾ–ಪರಿಶೀಲನೆಯ ವೇಳೆಯಲ್ಲಿ ಗಮನಿಸಲಾದ ಹಾಗೂ ಈ ಹಿಂದಿನ ಸಾಲುಗಳಲ್ಲಿ ಗಮನಿಸಿದ, ಆದರೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವರದಿ ಮಾಡಲು ಸಾಧ್ಯವಾಗದವು ಸಹ ಆಗಿರುತ್ತವೆ. 2020–21ಕ್ಕೆ ತದನಂತರದ ಅವಧಿಗೆ ಸಂಬಂಧಿತ ವಿಷಯಗಳನ್ನು ಕೂಡ ಅಗತ್ಯವಿದೆ ಎಂಬುದಾಗಿ ಭಾವಿಸಿರುವ ಕಡೆಗಳಲ್ಲಿ ಸೇರಿಸಲಾಗಿದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ಲೆಕ್ಕಪರಿಶೋಧನೆಯ ಮಾನದಂಡಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಲಾಗಿದೆ.

ಕನ್ನಡ ಭಾಷಾಂತರ ಆವೃತ್ತಿಯ ಸಂದೇಹಗಳಿಗೆ ಆಂಗ್ಲ ಭಾಷಾ ಆವೃತ್ತಿಯೇ ಅಧಿಕೃತವೆಂದು ಪರಿಗಣಿಸಬೇಕು.

# ಸ್ಥೂಲನೋಟ

## ಸ್ಥೂಲ ನೋಟ

ಈ ವರದಿಯು ಎರಡು ಭಾಗಗಳನ್ನು ಒಳಗೊಂಡಿರುತ್ತದೆ. ಅವೆಂದರೆ ಭಾಗ–I (ಇಲಾಖೆಗಳಿಗೆ ಸಂಬಂಧಿಸಿದಂತೆ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳು) ಮತ್ತು ಭಾಗ–II (ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳು). ವರದಿಯ ಭಾಗ – I ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಕಾರ್ಮಿಕ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಲೋಕೋಪಯೋಗಿ ಇಲಾಖೆ ಹಾಗೂ ಸಾರಿಗೆ ಇಲಾಖೆಗೆ ಸಂಬಂಧಪಟ್ಟ ಒಂಬತ್ತು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಒಳಗೊಂಡಿರುತ್ತದೆ. ವರದಿಯ ಭಾಗ – II ಇಂಧನ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ನಗರಾಭಿವೃದ್ಧಿ ಇಲಾಖೆ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಅರಣ್ಯ ಇಲಾಖೆ ಹಾಗೂ ಸಾರಿಗೆ ಇಲಾಖೆಗಳ ಆಡಳಿತಾತ್ಮಕ ನಿಯಂತ್ರಣದ ಅಡಿಯಲ್ಲಿ ಬರುವ ಏಳು ಸಾರ್ವಜನಿಕ ವಲಯ ಉದ್ಯಮಗಳಿಗೆ ಸಂಬಂಧಿಸಿದ ಎಂಟು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಒಳಗೊಂಡಿರುತ್ತದೆ. ವರದಿಯ ಭಾಗ– I ಮತ್ತು ಭಾಗ – II ರ ಸಾಮಾನ್ಯ ಅವಲೋಕನವನ್ನು ಈ ಕೆಳಗೆ ನೀಡಲಾಗಿದೆ

## ಭಾಗ– I

**1. ಪರಿಚಯ**

ಈ ಭಾಗವು ಸರ್ಕಾರಿ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಅನುಸರಣಾ ಲೆಕ್ಕಪರಿಶೋಧನೆಯಿಂದ ತಿಳಿದುಬಂದ ವಿಷಯಗಳಿಗೆ ಸಂಬಂಧಿಸಿದೆ. ಅನುಸರಣಾ ಲೆಕ್ಕಪರಿಶೋಧನೆಯು ಭಾರತದ ಸಂವಿಧಾನದ ಅನುವುಗಳು, ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಮತ್ತು ಸಕ್ಷಮ ಪ್ರಾಧಿಕಾರಗಳು ಹೊರಡಿಸಿದ ವಿವಿಧ ಆದೇಶಗಳು ಮತ್ತು ಸೂಚನೆಗಳನ್ನು ಅನುಸರಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧಕ ಘಟಕಗಳ ವಹಿವಾಟುಗಳ ಪರೀಕ್ಷಾ–ತನಿಖೆಯನ್ನು ಉಲ್ಲೇಖಿಸುತ್ತದೆ.

ಲೆಕ್ಕಪರಿಶೋಧನೆಯ ಪ್ರಮುಖ ಫಲಿತಾಂಶಗಳನ್ನು ರಾಜ್ಯ ಶಾಸಕಾಂಗದ ಗಮನಕ್ಕೆ ತರುವುದು ಈ ವರದಿಯ ಪ್ರಮುಖ ಉದ್ದೇಶವಾಗಿದೆ. ಲೆಕ್ಕಪರಿಶೋಧನಾ ಆವಿಷ್ಕಾರಗಳು ಕಾರ್ಯಾಂಗವು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಮತ್ತು ನೀತಿಗಳನ್ನು ರೂಪಿಸಲು ಹಾಗೂ ಸುಧಾರಿತ ನಿರ್ವಹಣೆಗೆ ಕಾರಣವಾಗುವ ನಿರ್ದೇಶನಗಳನ್ನು ನೀಡಲು ಅನುವು ಮಾಡಿಕೊಡುತ್ತದೆ ಎಂದು ನಿರೀಕ್ಷಿಸಲಾಗಿದೆ, ಹೀಗೆ, ಲೆಕ್ಕಪರಿಶೋಧನೆಯು ಉತ್ತಮ ಆಡಳಿತಕ್ಕೆ ಕೊಡುಗೆ ನೀಡುತ್ತದೆ.

***ಆಯವ್ಯಯ ಚಿತ್ರಣ ಮತ್ತು ರಾಜ್ಯ ಸರ್ಕಾರದ ಸಂಪನ್ಮೂಲಗಳ ಅನ್ವಯ***

2020–21ರ ಅವಧಿಯಲ್ಲಿ ₹ 6,94,917 ಕೋಟಿ ಒಟ್ಟು ವೆಚ್ಚಕ್ಕೆ ಪ್ರತಿಯಾಗಿ ಸಂಪನ್ಮೂಲಗಳ ಅನ್ವಯವು ₹ 5,48,481 ಕೋಟಿ ಆಗಿದ್ದಿತು. 2016–17ರಿಂದ 2020–21ರ ಅವಧಿಯಲ್ಲಿ ಒಟ್ಟು ವೆಚ್ಚಗಳು (ಅಂದರೆ ಒಟ್ಟು ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಹಾಗೂ ಸಾಲಗಳು ಮತ್ತು ಮುಂಗಡಗಳು) ಶೇಕಡಾ 38ರಷ್ಟು ಹೆಚ್ಚಿದ್ದರೆ, ಅದೇ ಅವಧಿಯಲ್ಲಿ ರಾಜಸ್ವ ವೆಚ್ಚವು ಶೇಕಡಾ 33ರಷ್ಟು ಹೆಚ್ಚಾಗಿದ್ದಿತು. 2020–21ರಲ್ಲಿ ರಾಜಸ್ವ ವೆಚ್ಚವು (₹ 1,76,054 ಕೋಟಿ), ಒಟ್ಟು ವೆಚ್ಚದ (₹ 2,26,795 ಕೋಟಿ) ಶೇಕಡಾ 78ರಷ್ಟಿತ್ತು.

## 2. ಇಲಾಖೆಗಳಿಗೆ ಸಂಬಂಧಿಸಿದ ವರದಿಯ ವ್ಯಾಪ್ತಿ

ಇಲಾಖೆಗಳಿಗೆ ಸಂಬಂಧಿಸಿದ ಅನುಸರಣಾ ಲೆಕ್ಕಪರಿಶೋಧನಾ ಅವಲೋಕನಗಳನ್ನು ವರದಿಯ ಭಾಗ–Iರ ಅಧ್ಯಾಯ–IIರಲ್ಲಿ ಸೇರಿಸಲಾಗಿದೆ ಮತ್ತು ಅವಲೋಕನಗಳ ಸಾರಾಂಶವನ್ನು ಕೆಳಗೆ ನೀಡಲಾಗಿದೆ.

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಣಿಮಿಣಿಕೆಯಲ್ಲಿ ವಸತಿ ಯೋಜನೆಯನ್ನು ಅಸಮರ್ಪಕವಾಗಿ ಕಾರ್ಯಗತಗೊಳಿಸಿದ್ದು ₹ 451.53 ಕೋಟಿ ಮೊತ್ತದಷ್ಟು ವರಮಾನವನ್ನು ಪಡೆದುಕೊಳ್ಳದಿರುವಲ್ಲಿ ಹಾಗೂ ₹ 27.24 ಕೋಟಿ ಮೊತ್ತದಷ್ಟು ನಿಷ್ಫಲ/ ವ್ಯರ್ಥ ವೆಚ್ಚವಾಗುವಲ್ಲಿ ಪರಿಣಮಿಸಿತು, ಅಲ್ಲದೆಯೇ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಜನರಿಗೆ ಮನೆಗಳನ್ನು ಒದಗಿಸುವತ್ತ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಉದ್ದೇಶವು ಈಡೇರಿರಲಿಲ್ಲ.

  ***(ಕಂಡಿಕೆ 2.1)***

- ಸಂಬಂಧಿತ ನಿಯಮಗಳು/ನಿಯಂತ್ರಣಗಳು ಹಾಗೂ ನ್ಯಾಯಾಲಯ ಆದೇಶಗಳಿಗೆ ಅಗೌರವ ತೋರಿಸಿ ಪ್ರಸಕ್ತ ಇರುವಂತಹ /ಹೊಸ ಬಡಾವಣೆಗಳಿಗೆ ಅನ್ವಯಗೊಳ್ಳುವಂತಹ ಭೂ ಪರಿಹಾರ ಪ್ರಯೋಜನಗಳನ್ನು ಹಳೆಯ ಬಡಾವಣೆಗಳಿಗೆ ವಿಸ್ತರಿಸಿರುವುದು ಭೂ ಮಾಲೀಕರುಗಳಿಗೆ ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 29.85 ಕೋಟಿ ಮೊತ್ತದಷ್ಟು ಹೆಚ್ಚುವರಿ ಹಣಕಾಸಿನ ಜವಾಬ್ದಾರಿ/ ಬಾಧ್ಯತೆಯುಂಟಾಗುವಲ್ಲಿ ಪರಿಣಮಿಸಿತು.

  ***(ಕಂಡಿಕೆ 2.2)***

- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅನ್ವಯಗೊಳ್ಳುವಂತಹ ನಿಯಮಗಳನ್ನು ಉಲ್ಲಂಘಿಸಿ ₹ 1.52 ಕೋಟಿ ಮೊತ್ತದಷ್ಟು ಪ್ರಾರಂಭಿಕ ಠೇವಣಿಯನ್ನು ನಿಯಮಬಾಹಿರವಾಗಿ ಮರುಪಾವತಿಸಿರುವುದು, ಹರಾಜಿನಲ್ಲಿ ಭಾಗವಹಿಸಿದ್ದಂತಹ ಖರೀದಿದಾರರಿಗೆ ಅನರ್ಹ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿತು.

  ***(ಕಂಡಿಕೆ 2.3)***

- ಸವಿವರ ಯೋಜನಾ ವರದಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಹಾಗೂ ಸಿಪಿಎಚ್ಇಇಒ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಮಿತವ್ಯಯದ ತುಕ್ಕು ನಿಯಂತ್ರಣ ಕ್ರಮಗಳ ಜೊತೆಗೆ ಕೊಳಚೆ ನೀರು ಕೊಳವೆಗಳಿಗೆ ಪಾಲಿಮರ್ ಆಧಾರಿತ ಸಂರಕ್ಷಣಾ ಲೇಪನವನ್ನು ಒದಗಿಸಿದ್ದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ₹ 40.65 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ಹೆಚ್ಚುವರಿ ವೆಚ್ಚವಾಗುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

  ***(ಕಂಡಿಕೆ 2.4)***

- ಹೊರಗುತ್ತಿಗೆ ಸಂಸ್ಥೆಯು ಮಾಡಿರುವಂತಹ ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಪಾವತಿಗಳನ್ನು ಮೇಲ್ವಿಚಾರಣೆ ಮಾಡುವಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಿಫಲತೆಯು ₹ 32.11 ಕೋಟಿ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿಗೆ ದಾರಿ ಮಾಡಿಕೊಟ್ಟಿತು. ಮುಂದುವರೆದು, ಸಂಸ್ಥೆಗೆ ನೀಡಬೇಕಾದ ಸೇವಾ ಶುಲ್ಕಗಳು ಮತ್ತು ಒಟ್ಟು ವೇತನ/ಕೂಲಿ ವೇತನಗಳನ್ನು ಸಮರ್ಪಕವಾಗಿ ಲೆಕ್ಕಹಾಕುವಲ್ಲಿ ಆಗಿದ್ದಂತಹ ಕರ್ತವ್ಯ ಲೋಪದ ಕಾರಣ ₹ 5.14 ಕೋಟಿ ಮೊತ್ತದಷ್ಟು ಅಧಿಕ ಪಾವತಿ ಮಾಡುವಲ್ಲಿ ಪರಿಣಮಿಸಿತು.

  ***(ಕಂಡಿಕೆ 2.5)***

- ದರಗಳ ಪಟ್ಟಿಯನ್ನು (ಷೆಡ್ಯೂಲ್ ಆಫ್ ರೇಟ್ಸ್) ತಪ್ಪಾಗಿ ಅಳವಡಿಸಿಕೊಂಡಿದ್ದು ಗುತ್ತಿಗೆದಾರರಿಗೆ ₹ 2.04 ಕೋಟಿ ಮೊತ್ತದಷ್ಟು ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಪರಿಣಮಿಸಿತು.

***(ಕಂಡಿಕೆ 2.6)***

- ಯಾವುದೇ ಔಪಚಾರಿಕ ಒಡಂಬಡಿಕೆ ಮತ್ತು ಭದ್ರತೆಯನ್ನು ಪಡೆದುಕೊಳ್ಳದೆಯೇ ಸುವರ್ಣ ಕಾಯಕ ಕೌಶಲ್ಯಾಭಿವೃದ್ಧಿ ಯೋಜನೆ ಅಡಿಯಲ್ಲಿ ಕುಂದಾಪುರದ ಮೂಡಲಕಟ್ಟೆ ಇನ್ಸ್‌ಟಿಟ್ಯುಟ್ ಆಫ್ ಟೆಕ್ನಾಲಜಿಗೆ ₹ 1.01 ಕೋಟಿ ಮೊತ್ತದಷ್ಟು ಅನುದಾನವನ್ನು ಬಿಡುಗಡೆಗೊಳಿಸಿದ್ದು ಯೋಜನೆಯ ಮಾರ್ಗಸೂಚಿಗಳ ಉಲ್ಲಂಘನೆಯಾಗಿದ್ದಿತು.

***(ಕಂಡಿಕೆ 2.7)***

- ಯಾಂತ್ರಿಕ ಪದ್ಧತಿಯ ಅಗೆತದ ದರವು ಮಾನವ ನಿಯೋಜಿತ ಅಗೆತದ ದರಕ್ಕಿಂತ ಕಡಿಮೆಯಿತ್ತು. ಕಟ್ಟಡ ನಿರ್ಮಾಣದ ಗುತ್ತಿಗೆಯಲ್ಲಿ ಗುತ್ತಿಗೆದಾರನು ಮೆದು ಕಲ್ಲು ಬಂಡೆಯಿದ್ದ ಪ್ರದೇಶದಲ್ಲಿ ಯಾಂತ್ರಿಕ ಪದ್ಧತಿಯಲ್ಲಿ ಅಗೆತವನ್ನು ಕೈಗೊಂಡಿದ್ದರೂ ಮಾನವ ನಿಯೋಜಿತ ರೀತಿಗೆ ಅನ್ವಯಿಸುವ ದರಗಳಲ್ಲಿ ಪಾವತಿ ಮಾಡಿದ್ದರಿಂದ ₹ 1.56 ಕೋಟಿ ಹೆಚ್ಚುವರಿಯಾಗಿ ಪಾವತಿಸುವಂತಾಯಿತು ಮತ್ತು ಇದು ನಿಯಮ ಬಾಹಿರವಾಗಿತ್ತು.

***(ಕಂಡಿಕೆ 2.8)***

- ರಿಕವರಿ ವೆಹಿಕಲ್ಸ್ ವಾಹನಗಳನ್ನು ತಪ್ಪಾಗಿ ವರ್ಗೀಕರಿಸಿದ್ದರಿಂದ ಹಾಗೂ ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳ ಅನುಸಾರ ತ್ರೈಮಾಸಿಕ ತೆರಿಗೆಯನ್ನು ವಿಧಿಸದಿದ್ದ ಕಾರಣ ₹ 97.66 ಲಕ್ಷ ಮೊತ್ತದಷ್ಟು ಜೀವಿತಾವಧಿ ತೆರಿಗೆಯನ್ನು ಹಾಗೂ ತ್ರೈಮಾಸಿಕ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.

***(ಕಂಡಿಕೆ 2.9)***

## ಭಾಗ – II

**ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ಸಾವಉ) ಸಾಮಾನ್ಯ ಅವಲೋಕನ**

ಸರ್ಕಾರಿ ಕಂಪನಿಗಳ ಲೆಕ್ಕಪರಿಶೋಧನೆಯು ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪರಿಚ್ಛೇದಗಳು 139 ಮತ್ತು 143ರ ಅಡಿಯಲ್ಲಿ ನಿಯಂತ್ರಿಸಲ್ಪಡುತ್ತದೆ. ಸರ್ಕಾರಿ ಕಂಪನಿಗಳ ಲೆಕ್ಕಪತ್ರಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡುವಂತಹ ಶಾಸನಬದ್ಧ ಲೆಕ್ಕಪರಿಶೋಧಕರುಗಳಿಂದ ಲೆಕ್ಕಪರಿಶೋಧನೆ ಮಾಡಲ್ಪಡುತ್ತವೆ. ಈ ಲೆಕ್ಕಪತ್ರಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪೂರಕ ಲೆಕ್ಕಪರಿಶೋಧನೆಗೂ ಒಳಪಡುತ್ತವೆ. ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಅವುಗಳ ಸಂಬಂಧಿತ ಶಾಸನಗಳ ಅನುಸಾರ ನಿಯಂತ್ರಿಸಲ್ಪಡುತ್ತದೆ. 31 ಮಾರ್ಚ್ 2021ರಲ್ಲಿದ್ದಂತೆ, ಕರ್ನಾಟಕದಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಗೆ ಬರುವಂತಹ ಆರು ಶಾಸನಬದ್ಧ ನಿಗಮಗಳು ಹಾಗೂ 13 ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳೂ ಸೇರಿದಂತೆ 124 ಸಾರ್ವಜನಿಕ ವಲಯ ಉದ್ದಿಮೆಗಳು ಇದ್ದವು. ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು, ನವೆಂಬರ್ 2021ರಲ್ಲಿದ್ದಂತೆ ಅವುಗಳ ಇತ್ತೀಚಿನ ಅಂತಿಮ ರೂಪಕ್ಕೆ ತರಲಾಗಿದ್ದಂತಹ ಲೆಕ್ಕಪತ್ರಗಳ ಅನುಸಾರ ₹ 77,607.61 ಕೋಟಿ ಮೊತ್ತದಷ್ಟು ವಹಿವಾಟನ್ನು ದಾಖಲಿಸಿದ್ದವು. ಈ ವಹಿವಾಟು 2020–21ರ ಸಾಲಿಗೆ ರಾಜ್ಯದ ನಿವ್ವಳ ಆಂತರಿಕ ಉತ್ಪನ್ನದ (ಜಿಡಿಪಿ) ಶೇಕಡಾ 4.66ರಷ್ಟು (ಅಂದರೆ ₹ 16,65,320 ಕೋಟಿ) ಆಗಿತ್ತು. ಇದು ಆರ್ಥಿಕ ವಲಯದಲ್ಲಿ ಸಾರ್ವಜನಿಕ ವಲಯ ಉದ್ದಿಮೆಗಳು ವಹಿಸಿರುವಂತಹ ಪ್ರಮುಖ ಪಾತ್ರವನ್ನು ಸೂಚಿಸುತ್ತಿದ್ದವು. ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು ನವೆಂಬರ್ 2021ರಲ್ಲಿದ್ದಂತೆ ಅವುಗಳ ಇತ್ತೀಚಿನ ಅಂತಿಮ ರೂಪಕ್ಕೆ ತರಲ್ಪಟ್ಟಿದ್ದಂತಹ ಲೆಕ್ಕಪತ್ರಗಳ ಅನುಸಾರ ₹ 5,137.65 ಕೋಟಿ ಮೊತ್ತದಷ್ಟು ನಿವ್ವಳ ಒಟ್ಟಾರೆ ನಷ್ಟವನ್ನು ಭರಿಸಿದ್ದವು.

## 1. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯವೈಖರಿ

***ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆಗಳು***

31 ಮಾರ್ಚ್ 2021ರಲ್ಲಿದ್ದಂತೆ, 124 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿರುವಂತಹ ಹೂಡಿಕೆಯು (ಬಂಡವಾಳ ಮತ್ತು ದೀರ್ಘಾವಧಿ ಸಾಲಗಳು) ₹ 1,85,804.43 ಕೋಟಿ ಮೊತ್ತದಷ್ಟು ಆಗಿತ್ತು. ಈ ಒಟ್ಟಾರೆ ಹೂಡಿಕೆಯು ಶೇಕಡಾ 48.74ರಷ್ಟು ಬಂಡವಾಳ ಹೂಡಿಕೆಯ ಕಡೆಗೆ ಹಾಗೂ ಶೇಕಡಾ 51.26ರಷ್ಟು ದೀರ್ಘಾವಧಿ ಸಾಲಗಳ ಕಡೆಗೆ ಸೇರ್ಪಡೆಯಾಗಿತ್ತು. ಹೂಡಿಕೆಯು 2016–17ರ ಸಾಲಿನಲ್ಲಿದ್ದಂತಹ ₹ 1,03,717.40 ಕೋಟಿ ಮೊತ್ತದಿಂದ 2020–21ರ ಸಾಲಿಗೆ ಶೇಕಡಾ 79.14ರಷ್ಟು ಅಂದರೆ ₹ 1,85,804.43 ಕೋಟಿ ಮೊತ್ತಕ್ಕೆ ಬೆಳವಣಿಗೆಯನ್ನು ಕಂಡಿತ್ತು.

***ಇತ್ತೀಚಿನ ಅಂತಿಮರೂಪಕ್ಕೆ ತರಲಾಗಿರುವ ಲೆಕ್ಕಪತ್ರಗಳ ಅನುಸಾರ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯನಿರ್ವಹಣೆ***

124 ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, 111 ಸಾರ್ವಜನಿಕ ವಲಯ ಉದ್ದಿಮೆಗಳು ಕಾರ್ಯನಿರತವಾಗಿರುತ್ತವೆ ಹಾಗೂ 13 ಸಾರ್ವಜನಿಕ ವಲಯ ಉದ್ದಿಮೆಗಳು ಕಾರ್ಯಸ್ಥಗಿತವಾಗಿರುತ್ತವೆ. 111 ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, 47 ಸಾರ್ವಜನಿಕ ವಲಯ ಉದ್ದಿಮೆಗಳು ₹ 2,986.47 ಕೋಟಿ ಮೊತ್ತದಷ್ಟು ಲಾಭವನ್ನು ಗಳಿಸಿರುವವು ಹಾಗೂ 42 ಸಾರ್ವಜನಿಕ ವಲಯ ಉದ್ದಿಮೆಗಳು ₹ 8,124.12 ಕೋಟಿ ಮೊತ್ತದಷ್ಟು ನಷ್ಟವನ್ನು ಭರಿಸಿರುವವು. ಗಳಿಸಲಾಗಿರುವಂತಹ ಲಾಭಕ್ಕೆ ಪ್ರಮುಖವಾಗಿ ಕಾಣಿಕೆ ನೀಡಿರುವ ಉದ್ದಿಮೆಗಳೆಂದರೆ ಕೆಪಿಸಿಎಲ್ (₹ 1,209.56 ಕೋಟಿ) ಹಾಗೂ ಕೆಪಿಟಿಸಿಎಲ್ (₹ 398.93 ಕೋಟಿ). ಹೆಸ್ಕಾಂ (₹ 2,490.26 ಕೋಟಿ) ಹಾಗೂ ಆರ್‌ಪಿಸಿಎಲ್ (₹ 1,431.84 ಕೋಟಿ) ಗಮನಾರ್ಹ ಮೊತ್ತದ ನಷ್ಟಗಳನ್ನು ಭರಿಸಿದ್ದವು.

ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು 2016–17ರಲ್ಲಿ ₹ 155.12 ಕೋಟಿ ಮೊತ್ತದಷ್ಟು ನಿವ್ವಳ ಒಟ್ಟಾರೆ ಲಾಭಗಳನ್ನು ತೋರಿಸಿದ್ದವು ಹಾಗೂ 2017–18, 2018–19, 2019–20 ಹಾಗೂ 2020–21 ಸಾಲುಗಳಲ್ಲಿ ಅನುಕ್ರಮವಾಗಿ ₹ 2,099.69 ಕೋಟಿ ₹ 2,340.99 ಕೋಟಿ, ₹ 3,374.05 ಕೋಟಿ ಹಾಗೂ ₹ 5,137.65 ಕೋಟಿ ಮೊತ್ತದಷ್ಟು ನಿವ್ವಳ ಒಟ್ಟಾರೆ ನಷ್ಟವನ್ನು ಭರಿಸಿದ್ದವು.

***ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ***

2020–21 ಸಾಲಿನಲ್ಲಿ, 71 ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿತ 76 ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರಲಾಗಿತ್ತು. ಅವುಗಳ ಪೈಕಿ ಆರು ಶಾಸನಬದ್ಧ ನಿಗಮಗಳ ಆರು ಲೆಕ್ಕಪತ್ರಗಳು ಒಳಗೊಂಡಿದ್ದವು. ಬಾಕಿಯಿದ್ದ ಲೆಕ್ಕಪತ್ರಗಳ ಸಂಖ್ಯೆಯು 75ರಿಂದ (2016–17) 107ಕ್ಕೆ (2020–21) ಹೆಚ್ಚಳಗೊಂಡಿದ್ದವು. ಬಾಕಿಯಿದ್ದ 107 ಲೆಕ್ಕಪತ್ರಗಳ ಪೈಕಿ, 101 ಲೆಕ್ಕಪತ್ರಗಳು ಕಾರ್ಯನಿರತ ಸರ್ಕಾರಿ ಕಂಪನಿಗಳಿಗೆ ಸೇರಿದ್ದವು, ಇವು ಒಂದರಿಂದ ಏಳು ವರ್ಷಗಳ ಬಾಕಿಗಳಲ್ಲಿದ್ದವು ಹಾಗೂ ಆರು ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದ್ದಂತಹ ಆರು ಲೆಕ್ಕಪತ್ರಗಳು ಒಂದು ವರ್ಷದ ಅವಧಿಗೆ ಬಾಕಿಯಲ್ಲಿದ್ದವು.

***ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದ* ವರದಿಯ ವ್ಯಾಪ್ತಿ**

ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದ ವರದಿಯು ಭಾಗ IIರ ಅಧ್ಯಾಯ IIರಲ್ಲಿ ಅನುಪಾಲನಾ ಲೆಕ್ಕಪರಿಶೋಧನಾ ಅವಲೋಕನಗಳನ್ನು ಸೇರಿಸಲಾಗಿದೆ ಹಾಗೂ ಗಮನಿಸಲಾದಂತಹ ಅಂಶಗಳ ಸಾರಾಂಶವನ್ನು ಈ ಕೆಳಗೆ ನೀಡಲಾಗಿದೆ .

**2. ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು**

ಈ ವರದಿಯಲ್ಲಿ ಸೇರಿಸಲಾಗಿರುವಂತಹ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದಂತಹ ಅಂಶಗಳು ಹಣಕಾಸಿನ ಅಕ್ರಮಗಳಿಗೆ ಕಾರಣವಾದ ಪೂರ್ವಭಾವಿ ಯೋಜನೆಯ ತಯಾರಿಕೆ, ಹೂಡಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ನಿರ್ವಹಣೆಯಲ್ಲಿನ ಇತರೆ ಕಾರ್ಯಚಟುವಟಿಕೆಗಳಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುತ್ತವೆ. ಗಮನಿಸಲಾಗಿರುವಂತಹ ಅಂಶಗಳು ಸವಿಸ್ತೃತವಾಗಿ ಈ ಕೆಳಗಿನ ಸ್ವರೂಪದ್ದಾಗಿರುತ್ತವೆ :

- *ಅನುದಾನದ ನಷ್ಟ/ವರಮಾನದ ನಷ್ಟ* – ₹ 266.43 ಕೋಟಿ

***(ಕಂಡಿಕೆಗಳು 2.3 ಹಾಗೂ 2.4)***

- *ಲಾಭದಾಯಕವಲ್ಲದ/ನಿಷ್ಫಲ ಹೂಡಿಕೆ* – ₹ 40.96 ಕೋಟಿ

***(ಕಂಡಿಕೆಗಳು 2.5 ಹಾಗೂ 2.7)***

- *ಅಧಿಕ ವೆಚ್ಚ/ಅನಗತ್ಯ ಅನುಕೂಲ* – ₹ 15.18 ಕೋಟಿ

***(ಕಂಡಿಕೆಗಳು 2.6 ಹಾಗೂ 2.8)***

**ಗಮನಿಸಲಾದಂತಹ ಕೆಲವು ಪ್ರಮುಖ ಲೆಕ್ಕಪರಿಶೋಧನಾ ಅಂಶಗಳ ಮುಖ್ಯಾಂಶಗಳನ್ನು ಈ ಕೆಳಗೆ ನೀಡಲಾಗಿದೆ ::**

- **ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್‌ನ ಕಾರ್ಯಗತಗೊಳಿಸುವಿಕೆ**

  ಶಾಸನಬದ್ಧ ಅನುಮತಿಗಳನ್ನು ಪಡೆಯುವಲ್ಲಿ, ನಿಯಂತ್ರಣ ಕೇಂದ್ರಗಳ ನಿರ್ಮಾಣದಲ್ಲಿ, ಆಸ್ತಿಗಳನ್ನು ಕ್ಷೇತ್ರದಲ್ಲಿನ ಜಿಐಎಸ್ ಜಾಲಕ್ಕೆ ಮ್ಯಾಪ್ ಮಾಡುವಲ್ಲಿ ಮತ್ತು ರಿಮೋಟ್ ಸ್ವಿಚ್ಚು ಗಳನ್ನು ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್ (ಡಿಎಎಸ್)ಗೆ ಏಕೀಕರಣಗೊಳಿಸುವಲ್ಲಿ ತೆಗೆದುಕೊಂಡ ಗಮನಾರ್ಹವಾದ ಅವಧಿಯ ಕಾರಣದಿಂದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಡಿಎಎಸ್‌ಯೋಜನೆಯನ್ನು ನಿಗದಿತ ದಿನಾಂಕವನ್ನು ಮೀರಿದಂತೆ ಎಂಟು ವರ್ಷಗಳ ವಿಳಂಬದೊಂದಿಗೆ ಕಾರ್ಯಗತಗೊಳಿಸಿತು. ವಿಳಂಬದ (ಜನವರಿ 2012ರಿಂದ ಮಾರ್ಚ್ 2019) ತತ್ಪರಿಣಾಮವೆಂಬಂತೆ, ವ್ಯವಸ್ಥೆಯ ಭಾಗಗಳು ತಮ್ಮ ಸೇವಾ ಅವಧಿಯ ಮುಕ್ತಾಯವನ್ನು ಕಂಡಿದ್ದವು (2021) ಹಾಗೂ ₹ 572.64 ಕೋಟಿ ಒಟ್ಟಾರೆ ವೆಚ್ಚದಲಿ ಅನುಷ್ಠಾನಗೊಳಿಸಿದ್ದ ಯೋಜನೆಯಿಂದ ಯೋಗ್ಯ ಪ್ರಯೋಜನಗಳನ್ನು ಪಡೆಯುವ ಮೊದಲು ತಂತ್ರಾಂಶ ಮತ್ತು ಯಂತ್ರಾಂಶ ಅನ್ವಯಗಳೆರಡನ್ನೂ ಮೇಲ್ದರ್ಜೆಗೇರಿಸುವ ಅಗತ್ಯತೆಯಿತ್ತು.

***(ಕಂಡಿಕೆ 2.1)***

- **ನಷ್ಟವನ್ನುಂಟು ಮಾಡುತ್ತಿರುವ ಸಾರ್ವಜನಿಕ ವಲಯ ಉದ್ದಿಮೆಗಳು**

  - ಸಾರಿಗೆ ನಿಗಮಗಳು ಎರಡು ಪ್ರಮುಖ ಅಂಶಗಳಿಂದ ನಷ್ಟಗಳನ್ನು ಅನುಭವಿಸಿದ್ದವು. ಅವೆಂದರೆ ಸರ್ಕಾರದಿಂದ ಅನುಮೋದಿತಗೊಂಡಿದ್ದ ಸ್ವಯಂಚಾಲಿತ ದರ ಹೊಂದಾಣಿಕೆ ಸೂತ್ರದ ಅನುಸಾರ ದರಪರಿಷ್ಕರಣೆಯನ್ನು ಮಾಡದಿರುವುದು ಹಾಗೂ ವಿವಿಧ ಪ್ರವರ್ಗಗಳ ಪ್ರಯಾಣಿಕರಿಗೆ ನೀಡಲಾಗಿದ್ದ ರಿಯಾಯಿತಿಗಳ ಕಡೆಗೆ ಮಾಡಲಾಗಿದ್ದ ವೆಚ್ಚಗಳ ಅರ್ಹ ಪಾಲನ್ನು ಪಡೆಯದಿರುವುದು.

  - ಹುಬ್ಬಳ್ಳಿ–ದಾರವಾಡ ಬಿಆರ್‌ಟಿಎಸ್ ನಿಯಮಿತಕ್ಕೆ ಸಂಬಂಧಪಟ್ಟಂತೆ ಸವಿವರ ಕಾರ್ಯಸಾಧ್ಯತೆ ವರದಿಯಲ್ಲಿ ಚಿಂತಿಸಲಾಗಿದ್ದಂತಹ ಪ್ರಮಾಣಕ/ಸ್ಟಾಂಡರ್ಡ್ ಬಸ್ಸುಗಳಿಗೆ ಪ್ರತಿಯಾಗಿ ವಾಸ್ತವಿಕ ಕಾರ್ಯಾಚರಣೆಗಳನ್ನು ತುಲನಾತ್ಮಕವಾಗಿ ಸ್ವಲ್ಪಮಟ್ಟಿಗೆ ಕಡಿಮೆ

ಪ್ರಮಾಣದ ಇಂಧನ ದಕ್ಷತೆ ಹೊಂದಿದ್ದಂತಹ ಪ್ರಮಾಣಕ/ಸ್ಟಾಂಡರ್ಡ್ ಗುಣಮಟ್ಟದ ಎಸಿ ಬಸ್ಸುಗಳ (ಓಲ್ವೋ) ಮೂಲಕ ಮಾಡಲಾಗಿದ್ದಿತು. ಎಸಿ ಬಸ್ಸುಗಳ ಕಡಿಮೆ ಪ್ರಮಾಣದ ಇಂಧನ ದಕ್ಷತೆಯು 2019–21ರಲ್ಲಿ ₹ 10.01 ಕೋಟಿ ಮೊತ್ತದಷ್ಟು ಹೆಚ್ಚುವರಿ ಕಾರ್ಯಾಚರಣೆ ವೆಚ್ಚಗಳಿಗೆ ದಾರಿ ಮಾಡಿಕೊಟ್ಟಿತು. ಮುಂದುವರೆದು, ಎಸಿ ಬಸ್ಸುಗಳ ಕಾರ್ಯಾಚರಣೆಗಾಗಿ ಎಸಿಯೇತರ ಬಸ್ಸುಗಳ ದರಗಳನ್ನು ಅಳವಡಿಸಿಕೊಳ್ಳಲಾಗಿದ್ದಿತು. ಅಲ್ಲದೆ, ಉನ್ನತ ಮಟ್ಟದ ಅಧಿಕಾರ ಹೊಂದಿದ್ದ ಸಮಿತಿಯು ಮಾಡಿದ್ದ ಶಿಫಾರಸುಗಳಾದ ದರಗಳ ಪರಿಷ್ಕರಣೆ, ಮೋಟಾರು ವಾಹನ ತೆರಿಗೆ ಮನ್ನಾ ಮಾಡುವುದು, ಸಾರ್ವಜನಿಕ ಸಾರಿಗೆ ಇಂಧನ ಸೆಸ್ ವಿಧಿಸುವಿಕೆ, ಇತ್ಯಾದಿಗಳನ್ನು ಕಾರ್ಯಗತಗೊಳಿಸಿರಲಿಲ್ಲ.

- ಮಾರ್ಚ್ 2021ರ ಅಂತ್ಯದಲ್ಲಿದ್ದಂತೆ, 2007–08ರಿಂದ 2020–21ರ ಅವಧಿಗೆ ಸಂಬಂಧಿಸಿದ್ದ ₹ 6,879.99 ಕೋಟಿ ಮೊತ್ತದಷ್ಟು ವಿದ್ಯುತ್ ದರಪಟ್ಟಿ ಸಹಾಯಧನ ಹಾಗೂ ಇತರೆ ಕೋರಿಕೆಗಳ ಕಡೆಗೆ ಸರ್ಕಾರಕ್ಕೆ ಮಾಡಲಾಗಿದ್ದ ಪಾವತಿಗಾಗಿನ ಕೋರಿಕೆಗಳು ಬಾಕಿ ಉಳಿದಿದ್ದವು. ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳಿಂದ ಪಡೆಯಲಾಗಿದ್ದ ಸಾಲಗಳ ಮೇಲಿನ ಬಡ್ಡಿ ಪಾವತಿಗಳು ಆರು ವರ್ಷಗಳ ಅವಧಿಯಲ್ಲಿ (2015–16ರಿಂದ 2020–21) ಹುವಿಸಕಂಯಲ್ಲಿ ಶೇಕಡಾ 130ರಷ್ಟು ಹಾಗೂ ಗುವಿಸಕಂಯಲ್ಲಿ ಶೇಕಡಾ 176ರಷ್ಟು ಹೆಚ್ಚಳಗೊಂಡಿದ್ದವು. ಗ್ರಾಹಕರುಗಳಿಗೆ ಬಿಲ್ಲುಗಳನ್ನು ನೀಡುವಲ್ಲಿ ಹಾಗೂ ಅವರಿಂದ ವಸೂಲಾತಿ ಮಾಡುವಲ್ಲಿ ತ್ವರಿತ ಕ್ರಮವನ್ನು ತೆಗೆದುಕೊಂಡಿರಲಿಲ್ಲ ಎಂಬುದನ್ನು ಕವಿನಿಆವು ಗಮನಿಸಿದ್ದಿತು ಹಾಗೂ ವಿದ್ಯುತ್ ಖರೀದಿ ಬಿಲ್ಲುಗಳ ಮೇಲೆ ಭರಿಸಿದ್ದ ₹ 2,616.63 ಕೋಟಿ ಮೊತ್ತದಷ್ಟು ವಿಳಂಬ ಪಾವತಿ ಸರ್‌ಚಾರ್ಜ್ ಮೊತ್ತವನ್ನು ತಿರಸ್ಕರಿಸಿತು.

- ಕೆಪಿಸಿ ಜಿಪಿಸಿಎಲ್‌ಗೆ ಸಂಬಂಧಿಸಿದಂತೆ ಬಿಡದಿಯಲ್ಲಿ ಸಂಯೋಜಿತ ಆವರ್ತನ ವಿದ್ಯುತ್ ಸ್ಥಾವರ ಯೋಜನೆಯನ್ನು ಮುಂದಕ್ಕೆ ಹಾಕಲಾಗಿದ್ದಿತಾದಲ್ಲಿ, ಯಲಹಂಕದಲ್ಲಿನ ಯೋಜನೆಯನ್ನು ಗಮನಾರ್ಹವಾಗಿ ವಿಳಂಬಗೊಳಿಸಲಾಗಿದ್ದಿತು ಹಾಗೂ ಕಾರ್ಯೋದ್ಯುಕ್ತಗೊಳಿಸಲು ನಿಗದಿತಗೊಂಡಿದ್ದ ದಿನಾಂಕ ಮೇ 2018ಕ್ಕೆ ಪ್ರತಿಯಾಗಿ ಅದರ ಕಾರ್ಯಾಚರಣೆಗಳನ್ನು ಇನ್ನೂ ಕಾರ್ಯೋದ್ಯುಕ್ತಗೊಳಿಸಿರಲಿಲ್ಲ (ಜನವರಿ 2022). ಕಂಪನಿಯು ಯೋಜನೆಯ ಮೇಲೆ ₹ 2,150.70 ಕೋಟಿ ಮೊತ್ತದಷ್ಟು ಗಮನಾರ್ಹ ವೆಚ್ಚವನ್ನು ಭರಿಸಿದ್ದಿತು. ಮುಂದುವರೆದು, ಬಿಡದಿಯಲ್ಲಿನ ತ್ಯಾಜ್ಯದಿಂದ ಇಂಧನ ಯೋಜನೆಗೆ ಸಂಬಂಧಿಸಿದಂತೆ ಯೂನಿಟ್ಟು ಒಂದಕ್ಕೆ ₹ 1.38 ರಷ್ಟು ಕಡಿಮೆ ಪ್ರಮಾಣದಲ್ಲಿ ವಸೂಲಾತಿಯಾಗುವುದು.

- ಕೆಎಸ್‌ಸಿಡಿಸಿಎಲ್‌ನಲ್ಲಿ ಮಾರಾಟ ವಹಿವಾಟು ಇಳಿಕೆಗೊಂಡಿರುವುದಕ್ಕೆ ಪ್ರಮುಖವಾಗಿ ತಯಾರಿಕಾ ಘಟಕಗಳನ್ನು ತಾಂತ್ರಿಕವಾಗಿ ಮೇಲ್ದರ್ಜೆಗೇರಿಸದಿರುವಿಕೆ ಕೊರತೆ, ಸರ್ಕಾರಿ ಸಂಸ್ಥೆಗಳ ಆದೇಶಗಳ ಮೇಲೆ ಅತಿಯಾದ ಅವಲಂಬನೆ ಮತ್ತು ದೇಶೀಯ ಹಾಗೂ ಅಂತರ ರಾಷ್ಟ್ರೀಯ ಮಾರುಕಟ್ಟೆಗಳನ್ನು ಕಂಡುಕೊಳ್ಳದೆಯಿರುವುದು ಕಾರಣವಾಗಿದ್ದವು.

- ಮೈಷುಗರ್‌ಗೆ ಸಂಬಂಧಿಸಿದಂತೆ ಕಂಪನಿಯನ್ನು 2005ರಲ್ಲಿಯೇ ರೋಗಗ್ರಸ್ತ ಎಂಬುದಾಗಿ ಘೋಷಿಸಿದ್ದ ಹೊರತಾಗಿಯೂ, ಯಾವುದೇ ರಚನಾತ್ಮಕ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಕಂಪನಿಯನ್ನು ಖಾಸಗಿ ಕಾರ್ಯನಿರ್ವಹಣಾಕಾರರುಗಳಿಗೆ ಗುತ್ತಿಗೆಗೆ ನೀಡುವ ನವೆಂಬರ್ 2020ರ ನಿರ್ಣಯವು ಫಲಪ್ರದವಾಗಲಿಲ್ಲ. ಕಂಪನಿಯನ್ನು ರೋಗಗ್ರಸ್ತ ಎಂಬುದಾಗಿ ಘೋಷಿಸಿದನಂತರವೂ ಕರ್ನಾಟಕ ಸರ್ಕಾರವು ₹ 526.51 ಕೋಟಿ ಮೊತ್ತದಷ್ಟು ಹಣಕಾಸನ್ನು ಹೂಡಿಕೆ ಮಾಡಿದ್ದಿತು. ಒಂದು ಬಾಹ್ಯ ಸಂಸ್ಥೆಯು ಮಾಡಿದ ಮೌಲ್ಯಮಾಪನ ಅಧ್ಯಯನವು ಸಕ್ಕರೆಯ ಸರಾಸರಿ ಮಾರಾಟ ದರಗಳು ಸ್ಥಿರವಾಗಿರುವುದರೊಂದಿಗೆ ಕಬ್ಬು ಖರೀದಿ ದರಗಳು, ಪರಿವರ್ತನಾ ದರಗಳು ಹೆಚ್ಚಳಗೊಂಡಿರುವುದು, ಹಳೆಯ ಯಂತ್ರಗಳ ಕಾರ್ಯಾಚರಣೆಗಳಲ್ಲಿ ದಕ್ಷತೆ ಇಲ್ಲದಿರುವುದು, ಸಿಬ್ಬಂದಿಯ ಕಡಿಮೆ ಪ್ರಮಾಣದ ಉತ್ಪಾದಕತೆ, ಇತರೆ ಉತ್ಪನ್ನ ಮಾರ್ಗಗಳ (ಡಿಸ್ಟಿಲರಿ/ಸಹ–ಉತ್ಪನ್ನ ಸ್ಥಾವರ) ಸೀಮಿತ

ಕಾರ್ಯಾಚರಣೆ/ಕಾರ್ಯಾಚರಣೆಗೊಂಡಿರದಿದ್ದುದು, ಇತ್ಯಾದಿ ನಷ್ಟಗಳಿಗೆ ಕಾರಣವಾಗಿರುವುದು ಎಂಬುದಾಗಿ ತಿಳಿಸಿದ್ದಿತು.

***(ಕಂಡಿಕೆ 2.2)***

- ಭಾರತ ಸರ್ಕಾರದ ಹಣಕಾಸಿನ ಸಹಾಯದಿಂದ ಬೆಂಮಸಾನಿವು ಪರಿಸರ–ಸ್ನೇಹಿ ಬಸ್ಸುಗಳನ್ನು ಖರೀದಿಸುವ ಉಪಕ್ರಮ ತೆಗೆದುಕೊಂಡರೂ ಟೆಂಡರುಗಳನ್ನು ಆಹ್ವಾನಿಸಿದ ನಂತರ ಹಿಂದೆ ಸರಿದಿದ್ದು ₹ 170.31 ಕೋಟಿ ಮೊತ್ತದಷ್ಟು ಕೇಂದ್ರ ಸರ್ಕಾರದ ಅನುದಾನವು ನಷ್ಟವಾಗುವಲ್ಲಿ ಪರಿಣಮಿಸಿದ್ದಲ್ಲದೆ, ವಾಯುಮಾಲಿನ್ಯವನ್ನು ತಗ್ಗಿಸುವ ಉದ್ದೇಶದ ಪ್ರಯೋಜನವನ್ನು ಬೆಂಗಳೂರು ನಗರಕ್ಕೆ ವಂಚಿಸಿದಂತಾಯಿತು.

***(ಕಂಡಿಕೆ 2.3)***

- ಸೋಗಿ ಮತ್ತು ಮಾವಿನಹುಂಡದಲ್ಲಿ ಪವನ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಸಲುವಾಗಿ ಅರಣ್ಯ ಭೂಮಿಯ ಗುತ್ತಿಗೆ ಅವಧಿಯನ್ನು ನವೀಕರಿಸುವಲ್ಲಿನ ವಿಫಲತೆ ಹಾಗೂ ಸಂಪರ್ಕ ರಸ್ತೆಯ ಬಳಕೆಗಾಗಿ ಅರಣ್ಯ ಅಧಿಕಾರಿಗಳಿಂದ ಪೂರ್ವಾನುಮತಿ ಪಡೆಯದಿದ್ದುದು ₹ 65.78 ಕೋಟಿ ಮೊತ್ತದಷ್ಟು ಉಪಕರಣಗಳು ಆರು ತಿಂಗಳಿಂದ ನಾಲ್ಕು ವರ್ಷಗಳವರೆಗೆ ಉತ್ಪಾದನೆಗೆ ಉಪಯೋಗಿಸದೇ ವ್ಯರ್ಥವಾಗಿ ಇರುವಲ್ಲಿ ಪರಿಣಮಿಸಿದ್ದಿತು. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ₹ 30.34 ಕೋಟಿ ಮೊತ್ತದಷ್ಟು ವರಮಾನವನ್ನು ಕಳೆದುಕೊಂಡಿತು.

***(ಕಂಡಿಕೆ 2.4)***

- ಪ್ರಾಯೋಗಿಕ ನೆಡುತೋಪಿನ ಇಳುವರಿ ಫಲಿತಾಂಶಗಳಿಗೆ ಕಾಯದೇ ದೊಡ್ಡ ಮಟ್ಟದಲ್ಲಿ ವಾಣಿಜ್ಯಿಕ ಉಪಯೋಗಕ್ಕೆ ಸುಬಾಬುಲ್ ಗಿಡಗಳ ನೆಡುತೋಪುಗಳ ಬೆಳೆಸುವಿಕೆ ಹಾಗೂ ನೆಡುತೋಪುಗಳ ಅಸಮರ್ಪಕ ನಿರ್ವಹಣೆಯು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದಿಂದ ₹ 9.25 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ಹೂಡಿಕೆಯಲ್ಲಿ ಪರಿಣಮಿಸಿದ್ದಿತು.

***(ಕಂಡಿಕೆ 2.5)***

- ಕಿಯಾನಿಕ್ಸ್ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿರದ ಉತ್ಪನ್ನಗಳನ್ನು ಖರೀದಿಸಿ, ಸರ್ಕಾರದ ಇಲಾಖೆಗೆ ಸರಬರಾಜು ಮಾಡಿದ್ದರಿಂದ ಸರ್ಕಾರವು ₹ 11.13 ಕೋಟಿ ಮೊತ್ತದಷ್ಟು ನಷ್ಟವನ್ನು ಭರಿಸಿತು, ಅಲ್ಲದೆಯೇ ಕಿಯಾನಿಕ್ಸ್ ಕರ್ನಾಟಕ ಸಾರ್ವಜನಿಕ ಖರೀದಿಗಳಲ್ಲಿ ಹಾಗೂ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಅಡಿಯಲ್ಲಿ ನೀಡಲಾಗಿರುವ 4(ಜಿ) ವಿನಾಯಿತಿಗೆ ಸಂಬಂಧಿತ ಅನುವನ್ನು ಉಲ್ಲಂಘಿಸಿರುವುದು.

***(ಕಂಡಿಕೆ 2.6)***

- ಮಾರುಕಟ್ಟೆ ಸ್ಥಿತಿಗತಿ ಹಾಗೂ ಮಾರಾಟಗಳ ಸಾಧ್ಯತೆಯನ್ನು ಅಧ್ಯಯನ ಮಾಡದೆಯೇ ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಮರಳನ್ನು ಆಮದು ಮಾಡಿಕೊಂಡಿದ್ದು ₹ 21.14 ಕೋಟಿ ಮೊತ್ತದಷ್ಟು ಮರಳಿನ ದಾಸ್ತಾನು ನಾಲ್ಕು ವರ್ಷಗಳ ಕಾಲ ನಿರುಪಯುಕ್ತವಾಗಿ ಇದ್ದಿತು ಹಾಗೂ ₹ 10.57 ಕೋಟಿ ಮೊತ್ತದ ಹೂಡಿಕೆಯು ಅನುತ್ಪಾದಕವಾಗಿದ್ದಿತು.

***(ಕಂಡಿಕೆ 2.7)***

- ಮಾರುಕಟ್ಟೆಯಲ್ಲಿ ಇದ್ದಂತಹ ದರಗಳಿಗಿಂತ ಬಹಳಷ್ಟು ಕಡಿಮೆ ದರಗಳಲ್ಲಿ ಭೂಮಿಯ ಬೆಲೆಯನ್ನು ನಿಗದಿ ಮಾಡಿದ್ದು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ ₹ 4.05 ಕೋಟಿ ಮೊತ್ತದಷ್ಟು ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಪರಿಣಮಿಸಿದ್ದಿತು.

***(ಕಂಡಿಕೆ 2.8)***

# ಭಾಗ- I

# ಅಧ್ಯಾಯ-I

# ಅಧ್ಯಾಯ –I

## *ಪೀಠಿಕೆ*

**1.1.** ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯು ಸರ್ಕಾರಿ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳ ಅನುಸರಣಾ ಲೆಕ್ಕಪರಿಶೋಧನೆಯಿಂದ ತಿಳಿದುಬರುವ ವಿಷಯಗಳಿಗೆ ಸಂಬಂಧಿಸಿದೆ. ಅನುಸರಣಾ ಲೆಕ್ಕಪರಿಶೋಧನೆಯು ಭಾರತದ ಸಂವಿಧಾನದ ಅನುವುಗಳು, ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಮತ್ತು ಸಕ್ಷಮ ಪ್ರಾಧಿಕಾರಗಳು ಜಾರಿ ಮಾಡಿದ ವಿವಿಧ ಆದೇಶಗಳು ಮತ್ತು ಸೂಚನೆಗಳನ್ನು ಅನುಸರಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಲೆಕ್ಕಪರಿಶೋಧಕ ಘಟಕಗಳ ವಹಿವಾಟುಗಳ ಪರಿಶೀಲನೆಯನ್ನು ಉಲ್ಲೇಖಿಸುತ್ತದೆ.

ಲೆಕ್ಕಪರಿಶೋಧನೆಯ ಪ್ರಮುಖ ಫಲಿತಾಂಶಗಳನ್ನು ರಾಜ್ಯ ಶಾಸಕಾಂಗದ ಗಮನಕ್ಕೆ ತರುವುದು ವರದಿಯ ಪ್ರಮುಖ ಉದ್ದೇಶವಾಗಿದೆ. ಲೆಕ್ಕಪರಿಶೋಧನಾ ಫಲಿತಾಂಶಗಳು ಕಾರ್ಯಾಂಗವು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು ಮತ್ತು ನೀತಿಗಳನ್ನು ರೂಪಿಸಲು ಹಾಗೂ ಸುಧಾರಿತ ನಿರ್ವಹಣೆಗೆ ಕಾರಣವಾಗುವ ನಿರ್ದೇಶನಗಳನ್ನು ನೀಡಲು ಅನುವು ಮಾಡಿಕೊಡುತ್ತದೆ ಎಂದು ನಿರೀಕ್ಷಿಸಲಾಗಿದೆ. ಹೀಗೆ, ಅದು ಉತ್ತಮ ಆಡಳಿತಕ್ಕೆ ಕೊಡುಗೆಯನ್ನೂ ನೀಡುತ್ತದೆ.

ಈ ಅಧ್ಯಾಯವು, ಲೆಕ್ಕಪರಿಶೋಧನೆಯ ಯೋಜನೆ ಮತ್ತು ವ್ಯಾಪ್ತಿಯನ್ನು ವಿವರಿಸುವುದರ ಜೊತೆಗೆ ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಪಾಲನೆಯ ಸಾರಾಂಶವನ್ನೂ ನೀಡುತ್ತದೆ. ಈ ವರದಿಯ ಅಧ್ಯಾಯ–II ಸರ್ಕಾರಿ ಇಲಾಖೆಗಳು ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿನ ಅನುಸರಣಾ ಲೆಕ್ಕಪರಿಶೋಧನೆಯ ಅವಲೋಕನಗಳಿಂದ ಕಂಡುಬಂದ ಫಲಿತಾಂಶಗಳನ್ನು ಒಳಗೊಂಡಿದೆ.

## ಆಯವ್ಯಯ ಚಿತ್ರಣ

**1.2.** 2016–17ರಿಂದ 2020–21ರ ಅವಧಿಯಲ್ಲಿ ಆಯವ್ಯಯ ಅಂದಾಜುಗಳು ಮತ್ತು ಅದಕ್ಕೆ ಪ್ರತಿಯಾಗಿ ರಾಜ್ಯ ಸರ್ಕಾರವು ಮಾಡಿದ ವಾಸ್ತವಿಕ ವೆಚ್ಚಗಳು ಕೆಳಗಿನ ಕೋಷ್ಟಕದಲ್ಲಿ ತೋರಿಸಿದಂತಿದ್ದವು:

**ಕೋಷ್ಟಕ–1.1: 2016–17ರಿಂದ 2020–21ರ ಅವಧಿಯಲ್ಲಿ ಆಯವ್ಯಯ ಅಂದಾಜು ಮತ್ತು ರಾಜ್ಯ ಸರ್ಕಾರದಿಂದಾದ ವಾಸ್ತವಿಕ ವೆಚ್ಚ**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವೆಚ್ಚ | 2016–17 | | 2017–18 | | 2018–19 | | 2019–20 | | 2020–21 | |
|---|---|---|---|---|---|---|---|---|---|---|---|
| | | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ | ಆಯವ್ಯಯ ಅಂದಾಜು | ವಾಸ್ತವಿಕ |
| 1 | ಸಾಮಾನ್ಯ ಸೇವೆಗಳು | 35,018 | 31,265 | 38,009 | 34,484 | 45,744 | 42,655 | 50,492 | 48,824 | 59603 | 55018 |
| 2 | ಸಮಾಜ ಸೇವೆಗಳು | 50,960 | 54,549 | 55,887 | 58,652 | 70,226 | 67,935 | 71,350 | 66,373 | 65047 | 61726 |
| 3 | ಆರ್ಥಿಕ ಸೇವೆಗಳು | 38,277 | 40,421 | 43,671 | 42,856 | 44,152 | 48,285 | 52,907 | 52,636 | 48536 | 53629 |
| 4 | ಸಹಾಯಾನುದಾನಗಳು ಮತ್ತು ವಂತಿಗೆಗಳು | 5,980 | 5,686 | 7,187 | 6,490 | 6,167 | 5,425 | 6,856 | 6,425 | 6591 | 5681 |
| | **ಒಟ್ಟು (ಅ)** | **1,30,235** | **1,31,921** | **1,44,754** | **1,42,482** | **1,66,289** | **1,64,300** | **1,81,605** | **1,74,258** | **1,79,777** | **1,76,054** |
| 5 | ಬಂಡವಾಳ ವೆಚ್ಚ | 25,716 | 28,150 | 32,033 | 30,667 | 35,246 | 34,659 | 40,080 | 35,530 | 43059 | 45406 |
| 6 | ವಿತರಿಸಿದ ಸಾಲಗಳು ಮತ್ತು ಮುಂಗಡಗಳು | 625 | 1,934 | 1,597 | 5,093 | 5,817 | 4,487 | 2,503 | 4,069 | 3452 | 2669 |
| 7 | ಸಾರ್ವಜನಕ ಋಣದ ಮರುಪಾವತಿ | 6,841 | 7,420 | 8,176 | 8,269 | 11,136 | 11,083 | 9,964 | 10,180 | 11605 | 11016 |
| 8 | ಸಾಧಿಲ್ವಾರು ನಿಧಿ | 5 | 0 | 5 | 0 | 5 | 0 | 5 | 0 | 5 | 0 |
| 9 | ಸಾರ್ವಜನಿಕ ಲೆಕ್ಕ ವಿತರಣೆಗಳು | 3,42,036 | 1,67,154* | 5,09,624 | 1,94,537* | 5,10,667 | 2,34,330* | 5,19,964 | 2,45,292* | 457019 | 266193* |
| 10 | ಮುಕ್ತಾಯ ಶಿಲ್ಕು | - | 34,354 | - | 26,184 | - | 22,004 | - | 34,463 | - | 47143 |
| | **ಒಟ್ಟು (ಆ)** | **3,75,223** | **2,39,012** | **5,51,435** | **2,64,750** | **5,62,871** | **3,06,563** | **5,72,516** | **3,29,534** | **5,15,140** | **3,72,427** |
| | **ಒಟ್ಟು ಮೊತ್ತ (ಅ+ಆ)** | **5,05,458** | **3,70,933** | **6,96,189** | **4,07,232** | **7,29,160** | **4,70,863** | **7,54,121** | **5,03,792** | **6,94,917** | **5,48,481** |

* ಹೂಡಿಕೆಗಳನ್ನು ಒಳಗೊಂಡಿಲ್ಲ

ಮೂಲ: ವಾರ್ಷಿಕ ಹಣಕಾಸು ತ:ಖ್ತೆ ಮತ್ತು ಸಂಬಂಧಿತ ವರ್ಷಗಳ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳು

## ರಾಜ್ಯ ಸರ್ಕಾರದ ಸಂಪನ್ಮೂಲಗಳ ಅನ್ವಯ

**1.3.** ₹ 6,94,917 ಕೋಟಿಗಳ ಒಟ್ಟು ಆಯವ್ಯಯಕ್ಕೆ ಪ್ರತಿಯಾಗಿ 2020–21ರ ಅವಧಿಯಲ್ಲಿ ಸಂಪನ್ಮೂಲಗಳ ಅನ್ವಯವು ₹ 5,48,481 ಕೋಟಿ ಆಗಿತ್ತು. 2016–17ರಿಂದ 2020–21ರ ಅವಧಿಯಲ್ಲಿ ರಾಜ್ಯದ ಒಟ್ಟು ವೆಚ್ಚವು (ಆದಾಯ ವೆಚ್ಚ, ಬಂಡವಾಳ ವೆಚ್ಚ ಹಾಗೂ ಸಾಲಗಳು ಮತ್ತು ಮುಂಗಡಗಳು) ₹ 1,62,005 ಕೋಟಿಗಳಿಂದ ₹ 2,24,129 ಕೋಟಿಗೆ ವೃದ್ಧಿಯಾಗಿ ಶೇಕಡಾ 38ರಷ್ಟು ಏರಿಕೆಯಾಗಿದ್ದರೆ ಇದೇ ಅವಧಿಯಲ್ಲಿ ರಾಜಸ್ವ ವೆಚ್ಚವು ₹ 1,31,921 ಕೋಟಿಯಿಂದ ₹ 1,76,054 ಕೋಟಿಗೆ ವೃದ್ಧಿಯಾಗಿ ಶೇಕಡಾ 33ರಷ್ಟು ಏರಿಕೆಯಾಗಿತ್ತು. 2016–17ರಿಂದ 2020–21ರ ಅವಧಿಯಲ್ಲಿ ರಾಜಸ್ವ ವೆಚ್ಚವು ಒಟ್ಟು ವೆಚ್ಚದ ಶೇಕಡಾ 79ರಿಂದ 85ರಷ್ಟಿದ್ದರೆ, ಬಂಡವಾಳ ವೆಚ್ಚವು ಶೇಕಡಾ 17ರಿಂದ 20ರಷ್ಟಿತ್ತು.

2016–17ರಿಂದ 2020–21ರ ಅವಧಿಯಲ್ಲಿ, ಒಟ್ಟು ವೆಚ್ಚವು ವಾರ್ಷಿಕ ಸರಾಸರಿ ಶೇಕಡಾ 10ರ ದರದಲ್ಲಿ ಏರಿದರೆ ರಾಜಸ್ವ ಸ್ವೀಕೃತಿಗಳು ವಾರ್ಷಿಕ ಸರಾಸರಿ ಶೇಕಡಾ 6ರ ದರದಲ್ಲಿ ಪ್ರತಿಶತದಲ್ಲಿ ಏರಿತು.

## ನಿರಂತರ ಉಳಿತಾಯಗಳು

**1.4.** ಕಳೆದ ಐದು ವರ್ಷಗಳಲ್ಲಿ ನಿರಂತರ ಉಳಿತಾಯಗಳ ಅನುದಾನವಾರು ವಿವರಗಳನ್ನು ***ಅನುಬಂಧ–1ರಲ್ಲಿ*** ನೀಡಲಾಗಿದೆ.

## ಭಾರತ ಸರ್ಕಾರದಿಂದ ಸಹಾಯಾನುದಾನಗಳು

**1.5.** 2016–17ರಿಂದ 2019–20ರ ಅವಧಿಯಲ್ಲಿ ಭಾರತ ಸರ್ಕಾರದಿಂದ ಸಹಾಯಾನುದಾನಗಳು, ಏರಿಕೆ ಪ್ರವೃತ್ತಿಯಲ್ಲಿದ್ದವು. ಆದಾಗ್ಯೂ ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ಹಿಂದಿನ ವರ್ಷಕ್ಕೆ ಹೋಲಿಸಿದರೆ 2020–21 ರಲ್ಲಿ ಸಹಾಯಧನ ಕಡಿಮೆಯಾಗಿದೆ:

**ಕೋಷ್ಟಕ–1.2: ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಾನುದಾನಗಳು**[1]

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ವಿವರಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|---|
| 1 | ಯೋಜನೇತರ ಅನುದಾನಗಳು* | 7,045 | – | – | – | – |
| 2 | ರಾಜ್ಯ ಯೋಜನೆಗಳಿಗೆ ಅನುದಾನಗಳು* | 8,102 | – | – | – | – |
| 3 | ಕೇಂದ್ರ ಯೋಜನೆಗಳಿಗೆ ಅನುದಾನಗಳು* | 116 | – | – | – | – |
| 4 | ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 440 | 11,617 | 10,393 | 12,214 | 9,852 |
| 5 | ರಾಜ್ಯಗಳಿಗೆ ಇತರೆ ವರ್ಗಾವಣೆಗಳು/ ಅನುದಾನಗಳು | – | 7,316 | 11,714 | 17,593 | 14,667 |
| 6 | ಹಣಕಾಸು ಆಯೋಗದ ಅನುದಾನಗಳು | – | 2,708 | 3,374 | 4,673 | 5,557 |
| **ಒಟ್ಟು** | | **15,703** | **21,641** | **25,481** | **34,480** | **30,076** |

* 2017–18ರಿಂದ ಜಾರಿಗೆ ಬರುವಂತೆ ಯೋಜನೆ ಮತ್ತು ಯೋಜನೇತರ ಅನುದಾನಗಳ ನಾಮಾವಳಿಯನ್ನು ತೆಗೆದುಹಾಕಲಾಗಿದೆ ಮತ್ತು ರಾಜ್ಯಗಳಿಗೆ ಅನುದಾನ/ಕೇಂದ್ರ ಪುರಸ್ಕೃತ ಯೋಜನೆ, ರಾಜ್ಯಗಳಿಗೆ ಹಣಕಾಸು ಆಯೋಗದ ಅನುದಾನ ಮತ್ತು ಇತರ ಅನುದಾನಗಳು ಎಂದು ಬದಲಿಸಿರುವುದರಿಂದ ಯಾವುದೇ ಅಂಕಿ ಅಂಶಗಳಿಲ್ಲ.

**ಮೂಲ:** ಹಣಕಾಸು ಲೆಕ್ಕಗಳು.

## ಲೆಕ್ಕಪರಿಶೋಧನೆ ನಡೆಸಲು ಅಧಿಕಾರ

**1.6.** ಭಾರತ ಸಂವಿಧಾನದ 149 ಮತ್ತು 151ನೇ ವಿಧಿಗಳು ಮತ್ತು ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) (ಡಿಪಿಸಿ) ಕಾಯಿದೆ, 1971, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ (ಸಿಎಜಿ) ಲೆಕ್ಕಪರಿಶೋಧನೆ

[1] ಇದು ಹಂಚಿಕೆ (ಡಿವೊಲ್ಯೂಷನ್)ಯನ್ನು ಒಳಗೊಂಡಿಲ್ಲ.

ನಡೆಸುವ ಅಧಿಕಾರವನ್ನು ನೀಡುತ್ತದೆ. ಸಿಎಜಿರವರ ಡಿಪಿಸಿ ಕಾಯಿದೆಯ ಸೆಕ್ಷನ್ 13[2] ರ ಅಡಿಯಲ್ಲಿ ಸಿಎಜಿರವರು ಕರ್ನಾಟಕ ಸರ್ಕಾರದ ಇಲಾಖೆಗಳ ವೆಚ್ಚದ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಸಿಎಜಿರವರು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಏಕೈಕ ಲೆಕ್ಕಪರಿಶೋಧಕರಾಗಿದ್ದು, ಅವುಗಳನ್ನು ಸಿಎಜಿ (ಡಿಪಿಸಿ) ಕಾಯಿದೆಯ ಸೆಕ್ಷನ್ 19(2)[3], 19(3)[4] ಮತ್ತು 20(1)[5] ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಲಾಗುತ್ತದೆ. ವಿವಿಧ ಲೆಕ್ಕಪರಿಶೋಧನೆಗಳಿಗೆ ತತ್ವಗಳು ಮತ್ತು ವಿಧಾನಗಳನ್ನು ಸಿಎಜಿರವರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳು ಹಾಗೂ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳ ಮೇಲಿನ ನಿಯಮಗಳು, 2020 ನಿಗದಿಪಡಿಸುತ್ತದೆ.

**ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II), ಕರ್ನಾಟಕ, ಬೆಂಗಳೂರು ಇವರ ಕಛೇರಿಯ ಸಾಂಸ್ಥಿಕ ರಚನೆ**

**1.7**. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ರಾಜ್ಯ ಕಚೇರಿಗಳನ್ನು ಕ್ಲಸ್ಟರ್‌ಗಳ ಹಂಚಿಕೆಯ ಆಧಾರದ ಮೇಲೆ ಪುನರ್‌ರಚಿಸಲಾಯಿತು (ಮಾರ್ಚ್ 2020). ಪ್ರತಿ ಕ್ಲಸ್ಟರ್ ಅಂತರ್–ಸಂಪರ್ಕಿತ ಫಲಿತಾಂಶಗಳು ಮತ್ತು ಸಂಪರ್ಕಗಳೊಂದಿಗೆ ಇಲಾಖೆಗಳನ್ನು ಒಳಗೊಂಡಿತ್ತು. ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II) 19 ಇಲಾಖೆಗಳು ಮತ್ತು 13 ಸ್ವಾಯತ್ತ ಸಂಸ್ಥೆಗಳು (***ಅನುಬಂಧ–2***) ಭರಿಸಿದ ವೆಚ್ಚದ ಲೆಕ್ಕಪರಿಶೋಧನೆಗೆ ಜವಾಬ್ದಾರರಾಗಿರುತ್ತಾರೆ. ಮಹಾಲೇಖಾಪಾಲರಿಗೆ (ಲೆಕ್ಕಪರಿಶೋಧನೆ–II), ಮೂವರು ಉಪ ಮಹಾಲೇಖಾಪಾಲರು ಮತ್ತು ವಿವಿಧ ಅಧೀನ ಅಧಿಕಾರಿಗಳು ನೆರವು ನೀಡುತ್ತಾರೆ. ಈ ವರದಿಯ ಭಾಗ–I ಮಹಾಲೇಖಾಪಾಲರ (ಲೆಕ್ಕಪರಿಶೋಧನೆ–II) ಅಧಿಕಾರ ವ್ಯಾಪ್ತಿಯಲ್ಲಿರುವ ಇಲಾಖೆಗಳಿಗೆ (ಸಾರ್ವಜನಿಕ ವಲಯ ಉದ್ಯಮಗಳನ್ನು ಹೊರತುಪಡಿಸಿ) ಸಂಬಂಧಿಸಿದ ಅವಲೋಕನಗಳನ್ನು ಒಳಗೊಂಡಿದೆ.

**ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ**

**1.8**. ಲೆಕ್ಕಪರಿಶೋಧನಾ ಪ್ರಕ್ರಿಯೆಯು ಸರ್ಕಾರದ ವಿವಿಧ ಇಲಾಖೆಗಳು ಭರಿಸಿದ ವೆಚ್ಚಗಳ ಆಧಾರದ ಮೇಲೆ ಅಪಾಯಗಳ ಮೌಲ್ಯಮಾಪನದೊಂದಿಗೆ, ಚಟುವಟಿಕೆಗಳ ನಿರ್ಣಾಯಕತೆ/ಸಂಕೀರ್ಣತೆ, ನಿಯೋಜಿತ ಹಣಕಾಸಿನ ಅಧಿಕಾರಗಳ ಮಟ್ಟ, ಒಟ್ಟಾರೆ ಆಂತರಿಕ ನಿಯಂತ್ರಣಗಳ ಮೌಲ್ಯಮಾಪನ ಮತ್ತು ಮಧ್ಯಸ್ಥಗಾರರ ಕಾಳಜಿ, ಇವುಗಳಿಂದ ಪ್ರಾರಂಭವಾಗುತ್ತದೆ. ಈ ಪ್ರಕ್ರಿಯೆಯನ್ನು ಹಿಂದಿನ ಲೆಕ್ಕಪರಿಶೋಧನಾ ಫಲಿತಾಂಶಗಳನ್ನು ಸಹ ಪರಿಗಣಿಸಲಾಗುತ್ತದೆ. ಅಪಾಯದ ಪ್ರಕ್ರಿಯೆಯ ಆಧಾರದ ಮೇಲೆ ಲೆಕ್ಕಪರಿಶೋಧನೆಯ ಆವರ್ತನ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲಾಗುತ್ತದೆ.

ಪ್ರತಿ ಘಟಕದ ಲೆಕ್ಕಪರಿಶೋಧನೆಯು ಪೂರ್ಣಗೊಂಡ ನಂತರ, ಲೆಕ್ಕಪರಿಶೋಧನಾ ಫಲಿತಾಂಶಗಳನ್ನು ಇಲಾಖೆಗಳ ಮುಖ್ಯಸ್ಥರಿಗೆ ನೀಡಲಾಗುತ್ತದೆ. ತಪಾಸಣಾ ವರದಿಗಳನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಲೆಕ್ಕಪರಿಶೋಧನೆಯ ಫಲಿತಾಂಶಗಳಿಗೆ ಪ್ರತಿಕ್ರಿಯೆಯನ್ನು ಒದಗಿಸುವಂತೆ ಇಲಾಖೆಗಳನ್ನು ವಿನಂತಿಸಲಾಗುತ್ತದೆ. ಪ್ರತಿಕ್ರಿಯೆಗಳನ್ನು ಸ್ವೀಕರಿಸಿದಾಗಲೆಲ್ಲ, ಲೆಕ್ಕಪರಿಶೋಧನೆಯ ಸಂಶೋಧನೆಗಳನ್ನು ಇತ್ಯರ್ಥಗೊಳಿಸಲಾಗುತ್ತದೆ ಅಥವಾ ಅನುಸರಣೆಗಾಗಿ ಮುಂದಿನ ಕ್ರಮವನ್ನು ಸೂಚಿಸಲಾಗುತ್ತದೆ. ಈ ತಪಾಸಣಾ ವರದಿಗಳಿಂದ ಉಂಟಾಗುವ ಪ್ರಮುಖ ಲೆಕ್ಕಪರಿಶೋಧನಾ ಅವಲೋಕನಗಳನ್ನು ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲು ಪ್ರಕ್ರಿಯೆ ಗೊಳಿಸಲಾಗುತ್ತದೆ, ಇದನ್ನು ರಾಜ್ಯ ಶಾಸಕಾಂಗದಲ್ಲಿ

[2] (i) ರಾಜ್ಯದ ಸಂಚಿತ ನಿಧಿಯ ಎಲ್ಲಾ ವಹಿವಾಟುಗಳು (ii) ಸಾದಿಲ್ವಾರು ನಿಧಿ ಮತ್ತು ಸಾರ್ವಜನಿಕ ಲೆಕ್ಕಗಳಿಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳು ಮತ್ತು (iii) ಎಲ್ಲ ವ್ಯಾಪಾರ, ಉತ್ಪಾದನೆ, ಲಾಭ ಮತ್ತು ನಷ್ಟ ಲೆಕ್ಕಗಳು ಬ್ಯಾಲೆನ್ಸ್ ಶೀಟ್‌ಗಳು ಮತ್ತು ಇತರೆ ಲೆಕ್ಕಗಳು, ಇವುಗಳ ಲೆಕ್ಕಪರಿಶೋಧನೆ.

[3] ಸಂಬಂಧಪಟ್ಟ ಶಾಸನಗಳ ಅನುವುಗಳಿಗೆ ಅನುಸಾರವಾಗಿ ಸಂಸತ್ತು ಮಾಡಿದ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿಸಲಾದ ನಿಗಮಗಳ (ಕಂಪನಿಗಳಲ್ಲ) ಖಾತೆಗಳ ಲೆಕ್ಕಪರಿಶೋಧನೆ.

[4] ರಾಜ್ಯಪಾಲರ ಕೋರಿಕೆಯ ಮೇರೆಗೆ ರಾಜ್ಯ ಶಾಸಕಾಂಗವು ಮಾಡಿದ ಕಾನೂನಿನ ಮೂಲಕ ಸ್ಥಾಪಿಸಲಾದ ನಿಗಮಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[5] ರಾಜ್ಯಪಾಲರಿಂದ ಸಿಎಜಿರವರಿಗೆ ವಹಿಸಲಾದ ಸಂಸ್ಥೆ/ಪ್ರಾಧಿಕಾರಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಪರಸ್ಪರ ಒಪ್ಪಿತವಾದ ನಿಯಮಗಳು ಮತ್ತು ಷರತ್ತುಗಳ ಆಧಾರದ ಮೇಲೆ.

ಮಂಡಿಸಲು ಭಾರತದ ಸಂವಿಧಾನದ 151ನೇ ವಿಧಿಯ ಅಡಿಯಲ್ಲಿ ರಾಜ್ಯದ ರಾಜ್ಯಪಾಲರಿಗೆ ಸಲ್ಲಿಸಲಾಗುತ್ತದೆ.

## ಪ್ರಮುಖ ಲೆಕ್ಕಪರಿಶೋಧನಾ ಅವಲೋಕನಗಳು ಮತ್ತು ಲೆಕ್ಕಪರಿಶೋಧನೆಗೆ ಪ್ರತಿಕ್ರಿಯೆ

**1.9**. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯ ಮೂಲಕ ವಿವಿಧ ಕಾರ್ಯಕ್ರಮಗಳು/ಚಟುವಟಿಕೆಗಳ ಅನುಷ್ಠಾನದಲ್ಲಿ ಗಮನಾರ್ಹ ನ್ಯೂನತೆಗಳನ್ನು ಮತ್ತು ಕಾರ್ಯಕ್ರಮಗಳ ಯಶಸ್ಸು ಮತ್ತು ಇಲಾಖೆಗಳ ಕಾರ್ಯನಿರ್ವಹಣೆಯ ಮೇಲೆ ಪರಿಣಾಮ ಬೀರುವ ಆಯ್ದ ಇಲಾಖೆಗಳಲ್ಲಿನ ಆಂತರಿಕ ನಿಯಂತ್ರಣಗಳ ಗುಣಮಟ್ಟದ ಮೇಲೆ ಲೆಕ್ಕಪರಿಶೋಧನೆಯು ವರದಿ ಮಾಡಿದೆ. ಹಾಗೆಯೇ ಸರ್ಕಾರಿ ಇಲಾಖೆಗಳು/ಸಂಸ್ಥೆಗಳ ಅನುಸರಣಾ ಲೆಕ್ಕಪರಿಶೋಧನೆಯ ಸಮಯದಲ್ಲಿ ಗಮನಿಸಲಾದ ನ್ಯೂನತೆಗಳ ಬಗ್ಗೆಯೂ ವರದಿ ಮಾಡಲಾಗಿದೆ.

ಈ ವರದಿಯಲ್ಲಿ ಸೇರಿಸಿರುವ ಒಂಭತ್ತು ಕಂಡಿಕೆಗಳನ್ನು ಸಂಬಂಧಿಸಿದ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಇವರುಗಳಿಗೆ ಆರು ವಾರಗಳೊಳಗೆ ತಮ್ಮ ಪ್ರತಿಕ್ರಿಯೆಗಳನ್ನು ಕಳುಹಿಸುವಂತೆ ತಿಳಿಸಿ ಜನವರಿ 2022 ಮತ್ತು ಏಪ್ರಿಲ್ 2022ರ ನಡುವೆ ಅರೆಸರ್ಕಾರಿ ಪತ್ರದ ಮೂಲಕ ಕಳುಹಿಸಲಾಗಿದೆ. ಸರ್ಕಾರದ ಪ್ರತಿಕ್ರಿಯೆಯನ್ನು ವರದಿಯಲ್ಲಿ ಸೂಕ್ತವಾಗಿ ಅಳವಡಿಸಲಾಗಿದೆ.

## ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ

***ಬಾಕಿ ಉಳಿದಿರುವ ತಪಾಸಣಾ ವರದಿಗಳು***

**1.10.1**. ನಿಗದಿತ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಹಾಗೂ ತಪಾಸಣಾ ವರದಿಗಳಲ್ಲಿ ತಪಾಸಣೆಯ ಸಮಯದಲ್ಲಿ ಗಮನಿಸಿದ ನ್ಯೂನತೆಗಳು, ಲೋಪಗಳು ಇತ್ಯಾದಿಗಳಿಗೆ ಹೊಣೆಗಾರಿಕೆಗಾಗಿ ಮಹಾಲೇಖಾಪಾಲರು ಜಾರಿಮಾಡಿದ ತಪಾಸಣಾ ವರದಿಗಳಿಗೆ ಕಾರ್ಯಾಂಗವು ತ್ವರಿತ ಪ್ರತಿಕ್ರಿಯೆ ನೀಡಬೇಕೆಂದು 2001ರಲ್ಲಿ ಹಣಕಾಸು ಇಲಾಖೆಯು ಹೊರಡಿಸಿರುವ ಲೆಕ್ಕಪರಿಶೋಧನಾ ಅವಲೋಕನಗಳ ತ್ವರಿತ ಇತ್ಯರ್ಥಕ್ಕಾಗಿನ ಸೂಚನೆಗಳ ಕೈಪಿಡಿಯು ನಿಗದಿಪಡಿಸುತ್ತದೆ. ಕಛೇರಿಗಳ ಮುಖ್ಯಸ್ಥರು ಮತ್ತು ನಂತರದ ಉನ್ನತ ಅಧಿಕಾರಿಗಳು ತಪಾಸಣಾ ವರದಿಗಳಲ್ಲಿ ಒಳಗೊಂಡಿರುವ ಅವಲೋಕನಗಳನ್ನು ಅನುಪಾಲಿಸಬೇಕು, ದೋಷಗಳು ಮತ್ತು ಲೋಪಗಳನ್ನು ತ್ವರಿತವಾಗಿ ಸರಿಪಡಿಸಬೇಕು ಮತ್ತು ಅವರ ಅನುಸರಣೆಯನ್ನು ಮಾಹಾಲೇಖಾಪಾಲರಿಗೆ ವರದಿ ಮಾಡಬೇಕು. ಲೆಕ್ಕಪರಿಶೋಧನಾ ಅವಲೋಕನಗಳ ಮೇಲ್ವಿಚಾರಣೆಯನ್ನು ಸುಗಮಗೊಳಿಸಲು ಮಹಾಲೇಖಾಪಾಲರು ಬಾಕಿ ಇರುವ ತಪಾಸಣಾ ವರದಿಗಳ ಅರ್ಧ ವಾರ್ಷಿಕ ವರದಿಯನ್ನು ಇಲಾಖೆಯ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾರೆ.

31 ಮಾರ್ಚ್ 2021ರಲ್ಲಿದ್ದಂತೆ ಎಲ್ಲ ಇಲಾಖೆಗಳಿಗೆ ಪ್ರತಿಯಾಗಿ 2,159 ತಪಾಸಣಾ ವರದಿಗಳು (11,068 ಕಂಡಿಕೆಗಳು) ಬಾಕಿ ಉಳಿದಿದ್ದವು. ವರ್ಷವಾರು ಬಾಕಿ ಉಳಿದಿರುವ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಕೋಷ್ಟಕ–1.3: ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ಬಾಕಿ ಇರುವ ವರ್ಷಾವಾರು ವಿವರಗಳು**

| ಕ್ರಮ ಸಂಖ್ಯೆ | ವರ್ಷ | ತಪಾಸಣಾ ವರದಿಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
|---|---|---|---|
| 1 | 1 ವರ್ಷಕ್ಕಿಂತ ಕಡಿಮೆ | 117 | 1,244 |
| 2 | 1ರಿಂದ 2 ವರ್ಷಗಳು | 251 | 1,870 |
| 3 | 2ರಿಂದ 5 ವರ್ಷಗಳು | 642 | 4,044 |
| 4 | 5ರಿಂದ 10 ವರ್ಷಗಳು | 745 | 3,140 |
| 5 | 10 ವರ್ಷಗಳಿಗೂ ಅಧಿಕ | 404 | 770 |
| | **ಒಟ್ಟು** | **2,159** | **11,068** |

ಮಾರ್ಚ್ 2021ರವರೆಗೆ ಜಾರಿ ಮಾಡಲಾದ ತಪಾಸಣಾ ವರದಿಗಳಲ್ಲಿ ಬಾಕಿ ಉಳಿದಿರುವ ತಪಾಸಣಾ

ವರದಿಗಳ ಪರಿಶೀಲನೆಯು, 117 ತಪಾಸಣಾ ವರದಿಗಳು (1,244 ಕಂಡಿಕೆಗಳು) ಒಂದು ವರ್ಷಕ್ಕಿಂತ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು, 1,638 ತಪಾಸಣಾ ವರದಿಗಳು (9,054 ಕಂಡಿಕೆಗಳು) ಒಂದು ವರ್ಷಕ್ಕಿಂತ ಹೆಚ್ಚು ಆದರೆ 10 ವರ್ಷಗಳಿಗಿಂತ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು ಮತ್ತು 404 ತಪಾಸಣಾ ವರದಿಗಳು (770 ಕಂಡಿಕೆಗಳು) 10 ವರ್ಷಗಳಿಗೂ ಅಧಿಕ ಅವಧಿಗೆ ಬಾಕಿ ಉಳಿದಿದ್ದವು ಎಂಬುದನ್ನು ತಿಳಿಯಪಡಿಸಿತು. ವರ್ಷವಾರು ಮತ್ತು ಇಲಾಖಾವಾರು ತಪಾಸಣಾ ವರದಿಗಳ ಮತ್ತು ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು ***ಅನುಬಂಧ–3ರಲ್ಲಿ*** ನೀಡಲಾಗಿದೆ.

***ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಸರಣಾ ಕ್ರಮಗಳು***

**1.10.2**. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಾರ್ಯವಿಧಾನದ ನಿಯಮಗಳ ಕೈಪಿಡಿ (ಆಂತರಿಕ ಕಾರ್ಯ ನಿರ್ವಹಣೆ) 1999, ಸರ್ಕಾರದ ಎಲ್ಲಾ ಇಲಾಖೆಗಳು ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಲೆಕ್ಕಪರಿಶೋಧನಾ ಅವಲೋಕನಗಳಿಗೆ, ಶಾಸಕಾಂಗದಲ್ಲಿ ಅವುಗಳನ್ನು ಮಂಡಿಸಿದ ನಾಲ್ಕು ತಿಂಗಳೊಳಗೆ, ಕ್ರಮ ತೆಗೆದುಕೊಂಡ ಟಿಪ್ಪಣಿಗಳ ರೂಪದಲ್ಲಿ ವಿವರವಾದ ವಿವರಣೆಯನ್ನು ಒದಗಿಸುವಂತೆ ನಿಗದಿಪಡಿಸುತ್ತದೆ.

ಆಡಳಿತಾತ್ಮಕ ಇಲಾಖೆಗಳು ಈ ಸೂಚನೆಗಳನ್ನು ಅನುಪಾಲಿಸಿರಲಿಲ್ಲ ಮತ್ತು ***ಅನುಬಂಧ–4ರಲ್ಲಿ*** ವಿವರಿಸಿದಂತೆ ಹನ್ನೊಂದು ಇಲಾಖೆಗಳು 31 ಮಾರ್ಚ್ 2022ರಲ್ಲಿದ್ದಂತೆ, 2003–04ರಿಂದ 2018–19ರ ಅವಧಿಯ 78 ಕಂಡಿಕೆಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳನ್ನು ಸಲ್ಲಿಸಿರಲಿಲ್ಲ.

***ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳು***

**1.10.3**. 31 ಮಾರ್ಚ 2022ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಚರ್ಚೆಗೆ ಬಾಕಿ ಇರುವ ಕಂಡಿಕೆಗಳ ಪರಿಶೀಲನೆಯು, 120 ಕಂಡಿಕೆಗಳನ್ನು (ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಸಮೀಕ್ಷೆಗಳನ್ನು ಒಳಗೊಂಡಂತೆ) ಇನ್ನೂ ಚರ್ಚಿಸಬೇಕಾಗಿದೆ ಎಂದು ತಿಳಿಯಪಡಿಸಿತು. 31 ಮಾರ್ಚ 2022ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಗೆ ಬಾಕಿ ಉಳಿದಿರುವ ಕಂಡಿಕೆಗಳ (ಸಾಮಾನ್ಯ ಮತ್ತು ಅಂಕಿಅಂಶ ಕಂಡಿಕೆಗಳನ್ನು ಹೊರತುಪಡಿಸಿ) ಇಲಾಖಾವಾರು ವಿವರಗಳನ್ನು ***ಅನುಬಂಧ–5ರಲ್ಲಿ*** ನೀಡಲಾಗಿದೆ.

**ರಾಜ್ಯ ಶಾಸಕಾಂಗದಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ**

**1.11**. ಮಹಾಲೇಖಾಪಾಲರ (ಲೆಕ್ಕಪರಿಶೋಧನೆ–II) ವ್ಯಾಪ್ತಿಗೆ ಒಳಪಡುವ ರಾಜ್ಯದ 13 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ. ಲೆಕ್ಕಪರಿಶೋಧನೆಯ ವಹಿಸುವಿಕೆ, ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಸಲ್ಲಿಸುವಿಕೆ, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಜಾರಿಗೊಳಿಸುವಿಕೆ ಮತ್ತು ಶಾಸಕಾಂಗದಲ್ಲಿ ಅವುಗಳ ಮಂಡನೆಯ ಸ್ಥಿತಿಯನ್ನು ***ಅನುಬಂಧ–2ರಲ್ಲಿ*** ನೀಡಲಾಗಿದೆ.

ಜೂನ್ 2021ರಲ್ಲಿದ್ದಂತೆ ಸ್ವಾಯತ್ತ ಸಂಸ್ಥೆಗಳಿಂದ ವಾರ್ಷಿಕ ಲೆಕ್ಕಪತ್ರಗಳ ಸಲ್ಲಿಕೆಯಲ್ಲಿನ ವಿಳಂಬವು ಮೂರರಿಂದ 29 ತಿಂಗಳುಗಳ ವ್ಯಾಪ್ತಿಯಲ್ಲಿದ್ದಿತು. ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಿಕೆಯಲ್ಲಿನ ವಿಳಂಬವು ಹಣಕಾಸಿನ ಅಕ್ರಮಗಳು ಪತ್ತೆಯಾಗದೆ ಹೋಗುವ ಅಪಾಯವನ್ನು ಹೊಂದಿರುತ್ತದೆ. ಆದ್ದರಿಂದ, ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ ಶೀಘ್ರವಾಗಿ ಲೆಕ್ಕಪರಿಶೋಧನೆಗೆ ಸಲ್ಲಿಸುವುದು ಅಗತ್ಯವಾಗಿದೆ.

# ಅಧ್ಯಾಯ–II

# ಇಲಾಖೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

# ಅಧ್ಯಾಯ –II

## 2. ಇಲಾಖೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು

**ನಗರಾಭಿವೃದ್ಧಿ ಇಲಾಖೆ**

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ**

### *2.1. ವಸತಿ ಯೋಜನೆಯನ್ನು ಕಾರ್ಯಗತಗೊಳಿಸಿದ್ದು*

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಕಣಿಮಿಣಿಕೆಯಲ್ಲಿ ವಸತಿ ಯೋಜನೆಯನ್ನು ಅಸಮರ್ಪಕವಾಗಿ ಕಾರ್ಯಗತಗೊಳಿಸಿದ್ದು ₹ 451.53 ಕೋಟಿ ಮೊತ್ತದಷ್ಟು ವರಮಾನವನ್ನು ಪಡೆದುಕೊಳ್ಳದಿರುವಲ್ಲಿ ಹಾಗೂ ₹ 27.24 ಕೋಟಿ ಮೊತ್ತದಷ್ಟು ನಿಷ್ಫಲ/ ವ್ಯರ್ಥ ವೆಚ್ಚವಾಗುವಲ್ಲಿ ಪರಿಣಮಿಸಿತು, ಅಲ್ಲದೆಯೇ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿದ ಜನರಿಗೆ ಮನೆಗಳನ್ನು ಒದಗಿಸುವತ್ತ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಉದ್ದೇಶವು ಈಡೇರಿರಲಿಲ್ಲ.**

ಸಮಾಜದ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಕೈಗೆಟುಕುವ ಮನೆಗಳನ್ನು ಒದಗಿಸುವ ಉದ್ದೇಶದಿಂದ, ಕರ್ನಾಟಕ ಸರ್ಕಾರವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕ್ಕೆ 17 ವಿವಿಧ ಸ್ಥಳಗಳಲ್ಲಿ 326 ಎಕರೆಗಳು 18 ಗುಂಟೆಗಳಷ್ಟು ಭೂಮಿಯನ್ನು ಶೇಕಡಾ 50ರಷ್ಟು ಮಾರ್ಗಸೂಚಿ ಮೌಲ್ಯ ಪಾವತಿಯ ಆಧಾರದ ಮೇರೆಗೆ ಭೂಮಿಯನ್ನು ಮೂರು ವರ್ಷಗಳ ಒಳಗೆ ಉಪಯೋಗಿಸಿಕೊಳ್ಳತಕ್ಕದ್ದು ಎಂಬ ಷರತ್ತಿನೊಂದಿಗೆ ಹಂಚಿಕೆ ಮಾಡಿತು (ಜೂನ್ 2007). ಅದರಂತೆ, ಬಿಡಿಎ ₹ 40.65 ಕೋಟಿ ಮೊತ್ತವನ್ನು ಪಾವತಿಸಿತು (ಆಗಸ್ಟ್ 2010) ಹಾಗೂ ಬೆಂಗಳೂರು ನಗರ ಜಿಲ್ಲೆಯ ಒಂಬತ್ತು ಗ್ರಾಮಗಳಲ್ಲಿ[6] 197.06 ಎಕರೆಗಳಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತು. ಬಿಡಿಎ ಕೈಗೆಟುಕುವ ಬೆಲೆಗಳಲ್ಲಿ ಮನೆಗಳ ಯೋಜನೆಯನ್ನು ಮೇ 2012ರಿಂದ ಸೆಪ್ಟಂಬರ್ 2018ರವರೆಗೆ ಐದು ಹಂತಗಳಲ್ಲಿ ಕೆಂಗೇರಿ ಹೋಬಳಿಯ ಕಣಿಮಿಣಿಕೆ ಗ್ರಾಮದಲ್ಲಿ ಸರ್ಕಾರವು ಹಂಚಿಕೆ ಮಾಡಿದ 50 ಎಕರೆಗಳಷ್ಟು ಭೂಮಿಯಲ್ಲಿ ಪ್ರಾರಂಭಿಸಿತು. ಕಣಿಮಿಣಿಕೆ ವಸತಿ ಯೋಜನೆಯ ಹಂತ I ರಿಂದ ಹಂತ IVಕ್ಕೆ ಬಿಡಿಎಯಿಂದ ಸ್ವಂತ ಹಣಕಾಸನ್ನು ಒದಗಿಸಲಾಯಿತು.

ಯೋಜನೆಯ ಹಂತ I ಆರ್ಥಿಕವಾಗಿ ಹಿಂದುಳಿದ/ದುರ್ಬಲವಾಗಿರುವಂತಹ ವರ್ಗಕ್ಕೆ (ಇಡಬ್ಲ್ಯುಎಸ್) ಒಂದು ಬೆಡ್‌ರೂಮ್/ಹಾಲ್/ಅಡುಗೆ ಕೋಣೆಯ (ಬಿಎಚ್‌ಕೆ) 608 ಮನೆಗಳು/ಫ್ಲ್ಯಾಟುಗಳು, ಕಡಿಮೆ ಆದಾಯದ ಗುಂಪಿಗೆ (ಎಲ್ಐಜಿ) ಎರಡು ಬಿಎಚ್‌ಕೆಗಳ 384 ಮನೆಗಳು/ಫ್ಲ್ಯಾಟುಗಳು ಹಾಗೂ ಮಧ್ಯಮ ಆದಾಯದ ಗುಂಪಿಗೆ (ಎಂಐಜಿ) ಮೂರು ಬಿಎಚ್‌ಕೆಗಳ 320 ಮನೆಗಳು/ಫ್ಲ್ಯಾಟುಗಳ ನಿರ್ಮಾಣವನ್ನು ಒಳಗೊಂಡಿದ್ದಿತು. ಕಾಮಗಾರಿಯನ್ನು ಓರ್ವ ಗುತ್ತಿಗೆದಾರರಿಗೆ ₹ 166.32 ಕೋಟಿ ಮೌಲ್ಯಕ್ಕೆ ನವಂಬರ್ 2013ರ ವೇಳೆಗೆ ಯೋಜನೆಯನ್ನು ಪೂರ್ಣಗೊಳಿಸತಕ್ಕದ್ದು ಎಂಬ ಷರತ್ತಿನೊಂದಿಗೆ ನೀಡಲಾಯಿತು (ಮೇ 2012). ಆದಾಗ್ಯೂ, ಗುತ್ತಿಗೆದಾರರು ಒಂದು ಬಿಎಚ್‌ಕೆ ಬ್ಲಾಕಿನ ಅಡಿಪಾಯ ಕಾಮಗಾರಿಯನ್ನು ಹಾಗೂ ಸ್ಟ್ರಕ್ಚರಲ್ ಕಾಮಗಾರಿಯನ್ನು ಪೂರ್ಣಗೊಳಿಸಿದರು ಹಾಗೂ ಎರಡು ಮತ್ತು ಮೂರು ಬಿಎಚ್‌ಕೆ ಬ್ಲಾಕುಗಳಿಗೆ ಸಂಬಂಧಿಸಿದಂತೆ ಕೇವಲ ಅಡಿಪಾಯ ಕಾಮಗಾರಿಯನ್ನು ಪೂರ್ಣಗೊಳಿಸಿದರು (ಜನವರಿ 2015). ವಿದ್ಯುಚ್ಛಕ್ತಿ, ಚರಂಡಿ ವ್ಯವಸ್ಥೆ ಮುಂತಾದ ಇತರೆ ಕಾಮಗಾರಿಗಳನ್ನು ಹಾಗೂ ಕಾಂಪೌಂಡ್ ಗೋಡೆ ನಿರ್ಮಾಣ, ಇತ್ಯಾದಿಗಳನ್ನು ಮಾಡಿರಲಿಲ್ಲ ಹಾಗೂ ಯೋಜನೆಯ ಹಂತ I ಜನವರಿ 2015ರಿಂದಲೂ ಸ್ಥಗಿತಗೊಂಡಿತ್ತು. ಬಿಡಿಎ ಗುತ್ತಿಗೆದಾರರಿಗೆ

[6] ಆಲೂರು, ಬೆಟ್ಟದಾಸನಪುರ, ದೊಡ್ಡಬನಹಳ್ಳಿ, ದೊಡ್ಡಗುಬ್ಬಿ, ಗುಂಜೂರು, ಹುನೆಗೆರೆ, ಕಣಿಮಿಣಿಕೆ, ಕೊಮ್ಮಘಟ್ಟ ಮತ್ತು ಕುದುರುಗೆರೆ.

₹ 27.24 ಕೋಟಿ ಮೊತ್ತವನ್ನು ಪಾವತಿಸಿದನಂತರ ಗುತ್ತಿಗೆದಾರರ ಮೇಲೆ ಸಂಭಾವ್ಯ ಅಪಾಯ ಹಾಗೂ ವೆಚ್ಚಮೌಲ್ಯವನ್ನು ಹೊರೆಸಿ ಕಾಮಗಾರಿ ಗುತ್ತಿಗೆಯನ್ನು ಅಂತ್ಯಗೊಳಿಸಿತು (ಏಪ್ರಿಲ್ 2016). ಕಾಮಗಾರಿ ಗುತ್ತಿಗೆಯನ್ನು ಅಂತ್ಯಗೊಳಿಸಿದನಂತರ ಬಿಡಿಎ ಗುತ್ತಿಗೆದಾರರೊಂದಿಗೆ ಕಾಮಗಾರಿಯ ಜಂಟಿ ಅಳತೆಯನ್ನು ಮಾಡಿತು (ನವೆಂಬರ್ 2016) ಹಾಗೂ ನಿವೇಶನದಲ್ಲಿ ಇದ್ದಂತಹ ₹ 0.91 ಕೋಟಿ ಮೌಲ್ಯದ ಸಾಮಗ್ರಿಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತು; ಅವುಗಳನ್ನು ಎರಡು ಬಿಎಚ್‌ಕೆ ಯೂನಿಟ್ಟುಗಳ ನೆಲಮಾಳಿಗೆಯಲ್ಲಿ ಸಂಗ್ರಹಿಸಿಡಲಾಗಿದ್ದಿತು.

ಹಂತ IIರಿಂದ IVರ ಅಡಿಯಲ್ಲಿ ನಿರ್ಮಾಣಗೊಂಡಿರುವ ಫ್ಲ್ಯಾಟುಗಳನ್ನು (1068 ಸಂಖ್ಯೆಗಳು) ₹ 244.97 ಕೋಟಿ ವೆಚ್ಚದಲ್ಲಿ ಪೂರ್ಣಗೊಳಿಸಲಾಗಿದ್ದಿತು (ಏಪ್ರಿಲ್ 2017). ಯೋಜನೆಯ ಹಂತ I ಅಪೂರ್ಣವಾಗಿಯೇ ಉಳಿದಿದ್ದರೂ ಸಹ ಹಾಗೂ ಹಂತ IIರಿಂದ IVರ ಅಡಿಯಲ್ಲಿ ಪೂರ್ಣಗೊಳಿಸಲಾಗಿದ್ದಂತಹ 1068 ಫ್ಲ್ಯಾಟುಗಳು ಮಾರಾಟವಾಗದೆಯೇ ದಾಸ್ತಾನಿನಲ್ಲಿ ಉಳಿದಿದ್ದರೂ ಸಹ, ಬಿಡಿಎ ₹ 184.94 ಕೋಟಿ ಒಟ್ಟಾರೆ ವೆಚ್ಚದಲ್ಲಿ ಹೆಚ್ಚುವರಿ 432 ಫ್ಲ್ಯಾಟುಗಳ ನಿರ್ಮಾಣವನ್ನು ಒಳಗೊಂಡಂತೆ ಹಂತ Vನ್ನು ಪ್ರಾರಂಭಿಸಿತು (ಸೆಪ್ಟಂಬರ್ 2016). ಬಿಡಿಎ 2018–21ರ ಅವಧಿಯಲ್ಲಿ ಶೇಕಡಾ 7.85ರಿಂದ ಶೇಕಡಾ 9ರವರೆಗಿನ ಬಡ್ಡಿ ದರಗಳಲ್ಲಿ ಯೋಜನೆಯ ಹಂತ Vಕ್ಕೆ ₹ 40 ಕೋಟಿ ಮೊತ್ತದ ಬ್ಯಾಂಕು ಸಾಲವನ್ನು ಪಡೆದುಕೊಂಡಿದ್ದಿತು (ಜನವರಿ 2018). ಈ ಹಿಂದಿನ ಹಂತಗಳಲ್ಲಿ ಪೂರ್ಣಗೊಂಡಿರುವ ಹಾಗೂ ದಾಸ್ತಾನಿನಲ್ಲಿ ಮಾರಾಟವಾಗದೇ ಉಳಿದಿರುವಂತಹ ಫ್ಲ್ಯಾಟುಗಳ ಕಾರಣ ಹಂತ V ಪೂರ್ಣಗೊಂಡಿದ್ದರೂ (ಸೆಪ್ಟಂಬರ್ 2018) ಸಹ, ಈ ಫ್ಲ್ಯಾಟುಗಳ ಹಂಚಿಕೆಗಾಗಿ ಬಿಡಿಎ ಅಧಿಸೂಚನೆಯನ್ನು ಹೊರಡಿಸುವುದು ಇನ್ನೂ ಬಾಕಿಯಿದ್ದಿತು (ಮಾರ್ಚ್ 2022).

ಈ ರೀತಿಯಾಗಿ, ಡಿಸೆಂಬರ್ 2021ರ ಅಂತ್ಯದಲ್ಲಿದ್ದಂತೆ ಹಂತ IIರಿಂದ Vರ ಅಡಿಯಲ್ಲಿ ನಿರ್ಮಿಸಲಾಗಿರುವ ಫ್ಲ್ಯಾಟುಗಳ ಸುಮಾರು ಶೇಕಡಾ 85ರಷ್ಟು ಫ್ಲ್ಯಾಟುಗಳು ಮಾರಾಟವಾಗದೆಯೇ ಉಳಿದಿರುತ್ತವೆ. ಕಣಿಮಿಣಿಕೆಯಲ್ಲಿನ ವಸತಿ ಯೋಜನೆಯ ಒಟ್ಟಾರೆ ಅಂದಾಜು ವೆಚ್ಚವು ₹ 492.96 ಕೋಟಿ ಆಗಿದ್ದಿತು ಹಾಗೂ ಡಿಸೆಂಬರ್ 2021ರಲ್ಲಿದ್ದಂತೆ ಯೋಜನೆಯ ಭೌತಿಕ ಮತ್ತು ಹಣಕಾಸಿನ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ತಿಳಿಸಲಾಗಿದೆ:

**ಕೋಷ್ಟಕ ಸಂಖ್ಯೆ 2.1.1: 31 ಡಿಸೆಂಬರ್ 2021ರಲ್ಲಿದ್ದಂತೆ ಕಣಿಮಿಣಿಕೆಯಲ್ಲಿನ ವಸತಿ ಯೋಜನೆಯ ಭೌತಿಕ ಮತ್ತು ಹಣಕಾಸಿನ ಪ್ರಗತಿ**

| ಯೋಜನಾ ಹಂತ | ಯೋಜಿಸಲಾಗಿದ್ದ ಫ್ಲ್ಯಾಟುಗಳ ಸಂಖ್ಯೆ | ನಿರ್ಮಿಸಲಾದ ಫ್ಲ್ಯಾಟುಗಳ ಸಂಖ್ಯೆ | ಒಟ್ಟು ವೆಚ್ಚ (₹ಕೋಟಿಯಲ್ಲಿ) | ಹಂಚಿಕೆ ಮಾಡಲಾದ ಫ್ಲ್ಯಾಟುಗಳ ಸಂಖ್ಯೆ (%) | ಫ್ಲ್ಯಾಟು ಒಂದಕ್ಕೆ ಮಾರಾಟದ ಮೌಲ್ಯ (₹ಕೋಟಿಯಲ್ಲಿ) | ಹಂಚಿಕೆ ಮಾಡಿರದ ಫ್ಲ್ಯಾಟುಗಳ ಮೇಲೆ ಪಡೆದುಕೊಳ್ಳ ಬೇಕಿರುವ ಮೊತ್ತ (₹ಕೋಟಿಯಲ್ಲಿ) |
|---|---|---|---|---|---|---|
| ಹಂತ I* | 1312 | 0 | 27.24 | 0 (0) | 0.0000 | 0.00 |
| ಹಂತ -II | 672 | 672 | 130.52 | 174(26) | 0.2375 | 118.28 |
| ಹಂತ -III | 288 | 288 | 73.63 | 29 (10) | 0.2850 | 73.81 |
| ಹಂತ -IV | 108 | 108 | 40.82 | 21 (19) | 0.4000 | 34.80 |
| ಹಂತ V** | 432 | 432 | 184.94 | 0(0) | 0.5200 | 224.64 |
| **ಒಟ್ಟು** | **2812** | **1500** | **457.15** | **224(15)** | | **451.53** |

(ಮೂಲ: ಬಿಡಿಎ ಒದಗಿಸಿರುವ ಮಾಹಿತಿಯಂತೆ)

* **ಮೊದಲ ಹಂತದ ಕಾಮಗಾರಿಯ ಗುತ್ತಿಗೆಯನ್ನು 2015ರಲ್ಲಿ ಅಂತ್ಯಗೊಳಿಸಲಾಯಿತು.**

** **ಸೆಪ್ಟಂಬರ್ 2018ರಲ್ಲಿ ಪೂರ್ಣಗೊಳಿಸಲಾದ ಹಂತ Vರ ಫ್ಲ್ಯಾಟುಗಳ ಹಂಚಿಕೆಗಾಗಿ ಅಧಿಸೂಚನೆಯನ್ನು ಇನ್ನೂ ಹೊರಡಿಸಬೇಕಿದ್ದಿತು.**

ಪೂರ್ವಭಾವಿಯಾಗಿ ಯೋಜಿಸುವುದು, ಕಾರ್ಯಗತಗೊಳಿಸುವುದು ಹಾಗೂ ಪ್ರಚಾರಪಡಿಸುವುದು ಯಾವುದೇ ವಸತಿ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ದಾಖಲೆಗಳನ್ನು ಪರಿಶೀಲಿಸಲಾಗಿ, ಯೋಜನೆಯ ಬಗ್ಗೆ ಪೂರ್ವಭಾವಿಯಾಗಿ

ಯೋಜಿಸುವಲ್ಲಿ ಹಾಗೂ ಕಾರ್ಯಗತಗೊಳಿಸುವಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಲೋಪದೋಷಗಳನ್ನು/ನ್ಯೂನತೆಗಳನ್ನು ಗಮನಿಸಿತು (ಜನವರಿ 2021):

i. ಬಿಡಿಎ ವಸತಿ ಯೋಜನೆಯ ಕಾರ್ಯಸಾಧ್ಯತೆಯನ್ನು ನಿರ್ಧಾರಣೆ ಮಾಡುವ ಸಲುವಾಗಿ ಯಾವುದೇ ಬೇಡಿಕೆ ಸಮೀಕ್ಷೆಯನ್ನು ನಡೆಸಲಿಲ್ಲ, ತತ್ಪರಿಣಾಮವಾಗಿ ಪೂರ್ಣಗೊಳಿಸಲಾದ ಫ್ಲ್ಯಾಟುಗಳ ಪೈಕಿ ಕೇವಲ ಶೇಕಡಾ 15ರಷ್ಟನ್ನು (1500ರ ಪೈಕಿ 224) ಹಂಚಿಕೆ ಮಾಡಲು ಸಾಧ್ಯವಾಯಿತು. ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ವಿಶ್ಲೇಷಣೆ ಮಾಡಲಾಗಿ ಎರಡು ಬಿಎಚ್‌ಕೆ ಫ್ಲ್ಯಾಟುಗಳಿಗೆ ಸಂಬಂಧಿಸಿದಂತೆ ಶೇಕಡಾ 21ಕ್ಕೆ ಹೋಲಿಸಿದಂತೆ (960ರ ಪೈಕಿ 203) ಮೂರು ಬಿಎಚ್‌ಕೆ ಫ್ಲ್ಯಾಟುಗಳ ಹಂಚಿಕೆಯು ಶೇಕಡಾ ನಾಲ್ಕು ಆಗಿದ್ದಿತು (540ರ ಪೈಕಿ 21) ಎಂಬುದನ್ನು ತೋರಿಸಿಕೊಟ್ಟಿತು.

ii. ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡ ನಿರ್ಮಾಣ ಉಪ–ನಿಯಮಗಳು, 2003ರ ಅನುವುಗಳ ಅನುಸಾರ, ಎತ್ತರದ/ಬಹುಮಹಡಿ ಕಟ್ಟಡದ ಎದುರಿಗೆ ಇರುವಂತಹ ರಸ್ತೆಯ ಕನಿಷ್ಠ ಅಗಲವು 12 ಮೀಟರುಗಳಾಗಿರತಕ್ಕದ್ದು ಹಾಗೂ ವಸತಿ ಘಟಕಗಳಿಗೆ ಸಂಪರ್ಕ ರಸ್ತೆಯು ಅತ್ಯಗತ್ಯವಾಗಿದ್ದಿತು. ಆದಾಗ್ಯೂ, ವಸತಿ ಯೋಜನಾ ಪ್ರದೇಶವನ್ನು ಮೈಸೂರು ಮುಖ್ಯ ರಸ್ತೆಗೆ ಸಂಪರ್ಕಿಸುವ ಸಲುವಾಗಿ ಒಂದು ಸಂಪರ್ಕ ರಸ್ತೆಯನ್ನು ಅಂತಿಮ ರೂಪಕ್ಕೆ ತಾರದೆಯೇ ವಸತಿ ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು. ಸಂಪರ್ಕ ರಸ್ತೆಯ ನಿರ್ಮಾಣವನ್ನು ಭೂ ಸ್ವಾಧೀನ ಸಮಸ್ಯೆಗಳ ಕಾರಣ ಕೈಗೆತ್ತಿಕೊಳ್ಳಲಾಗಲಿಲ್ಲ; ಅವುಗಳನ್ನು ಇನ್ನೂ ಬಗೆಹರಿಸಬೇಕಾಗಿರುತ್ತದೆ (ಮಾರ್ಚ್ 2022). ಸಮರ್ಪಕ ಸಂಪರ್ಕ ರಸ್ತೆಯ ಅನುಪಸ್ಥಿತಿಯು ನಿರ್ಮಿಸಲಾದ ವಸತಿ ಘಟಕಗಳಿಗೆ ಕನಿಷ್ಠ ಪ್ರಮಾಣದ ಬೇಡಿಕೆಗೆ ಕಾರಣವಾಯಿತು.

iii. ಬಿಡಿಎ ಹಂತ Iರ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದ್ದ ಕಾಮಗಾರಿಗಳನ್ನು ಪುನರ್–ಪ್ರಾರಂಭಿಸಬೇಕಾಗಿರುತ್ತದೆ ಹಾಗೂ ಈ ನಿಟ್ಟಿನಲ್ಲಿನ ಹೆಚ್ಚುವರಿ ವೆಚ್ಚಗಳನ್ನು ತಪ್ಪಿತಸ್ಥ ಗುತ್ತಿಗೆದಾರರಿಂದ ವಸೂಲು ಮಾಡಬೇಕಾಗಿರುತ್ತದೆ (ಮಾರ್ಚ್ 2022). ಹಂತ Iರ ಅಡಿಯಲ್ಲಿ ಸೃಷ್ಟಿಸಲಾದ ಆಸ್ತಿಗಳನ್ನು ಪ್ರಾಕೃತಿಕ ಅಂಶಗಳಿಗೆ ತೆರೆದಿಡಲಾಗಿರುವುದು ಹಾಗೂ ಕಾಮಗಾರಿಯನ್ನು ಆರು ವರ್ಷಗಳಿಗೂ ಮೀರಿದಂತೆ ಸ್ಥಗಿತಗೊಳಿಸಿರುವುದರಿಂದ ಅಪಮೌಲ್ಯಗೊಳ್ಳುವುದಕ್ಕೆ ಹಾಗೂ ಹಾಳಾಗುವುದಕ್ಕೆ ಮುಕ್ತವಾಗಿರುವವು/ದಾರಿ ಮಾಡಿ ಕೊಟ್ಟಿರುವವು ಎಂಬುದನ್ನು ಬಿಡಿಎ ಅಧಿಕಾರಿಗಳ ಜೊತೆಯಲ್ಲಿ ಲೆಕ್ಕಪರಿಶೋಧನೆಯು ಕೈಗೊಂಡಂತಹ ಜಂಟಿ ಭೌತಿಕ ಪರಿಶೀಲನೆಯು ತೋರಿಸಿಕೊಟ್ಟಿತು (ಡಿಸೆಂಬರ್ 2020) (***ಛಾಯಾಚಿತ್ರಗಳು ಅನುಬಂಧ–6ರಲ್ಲಿ***).

iv. ಬಿಡಿಎ ಸಮರ್ಪಕ ಭದ್ರತಾ ವ್ಯವಸ್ಥೆಯ ಅನುವು ಮಾಡಿರಲಿಲ್ಲವಾದ್ದರಿಂದ ನಿವೇಶನಗಳಲ್ಲಿ ದಾಸ್ತಾನು ಇಡಲಾಗಿದ್ದಂತಹ ₹ 0.91 ಕೋಟಿ ಮೌಲ್ಯದ ಸಾಮಗ್ರಿಗಳು ಕಳ್ಳತನವಾಗುವಲ್ಲಿ ಪರಿಣಮಿಸಿತು. ಅಧಿಕಾರ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಒಂದು ದೂರನ್ನು ದಾಖಲಿಸಿದ್ದನ್ನು (ಜುಲೈ 2019) ಹೊರತುಪಡಿಸಿದಂತೆ, ಈ ನಿಟ್ಟಿನಲ್ಲಿ ಹೊಣೆಗಾರಿಕೆ/ಜವಾಬ್ದಾರಿಯನ್ನು ನಿಗದಿಪಡಿಸುವ ಸಲುವಾಗಿ ಹಾಗೂ ನಷ್ಟವನ್ನು ವಸೂಲು ಮಾಡುವ ಸಲುವಾಗಿ ಬಿಡಿಎ ಯಾವುದೇ ಅನುಸರಣಾ ಕ್ರಮಗಳನ್ನು ಕೈಗೊಂಡಿರಲಿಲ್ಲ.

ಈ ರೀತಿಯಾಗಿ, ಬೇಡಿಕೆಯನ್ನು ನಿರ್ಧಾರಣೆ ಮಾಡದೆಯೇ ಹಾಗೂ ಸಂಪರ್ಕ ರಸ್ತೆಯ ಅನುವು ಮಾಡದೆಯೇ ವಸತಿ ಯೋಜನೆಯನ್ನು ಕಾರ್ಯಗತಗೊಳಿಸಿದ್ದು ಮಾರಾಟವಾಗದೇ ಉಳಿದಿದ್ದ ಫ್ಲ್ಯಾಟುಗಳ ದಾಸ್ತಾನು ಏರಿಕೆಯಾಗುತ್ತಾ/ಹೆಚ್ಚಳಗೊಳ್ಳುತ್ತಾ ಹೋಗುವಲ್ಲಿ ಹಾಗೂ ತತ್ಪರಿಣಾಮವಾಗಿ ಮೂರು ವರ್ಷಗಳಿಗೂ ಮೀರಿದಂತೆ ಬಿಡಿಎ ₹ 451.53 ಕೋಟಿ ಮೊತ್ತದಷ್ಟು ವರಮಾನವನ್ನು ಪಡೆದು ಕೊಳ್ಳದಿರುವಲ್ಲಿ ಪರಿಣಮಿಸಿತು. ಮುಂದುವರೆದು, ಜನವರಿ 2015ರಿಂದಲೂ ಅಪೂರ್ಣವಾಗಿಯೇ ಉಳಿದಿರುವಂತಹ ಕಾಮಗಾರಿಗಳನ್ನು ಪುನರ್–ಪ್ರಾರಂಭಿಸುವಲ್ಲಿ ಬಿಡಿಎ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲವಾದ್ದರಿಂದ ಯೋಜನೆಯ ಹಂತ Iರ ನಿರ್ಮಾಣದ ಮೇಲೆ ಭರಿಸಲಾಗಿರುವ ₹ 27.24 ಕೋಟಿ ಮೊತ್ತವು ನಿಷ್ಫಲ/ವೆಚ್ಚವಾಗಿರುವುದು. 1312 ಫ್ಲ್ಯಾಟುಗಳ ಪೈಕಿ ಆರ್ಥಿಕವಾಗಿ ದುರ್ಬಲರಾಗಿರುವ/ಹಿಂದುಳಿದಿರುವ ವರ್ಗಕ್ಕಾಗಿ ಯೋಜಿಸಲಾಗಿದ್ದ 608

ಫ್ಲ್ಯಾಟುಗಳನ್ನು ಒಳಗೊಂಡಿದ್ದಂತಹ ಯೋಜನೆಯ ಹಂತ Iನ್ನು ಪುನರ್–ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ ಬಿಡಿಎ ಯಾವುದೇ ಕ್ರಮಗಳನ್ನೂ ತೆಗೆದುಕೊಳ್ಳದಿರುವುದು ಸಮಾಜದ ಆರ್ಥಿಕವಾಗಿ ದುರ್ಬಲರಾಗಿರುವ/ಹಿಂದುಳಿದಿರುವ ವರ್ಗಗಳಿಗೆ ಕೈಗೆಟಕುವ ವಸತಿ ಸೌಲಭ್ಯವನ್ನು ಒದಗಿಸುವ ಸರ್ಕಾರದ ಉದ್ದೇಶವನ್ನು ವಿಫಲಗೊಳಿಸಿತು.

ಯೋಜನೆಯ ಅಡಿಯಲ್ಲಿ ನಿರ್ಮಾಣ ಮಾಡಲಾದ ಫ್ಲ್ಯಾಟುಗಳಿಗೆ ಬೇಡಿಕೆಯು ಕಡಿಮೆ ಪ್ರಮಾಣದಲ್ಲಿತ್ತು ಎಂಬುದನ್ನು ರಾಜ್ಯ ಸರ್ಕಾರವು ತನ್ನ ಉತ್ತರದಲ್ಲಿ (ಮಾರ್ಚ್ 2022) ಒಪ್ಪಿಕೊಂಡಿತು ಹಾಗೂ ಸಂಭಾವ್ಯ ಖರೀದಿದಾರರನ್ನು ಆಕರ್ಷಿಸುವ ಸಲುವಾಗಿ ಮಾಧ್ಯಮಗಳ ಮೂಲಕ ಜಾಹೀರಾತುಗಳನ್ನು ನೀಡಲಾಯಿತು ಹಾಗೂ ಆನ್‌ಲೈನ್ ಹಂಚಿಕೆ ಅನುಕೂಲತೆಯನ್ನು ಒದಗಿಸಲಾಯಿತು ಎಂಬುದಾಗಿ ತಿಳಿಸಿತು. ಯೋಜನೆಯ ಹಂತ Iರ ಅಡಿಯಲ್ಲಿನ ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಲುವಾಗಿ ಹೊಸದಾಗಿ ಟೆಂಡರುಗಳನ್ನು ಆಹ್ವಾನಿಸಲಾಗುವುದು ಎಂಬುದಾಗಿಯೂ ತಿಳಿಸಿತು. ಸಂಪರ್ಕ ರಸ್ತೆಯ ನಿರ್ಮಾಣಕ್ಕಾಗಿ ಭೂ ಸ್ವಾಧೀನದಲ್ಲಿನ ಪ್ರಗತಿಯ ಬಗ್ಗೆ ಹಾಗೂ ನಿವೇಶನದಲ್ಲಿನ ನಿರ್ಮಾಣ ಸಾಮಗ್ರಿಗಳ ನಷ್ಟಗಳಿಗೆ ಹೊಣೆಗಾರಿಕೆ/ಜವಾಬ್ದಾರಿಯನ್ನು ನಿಗದಿಪಡಿಸುವುದಕ್ಕೆ ಸಂಬಂಧಿಸಿದಂತೆ ಉತ್ತರವು ಮೌನವಾಗಿದ್ದಿತು.

***ಶಿಫಾರಸು:***
**ಸಮರ್ಪಕ ಬೇಡಿಕೆ ಸಮೀಕ್ಷೆಯನ್ನು ನಡೆಸಿದ ನಂತರವಷ್ಟೇ ಹಾಗೂ ಸಂಪರ್ಕ ರಸ್ತೆಗಳು ಮುಂತಾದ ಮೂಲ ಸೌಕರ್ಯಗಳನ್ನು ಒದಗಿಸಲಾಗಿರುವುದು ಎಂಬುದನ್ನು ಖಚಿತಪಡಿಸಿಕೊಂಡ ನಂತರವಷ್ಟೇ ಬಿಡಿಎ ವಸತಿ ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು ಎಂಬುದು ಲೆಕ್ಕಪರಿಶೋಧನೆಯ ಶಿಫಾರಸು.**

## *2.2. ಭೂ ಮಾಲೀಕರಿಗೆ ಅನರ್ಹ ಲಾಭಗಳನ್ನು ಕಲ್ಪಿಸಿರುವುದು*

**ಸಂಬಂಧಿತ ನಿಯಮಗಳು/ನಿಯಂತ್ರಣಗಳು ಹಾಗೂ ನ್ಯಾಯಾಲಯ ಆದೇಶಗಳಿಗೆ ಅಗೌರವ ತೋರಿಸಿ ಪ್ರಸಕ್ತ ಇರುವಂತಹ /ಹೊಸ ಬಡಾವಣೆಗಳಿಗೆ ಅನ್ವಯಗೊಳ್ಳುವಂತಹ ಭೂ ಪರಿಹಾರ ಪ್ರಯೋಜನಗಳನ್ನು ಹಳೆಯ ಬಡಾವಣೆಗಳಿಗೆ ವಿಸ್ತರಿಸಿರುವುದು ಭೂ ಮಾಲೀಕರಿಗೆ ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ₹ 29.85 ಕೋಟಿ ಮೊತ್ತದಷ್ಟು ಹೆಚ್ಚುವರಿ ಹಣಕಾಸಿನ ಬಾಧ್ಯತೆಯುಂಟಾಗುವಲ್ಲಿ ಪರಿಣಮಿಸಿತು.**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಮಾಡಲ್ಪಡುತ್ತಿದ್ದಂತಹ ಭೂ ಸ್ವಾಧೀನವು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಪರಿಚ್ಛೇದಗಳು 35 ಮತ್ತು 36ರ ಅನುವುಗಳಿಂದ ನಿಯಂತ್ರಿಸಲ್ಪಡುತ್ತದೆ, ಆ ಅಧಿನಿಯಮವು ಭೂ ಮಾಲೀಕರೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವುದರ ಮೂಲಕ ಅಥವಾ ಅವುಗಳು ಅನ್ವಯಗೊಳ್ಳುವಷ್ಟರ ಮಟ್ಟಿಗೆ ಭೂ ಸ್ವಾಧೀನ ಅಧಿನಿಯಮ, 1894ರ ಅನುವುಗಳ ಅಡಿಯಲ್ಲಿ ಭೂ ಸ್ವಾಧೀನ ಮಾಡಿಕೊಳ್ಳಲು ಅನುವು ಮಾಡುತ್ತದೆ.

ಸ್ವಾಧೀನ ಪಡಿಸಿಕೊಳ್ಳಲಾದ ಭೂಮಿಗೆ ಪರಿಹಾರದ ವಿವಿಧ ತತ್ವಗಳನ್ನು ಅನ್ವಯಗೊಳಿಸುವುದಕ್ಕೆ ಅನುಮತಿಯಿರಲಿಲ್ಲ. ಒಂದೇ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಲ್ಲಿ ಹಾಗೂ ಒಂದೇ ರೀತಿಯ ಹಾಗೂ ಒಂದಕ್ಕೊಂದು ಹೋಲಿಕೆಯಿದ್ದಲ್ಲಿ, ಸ್ವಾಧೀನಪಡಿಸಿಕೊಳ್ಳಲಾದ ಭೂಮಿಗೆ[7] ಒಂದೇ ರೀತಿಯ ಮಾರುಕಟ್ಟೆ ಮೌಲ್ಯವನ್ನು ನೀಡಬೇಕು. ಸ್ವಾಧೀನ ಪ್ರಕ್ರಿಯೆಗಳು ರದ್ದುಗೊಳ್ಳುವುದಕ್ಕೆ ಸಂಬಂಧಿತ ಭೂ ಸ್ವಾಧೀನ ಅಧಿನಿಯಮ, 1894ರ ಅನುವುಗಳು (ಅಧಿನಿಯಮದ ಪರಿಚ್ಛೇದ 11ಎ) ಬಿಡಿಎ ಅಧಿನಿಯಮದ[8] ಅನುವುಗಳ ಅಡಿಯಲ್ಲಿ ಕೈಗೊಳ್ಳಲಾದ ಭೂ ಸ್ವಾಧೀನಗಳಿಗೆ ಅನ್ವಯಗೊಳ್ಳುವುದಿಲ್ಲ. ಆದ್ದರಿಂದ, ಭೂ ಸ್ವಾಧೀನ ಅಧಿನಿಯಮ, 1894ರ ಪರಿಚ್ಛೇದ 11ಎ ಅಡಿಯಲ್ಲಿ ಸ್ವಾಧೀನ ರದ್ದುಗೊಂಡಂತಹ ಪ್ರಕರಣಗಳಿಗೆ ಅನ್ವಯಗೊಳ್ಳುವಂತಹ ನ್ಯಾಯಸಮ್ಮತ ಪರಿಹಾರಕ್ಕಾಗಿನ

[7] "ಭಾರತ ಸರ್ಕಾರ Vs ಬಲರಾಮ್ ಮತ್ತು ಇತರರ" ಪ್ರಕರಣದಲ್ಲಿ ದಿನಾಂಕ ಜನವರಿ 2004ರಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪು ಹಾಗೂ "ಡಿ. ನಾಗರಾಜ್ Vs ಕರ್ನಾಟಕ ಸರ್ಕಾರ" ಪ್ರಕರಣದಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯವು ದಿನಾಂಕ ಜುಲೈ 2012ರಲ್ಲಿ ನೀಡಿರುವ ತೀರ್ಪು.

[8] "ಆಫ್‌ಶೋರ್ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ Vs ಬಿಡಿಎ ಮತ್ತು ಇತರರ" ಪ್ರಕರಣದಲ್ಲಿ ಜನವರಿ 2011ರಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನೀಡಿರುವ ತೀರ್ಪು.

ಹಕ್ಕು ಮತ್ತು ಭೂ ಸ್ವಾಧೀನದಲ್ಲಿನ ಪಾರದರ್ಶಕತೆ, ಪುನರ್–ವಸತಿ ಮತ್ತು ಪುನರ್–ವ್ಯವಸ್ಥೆ ಅಧಿನಿಯಮ, 2013ರ (2013ರ ಭೂ ಸ್ವಾಧೀನ ಅಧಿನಿಯಮ) ಪರಿಚ್ಛೇದ 24, ಸ್ವಯಂಚಾಲಿತವಾಗಿ ಬಿಡಿಎ ಅಧಿನಿಯಮದ[9] ಅಡಿಯಲ್ಲಿ ಭೂ ಸ್ವಾಧೀನಕ್ಕಾಗಿ ಮಾಡಲಾದ ನಡವಳಿಗಳಿಗೆ ಅನ್ವಯವಾಗುವುದಿಲ್ಲ.

"ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ (ಎಸ್ಎಂವಿ) ಹೆಚ್ಚುವರಿ ವಿಸ್ತರಣೆಯ" ರಚನೆಗಾಗಿ ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯಲ್ಲಿ 773 ಎಕರೆಗಳು 18 ಗುಂಟೆಗಳಷ್ಟು ಭೂಮಿಯ ಸ್ವಾಧೀನಕ್ಕಾಗಿ ಬಿಡಿಎ ಅಧಿಸೂಚನೆಯನ್ನು ಹೊರಡಿಸಿತು (ಸೆಪ್ಟಂಬರ್ 2003). ಅಧಿಸೂಚನೆ ಹೊರಡಿಸಲಾದ ಭೂಮಿಯು ಹಾರೋಹಳ್ಳಿ ಗ್ರಾಮದ ಸರ್ವೇ ಸಂಖ್ಯೆ 67ರಲ್ಲಿನ 19 ಎಕರೆಗಳಷ್ಟು ಸರ್ಕಾರಿ ಗೋಮಾಳವನ್ನು[10] ಒಳಗೊಂಡಿದ್ದಿತು.

ಸರ್ಕಾರವು ಮೇಲಿನ 19 ಎಕರೆಗಳಷ್ಟು ಗೋಮಾಳದ ಪೈಕಿ ಎಂಟು ಎಕರೆಗಳಷ್ಟನ್ನು ಗೋಮಾಳದಲ್ಲಿ ಹಂಚಿಕೆ ಪಡೆದಿದ್ದ ನಾಲ್ಕು ವ್ಯಕ್ತಿಗಳಿಗೆ ಪ್ರತಿಯೊಬ್ಬರಿಗೂ ಎರಡು ಎಕರೆಗಳಂತೆ ಹಂಚಿಕೆ ಮಾಡಿತ್ತು (1956–57) ಎಂಬುದನ್ನು ಲೆಕ್ಕಪರಿಶೋಧನೆಯ ಪರಿಶೀಲನೆಯು ತೋರಿಸಿಕೊಟ್ಟಿತು. (ನವಂಬರ್ 2020). ಏಪ್ರಿಲ್ 2001ರಲ್ಲಿ, ಕಾರ್ಯವಿಧಾನಗಳ ಅಸಮರ್ಪಕತೆ ಹಾಗೂ ಅಗತ್ಯ ದಾಖಲೆಗಳ ಅನುಪಸ್ಥಿತಿಯ ಕಾರಣ ಮೇಲೆ ತಿಳಿಸಲಾದ ಭೂಮಿ ಹಂಚಿಕೆಯನ್ನು ಬೆಂಗಳೂರಿನ ವಿಶೇಷ ಜಿಲ್ಲಾಧಿಕಾರಿಯವರು ರದ್ದುಗೊಳಿಸಿದರು. ಹಂಚಿಕೆ ಪಡೆದಿದ್ದ ವ್ಯಕ್ತಿಗಳು ವಿಶೇಷ ಜಿಲ್ಲಾಧಿಕಾರಿಯವರ ಆದೇಶವನ್ನು ಪ್ರಶ್ನಿಸಿ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಮನವಿ ಸಲ್ಲಿಸಿದರು (ಜೂನ್ 2001) ಹಾಗೂ ಮನವಿಗಳು ಪುರಸ್ಕೃತಗೊಂಡವು ಹಾಗೂ ವಿಶೇಷ ಜಿಲ್ಲಾಧಿಕಾರಿಯವರ ಆದೇಶವನ್ನು ರದ್ದುಗೊಳಿಸಲಾಯಿತು (ಫೆಬ್ರವರಿ 2006). ತಮ್ಮ ಪ್ರಕರಣಕ್ಕಾಗಿ ವಾದ ಮಂಡಿಸುವ ಸಲುವಾಗಿ ಮನವಿದಾರರಿಗೆ ಸಮರ್ಪಕ ಅವಕಾಶ ನೀಡುವ ಮೂಲಕ ಈ ಪ್ರಕರಣದಲ್ಲಿ ಹೊಸದಾಗಿ ತನಿಖೆಯನ್ನು ನಡೆಸುವಂತೆ ಸಹ ವಿಶೇಷ ಜಿಲ್ಲಾಧಿಕಾರಿಯವರಿಗೆ ಉಚ್ಚ ನ್ಯಾಯಾಲಯವು ನಿರ್ದೇಶಿಸಿತು. ಹಂಚಿಕೆ ಪಡೆದಿದ್ದ ವ್ಯಕ್ತಿಗಳ ಕಾನೂನಾತ್ಮಕ ವಾರಸುದಾರರು 9 ವರ್ಷಗಳ ಅಂತರದ ನಂತರ ವಿಶೇಷ ಜಿಲ್ಲಾಧಿಕಾರಿಯವರ ನ್ಯಾಯಾಲಯದಲ್ಲಿ ಪ್ರಕರಣವನ್ನು ಪುನರ್–ಪ್ರಾರಂಭಿಸುವಂತೆ ಮನವಿ ಸಲ್ಲಿಸಿದರು (ಡಿಸೆಂಬರ್ 2015) ಹಾಗೂ ವಿಶೇಷ ಜಿಲ್ಲಾಧಿಕಾರಿಯವರು ಸವಿವರ ತನಿಖೆಯನ್ನು ನಡೆಸಿದ ನಂತರ ಹಂಚಿಕೆ ಮಾಡಲಾಗಿರುವ ಭೂಮಿಯ ಖಾತೆಯನ್ನು[11] ಹಂಚಿಕೆಯನ್ನು ಪಡೆದವರ ಪರವಾಗಿ ಮಾಡುವಂತೆ ಆದೇಶಿಸಿದರು (ಜನವರಿ 2016). ಮೇಲೆ ತಿಳಿಸಲಾದ ಆದೇಶದ ಆಧಾರದ ಮೇರೆಗೆ ಕಂದಾಯ ಇಲಾಖೆಯು ಭೂಮಿಯ ಖಾತೆಯನ್ನು ಕಾನೂನಾತ್ಮಕ ವಾರಸುದಾರರ ಹೆಸರಿಗೆ ಮಾಡಿತು (ಜೂನ್ 2017) ಹಾಗೂ ಕಂದಾಯ ದಾಖಲೆಗಳಲ್ಲಿ ಅನುಗುಣವಾದಂತಹ ಮಾರ್ಪಾಡುಗಳನ್ನು ಮಾಡಲಾಯಿತು.

ನ್ಯಾಯಾಲಯದ ತೀರ್ಪಿನ ದೃಷ್ಟಿಯಿಂದ, "ಸರ್ ಎಂ ವಿಶ್ವೇಶ್ವರಯ್ಯ ಬಡಾವಣೆಯ ವಿಸ್ತರಿಸಲ್ಪಟ್ಟ ಬಡಾವಣೆಯ" ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲ್ಪಟ್ಟಂತಹ ಎಂಟು ಎಕರೆಗಳಷ್ಟು ಭೂಮಿಗೆ ಪರಿಹಾರ ಧನವನ್ನು ವಿತರಿಸುವಂತೆ ಭೂ ಮಾಲೀಕರು ಬಿಡಿಎಗೆ ಅರ್ಜಿ ಸಲ್ಲಿಸಿದರು (ಜೂನ್ 2017). ಈ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಸಲುವಾಗಿ ಬಿಡಿಎ ಮಂಡಳಿಯ ಮುಂದೆ ಮಂಡಿಸಲಾಯಿತು ಹಾಗೂ 2010ನೇ ಸಾಲಿನಲ್ಲಿ ಅಭಿವೃದ್ಧಿಪಡಿಸಲ್ಪಟ್ಟಂತಹ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಅನುಸರಿಸಲಾದಂತಹ ಭೂ ಪರಿಹಾರ ಯೋಜನೆಯ[12] ಅನುಸಾರ 40:60

[9] ಬಿಡಿಎ Vs ಕರ್ನಾಟಕ ಸರ್ಕಾರ ಮತ್ತು ಇತರರ ಸಿವಿಲ್ ಅಪೀಲ್ ಪ್ರಕರಣದಲ್ಲಿ, ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯವು ಜನವರಿ 2022ರಲ್ಲಿ ಹಾಗೂ "ಬಿಡಿಎ Vs ಶ್ರೀ ಎಲ್. ಚಂದ್ರಶೇಖರ್," ಇವರ ಪ್ರಕರಣದಲ್ಲಿ ಕರ್ನಾಟಕದ ಉಚ್ಚ ನ್ಯಾಯಾಲಯವು ಜೂನ್ 2021ರಲ್ಲಿ ನೀಡಿರುವ ತೀರ್ಪು.

[10] ಗೋಮಾಳವು ಪ್ರಾಣಿಗಳ ಮೇವಿಗಾಗಿ ಮೀಸಲಿರಿಸಲಾಗಿರುವಂತಹ ಸರ್ಕಾರಿ ಭೂಮಿಯಾಗಿರುತ್ತದೆ.

[11] ಆಸ್ತಿ ತೆರಿಗೆಯನ್ನು ಪಾವತಿಸಲು ಬಾಧ್ಯರಾಗಿರುವಂತಹ ಒಂದು ಆಸ್ತಿಯ ಕಾನೂನಾತ್ಮಕ ಮಾಲೀಕರನ್ನು ಗುರುತಿಸುವ ದಾಖಲೆ.

[12] ಸ್ವಾಧೀನಪಡಿಸಲಾದ ಭೂಮಿಯ ಶೇಕಡಾ 55ರಷ್ಟನ್ನು ಅಭಿವೃದ್ಧಿಪಡಿಸಲಾದ ಭೂಮಿ ಎಂಬುದಾಗಿ ಪರಿಗಣಿಸಲಾಗುವುದು ಹಾಗೂ ಉಳಿದ ಭಾಗವನ್ನು ನಾಗರಿಕ ಸೌಲಭ್ಯಗಳು, ರಸ್ತೆಗಳು ಮತ್ತು ಉದ್ಯಾನವನಗಳಿಗೆ ಉಪಯೋಗಿಸಿಕೊಳ್ಳಲಾಗುವುದು. ಭೂ ಮಾಲೀಕರೊಂದಿಗಿನ ಒಡಂಬಡಿಕೆಯ ಅನುಸಾರ, ಬಿಡಿಎ ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿರ್ಮಾಣಕ್ಕಾಗಿ, ಅಭಿವೃದ್ಧಿಪಡಿಸಲಾದ ಭೂಮಿಯ ಶೇಕಡಾ 40ರಷ್ಟನ್ನು ಪರಿಹಾರವನ್ನಾಗಿ ನೀಡುವುದಾಗಿ ಒಪ್ಪಿಕೊಂಡಿದ್ದಿತು.

ಅನುಪಾತದಲ್ಲಿ ಇದೇ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಲಾಗಿರುವ ಭೂಮಿಯನ್ನು ನೀಡುವ ತೀರ್ಮಾನಕ್ಕೆ ಬಂದಿತು (ಡಿಸೆಂಬರ್ 2017). ಬಿಡಿಎ ಒದಗಿಸಿದ ಮಾಹಿತಿಯ ಅನುಸಾರ ಹಾಗೂ ಉಪ–ನೋಂದಣಿ ಅಧಿಕಾರಿಯವರ ಕಚೇರಿಯಿಂದ ಪಡೆದುಕೊಳ್ಳಲಾದ ಮಾಹಿತಿಯ ಅನುಸಾರ, ಭೂ ಮಾಲೀಕರಿಗೆ ₹ 31.97[13] ಕೋಟಿ ಮೌಲ್ಯವನ್ನು ಹೊಂದಿದ್ದಂತಹ 77,832 ಚದರ ಅಡಿಗಳಷ್ಟು ವಿಸ್ತೀರ್ಣದ ಅಭಿವೃದ್ಧಿಪಡಿಸಲಾದ ಭೂಮಿಯನ್ನು ಸರ್ ಎಂ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಪರಿಹಾರವಾಗಿ ಹಂಚಿಕೆ ಮಾಡಲಾಯಿತು (ಮಾರ್ಚ್ 2018 ರಿಂದ ಮಾರ್ಚ್2019) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಸ್ವಾಧೀನಪಡಿಸಿಕೊಳ್ಳುವ ವೇಳೆಯಲ್ಲಿ, ಮೇಲೆ ತಿಳಿಸಲಾದಂತಹ ಎಂಟು ಎಕರೆಗಳು ಕಂದಾಯ ದಾಖಲೆಗಳ ಅನುಸಾರ ಸರ್ಕಾರಿ ಗೋಮಾಳವಾಗಿದ್ದರಿಂದ ಬಿಡಿಎ ಭೂ ಪರಿಹಾರಕ್ಕಾಗಿ ತೀರ್ಪು/ಆದೇಶವನ್ನು ಜಾರಿಗೊಳಿಸದೆಯೇ ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿತು (ಡಿಸೆಂಬರ್ 2003). ಹಂಚಿಕೆ ಮಾಡಲಾಗಿದ್ದ ಭೂಮಿಯ ಮೇಲಿನ ಹಕ್ಕುಗಳನ್ನು ಜನವರಿ 2016ರಲ್ಲಿ ಪುನ: ಮಾಲೀಕರಿಗೆ ನೀಡಲಾಯಿತಾದ್ದರಿಂದ, ಅನ್ವಯಗೊಳ್ಳುವಂತಹ ಭೂ ಪರಿಹಾರವನ್ನು ಅನ್ವಯಗೊಳ್ಳುವಂತಹ ನಿಯಮಗಳು/ನಿಯಂತ್ರಣಗಳು ಹಾಗೂ ವಿವಿಧ ನ್ಯಾಯಾಲಯ ಆದೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಿಗದಿಪಡಿಸಬೇಕಿತ್ತು. ಮೇಲಿನ ವಾಸ್ತವಾಂಶಗಳ ಕಾರಣ, ಭೂ ಹಂಚಿಕೆಯನ್ನು ಪಡೆದಿದ್ದಂತಹ ವ್ಯಕ್ತಿಗಳು ಭೂ ಸ್ವಾಧೀನ ಅಧಿನಿಯಮ, 2013ರ ಅಡಿಯಲ್ಲಿ ಪರಿಹಾರಕ್ಕಾಗಲೀ ಅಥವಾ ಹೊಸದಾಗಿ ನಿರ್ಮಿಸಲಾಗಿರುವ ಬಡಾವಣೆಗಳಿಗೆ ಅನ್ವಯಗೊಳ್ಳುವಂತಹ 40:60 ಅನುಪಾತದಲ್ಲಿ ಅಭಿವೃದ್ಧಿಪಡಿಸಲಾದ ಭೂಮಿಗಾಗಲೀ ಅರ್ಹತೆಯನ್ನು ಹೊಂದಿರಲಿಲ್ಲ. ಅವರುಗಳು "ಸರ್ ಎಂ ವಿಶ್ವೇಶ್ವರಯ್ಯ ಬಡಾವಣೆಯ ವಿಸ್ತರಿಸಲ್ಪಟ್ಟ ಬಡಾವಣೆಯ" ಅಡಿಯಲ್ಲಿ ನಿಗದಿಗೊಳಿಸಲ್ಪಟ್ಟಿದ್ದಂತಹ ಭೂ ಪರಿಹಾರ ಮೊತ್ತದ ಮೇಲೆ ಶೇಕಡಾ 30ರಷ್ಟು ಹೆಚ್ಚುವರಿ ನಷ್ಟಪರಿಹಾರದೊಂದಿಗೆ (ಸೋಲೇಷಿಯಮ್) ಹಾಗೂ ಅನ್ವಯಗೊಳ್ಳುವಂತಹ ಬಡ್ಡಿಯೊಂದಿಗೆ[14] ಎಕರೆ ಒಂದಕ್ಕೆ ₹ 6.25 ಲಕ್ಷ ಮೊತ್ತದ ಭೂ ಪರಿಹಾರಕ್ಕೆ ಮಾತ್ರ ಅರ್ಹತೆಯನ್ನು ಹೊಂದಿದ್ದರು. ಬಿಡಿಎ ಆಯುಕ್ತರು ಕೂಡ ಮೇಲೆ ತಿಳಿಸಲಾದ ಪ್ಯಾಕೇಜನ್ನು ಕಾರ್ಯಗತಗೊಳಿಸುವ ಸಲುವಾಗಿ ಬಿಡಿಎ ಮಂಡಳಿಯ ಪರಿಗಣನೆಗಾಗಿ ಪ್ರಸ್ತಾಪಿಸಿದ್ದರು. ಭೂ ಹಂಚಿಕೆ ಪಡೆದಿದ್ದಂತಹ ವ್ಯಕ್ತಿಗಳಿಗೆ ಅರ್ಹತೆಯಿದ್ದಂತಹ ಭೂ ಪರಿಹಾರದ ಮೊತ್ತವು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ ₹ 2.12 ಕೋಟಿ ಆಗುತ್ತದೆ:

**ಕೋಷ್ಟಕ ಸಂಖ್ಯೆ 2.2.1: 2018 ಫೆಬ್ರವರಿ 2018ರಲ್ಲಿದ್ದಂತೆ ಪಾವತಿಸಬೇಕಾದ ಪರಿಹಾರದ ಲೆಕ್ಕಾಚಾರ**

| ಕ್ರಮ ಸಂಖ್ಯೆ | ವಿವರಗಳು | ಮೊತ್ತ (₹ ಕೋಟಿಯಲ್ಲಿ) |
|---|---|---|
| 1 | 8 ಎಕರೆಗಳಿಗೆ ಎಕರೆ ಒಂದಕ್ಕೆ ₹ 6.25 ಲಕ್ಷದ ದರದಲ್ಲಿ ಪಾವತಿಸಬೇಕಾದ ಪರಿಹಾರ | 0.50 |
| 2 | ಶೇಕಡಾ 30ರಷ್ಟು ಹೆಚ್ಚುವರಿ ನಷ್ಟಪರಿಹಾರದೊಂದಿಗೆ (ಸೋಲೇಷಿಯಮ್) | 0.15 |
| 3 | 08.04.2003ರಿಂದ (ಪೂರ್ವಭಾವಿ ಅಧಿಸೂಚನೆಯ ದಿನಾಂಕ) 05.12.2003ರವರೆಗೆ (ಸ್ವಾಧೀನಪಡಿಸಿಕೊಳ್ಳಲಾದ ದಿನಾಂಕ) ಶೇಕಡಾ 12ರ ದರದಲ್ಲಿ ಹೆಚ್ಚುವರಿ ಮೌಲ್ಯ | 0.039 |
| | **ಒಟ್ಟು** | **0.69** |
| 4 | ಡಿಸೆಂಬರ್ 2003ರಿಂದ ನವಂಬರ್ 2004ರವರೆಗೆ ಶೇಕಡಾ 9ರ ದರದಲ್ಲಿ ಬಡ್ಡಿ | 0.062 |
| 5 | ಡಿಸೆಂಬರ್ 2004ರಿಂದ ಫೆಬ್ರವರಿ 2018ರವರೆಗೆ ಶೇಕಡಾ 15ರ ದರದಲ್ಲಿ ಬಡ್ಡಿ | 1.37 |
| | **ಹಂಚಿಕೆ ದಿನಾಂಕದವರೆಗೆ ಪಾವತಿಸಬೇಕಾದ ಒಟ್ಟು ಪರಿಹಾರ** | **2.12** |

**(ಮೂಲ: ಬಿಡಿಎ ಭೂ ಪರಿಹಾರ ದಾಖಲೆಗಳು)**

ಬಿಡಿಎ ಮಂಡಳಿಯು ನ್ಯಾಯಾಲಯ ಆದೇಶಗಳು/ ನಿಯಮಗಳು/ ನಿಯಂತ್ರಣಗಳಿಗೆ ಹಾಗೂ ಆಯುಕ್ತರ ಅಭಿಪ್ರಾಯಗಳಿಗೆ ಅಗೌರವ ತೋರಿಸಿ ಭೂ ಸ್ವಾಧೀನ ಅಧಿನಿಯಮ 2013, ಪ್ರಸಕ್ತ ಪ್ರಕರಣದಲ್ಲಿ ಅನ್ವಯಗೊಳ್ಳುವುದು ಎಂಬುದಾಗಿ ಪರಿಗಣಿಸಿತು. ಆದಾಗ್ಯೂ, ಬಿಡಿಎ ಹಣಕಾಸಿನ

[13] ಜೂನ್ 2018ರಲ್ಲಿ ಸರ್ ಎಂ ವಿಶ್ವೇಶ್ವರಯ್ಯ ಬಡಾವಣೆಯಲ್ಲಿ ಮಧ್ಯಂತರ ನಿವೇಶನಕ್ಕಾಗಿ ಬಿಡಿಎ ಸ್ವೀಕರಿಸಿದ್ದಂತಹ ಪ್ರತಿಫಲ ಮೊತ್ತದ ಆಧಾರದ ಮೇರೆಗೆ ಚದರ ಅಡಿ ಒಂದಕ್ಕೆ ₹ 4108/-.

[14] i) ಏಪ್ರಿಲ್ 2003ರಿಂದ ಡಿಸೆಂಬರ್ 2003 ವರೆಗೆ ಶೇಕಡಾ 12;

ii) ಡಿಸೆಂಬರ್ 2003ರಿಂದ ಡಿಸೆಂಬರ್ 2004 ವರೆಗೆ ಶೇಕಡಾ 9;

iii) ಡಿಸೆಂಬರ್ 2004ರಿಂದ ಫೆಬ್ರವರಿ 2018 ವರೆಗೆ ಶೇಕಡಾ 15.

ತೊಂದರೆಗಳ ಕಾರಣ, ಪರಿಹಾರವನ್ನು ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಅನ್ವಯಗೊಳ್ಳುವಂತಹ 40:60ರ ಅನುಪಾತದ ಅಡಿಯಲ್ಲಿ ಅಭಿವೃದ್ಧಿಪಡಿಸಲಾದ ನಿವೇಶನಗಳ ರೂಪದಲ್ಲಿ ನೀಡುವ ನಿರ್ಣಯವನ್ನು ಕೈಗೊಂಡಿತು. ಈ ರೀತಿಯಾಗಿ ಮನವಿದಾರರಿಗೆ, "ಸರ್ ಎಂ ವಿಶ್ವೇಶ್ವರಯ್ಯ ಬಡಾವಣೆಯ ವಿಸ್ತರಿಸಲ್ಪಟ್ಟ ಬಡಾವಣೆಯ" ಅಡಿಯಲ್ಲಿ ನಿಗದಿಗೊಳಿಸಲ್ಪಟ್ಟಿದ್ದಂತಹ ಪರಿಹಾರದಂತೆ ₹ 2.12 ಕೋಟಿ ಮೊತ್ತದ ಅರ್ಹತೆಗೆ ಪ್ರತಿಯಾಗಿ ₹ 31.97 ಕೋಟಿ ಮೌಲ್ಯದ 77,832 ಚದರ ಅಡಿಗಳಷ್ಟು ಅಭಿವೃದ್ಧಿಪಡಿಸಲಾಗಿದ್ದ ಭೂಮಿಯನ್ನು ಹಂಚಿಕೆ ಮಾಡಲಾಯಿತು. ಮಂಡಳಿಯ ತೀರ್ಮಾನವು ತಾರತಮ್ಯಗಳಿಂದ ಕೂಡಿತ್ತು ಹಾಗೂ ಅಂತಹುದೇ ಪ್ರಕರಣಗಳಲ್ಲಿ ನ್ಯಾಯಾಲಯಗಳು ನಿರ್ದಿಷ್ಟಪಡಿಸಿದ್ದಂತಹ ತತ್ವಗಳ ಉಲ್ಲಂಘನೆಯಾಗಿತ್ತು; ಇದು ಭೂ ಮಾಲೀಕರಿಗೆ ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಹಾಗೂ ಬಿಡಿಎಗೆ ₹ 29.85 ಕೋಟಿ ಮೊತ್ತದಷ್ಟು ಹೆಚ್ಚುವರಿ ಹಣಕಾಸಿನ ಹೊರೆಯನ್ನು ಹೊರಿಸುವಲ್ಲಿ ಪರಿಣಮಿಸಿತು.

2018ರಲ್ಲಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಯ ಮಾರ್ಗಸೂಚಿ ಮೌಲ್ಯವು ಎಕರೆ ಒಂದಕ್ಕೆ ₹ 2.00 ಕೋಟಿ ಆಗಿದ್ದಿತಾದ್ದರಿಂದ, 40:60 ಅನುಪಾತದ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಲಾದ ನಿವೇಶನಗಳನ್ನು ನೀಡಿದ್ದು ಬಿಡಿಎಗೆ ಪ್ರಯೋಜನಕಾರಿಯಾಗಿದ್ದಿತು ಎಂಬುದಾಗಿ ರಾಜ್ಯ ಸರ್ಕಾರವು ಉತ್ತರಿಸಿತು (ಮೇ 2022). ಭೂ ಮಾಲೀಕರುಗಳು ಭೂ ಸ್ವಾಧೀನ ಅಧಿನಿಯಮ, 1894ರ ಅಡಿಯಲ್ಲಿ "ಸರ್ ಎಂ ವಿಶ್ವೇಶ್ವರಯ್ಯ ಬಡಾವಣೆಯ ವಿಸ್ತರಿಸಲ್ಪಟ್ಟ ಬಡಾವಣೆಯ" ಅಡಿಯಲ್ಲಿ ನಿಗದಿಗೊಳಿಸಲ್ಪಟ್ಟಿದ್ದಂತಹ ಎಕರೆ ಒಂದಕ್ಕೆ ₹ 6.25 ಲಕ್ಷ ದರದಲ್ಲಿ ಮತ್ತು ಅನ್ವಯಿಸುವ ನಷ್ಟ ಪರಿಹಾರ ಮತ್ತು ಬಡ್ಡಿಗೆ ಮಾತ್ರ ಪರಿಹಾರಕ್ಕೆ ಅರ್ಹತೆ ಹೊಂದಿದ್ದರಾದ್ದರಿಂದ ಉತ್ತರವು ಒಪ್ಪುವಂತಿಲ್ಲ.

***ಶಿಫಾರಸು:***

**ಬಿಡಿಎಗೆ ನಷ್ಟವಾಗಲು ಕಾರಣರಾದಂತಹ ವ್ಯಕ್ತಿಗಳನ್ನು ಸರ್ಕಾರವು ಗುರುತಿಸಬೇಕು ಹಾಗೂ ಅಂತಹ ಲೋಪದೋಷಗಳು/ಕರ್ತವ್ಯಚ್ಯುತಿಗಳು/ಕರ್ತವ್ಯಲೋಪಗಳು ಮರುಕಳಿಸುವುದನ್ನು ತಡೆಯುವ ಸಲುವಾಗಿ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತೆವೆ.**

### *2.3. ಪ್ರಾರಂಭಿಕ ಠೇವಣಿಯನ್ನು ನಿಯಮಬಾಹಿರವಾಗಿ ಮರುಪಾವತಿಸಿರುವುದು*

**ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಅನ್ವಯಗೊಳ್ಳುವಂತಹ ನಿಯಮಗಳನ್ನು ಉಲ್ಲಂಘಿಸಿ ₹ 1.52 ಕೋಟಿ ಮೊತ್ತದಷ್ಟು ಪ್ರಾರಂಭಿಕ ಠೇವಣಿಯನ್ನು ನಿಯಮಬಾಹಿರವಾಗಿ ಮರುಪಾವತಿಸಿರುವುದು, ಹರಾಜಿನಲ್ಲಿ ಭಾಗವಹಿಸಿದ್ದಂತಹ ಖರೀದಿದಾರರಿಗೆ ಅನರ್ಹ ಲಾಭವನ್ನು ಮಾಡಿಕೊಡುವಲ್ಲಿ ಪರಿಣಮಿಸಿತು.**

ಮೂಲೆ ನಿವೇಶನಗಳು, ಮಧ್ಯಂತರ ನಿವೇಶನಗಳು, ವಾಣಿಜ್ಯ ನಿವೇಶನಗಳ ಹಾಗೂ ಇತರೆ ಹರಾಜಿನ ನಿವೇಶನಗಳ ಹರಾಜು ಮಾರಾಟ ಮತ್ತು ವಿಲೇವಾರಿಗಳ ನಿರ್ವಹಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಮೂಲೆ ನಿವೇಶನಗಳು ಮತ್ತು ವಾಣಿಜ್ಯ ನಿವೇಶನಗಳ ಮಾರಾಟ) ನಿಯಮಗಳು, 1984 ಈ ಕೆಳಗಿನ ಅನುವುಗಳೊಂದಿಗೆ ನಿರ್ದಿಷ್ಟಪಡಿಸಿರುತ್ತವೆ:

- ಯಾವುದೇ ಯೋಜನೆಯ ಅನುಸರಣೆಯಂತೆ ಪ್ರಾಧಿಕಾರವು ಒಂದು ಬಡಾವಣೆಯ ವಿಸ್ತರಣಾ ಬಡಾವಣೆಯನ್ನು ನಿರ್ಮಿಸಿದಂತೆಲ್ಲಾ, ಪ್ರಾಧಿಕಾರವು ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳ ಷರತ್ತಿಗೆ ಒಳಪಟ್ಟಂತೆ ಅಂತಹ ವಿಸ್ತರಣಾ ಬಡಾವಣೆಯಲ್ಲಿ ಅಥವಾ ಬಡಾವಣೆಯಲ್ಲಿ ಅಂತಹ ಯಾವುದೇ ಅಥವಾ ಎಲ್ಲಾ ನಿವೇಶನಗಳನ್ನು ಈ ನಿಯಮಗಳ ಅನುಸಾರ ವಿಲೇವಾರಿ ಮಾಡಬಹುದು ಎಂಬುದಾಗಿ ನಿಯಮ 3 ತಿಳಿಸುತ್ತದೆ.

- ಯಾರ ಹರಾಜನ್ನು ಒಪ್ಪಿಕೊಳ್ಳಲಾಗಿರುವುದೋ ಅಂತಹ ಹರಾಜಿನಲ್ಲಿ ಖರೀದಿ ಮಾಡುವ ವ್ಯಕ್ತಿಗಳು ತತ್‌ಕ್ಷಣವೇ ತಮ್ಮ ಹರಾಜಿನಲ್ಲಿ ತಿಳಿಸಿರುವ ಮೊತ್ತದ ಶೇಕಡಾ 25ರಷ್ಟನ್ನು ಠೇವಣಿ ಮೊತ್ತವನ್ನಾಗಿ ಪಾವತಿಸತಕ್ಕದ್ದು ಹಾಗೂ ಉಳಿಕೆ ಮೊತ್ತವನ್ನು ನಿವೇಶನ ಮಾರಾಟವನ್ನು ಖಚಿತಪಡಿಸಿ ತಿಳಿಸಲಾಗುವ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 45 ದಿನಗಳ ಒಳಗೆ ಪಾವತಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಅಂತಹ ಹರಾಜಿನಲ್ಲಿ ಖರೀದಿ ಮಾಡುವ ವ್ಯಕ್ತಿಗಳು

ಪಾವತಿಸಿರುವಂತಹ ಶೇಕಡಾ 25ರಷ್ಟು ಠೇವಣಿ ಮೊತ್ತವನ್ನು ಪ್ರಾಧಿಕಾರವು ಮುಟ್ಟುಗೋಲು ಹಾಕಿಕೊಳ್ಳುವ ಬಾಧ್ಯತೆಯನ್ನು ಹೊಂದಿರುತ್ತದೆ ಹಾಗೂ ಪ್ರಾಧಿಕಾರವು ಅಂತಹ ನಿವೇಶನವನ್ನು ಮರು–ಮಾರಾಟ ಮಾಡುವ ಹಕ್ಕನ್ನು ಹೊಂದಿರುತ್ತದೆ, ಅಂತಹ ಮರು–ಮಾರಾಟದ ಸಂದರ್ಭದಲ್ಲಿ ಪ್ರಾಧಿಕಾರವು ಯಾವುದೇ ನಷ್ಟವನ್ನು ಹೊಂದಿದಲ್ಲಿ ಪಾವತಿಯಲ್ಲಿ ತಪ್ಪಿತಸ್ಥರಾಗಿದ್ದ ಹರಾಜಿನಲ್ಲಿ ಖರೀದಿ ಮಾಡುವ ವ್ಯಕ್ತಿಗಳು ಅಂತಹ ನಷ್ಟಗಳನ್ನು ಪ್ರಾಧಿಕಾರಕ್ಕೆ ತುಂಬಿಕೊಡುವ ಬಾಧ್ಯತೆಯನ್ನು ಹೊಂದಿರುತ್ತಾರೆ ಎಂಬುದಾಗಿ ನಿಯಮ 6(3) ತಿಳಿಸುತ್ತದೆ.

- ಹರಾಜು ಮೊತ್ತದ ಉಳಿಕೆ ಮೊತ್ತವನ್ನು ಪಾವತಿಸುವುದಕ್ಕೆ ಸಂಬಂಧಿಸಿದಂತೆ ಹರಾಜಿನಲ್ಲಿ ಖರೀದಿಸುವವರು, 90 ದಿನಗಳವರೆಗೆ ವರ್ಷ ಒಂದಕ್ಕೆ ಶೇಕಡಾ 18ರಂತೆ ಹಾಗೂ ತದನಂತರದಲ್ಲಿ 210 ದಿನಗಳವರೆಗೆ ವರ್ಷವೊಂದಕ್ಕೆ ಶೇಕಡಾ 21ರ ದರದಲ್ಲಿ ಬಡ್ಡಿ ಪಾವತಿಯೊಂದಿಗೆ ಹಾಗೂ ಪ್ರತಿಯೊಂದು ಪ್ರಕರಣದಲ್ಲಿಯೂ ಒಂದು ನೂರು ರೂಪಾಯಿಗಳ ದಂಡ ಪಾವತಿಯೊಂದಿಗೆ 210 ದಿನಗಳನ್ನು ಮೀರದಂತೆ ಕಾಲಾವಧಿಯ ವಿಸ್ತರಣೆ ನೀಡಬಹುದು. ಅಂತಹ ಪಾವತಿಗೆ ತಪ್ಪಿದಲ್ಲಿ ಪ್ರಾಧಿಕಾರವು ಹರಾಜಿನಲ್ಲಿ ಖರೀದಿಸುವವರು ಪಾವತಿಸಿರುವಂತಹ ಶೇಕಡಾ 25ರಷ್ಟು ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕನ್ನು ಹೊಂದಿರುತ್ತದೆ ಹಾಗೂ ಹರಾಜಿನಲ್ಲಿ ಖರೀದಿಸಿದ ತಪ್ಪಿತಸ್ಥ ವ್ಯಕ್ತಿಯ ಮೇಲೆ ನಿವೇಶನದ ಮರು–ಮಾರಾಟದಲ್ಲಿರಬಹುದಾದ ಸಂಭಾವ್ಯ ಅಪಾಯ ಮತ್ತು ಹಣಕಾಸಿನ ನಷ್ಟವನ್ನು ಹಾಕುವುದರ ಮೂಲಕ ಮರು–ಮಾರಾಟ ಮಾಡತಕ್ಕದ್ದು ಎಂಬುದಾಗಿ ನಿಯಮ 6(4) ತಿಳಿಸುತ್ತದೆ.

ಚಂದ್ರಾ ಲೇಔಟ್ ಬಡಾವಣೆಯ ನಿವೇಶನ ಸಂಖ್ಯೆ 97ನ್ನು (226.42 ಚದರ ಮೀಟರುಗಳ ಅಳತೆಯ) ಬಿಡಿಎ ಜುಲೈ 2019ರಲ್ಲಿ ನಡೆಸಿದ ಇ–ಹರಾಜಿನಲ್ಲಿ ಸೇರಿಸಲಾಗಿತ್ತು, ಅದು ಚದರ ಮೀಟರು ಒಂದಕ್ಕೆ ₹ 2.69 ಲಕ್ಷ ಮೌಲ್ಯವನ್ನು ಪಡೆದಿತ್ತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಜುಲೈ 2020). ಹರಾಜನ್ನು ಒಟ್ಟಾರೆ ₹ 6.09 ಕೋಟಿ ಮೊತ್ತಕ್ಕೆ ಒಪ್ಪಿಕೊಳ್ಳಲಾಯಿತು ಹಾಗೂ ಹರಾಜಿನಲ್ಲಿ ಖರೀದಿ ಮಾಡಿದವರು ಹರಾಜು ಮೊತ್ತದ ಶೇಕಡಾ 25ರಷ್ಟನ್ನು ಅಂದರೆ ₹ 1.52 ಕೋಟಿ ಮೊತ್ತವನ್ನು ಪ್ರಾರಂಭಿಕ ಠೇವಣಿಯಾಗಿ ಪಾವತಿಸಿದರು (ಆಗಸ್ಟ್ 2019). ಬಿಡಿಎ ಹರಾಜಿನ ಷರತ್ತುಗಳನ್ನು ತಿಳಿಸುವ ಮೂಲಕ ಹಾಗೂ ಬಾಕಿ ಮೊತ್ತವನ್ನು 45 ದಿನಗಳ ಒಳಗೆ ಪಾವತಿಸುವಂತೆ ತಿಳಿಸುವ ಮೂಲಕ ಹರಾಜು ಮಾರಾಟ ಖಚಿತಪಡಿಸುವಿಕೆ ಪತ್ರವನ್ನು ನೀಡಿತು (ಅಕ್ಟೋಬರ್ 2019).

ಖರೀದಿದಾರರು ಬಿಡಿಎಗೆ ಬರೆದ ತಮ್ಮ ಪತ್ರದ ಮೂಲಕ (ಮಾರ್ಚ್ 2020) ನಿವೇಶನವು ವಿವಾದದ ಅಡಿಯಲ್ಲಿರುವುದು ಎಂಬುದಾಗಿ ತಿಳಿಸಿದರು ಹಾಗೂ ತಾವು ಪಾವತಿಸಿರುವ ಸಂಪೂರ್ಣ ಪ್ರಾರಂಭಿಕ ಠೇವಣಿ ಮೊತ್ತವನ್ನು ಬಡ್ಡಿಯೊಂದಿಗೆ ಮರುಪಾವತಿಸುವಂತೆ ಕೋರಿದರು. ವಿವಾದದ ಸ್ಥಿತಿಗತಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವಿಷಯವನ್ನು ಬಿಡಿಎ ಕಾನೂನು ಕೋಶಕ್ಕೆ ಕಳುಹಿಸಿಕೊಡಲಾಯಿತು, ಅದು ಮೇಲೆ ತಿಳಿಸಲಾದಂತಹ ಹರಾಜಿನಲ್ಲಿ ಮಾರಾಟವಾದಂತಹ ನಿವೇಶನಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದಗಳು ಬಾಕಿಯಿರುವುದಿಲ್ಲ ಎಂಬುದನ್ನು ಖಚಿತಪಡಿಸಿತು (ಮಾರ್ಚ್ 2020). ಮೇಲೆ ತಿಳಿಸಲಾದಂತೆ ಕಾನೂನು ಕೋಶವು ಯಾವುದೇ ವಿವಾದಗಳು ಬಾಕಿಯಿರದಿರುವುದರ ಬಗ್ಗೆ ಖಚಿತಪಡಿಸಿರುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಹರಾಜಿನಲ್ಲಿ ನಿವೇಶನ ಖರೀದಿ ಮಾಡಿದವರು ಪ್ರಾರಂಭಿಕ ಠೇವಣಿಯ ಮರುಪಾವತಿಗೆ ಅರ್ಹರಾಗಿರಲಿಲ್ಲ ಹಾಗೂ ಅವರು ಬಿಡಿಎ (ಮೂಲೆ ನಿವೇಶನಗಳು ಮತ್ತು ವಾಣಿಜ್ಯ ನಿವೇಶನಗಳ ಮಾರಾಟ) ನಿಯಮಗಳ ನಿಯಮ 6(3) ಮತ್ತು 6(4)ರ ಅನುಸಾರ ನಿಗದಿತ ಅವಧಿಯ ಒಳಗೆ ಬಾಕಿ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸಬೇಕಿತ್ತು.

ವ್ಯತಿರಿಕ್ತ ಕಾನೂನು ವರದಿಗೆ ಅಗೌರವ ತೋರಿಸಿ ಹಾಗೂ ಕಾನೂನು ಅನುವುಗಳನ್ನು ಉಲ್ಲಂಘಿಸಿ, ಬಿಡಿಎ ₹ 1.52 ಕೋಟಿ ಮೊತ್ತದಷ್ಟು ಪ್ರಾರಂಭಿಕ ಠೇವಣಿಯನ್ನು ಬಿಡಿಎ ಆಯುಕ್ತರ ಆದೇಶದ ಮೇರೆಗೆ ಖರೀದಿದಾರರಿಗೆ ಮರುಪಾವತಿಸಿತು (ಮಾರ್ಚ್ 2020). ಬಿಡಿಎ ಅಂತಹುದೇ ಪ್ರಕರಣಗಳಲ್ಲಿ ಮೇ 2020ರಲ್ಲಿ ಮಳಿಗೆಗಳು ಹಾಗೂ ವಾಣಿಜ್ಯ ಸ್ಥಳಗಳ ಹರಾಜಿಗೆ ಸಂಬಂಧಿಸಿದಂತೆ

ಸವಾಲುದಾರರುಗಳು ಪಾವತಿಸಲಾಗಿದ್ದಂತಹ ಪ್ರಾರಂಭಿಕ ಠೇವಣಿಗಳನ್ನು[15] ಮುಟ್ಟುಗೋಲು ಹಾಕಿಕೊಂಡಿತ್ತು ಎಂಬುದನ್ನು ಗಮನಿಸಬಹುದು.

ಈ ರೀತಿಯಾಗಿ, ಹರಾಜಿನಲ್ಲಿ ನಿವೇಶನ ಖರೀದಿ ಮಾಡಿದವರ ಕೋರಿಕೆಯಂತೆ ಪ್ರಾರಂಭಿಕ ಠೇವಣಿ ಮೊತ್ತವನ್ನು ಮರುಪಾವತಿಸುವ ಬಿಡಿಎ ಕ್ರಮವು ಅನ್ವಯಗೊಳ್ಳುವಂತಹ ನಿವೇಶನಗಳ ಹರಾಜು ಮತ್ತು ಮಾರಾಟಗಳನ್ನು ನಿಯಂತ್ರಿಸುವ ನಿಯಮಗಳ ಉಲ್ಲಂಘನೆಯಾಗಿತ್ತು. ಮುಟ್ಟುಗೋಲು ಹಾಕಿಕೊಳ್ಳುವ ಬದಲಾಗಿ ₹ 1.52 ಕೋಟಿ ಮೊತ್ತದಷ್ಟು ಪ್ರಾರಂಭಿಕ ಠೇವಣಿಯನ್ನು ಮರುಪಾವತಿಸಿದ್ದು ನಿಯಮಬಾಹಿರ ಕ್ರಮವಾಗಿದ್ದಿತಲ್ಲದೆ ಹರಾಜಿನಲ್ಲಿ ನಿವೇಶನ ಖರೀದಿ ಮಾಡಿದ್ದ ವ್ಯಕ್ತಿಗೆ ಅನರ್ಹ ಲಾಭವನ್ನು ಮಾಡಿಕೊಡುವಂತಾಯಿತು.

ಪ್ರಾರಂಭಿಕ ಠೇವಣಿಯ ಮರುಪಾವತಿಯನ್ನು ಅಧಿಕಾರಯುಕ್ತ ಇಂಜಿನಿಯರ್‌ರವರ ವರದಿಯ ಆಧಾರದ ಮೇರೆಗೆ ಮಾಡಲಾಯಿತು, ಆ ವರದಿಯಲ್ಲಿ ಸ್ಥಳೀಯ ವಿವಾದಗಳು/ಒತ್ತುವರಿಗಳ ಕಾರಣ ಖರೀದಿದಾರರಿಗೆ ನಿವೇಶನವನ್ನು ವಹಿಸಿಕೊಡಲಾಗಿರುವುದಿಲ್ಲ ಎಂಬುದಾಗಿ ತಿಳಿಸಲಾಗಿತ್ತು ಎಂಬುದಾಗಿ ರಾಜ್ಯ ಸರ್ಕಾರವು ಉತ್ತರಿಸಿತು (ಮಾರ್ಚ್ 2022). ಮೇಲೆ ತಿಳಿಸಲಾದ ನಿವೇಶನಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದಗಳು ಇರುವುದಿಲ್ಲ ಎಂಬುದಾಗಿ ಕಾನೂನು ಕೋಶದಿಂದ ಖಚಿತಪಡಿಸಿಕೊಳ್ಳಲಾಗಿತ್ತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಮುಂದುವರೆದು, ಸ್ಥಳೀಯ ವಿವಾದಗಳನ್ನು ಬಗೆಹರಿಸುವುದು/ಒತ್ತುವರಿಗಳನ್ನು ತೆರವುಗೊಳಿಸುವುದು ಹಾಗೂ ಖರೀದಿದಾರರಿಗೆ ನಿವೇಶನವನ್ನು ವಹಿಸಿಕೊಡುವುದಕ್ಕೆ ಬಿಡಿಎ ಜವಾಬ್ದಾರಿಯಾಗಿರುತ್ತದೆ.

***ಶಿಫಾರಸು:***

**ನಿಯಮಬಾಹಿರವಾಗಿ ಮರುಪಾವತಿ ಮಾಡಿರುವುದು ಹಾಗೂ ತತ್ಪರಿಣಾಮವಾಗಿ ಪ್ರಾಧಿಕಾರಕ್ಕೆ ವರಮಾನದ ನಷ್ಟವನ್ನುಂಟು ಮಾಡಿರುವುದಕ್ಕಾಗಿ ಸಂಬಂಧಿಸಿದವರ ಮೇಲೆ ಜವಾಬ್ದಾರಿಯನ್ನು ನಿಗದಿಪಡಿಸಬೇಕು ಹಾಗೂ ಠೇವಣಿಗಳ ಸ್ವೀಕೃತಿ/ಮರುಪಾವತಿಗಾಗಿ ನಿರ್ದಿಷ್ಟಪಡಿಸಲಾಗಿರುವ ನಿಯಮಗಳನ್ನು ಕಟ್ಟುನಿಟ್ಟಿನಿಂದ ಪಾಲಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತದೆ.**

**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

## *2.4. ಕೊಳಚೆ ನೀರು ಕೊಳವೆಗಳಿಗೆ ಸಂರಕ್ಷಣಾ ಲೇಪನವನ್ನು ಒದಗಿಸುವಲ್ಲಿ ಮಾಡಲಾದ ತಪ್ಪಿಸಬಹುದಾಗಿದ್ದ ವೆಚ್ಚ*

**ಸವಿವರ ಯೋಜನಾ ವರದಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಹಾಗೂ ಸಿಪಿಎಚ್‌ಇಇಒ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಮಿತವ್ಯಯದ ತುಕ್ಕು ನಿಯಂತ್ರಣ ಕ್ರಮಗಳ ಜೊತೆಗೆ ಕೊಳಚೆ ನೀರು ಕೊಳವೆಗಳಿಗೆ ಪಾಲಿಮರ್ ಆಧಾರಿತ ಸಂರಕ್ಷಣಾ ಲೇಪನವನ್ನು ಒದಗಿಸಿದ್ದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ₹ 40.65 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ಹೆಚ್ಚುವರಿ ವೆಚ್ಚವಾಗುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.**

ಕೊಳಚೆ ನೀರು, ಕೊಳಚೆ ನೀರು ಹರಿಯುವ ಕೊಳವೆಗಳು ತುಕ್ಕು ಹಿಡಿಯುವ ಕಾರಣವಾಗುವಂತಹ ಸಲ್ಫೈಡ್[16] ಅನಿಲ ಉತ್ಪತ್ತಿಗೆ ಕೊಡುಗೆ ನೀಡುವಂತಹ ಅಂಶಗಳನ್ನು ಒಳಗೊಂಡಿರುತ್ತದೆ. ಸಲ್ಫೈಡ್ ಅನಿಲ ಉತ್ಪತ್ತಿಯನ್ನು ತಡೆಯುವ ಸಲುವಾಗಿ, ಕೊಳಚೆ ನೀರು ಹರಿಯುವ ಕೊಳವೆಗಳಲ್ಲಿ

[15] ಮೂರು ಪ್ರಕರಣಗಳನ್ನು ಗಮನಿಸಲಾಯಿತು, ಅವುಗಳಲ್ಲಿ ವಲಗೇರಹಳ್ಳಿ ವಾಣಿಜ್ಯ ಸಂಕೀರ್ಣದ ಮಳಿಗೆ ಸಂಖ್ಯೆ 1, 3 ಮತ್ತು 6ನ್ನು ಹರಾಜಿನಲ್ಲಿ ಪಡೆದವರು ನಿಗದಿತ ದಿನಾಂಕದ ಒಳಗೆ ಉಳಿಕೆ ಶೇಕಡಾ 75ರಷ್ಟು ಮೊತ್ತವನ್ನು ಪಾವತಿಸಲಿಲ್ಲ ಎಂಬ ಕಾರಣಕ್ಕೆ ಬಿಡಿಎ ಮಾರಾಟವನ್ನು ರದ್ದುಗೊಳಿಸಿತ್ತು ಹಾಗೂ ಪ್ರಾರಂಭಿಕ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಂಡಿತ್ತು.

[16] ಜಲಜನಕ ಸಲ್ಫೈಡ್ ಅನಿಲವು ($H_2S$) ತೇವಾಂಶದ ಉಪಸ್ಥಿತಿಯಲ್ಲಿ ಜೈವಿಕ–ರಸಾಯನಿಕವಾಗಿ ಆಕ್ಸಿಡೀಕರಣಗೊಂಡು ಸಲ್ಫ್ಯೂರಿಕ್ ಆಮ್ಲವನ್ನು ರೂಪಿಸುತ್ತದೆ, ಇದು ತ್ಯಾಜ್ಯನೀರಿನ ಪರಿಸರದಲ್ಲಿ ಕಾಂಕ್ರೀಟು ಮತ್ತು ಉಕ್ಕಿನ ಮೇಲೆ ದಾಳಿ ಮಾಡುತ್ತದೆ.

ದ್ರವೀಕರಿಸಲಾದ ಆಮ್ಲಜನಕದ ಸಾಂದ್ರೀಕರಣವನ್ನು ನಿರ್ವಹಿಸಿಕೊಂಡು ಹೋಗುವ ಮೂಲಕ ಆಮ್ಲಜನಕವಿಲ್ಲದ ಪರಿಸ್ಥಿತಿಗಳನ್ನು ತಪ್ಪಿಸಬೇಕು. ಕೊಳಚೆ ನೀರು ಹರಿಯುವ ಕೊಳವೆಗಳಲ್ಲಿ ಸಲ್ಫೈಡ್ ಉತ್ಪತ್ತಿಗೆ ಕಾರಣವಾಗುವ ವಿವಿಧ ಅಂಶಗಳನ್ನು ಕೇಂದ್ರ ಸಾರ್ವಜನಿಕ ಆರೋಗ್ಯ ಮತ್ತು ಪರಿಸರ ತಂತ್ರಜ್ಞಾನ ಸಂಸ್ಥೆಯು (ಸಿಪಿಎಚ್ಇಇಒ) ನೀಡಿರುವ ಕೈಪಿಡಿಯು ವಿಶ್ಲೇಷಣೆ ಮಾಡಿರುವುದು ಹಾಗೂ ಜಲಜನಕ ಸಲ್ಫೈಡ್ ಅನಿಲ ಉತ್ಪತ್ತಿಯನ್ನು ತಡೆಯುವ ಸಲುವಾಗಿ ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳುವ ಸಲುವಾಗಿ ಸಲಹೆ ನೀಡಿರುವುದು.

- ಕೊಳಚೆ ನೀರು ಹರಿಯುವ ಕೊಳವೆಗಳು ಮುಳುಗಡೆಗೊಂಡಿರುವ ಹೊರತಲಗಳನ್ನು ಕೆಸರು/ಜಿಗುಟು ಮಣ್ಣಿನಿಂದ ಮುಕ್ತವಾಗಿರಿಸುವ ಸಲುವಾಗಿ ಕೊಳಚೆ ನೀರು ಹರಿವಿನ ವೇಗದ ನಿರ್ವಹಣೆ.

- ಉತ್ಪತ್ತಿಯಾಗುವ ಅನಿಲದ ಹೊರ ಸಾಗಣೆಗಾಗಿ ವಾತಾಯನ ಶಾಫ್ಟ್‌ಗಳ ಮೂಲಕ ಸಮರ್ಪಕ ವಾತಾಯನದ ಅನುವು ಮಾಡುವುದು.

ಜಲಜನಕ ಸಲ್ಫೈಡ್ ದಾಳಿಗೆ ಪ್ರತಿಯಾಗಿ ಲೇಪನವನ್ನು ಒದಗಿಸುವ ಮೂಲಕ ಕೊಳಚೆ ನೀರು ಹರಿಯುವ ಕೊಳವೆ ನಿರ್ಮಾಣಗಳ ಸಂರಕ್ಷಣೆಯನ್ನು, ನಿಯಂತ್ರಣದ ಇತರೆ ಮಾದರಿಗಳು ಅಪ್ರಾಯೋಗಿಕ ಎಂಬುದಾಗಿ ಕಂಡುಬಂದಾಗ ಮಾತ್ರ ಪರಿಗಣಿಸಬಹುದು ಎಂಬುದನ್ನು ಸಹ ಸಿಪಿಎಚ್ಇಇಒ ನೀಡಿರುವ ಕೈಪಿಡಿಯು ನಿರ್ದಿಷ್ಟಪಡಿಸಿರುವುದು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು (ಬಿಡಬ್ಲ್ಯುಎಸ್ಎಸ್‌ಬಿ) ಕರ್ನಾಟಕ ಪೌರಾಡಳಿತ ಪ್ರದೇಶಗಳ ಸುಧಾರಣೆಗಳ ಯೋಜನೆ (ಕೆಎಂಆರ್‌ಪಿ) ಅಡಿಯಲ್ಲಿ ಈ ಹಿಂದಿನ ಎಂಟು ನಗರ ಸ್ಥಳೀಯ ಸಂಸ್ಥೆಗಳಿಗೆ[17] ಭೂಗತ ಚರಂಡಿ ಅನುಕೂಲತೆಗಳನ್ನು ಒದಗಿಸುವ ಸಲುವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಸೆಪ್ಟೆಂಬರ್ 2018). 2010ರಲ್ಲಿ ಕೈಗೆತ್ತಿಕೊಳ್ಳಲಾದ ಯೋಜನೆಯು ಮಾರ್ಚ್ 2021ರಲ್ಲಿದ್ದಂತೆ ಇನ್ನೂ ಪೂರ್ಣಗೊಳ್ಳಬೇಕಾಗಿದೆ. ಕೆಎಂಆರ್‌ಪಿ ಸಲಹೆಗಾರರು ಸವಿವರ ಯೋಜನಾ ವರದಿಯಲ್ಲಿ ಜಲಜನಕ ಸಲ್ಫೈಡ್ ಅನಿಲದ ಅಂದಾಜು ಉತ್ಪತ್ತಿಯು ಸ್ಥಳೀಯ ವಿಶಿಷ್ಟ ಸ್ವಭಾವ ಪರಿಸ್ಥಿತಿಗಳ[18] ಆಧಾರದ ಮೇರೆಗೆ ನಿಕೃಷ್ಟಮಟ್ಟದಲ್ಲಿ ಅಥವಾ ಅತ್ಯಂತ ಸಣ್ಣ ಪ್ರಮಾಣದಲ್ಲಿ ಇರುತ್ತದೆ ಎಂಬುದಾಗಿ ಅಂದಾಜು ಮಾಡಿದ್ದರು. ಉತ್ಪತ್ತಿಯಾಗುವ ಅನಿಲದ ಹೊರ ಸಾಗಣೆಗಾಗಿ ಸ್ಥಾಪಿಸಲಾಗಿರುವ ವಾತಾಯನ ಶಾಫ್ಟ್‌ಗಳ ಜೊತೆಯಲ್ಲಿ ಈ ಹಿಂದೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಹಾಕಿರುವಂತಹ ಟ್ರಂಕ್ ಕೊಳಚೆ ನೀರು ಕೊಳವೆಗಳು ಯಾವುದೇ ಜಲಜನಕ ಸಲ್ಫೈಡ್ ಅನಿಲದಿಂದಾಗಿ ತುಕ್ಕುಹಿಡಿಯದೆಯೇ ತೃಪ್ತಿಕರವಾಗಿ ಕಾರ್ಯನಿರ್ವಹಿಸುತ್ತಿರುವುದನ್ನು ಸಹ ಸವಿವರ ಯೋಜನಾ ವರದಿಯು ಪರಿಗಣಿಸಿತು. ಆದ್ದರಿಂದ, ತುಕ್ಕನ್ನು ತಪ್ಪಿಸುವ ಸಲುವಾಗಿ ಸಮರ್ಪಕವಾದಂತಹ ಬಲವರ್ಧನೆಯನ್ನು ಹೊಂದಿರುವಂತಹ ಹಾಗೂ ಬಾಳಿಕೆ ಬರುವಂತಹ ಹಾಗೂ ಮಿತವ್ಯಯತೆಯಿಂದ ಕೂಡಿದ ಸಲ್ಫೇಟ್ ಪ್ರಭಾವವನ್ನು ಪ್ರತಿರೋಧಿಸಬಲ್ಲಂತಹ ಸಿಮೆಂಟಿನೊಂದಿಗೆ (ಎಸ್ಆರ್‌ಸಿ) ಆರ್‌ಸಿಸಿ ಎನ್‌ಪಿ–3/ಎನ್‌ಪಿ–4 ಕೊಳವೆಗಳನ್ನು ಉಪಯೋಗಿಸುವಂತೆ ಸವಿವರ ಯೋಜನಾ ವರದಿಯು ಸಲಹೆ ನೀಡಿದ್ದಿತು. ಸಿಪಿಎಚ್ಇಇಒ ನೀಡಿರುವ ಸಲಹೆಯಂತೆ ಅತೀ ಸಮೀಪದ ಮ್ಯಾನ್‌ಹೋಲ್‌ಗೆ ಸಂಪರ್ಕಿಸಿದಂತೆ 500 ಮೀಟರು ದೂರದ ಅಂತರದಲ್ಲಿ ತೆರೆಯಬಹುದಾದ ರೀತಿಯಲ್ಲಿ ಉತ್ಪತ್ತಿಯಾಗುವ ಅನಿಲದ ಹೊರ ಸಾಗಣೆಗಾಗಿ ಸ್ಥಾಪಿಸಲಾಗಿರುವ ವಾತಾಯನ ಶಾಫ್ಟ್‌ಗಳಿಗಾಗಿಯೂ ಸಹ ಸವಿವರ ಯೋಜನಾ ವರದಿಯು ಅನುವನ್ನು ಹೊಂದಿತು. ಮುಂದುವರೆದು, ಆಮ್ಲಜನಕವಿಲ್ಲದ ಪರಿಸ್ಥಿತಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಪರಿಣಮಿಸಬಹುದಾದ ರೀತಿಯಲ್ಲಿ ಸಾವಯವ ವಸ್ತುಗಳು ನೆಲೆಗೊಳ್ಳುವುದನ್ನು ತಪ್ಪಿಸುವ ಸಲುವಾಗಿ ಕೊಳಚೆ ನೀರಿನ ಹರಿವಿನ

[17] ಬೊಮ್ಮನಹಳ್ಳಿ, ಬ್ಯಾಟರಾಯನಪುರ, ದಾಸರಹಳ್ಳಿ, ಮಹದೇವಪುರ, ಕೆ. ಆರ್. ಪುರ, ಕೆಂಗೇರಿ, ರಾಜರಾಜೇಶ್ವರಿ ನಗರ ಮತ್ತು ಯಲಹಂಕ.

[18] ಕೊಳಚೆ ನೀರಿನಲ್ಲಿನ ಪರಿಣಾಮಕಾರಿತ್ವದಿಂದ ಕೂಡಿದ ಜೈವಿಕ–ಆಮ್ಲಜನಕ ಬೇಡಿಕೆ, ತಾಪಮಾನ, ಇಳಿಜಾರು, ಕೊಳಚೆ ನೀರಿನ ಹರಿವಿನ ವೇಗ, ಇತ್ಯಾದಿ.

ವೇಗವನ್ನು ನಿರ್ವಹಿಸುವ ಸಲುವಾಗಿ ಅಗತ್ಯವಿರುವ ಇಳಿಜಾರಿನೊಂದಿಗೆ ಕೊಳಚೆ ನೀರು ಸಾಗಿಸುವ ಕೊಳವೆಗಳನ್ನು ಹಾಕುವುದಕ್ಕಾಗಿ ವಿನ್ಯಾಸ/ರೂಪುರೇಖೆಗಳನ್ನು ಮಾಡಲಾಗಿತ್ತು.

ಸವಿವರ ಯೋಜನಾ ವರದಿಯಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಎಸ್‌ಆರ್‌ಸಿ ಬಳಕೆ, ಉತ್ಪತ್ತಿಯಾಗುವ ಅನಿಲದ ಹೊರ ಸಾಗಣೆಗಾಗಿ ಸ್ಥಾಪಿಸಲಾಗಿರುವ ವಾತಾಯನ ಶಾಫ್ಟ್‌ಗಳಿಗಾಗಿ ಅನುವು ಹಾಗೂ ಕೊಳಚೆ ನೀರು ಹರಿಯುವಿಕೆಯ ವೇಗದ ನಿರ್ವಹಣೆ ಮುಂತಾದ ತುಕ್ಕುಹಿಡಿಯುವಿಕೆ/ಕೊರೆಯುವಿಕೆಯಿಂದ ಸಂರಕ್ಷಣಾ ಕ್ರಮಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಅಳವಡಿಸಿಕೊಂಡಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು 400 ಮಿಲೀಮೀಟರುಗಳಿಗೂ ಅಧಿಕ ವ್ಯಾಸವನ್ನು ಹೊಂದಿದ್ದಂತಹ ಕೊಳವೆಗಳ ಗೋಡೆಗಳ ಒಳಗೆ ಪಾಲಿಮರ್ ಆಧಾರಿತ ಎಲೆಸ್ಟೋಮೆರಿಕ್ ಸಂರಕ್ಷಣಾ ಲೇಪನಕ್ಕೆ ಅನುವು ಮಾಡಿತು. ಸಂರಕ್ಷಣಾ ಲೇಪನವು ಅಗತ್ಯತೆಯಿಂದ ಕೂಡಿತ್ತು ಹಾಗೂ ಸಲ್ಫೈಡ್ ಉತ್ಪತ್ತಿಯನ್ನು ತಡೆಗಟ್ಟಲು ಪ್ರಸ್ತುತ ಇರುವ ನಿಯಂತ್ರಣ ಕ್ರಮಗಳು ಸಾಕಷ್ಟಿರಲಿಲ್ಲ ಎಂಬುದನ್ನು ಸಾಬೀತುಪಡಿಸುವ ಸಲುವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಯಾವುದೇ ದಾಖಲೆಗಳನ್ನು ಹೊಂದಿರಲಿಲ್ಲ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೆಎಂಆರ್‌ಪಿಯ 21 ವಿವಿಧ ಪ್ಯಾಕೇಜುಗಳಲ್ಲಿ 2.99 ಲಕ್ಷ ಚದರ ಮೀಟರು ಕೊಳವೆ ಪ್ರದೇಶವನ್ನು ವ್ಯಾಪಿಸಿದಂತೆ ಮೇಲೆ ತಿಳಿಸಲಾದಂತಹ ಸಂರಕ್ಷಣಾ ಲೇಪನಕ್ಕಾಗಿ ₹ 40.65 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚವನ್ನು ಭರಿಸಿತು (ಮಾರ್ಚ್ 2015ರಿಂದ ಆಗಸ್ಟ್ 2018) ***(ವಿವರಗಳು ಅನುಬಂಧ-7ರಲ್ಲಿ).***

400 ಮಿಲೀಮೀಟರುಗಳಿಗೂ ಅಧಿಕ ವ್ಯಾಸವನ್ನು ಹೊಂದಿದ್ದಂತಹ ಕೊಳವೆಗಳಿಗೆ ಪಾಲಿಮರ್ ಆಧಾರಿತ ಸಂರಕ್ಷಣಾ ಲೇಪನ ಸೇರಿಸಿದ್ದು ಸಿಪಿಎಚ್‌ಇಇಒ ನೀಡಿರುವ ಕೈಪಿಡಿಯ ಹಾಗೂ ಸಲಹೆಗಾರರು ಸವಿವರ ಯೋಜನಾ ವರದಿಯಲ್ಲಿ ಮಾಡಿದ್ದಂತಹ ಶಿಫಾರಸುಗಳ ಉಲ್ಲಂಘನೆಯಾಗಿತು ಹಾಗೂ ₹ 40.65 ಕೋಟಿ ಮೊತ್ತದಷ್ಟು ಹೆಚ್ಚುವರಿ ವೆಚ್ಚವನ್ನು ಭರಿಸುವಲ್ಲಿ ಪರಿಣಮಿಸಿತು. ಸಿಪಿಎಚ್‌ಇಇಒ ಕಾವೇರಿ ನೀರು ಸರಬರಾಜು ಯೋಜನೆ Vರ ಸವಿವರ ಯೋಜನಾ ವರದಿಯನ್ನು ಪರಿಶೀಲಿಸುವ ವೇಳೆಯಲ್ಲಿ ಮಿತವ್ಯಯತೆಯ ಅಂಶಗಳ ಕಾರಣ ಕೊಳಚೆ ನೀರು ಹರಿಯುವ ಕೊಳವೆಗಳಲ್ಲಿ ಯಾವುದೇ ಲೇಪನದ ಬಳಕೆಯನ್ನು ಪ್ರೋತ್ಸಾಹಿಸಿರಲಿಲ್ಲ ಎಂಬ ವಾಸ್ತವಾಂಶವು ಲೆಕ್ಕಪರಿಶೋಧನೆಯ ನಿರ್ಣಯಕ್ಕೆ ಪುಷ್ಠಿ ನೀಡುತ್ತದೆ.

ಕೆಎಂಆರ್‌ಪಿ ಕಾಮಗಾರಿಗಳಿಗೆ ಹಣಕಾಸನ್ನು ನೀಡುವ ಸಂಸ್ಥೆಯಾಗಿದ್ದಂತಹ ವಿಶ್ವ ಬ್ಯಾಂಕಿನ ನಿರ್ದೇಶನಗಳ ಅನುಸಾರ ಪಾಲಿಮರ್ ಆಧಾರಿತ ಸಂರಕ್ಷಣಾ ಲೇಪನವನ್ನು ಅಂದಾಜುಗಳಲ್ಲಿ ಸೇರಿಸಲಾಯಿತು ಎಂಬುದಾಗಿ ರಾಜ್ಯ ಸರ್ಕಾರವು ಉತ್ತರಿಸಿತು (ಏಪ್ರಿಲ್ 2022). ವಿಶ್ವ ಬ್ಯಾಂಕ್ ಅನುಮೋದಿಸಿದ್ದಂತಹ ಸವಿವರ ಯೋಜನಾ ವರದಿಯು ಪಾಲಿಮರ್ ಆಧಾರಿತ ಸಂರಕ್ಷಣಾ ಲೇಪನಕ್ಕೆ ಅನುವು ಮಾಡಿರಲಿಲ್ಲವಾದ್ದರಿಂದ ಹಾಗೂ ಅಂದಾಜುಗಳಲ್ಲಿ ಮೇಲೆ ತಿಳಿಸಲಾದ ಐಟಂ ಅನ್ನು ಸೇರಿಸುವ ಸಲುವಾಗಿ ವಿಶ್ವ ಬ್ಯಾಂಕ್ ನೀಡಿದೆ ಎಂಬುದಾಗಿ ತಿಳಿಸಲಾದ ಯಾವುದೇ ನಿರ್ದಿಷ್ಟ ನಿರ್ದೇಶನಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಲಿಲ್ಲವಾದ್ದರಿಂದ ಉತ್ತರವೂ ಒಪ್ಪುವಂತಿರಲಿಲ್ಲ.

***ಶಿಫಾರಸು:***

**ಸಮರ್ಪಕ ಸಮರ್ಥನೆಗಳಿಲ್ಲದೆಯೇ ಕೈಗೆತ್ತಿಕೊಳ್ಳಲಾದ ಕಾಮಗಾರಿಗಳ ಮೇಲೆ ಹೆಚ್ಚುವರಿ ವೆಚ್ಚಗಳನ್ನು ಭರಿಸಿದ್ದಕ್ಕಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಂಬಂಧಿತ ವ್ಯಕ್ತಿಗಳ ಮೇಲೆ ಹೊಣೆಗಾರಿಕೆ/ ಉತ್ತರದಾಯಿತ್ವವನ್ನು ನಿಗದಿಗೊಳಿಸತಕ್ಕದ್ದು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತಿದೆ.**

## 2.5. ಹೊರಗುತ್ತಿಗೆ ಉದ್ಯೋಗಿಗಳ ಸಂಬಳ/ಕೂಲಿವೇತನ ಪಾವತಿಯಲ್ಲಿನ ನಿಯಮಬಾಹಿರತೆಗಳು

**ಹೊರಗುತ್ತಿಗೆ ಸಂಸ್ಥೆಯು ಮಾಡಿರುವಂತಹ ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಪಾವತಿಗಳನ್ನು ಮೇಲ್ವಿಚಾರಣೆ ಮಾಡುವಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಿಫಲತೆಯು ₹ 32.11 ಕೋಟಿ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿಗೆ ದಾರಿ ಮಾಡಿಕೊಟ್ಟಿತು. ಮುಂದುವರೆದು, ಸಂಸ್ಥೆಗೆ ನೀಡಬೇಕಾದ ಸೇವಾ ಶುಲ್ಕಗಳು ಮತ್ತು ಒಟ್ಟು ವೇತನ/ಕೂಲಿ ವೇತನಗಳನ್ನು ಸಮರ್ಪಕವಾಗಿ ಲೆಕ್ಕಹಾಕುವಲ್ಲಿ ಆಗಿದ್ದಂತಹ ಕರ್ತವ್ಯ ಲೋಪದ ಕಾರಣ ₹ 5.14 ಕೋಟಿ ಮೊತ್ತದಷ್ಟು ಅಧಿಕ ಪಾವತಿ ಮಾಡುವಲ್ಲಿ ಪರಿಣಮಿಸಿತು.**

ಗುತ್ತಿಗೆ ಉದ್ಯೋಗಿಗಳಿಗೆ ಪಾವತಿಸಬೇಕಾದ ಕನಿಷ್ಠ ಕೂಲಿ ವೇತನವನ್ನು ಕರ್ನಾಟಕ ಸರ್ಕಾರವು ನಿಗದಿಗೊಳಿಸತಕ್ಕದು/ಪರಿಷ್ಕರಿಸತಕ್ಕದ್ದು ಎಂಬುದಾಗಿ ಕರ್ನಾಟಕ ಕನಿಷ್ಠ ಕೂಲಿ ವೇತನ ನಿಯಮಗಳು, 1958ರ ನಿಯಮ 21 ನಿರ್ದಿಷ್ಟಪಡಿಸಿರುತ್ತದೆ. ಉದ್ಯೋಗಿ ಹಾಗೂ ಉದ್ಯೋಗದಾತರು[19] ಉದ್ಯೋಗಿಗಳ ಭವಿಷ್ಯ ನಿಧಿ ಸಂಸ್ಥೆಗೆ (ಇಪಿಎಫ್ಒ) ಕೂಲಿ ವೇತನದ (ಮೂಲ + ಭತ್ಯೆಗಳು) ಶೇಕಡಾ 12ರಷ್ಟನ್ನು ಕೊಡುಗೆಯನ್ನಾಗಿ ನೀಡತಕ್ಕದ್ದು ಎಂಬುದಾಗಿ ಉದ್ಯೋಗಿಗಳ ಭವಿಷ್ಯ ನಿಧಿ (ಇಪಿಎಫ್) ಮತ್ತು ಇತರೆ ಅನುವುಗಳ ಅಧಿನಿಯಮ, 1952 ಕಡ್ಡಾಯಗೊಳಿಸಿರುವುದು. ಉದ್ಯೋಗದಾತರ ಮತ್ತು ಉದ್ಯೋಗಿಗಳ ಕೊಡುಗೆಯನ್ನು ಅನುಕ್ರಮವಾಗಿ ಶೇಕಡಾ 3.25ರಷ್ಟು ಹಾಗೂ ಶೇಕಡಾ 0.75ರಷ್ಟನ್ನು (1 ಜುಲೈ 2019ರಿಂದ ಜಾರಿಗೆ ಬಂದಂತೆ ಅನುಕ್ರಮವಾಗಿ ಶೇಕಡಾ 4.75 ಹಾಗೂ ಶೇಕಡಾ 1.75ರಿಂದ ತಗ್ಗಿಸಲಾಗಿರುವುದು) ಉದ್ಯೋಗಿಗಳ ರಾಜ್ಯ ವಿಮಾ ನಿಗಮಕ್ಕೆ ಪಾವತಿಸುವುದನ್ನು ಉದ್ಯೋಗಿಗಳ ರಾಜ್ಯ ವಿಮಾ (ಇಎಸ್ಐ) ಅಧಿನಿಯಮ, 1948 ನಿರ್ದಿಷ್ಟಪಡಿಸಿರುವುದು.

ಬೆಂಗಳೂರು ನಗರದ ಕೊಳಚೆ ನೀರು ವಿಲೇವಾರಿ ಹಾಗೂ ನೀರು ಸರಬರಾಜಿನ ಹೊಣೆ ಹೊತ್ತ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಡೇಟಾ ಎಂಟ್ರಿ ಆಪರೇಟರುಗಳು/ವಾಲ್ವ್ ಆಪರೇಟರುಗಳು/ಸ್ಯಾನಿಟರಿ ಕೆಲಸಗಾರರು/ ಸಹಾಯಕರು, ಇತ್ಯಾದಿ ಹುದ್ದೆಗಳಿಗಾಗಿ ಹೊರಗುತ್ತಿಗೆ ಸಿಬ್ಬಂದಿ ಸರಬರಾಜು ಮಾಡುವ ಕಾರ್ಯವನ್ನು ಕ್ರಮಬದ್ಧವಾದ ಟೆಂಡರು ಪ್ರಕ್ರಿಯೆಯನ್ನು ನಡೆಸಿದ ನಂತರ ನವೋದಯ ಸರ್ವೀಸ್ ಸೆಂಟರ್ (ಸಂಸ್ಥೆ), ಇವರಿಗೆ ವಹಿಸಿಕೊಟ್ಟಿತು (ಮಾರ್ಚ್ 2018)[20]. ಪ್ರಾರಂಭಿಕ ಒಡಂಬಡಿಕೆಯನ್ನು 2018–20ರ ಅವಧಿಗೆ ಮಾಡಿಕೊಳ್ಳಲಾಯಿತು ಹಾಗೂ ಅದನ್ನು ಮಾರ್ಚ್ 2022ರವರೆಗೂ ವಿಸ್ತರಿಸಲಾಯಿತು.

ಉದ್ಯೋಗಿಗಳ ಭವಿಷ್ಯ ನಿಧಿ ಯೋಜನೆ ಮಾರ್ಗಸೂಚಿಗಳ ಪರಿಚ್ಛೇದ 30(3)ರ ಅನುಸಾರ, ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಪ್ರಧಾನ ಉದ್ಯೋಗದಾತ ಸಂಸ್ಥೆಯಾಗಿದ್ದು, ಹೊರಗುತ್ತಿಗೆ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಉದ್ಯೋಗಿಗಳ ಭವಿಷ್ಯ ನಿಧಿ ಕೊಡುಗೆಗಳನ್ನು ಪಾವತಿಸುವ ಹೊಣೆಗಾರಿಕೆ ಹೊಂದಿತ್ತು, ಆದ್ದರಿಂದ ಹೊರಗುತ್ತಿಗೆ ಸಂಸ್ಥೆಯು ಉದ್ಯೋಗಿಗಳ ಭವಿಷ್ಯ ನಿಧಿ ಕಚೇರಿಗೆ ಕೊಡುಗೆಗಳನ್ನು ಕ್ರಮಬದ್ಧವಾಗಿ ಪಾವತಿಸುತ್ತಿರುವುದನ್ನು ಮೇಲ್ವಿಚಾರಣೆ ಮಾಡುವ ಅಗತ್ಯತೆಯಿತ್ತು.

ಗುತ್ತಿಗೆ ಒಡಂಬಡಿಕೆಯ ಷರತ್ತು 9ರ ಅನುಸಾರ, ಹೊರಗುತ್ತಿಗೆ ಸಂಸ್ಥೆಯು ಪ್ರಧಾನ ಉದ್ಯೋಗದಾತ ಸಂಸ್ಥೆಗೆ (ಬೆಂಗಳೂರು ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ) ಸಂಬಂಧಿಸಿದಂತೆ ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳನ್ನು ಪಾವತಿಸಿದ್ದಕ್ಕಾಗಿ ಪ್ರತ್ಯೇಕ ಚಲನ್ನುಗಳನ್ನು ಸಲ್ಲಿಸಬೇಕಿತ್ತು. ಮುಂದುವರೆದು, ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳ ಬಿಲ್ಲುಗಳನ್ನು ತಯಾರಿಸುವ ಪ್ರತಿಯೊಂದು ವಿಭಾಗದ ಹಣಕಾಸನ್ನು ಹೊರಸೆಳೆಯುವ ಹಾಗೂ ವಿತರಿಸುವ ಅಧಿಕಾರಿಯವರು (ಡಿಡಿಒ) ಪರಿಶೀಲಿಸಬೇಕಿತ್ತು

[19] ಉದ್ಯೋಗದಾತರು 1 ಏಪ್ರಿಲ್ 2017ರಿಂದ 31 ಮೇ 2018ರ ಅವಧಿಗೆ ಶೇಕಡಾ 0.65ರಂತೆ ಆಡಳಿತಾತ್ಮಕ ಶುಲ್ಕಗಳನ್ನು ಹಾಗೂ 1 ಜೂನ್ 2018ರಿಂದ ಶೇಕಡಾ 0.50ಯಂತೆ ಆಡಳಿತಾತ್ಮಕ ಶುಲ್ಕವನ್ನು ಉದ್ಯೋಗಿ ಠೇವಣಿ ಸಂಪರ್ಕಿತ ವಿಮಾ ಯೋಜನೆ (ಇಡಿಎಲ್ಐಎಸ್) ಕಡೆಗೆ ಶೇಕಡಾ 0.50ರ ಜೊತೆಯಲ್ಲಿ ಪಾವತಿಸಿರುವರು.

[20] ಸಂಸ್ಥೆಯು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸೆಪ್ಟಂಬರ್ 2007ರಿಂದಲೂ ಸಿಬ್ಬಂದಿ ಸರಬರಾಜು ಮಾಡುತಿತ್ತು, ಲೆಕ್ಕಪರಿಶೋಧನೆಯ ಪರಿಶೀಲನೆಯನ್ನು ಮಾರ್ಚ್ 2018ರಲ್ಲಿ ಸಂಸ್ಥೆಯೊಂದಿಗೆ ಮಾಡಿಕೊಳ್ಳಲಾದ ಒಡಂಬಡಿಕೆಗೆ ನಿರ್ಬಂಧಿಸಲಾಯಿತು.

ಹಾಗೂ ಹೊರಗುತ್ತಿಗೆ ಸಂಸ್ಥೆಯು ಮಾಡಿರುವ ಪಾವತಿಗಳ ಬಗ್ಗೆ ಖಚಿತಪಡಿಸುವಿಕೆಯ ಘೋಷಣೆಯನ್ನು ಸಲ್ಲಿಸಬೇಕಿತ್ತು ಹಾಗೂ ಮುಂದುವರೆದು, ಅದನ್ನು ಮುಖ್ಯ ಲೆಕ್ಕಪತ್ರಗಳ ಅಧಿಕಾರಿಯವರು ಪರಿಶೀಲಿಸಬೇಕಿತ್ತು ಎಂಬುದಾಗಿ ಗುತ್ತಿಗೆ ಒಡಂಬಡಿಕೆಯ ಷರತ್ತು 10 ನಿರ್ದಿಷ್ಟಪಡಿಸಿತ್ತು.

ಲೆಕ್ಕಪರಿಶೋಧನೆಯು ಹೊರಗುತ್ತಿಗೆ ಉದ್ಯೋಗಿಗಳಿಗೆ ಸಂಬಂಧಿಸಿದಂತೆ 2018–21ರ ಅವಧಿಗೆ ಕೂಲಿ ವೇತನಗಳ ಪಾವತಿ ಹಾಗೂ ಶಾಸನಬದ್ಧ ಪ್ರಯೋಜನಗಳ ಪಾವತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲಿಸಿತು (ಫೆಬ್ರವರಿ 2022) ಹಾಗೂ ಈ ಮುಂದೆ ತಿಳಿಸಲಾಗಿರುವ ಉಲ್ಲಂಘನೆಗಳನ್ನು ಗಮನಿಸಿತು: (i) ಹೊರಗುತ್ತಿಗೆ ಸಂಸ್ಥೆಯು ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸಿತ್ತು, (ii) ಹೊರಗುತ್ತಿಗೆ ಸಂಸ್ಥೆಗೆ ಸೇವಾ ಶುಲ್ಕಗಳನ್ನು ಅಧಿಕ ಪ್ರಮಾಣದಲ್ಲಿ ಪಾವತಿಸಿದ್ದುದು, (iii) ಉದ್ಯೋಗದಾತರ ಕೊಡುಗೆಯ ದರಗಳು ತಗ್ಗಿರುವುದನ್ನು ಪರಿಗಣಿಸದ ಕಾರಣ ಪಾವತಿಗಳನ್ನು ಅಧಿಕ ಪ್ರಮಾಣದಲ್ಲಿ ಮಾಡಿದ್ದು.

i) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಹೊರಗುತ್ತಿಗೆ ಸಂಬಳದ ಕಡೆಗೆ ಹೊರಗುತ್ತಿಗೆ ಸಂಸ್ಥೆಗೆ ಕರ್ನಾಟಕ ಸರ್ಕಾರವು ನಿಗದಿಗೊಳಿಸಿದ್ದಂತಹ ಕನಿಷ್ಠ ಕೂಲಿ ವೇತನವನ್ನು ಕೂಲಿ ವೇತನದ ಶೇಕಡಾ 13.16[21] ದರದಲ್ಲಿ ಉದ್ಯೋಗಿಗಳ ಭವಿಷ್ಯ ನಿಧಿ ಕೊಡುಗೆ ಹಾಗೂ ಶೇಕಡಾ 4.75 ದರದಲ್ಲಿ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಯೊಂದಿಗೆ ಪಾವತಿಸಿತು. ಹೊರಗುತ್ತಿಗೆ ಸಂಸ್ಥೆಯು ಹೊರಗುತ್ತಿಗೆ ಉದ್ಯೋಗಿಗಳಿಗೆ ಪಾವತಿಸಲಾದ ಕೂಲಿ ವೇತನದಿಂದ ಉದ್ಯೋಗಿಗಳ ಭವಿಷ್ಯ ನಿಧಿ ಕೊಡುಗೆ ಕಡೆಗೆ ಶೇಕಡ 12ರಂತೆ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆ ಕಡೆಗೆ ಶೇಕಡಾ 1.75ರ ದರದಲ್ಲಿ ಮೂಲದಲ್ಲಿಯೇ ಕಡಿದುಕೊಳ್ಳಬೇಕಿದ್ದಿತು. ಈ ರೀತಿಯಾಗಿ, ಹೊರಗುತ್ತಿಗೆ ಸಂಸ್ಥೆಯು ಪ್ರತಿಯೋರ್ವ ಹೊರಗುತ್ತಿಗೆ ಉದ್ಯೋಗಿಗೆ ಸಂಬಂಧಿಸಿದಂತೆ ಉದ್ಯೋಗಿಗಳ ಭವಿಷ್ಯ ನಿಧಿ ಕೊಡುಗೆ ಕಡೆಗೆ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆ ಕಡೆಗೆ ಅನುಕ್ರಮವಾಗಿ ಶೇಕಡಾ 25.16ರಷ್ಟು ಹಾಗೂ ಶೇಕಡಾ 6.5ರಷ್ಟನ್ನು ಪಾವತಿಸುವ ಬಾಧ್ಯತೆಯನ್ನು ಹೊಂದಿದ್ದರು.

   ಹೊರಗುತ್ತಿಗೆ ಸೇವೆಗಳ ನೀಡಿಕೆಗಾಗಿ ಪ್ರತೀ ತಿಂಗಳು ಹೊರಗುತ್ತಿಗೆ ಸಂಸ್ಥೆಗೆ ನೀಡಲಾದ ಒಟ್ಟಾರೆ ಮೊತ್ತದ ಆಧಾರದ ಮೇರೆಗೆ ಹೊರಗುತ್ತಿಗೆ ಸಂಸ್ಥೆಯು ಪಾವತಿಸಬೇಕಾದ ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳನ್ನು ಲೆಕ್ಕಪರಿಶೋಧನೆಯು ಲೆಕ್ಕಹಾಕಿತು. ಹೊರಗುತ್ತಿಗೆ ಸಂಸ್ಥೆಯು ಏಪ್ರಿಲ್ 2018ರಿಂದ ಮಾರ್ಚ್ 2021ರ ಅವಧಿಗೆ ಉದ್ಯೋಗಿಗಳ ಭವಿಷ್ಯ ನಿಧಿಗೆ ಹಾಗೂ ಉದ್ಯೋಗಿಗಳ ರಾಜ್ಯ ವಿಮೆಗೆ ವಾಸ್ತವಿಕವಾಗಿ ಪಾವತಿಸಿದ ಮೊತ್ತಗಳೊಂದಿಗೆ ಹೋಲಿಸಲಾಗಿ, ಹೊರಗುತ್ತಿಗೆ ಸಂಸ್ಥೆಯು ಅನುಕ್ರಮವಾಗಿ ₹ 24.83 ಕೋಟಿ ಹಾಗೂ ₹ 7.28 ಕೋಟಿ ಮೊತ್ತಗಳಷ್ಟು ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳನ್ನು ಕಡಿಮೆ ಪ್ರಮಾಣದಲ್ಲಿ ಪಾವತಿಸಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ***(ವಿವರಗಳು ಅನುಬಂಧ–8ರಲ್ಲಿ)*** ಉದ್ಯೋಗಿವಾರು ಪಾವತಿಸಲಾದ ಉದ್ಯೋಗಿಗಳ ಭವಿಷ್ಯ ನಿಧಿ ಕೊಡುಗೆಗಳನ್ನು ಪರಿಶೀಲಿಸುವ ಸಲುವಾಗಿ ಲೆಕ್ಕಪರಿಶೋಧನೆಯು ಉದ್ಯೋಗಿಗಳ ಭವಿಷ್ಯ ನಿಧಿಗೆ ಸಂಬಂಧಿತ ಕಚೇರಿಯಿಂದ ವಿದ್ಯುನ್ಮಾನ ಸಲ್ಲಿಕೆ ಜೊತೆಯಲ್ಲಿನ ಚಲನ್‌ಗಳನ್ನು (ಇಸಿಆರ್)[22] ಸಹ ಪಡೆದುಕೊಂಡಿತು. ಉದ್ಯೋಗಿಗಳ ಭವಿಷ್ಯ ನಿಧಿ ಕೊಡುಗೆಯನ್ನು ಪ್ರಮಾಣಾನುಗುಣವಾಗಿ ಕಡಿಮೆಗೊಳಿಸುವ ಉದ್ದೇಶದಿಂದ ಹೊರಗುತ್ತಿಗೆ ಸಂಸ್ಥೆಯು ಸಲ್ಲಿಕೆಗಳಲ್ಲಿ ದಿನ ಕೂಲಿ ಸಂಬಳವನ್ನು ಕಡಿಮೆ ಪ್ರಮಾಣದಲ್ಲಿ ತೋರಿಸಿತು ಎಂಬುದನ್ನು ಪರಿಶೀಲನೆಯು ತೋರಿಸಿಕೊಟ್ಟಿತು. ಉದಾಹರಣೆಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ

[21] (ಉದ್ಯೋಗದಾತರ ಕೊಡುಗೆಯ ಶೇಕಡಾ 12, ಇಡಿಎಲ್‌ಐಎಸ್ ಕೊಡುಗೆ ಶೇಕಡಾ 0.50, ಇಪಿಎಫ್‌ಓ ಆಡಳಿತಾತ್ಮಕ ಶುಲ್ಕ ಶೇಕಡಾ 0.65, ಇಡಿಎಲ್‌ಐಎಸ್ ಆಡಳಿತಾತ್ಮಕ ಶುಲ್ಕ ಶೇಕಡಾ 0.01).

[22] ಉದ್ಯೋಗಿವಾರು ದಿನಕೂಲಿ ಸಂಬಳಗಳು ಮತ್ತು ಕೊಡುಗೆಗಳ ವಿವರಗಳನ್ನು ಒಳಗೊಂಡಂತೆ ಉದ್ಯೋಗದಾತರುಗಳು ಹೂಡಿಕೆ ಮಾಡಿರುವಂತಹ ವಿದ್ಯುನ್ಮಾನೀಯ ಮಾಸಿಕ ಸಲ್ಲಿಕೆ.

ಮಂಡಳಿಯು 2020–21 ಸಾಲಿನಲ್ಲಿ ಓರ್ವ ಡೇಟಾ ಎಂಟ್ರಿ ಆಪರೇಟರ್‌ಗೆ ಪಾವತಿಸಿದ್ದ ಸಂಬಳವು ₹ 18,059/- ಆಗಿತ್ತು, ವಿದ್ಯುನ್ಮಾನ ಸಲ್ಲಿಕೆ ಜೊತೆಯಲ್ಲಿನ ಚಲನ್‌ಗಳಲ್ಲಿ (ಇಸಿಆರ್) ತೋರಿಸಲಾಗಿದ್ದಂತಹ ಸಂಬಳವು ₹ 4500/-ರಿಂದ ₹ 6000/-ದವರೆಗೆ ಆಗಿದ್ದಿತು. ಈ ರೀತಿಯಾಗಿ, ತಗ್ಗಿಸಲ್ಪಟ್ಟಂತಹ ಸಂಬಳಗಳ ಮೇಲೆ ಲೆಕ್ಕಹಾಕಲಾಗಿದ್ದಂತಹ ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳನ್ನು ಸಹ ಪ್ರಮಾಣಾನುಗುಣವಾಗಿ ತಗ್ಗಿಸಲಾಗಿತ್ತು, ಇದು ಅಂತಹ ಕೊಡುಗೆಗಳನ್ನು ಸಂಬಂಧಿತ ಶಾಸನಬದ್ಧ ಪ್ರಾಧಿಕಾರಗಳಿಗೆ ಕಡಿಮೆ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿತು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿನ ಈ ಕೆಳಗಿನ ಆಂತರಿಕ ನಿಯಂತ್ರಣಗಳ ಲೋಪದೋಷಗಳು ನಿಯಮಬಾಹಿರತೆಗಳಿಗೆ ಅನುಕೂಲ ಕಲ್ಪಿಸಿಕೊಟ್ಟವು:

ಎ) ಹೊರಗುತ್ತಿಗೆ ಸಂಸ್ಥೆಯು ಕ್ರೋಡೀಕೃತ ಚಲನ್ನುಗಳನ್ನು ಸಲ್ಲಿಸಿತು, ಅವು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಹೊರಗುತ್ತಿಗೆ ಉದ್ಯೋಗಿಗಳಿಗೆ ಸಂಬಂಧಿಸಿದಂತೆ ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳನ್ನು ಪ್ರತ್ಯೇಕವಾಗಿ ತೋರಿಸಿರಲಿಲ್ಲ.

ಬಿ) ಡಿಡಿಒ ಹಾಗೂ ಮುಖ್ಯ ಲೆಕ್ಕಪತ್ರಗಳ ಅಧಿಕಾರಿಯವರು ಹೊರಗುತ್ತಿಗೆ ಉದ್ಯೋಗಿಗಳ ದಿನಕೂಲಿ ವೇತನ ಬಿಲ್ಲುಗಳನ್ನು ಅನುಮೋದಿಸುವ ವೇಳೆಯಲ್ಲಿ ಉದ್ಯೋಗಿವಾರು ಕೊಡುಗೆ ವಿವರಗಳನ್ನು ಒಳಗೊಂಡಿರುವಂತಹ ವಿದ್ಯುನ್ಮಾನ ಸಲ್ಲಿಕೆ ಜೊತೆಯಲ್ಲಿನ ಚಲನ್‌ಗಳನ್ನು (ಇಸಿಆರ್) ಪರಿಶೀಲಿಸದೆಯೇ ಕೇವಲ ಒಟ್ಟಾರೆ ಕೊಡುಗೆಗಳ ಪಾವತಿ ಸ್ಥಿತಿಗತಿಗಳನ್ನು ಮಾತ್ರ ಪರಿಶೀಲಿಸುತ್ತಿದ್ದರು.

ಈ ರೀತಿಯಾಗಿ ಗುತ್ತಿಗೆ ಷರತ್ತುಗಳಿಗೆ ಬದ್ಧವಾಗಿರುವಲ್ಲಿ ಹಾಗೂ ಶಾಸನಬದ್ಧ ಕೊಡುಗೆಗಳ ಮೇಲ್ವಿಚಾರಣೆ ಮಾಡುವಲ್ಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವಿಫಲತೆಯು ಹೊರಗುತ್ತಿಗೆ ಉದ್ಯೋಗಿಗಳಿಗೆ ಸಂಚಿತಗೊಳ್ಳಬೇಕಿದ್ದಂತಹ ನ್ಯಾಯಸಮ್ಮತ ಪ್ರಯೋಜನಗಳಿಂದ ಅವರುಗಳನ್ನು ವಂಚಿಸಿ ಹೊರಗುತ್ತಿಗೆ ಸಂಸ್ಥೆಯು ಅನುಕ್ರಮವಾಗಿ ₹ 24.83 ಕೋಟಿ ಹಾಗೂ ₹ 7.28 ಕೋಟಿ ಮೊತ್ತಗಳಷ್ಟು ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮಾ ಕೊಡುಗೆಗಳನ್ನು ನಿಯಮಬಾಹಿರವಾಗಿ/ಅನಧಿಕೃತವಾಗಿ ಉಳಿಸಿಕೊಳ್ಳುವಲ್ಲಿ ಪರಿಣಮಿಸಿತು.

ii) ಒಡಂಬಡಿಕೆಯ ಷರತ್ತು 22ರ ಅನುಸಾರ, ಹೊರಗುತ್ತಿಗೆ ಸಂಸ್ಥೆಯು ನಿವ್ವಳ ವೇತನಗಳ ಶೇಕಡಾ 10ರಷ್ಟು ಸೇವಾ ಶುಲ್ಕಗಳಿಗೆ ಅರ್ಹವಾಗಿತ್ತು. ನಿವ್ವಳ ವೇತನಗಳು ಅನುಕ್ರಮವಾಗಿ ಶೇಕಡಾ 12ರಷ್ಟು ಹಾಗೂ ಶೇಕಡಾ 4.75ರಷ್ಟು ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳನ್ನು ಒಳಗೊಂಡಿದ್ದವು. ಸೇವಾ ಶುಲ್ಕಗಳನ್ನು ಲೆಕ್ಕಹಾಕುವ ಸಲುವಾಗಿ ನಿವ್ವಳ ವೇತನವನ್ನು ನಿರ್ಧಾರೆ ಮಾಡುವ ವೇಳೆಯಲ್ಲಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಒಟ್ಟು ವೇತನಗಳಿಗೆ ಹೆಚ್ಚುವರಿಯಾಗಿ ಉದ್ಯೋಗಿಗಳ ಕೊಡುಗೆಯನ್ನು ಸೇರಿಸಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮೇಲೆ ತಿಳಿಸಲಾದಂತಹ ತಪ್ಪುಗಳಿಂದ ಕೂಡಿದ ಲೆಕ್ಕಾಚಾರ, ನಿವ್ವಳ ವೇತನಗಳನ್ನು ಹೆಚ್ಚಳಗೊಳಿಸಲಾಯಿತು ಹಾಗೂ ಸೇವಾ ಶುಲ್ಕಗಳನ್ನು ಆ ರೀತಿ ಹೆಚ್ಚಳಗೊಳಿಸಲ್ಪಟ್ಟಂತಹ ನಿವ್ವಳ ಕೂಲಿ ವೇತನಗಳ ಮೇಲೆ ಲೆಕ್ಕಹಾಕಲಾಯಿತು, ಇದು ಮೇ 2018ರಿಂದ ಮಾರ್ಚ್ 2021ರ ಅವಧಿಯಲ್ಲಿ ಹೊರಗುತ್ತಿಗೆ ಸಂಸ್ಥೆಗೆ ₹ 2.26 ಕೋಟಿ ಮೊತ್ತದಷ್ಟು ಪಾವತಿಗಳನ್ನು ಹೆಚ್ಚುವರಿಯಾಗಿ ಮಾಡುವಲ್ಲಿ ಪರಿಣಮಿಸಿತು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಹೊರಗುತ್ತಿಗೆ ಸಂಸ್ಥೆಗೆ ಪಾವತಿಗಳನ್ನು ಮಾಡುವ ವೇಳೆಯಲ್ಲಿ ನಿವ್ವಳ ಮೊತ್ತಕ್ಕೆ ತಪ್ಪಾಗಿ ಸೇರಿಸಲಾಗಿದ್ದಂತಹ

ಉದ್ಯೋಗಿಗಳಿಂದ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಯನ್ನು[23]ಕಳೆಯುವಲ್ಲಿ ವಿಫಲಗೊಂಡಿದ್ದಿತು ಎಂಬುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಈ ರೀತಿಯಾಗಿ, ಮೇ 2018 ರಿಂದ ಮಾರ್ಚ್2021 ರ ಅವದಿಗೆ ಉದ್ಯೋಗಿಗಳ ರಾಜ್ಯ ವಿಮೆ ಕಡೆಗೆ ಉದ್ಯೋಗಿಗಳ ಕಡೆಯಿಂದ ಕಾಣಿಕೆಗೆ ಸಮನಾದ ಒಟ್ಟಾರೆ ₹ 2.88 ಕೋಟಿ ಮೊತ್ತವನ್ನು ಹೊರಗುತ್ತಿಗೆ ಸಂಸ್ಥೆಗೆ ಅಧಿಕ ಪ್ರಮಾಣದಲ್ಲಿ ಪಾವತಿಸಲಾಗಿತ್ತು (ಲೆಕ್ಕಾಚಾರಗಳ ವಿವರಗಳು ***ಅನುಬಂಧ–9***ರಲ್ಲಿ).

iii) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಉದ್ಯೋಗಿಗಳ ಭವಿಷ್ಯ ನಿಧಿ ಉದ್ಯೋಗದಾತರ ಕೊಡುಗೆಯನ್ನು ವೇತನದ ಶೇಕಡಾ 13.16ರ[24] ದರದಲ್ಲಿ ಹಾಗೂ ಉದ್ಯೋಗಿಗಳ ರಾಜ್ಯ ವಿಮಾ ಉದ್ಯೋಗದಾತರ ಕೊಡುಗೆಯನ್ನು ಶೇಕಡಾ 4.75ರ ದರದಲ್ಲಿ ಪಾವತಿಸುತ್ತಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆಡಳಿತಾತ್ಮಕ ವೆಚ್ಚ/ಶುಲ್ಕಗಳಲ್ಲಿನ[25] ಇಳಿಕೆಯ ಕಾರಣ, ಉದ್ಯೋಗಿಗಳ ಭವಿಷ್ಯ ನಿಧಿಗೆ ಉದ್ಯೋಗದಾತರ ಕೊಡುಗೆಯ ದರವು 1 ಜೂನ್ 2018ರಿಂದ ಶೇಕಡಾ 13ಕ್ಕೆ ಇಳಿಮುಖಗೊಂಡಿತು. ಅದೇ ರೀತಿಯಲ್ಲಿ ಉದ್ಯೋಗಿಗಳ ರಾಜ್ಯ ವಿಮೆಗೆ ಉದ್ಯೋಗದಾತರ ಕೊಡುಗೆಯ ದರವನ್ನು 1 ಜುಲೈ 2019ರಿಂದ ಜಾರಿಗೆ ಬಂದಂತೆ ಶೇಕಡಾ 4.75ರಿಂದ ಶೇಕಡಾ 3.25ಕ್ಕೆ ತಗ್ಗಿಸಲಾಯಿತು, ಆದರೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಮೇಲೆ ತಿಳಿಸಲಾದ ದರಗಳ ತಗ್ಗುವಿಕೆಯನ್ನು ಪರಿಗಣಿಸದೆ ಕೊಡುಗೆಗಳನ್ನು ಪರಿಷ್ಕರಣಾ–ಪೂರ್ವ ದರಗಳಲ್ಲಿ ಪಾವತಿಸುವುದನ್ನು ಮುಂದುವರೆಸಿಕೊಂಡು ಹೋಯಿತು, ಇದರಿಂದಾಗಿ ಹೊರಗುತ್ತಿಗೆ ಸಂಸ್ಥೆಗೆ ₹ 1.82 ಕೋಟಿ ಮೊತ್ತವನ್ನು (ಉದ್ಯೋಗಿಗಳ ಭವಿಷ್ಯ ನಿಧಿ ಕಡೆಗೆ ₹ 0.25 ಕೋಟಿ ಮೊತ್ತ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಕಡೆಗೆ₹ 1.57 ಕೋಟಿ ಮೊತ್ತ) ಅಧಿಕ ಪ್ರಮಾಣದಲ್ಲಿ ಪಾವತಿಸುವಲ್ಲಿ ಪರಿಣಮಿಸಿತು. ವಿವರಗಳನ್ನು ***ಅನುಬಂಧ–10 ಮತ್ತು 11***ರಲ್ಲಿ ನೀಡಲಾಗಿರುವುದು.

ಪ್ರತಿಯೋರ್ವ ಉದ್ಯೋಗಿಗೆ ಸಂಬಂಧಿಸಿದಂತೆ ಉದ್ಯೋಗಿಗಳಿಂದ ಉದ್ಯೋಗಿಗಳ ಭವಿಷ್ಯ ನಿದಿ ಹಾಗೂ ಉದ್ಯೋಗಿಗಳ ರಾಜ್ಯ ವಿಮಾ ಕೊಡುಗೆಗಳನ್ನು ಹಾಗೂ ಈ ನಿಟ್ಟಿನಲ್ಲಿ ಹೊರಗುತ್ತಿಗೆ ಸಂಸ್ಥೆಯು ವಾಸ್ತವಿಕವಾಗಿ ಮಾಡಿರುವ ಕೊಡುಗೆಗಳನ್ನು ಪರಿಶೀಲಿಸುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಲಾಗಿರುವುದು ಎಂಬುದಾಗಿ ರಾಜ್ಯ ಸರ್ಕಾರವು ಉತ್ತರಿಸಿತು (ಮಾರ್ಚ್ 2022). ಸೇವಾ ಶುಲ್ಕಗಳ ಲೆಕ್ಕಹಾಕುವ ಸಲುವಾಗಿ ಒಟ್ಟು ಕೂಲಿ ವೇತನಗಳಲ್ಲಿ ಉದ್ಯೋಗಿಗಳ ಕಡೆಯಿಂದ ಮಾಡಲಾಗುವ ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆ ಕೊಡುಗೆಗಳನ್ನು ಸೇರಿಸಿಕೊಳ್ಳುವುದರ ಬಗ್ಗೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಮಿಕ ಸಲಹೆಗಾರರಿಂದ ಸ್ಪಷ್ಟನೆಯನ್ನು ಕೋರಲಾಗುವುದು ಎಂಬುದಾಗಿಯೂ ತಿಳಿಸಿತು. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ದರಗಳಲ್ಲಿನ ಇಳಿಕೆಯನ್ನು ಪರಿಗಣಿಸದೆಯೇ ಅಧಿಕ ಪ್ರಮಾಣದಲ್ಲಿ ಮಾಡಲಾಗಿದ್ದ ಉದ್ಯೋಗದಾತರ ಕೊಡುಗೆಯ ಕಡೆಗೆ ₹ 1.82 ಕೋಟಿ ಮೊತ್ತವನ್ನು ಹೊರಗುತ್ತಿಗೆ ಸಂಸ್ಥೆಯಿಂದ ವಸೂಲಾತಿ ಮಾಡಿರುವುದು (ಮಾರ್ಚ್ 2022).

ಈ ರೀತಿಯಾಗಿ, ಗುತ್ತಿಗೆ ಷರತ್ತುಗಳಿಗೆ ಬದ್ಧತೆಯಿಂದ ಕೂಡಿರುವಲ್ಲಿನ ಹಾಗೂ ಉದ್ಯೋಗಿಗಳ ಭವಿಷ್ಯ ನಿಧಿ ಹಾಗೂ ಉದ್ಯೋಗಿಗಳ ರಾಜ್ಯ ವಿಮೆಯ ಶಾಸನಬದ್ಧ ಕೊಡುಗೆಗಳ ಪಾವತಿಗಳನ್ನು ಮೇಲ್ವಿಚಾರಣೆ ಮಾಡುವಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ

---

[23] ಉದ್ಯೋಗಿಗಳಿಂದ ಉದ್ಯೋಗಿಗಳ ಭವಿಷ್ಯ ನಿಧಿ ಕೊಡುಗೆಯನ್ನು ಒಟ್ಟು ಸಂಬಳದಿಂದ ಸರಿಯಾಗಿಯೇ ಕಡಿದುಕೊಳ್ಳಲಾಗಿತ್ತು.

[24] ಶೇಕಡಾ 12ರಷ್ಟು ಉದ್ಯೋಗದಾತರ ಕೊಡುಗೆ, ಶೇಕಡಾ 0.50ರಷ್ಟು ಇಡಿಎಲ್ಐಎಸ್ ಕೊಡುಗೆ, ಶೇಕಡಾ 0.65ರಷ್ಟು ಉದ್ಯೋಗಿಗಳ ಭವಿಷ್ಯ ನಿಧಿ ಕಚೇರಿಯ ಆಡಳಿತಾತ್ಮಕ ಶುಲ್ಕ, ಶೇಕಡಾ 0.01ರಷ್ಟು ಇಡಿಎಲ್ಐಎಸ್ ಆಡಳಿತಾತ್ಮಕ ಶುಲ್ಕಗಳು.

[25] ಆಡಳಿತಾತ್ಮಕ ಶುಲ್ಕಗಳನ್ನು ಶೇಕಡಾ 0.65ರಿಂದ ಶೇಕಡಾ 0.5ಕ್ಕೆ ತಗ್ಗಿಸಲಾಯಿತು, ಶೇಕಡಾ 0.01ರಷ್ಟು ಇಡಿಎಲ್ಐಎಸ್ ಶುಲ್ಕಗಳನ್ನು ಮನ್ನಾ ಮಾಡಲಾಯಿತು.

ವಿಫಲತೆಯು ₹ 32.11 ಕೋಟಿ ಮೊತ್ತದಷ್ಟು ಕೊಡುಗೆಗಳನ್ನು ಕಡಿಮೆ ಪ್ರಮಾಣದಲ್ಲಿ ಮಾಡುವಲ್ಲಿ ಪರಿಣಮಿಸಿದ್ದಿತು. ಪಾವತಿಸಬೇಕಾದ ಶಾಸನಬದ್ಧ ಮೊತ್ತಗಳನ್ನು ಪಾವತಿಸದೆಯೇ ಉಳಿಸಿಕೊಂಡಿದ್ದು ಹೊರಗುತ್ತಿಗೆ ಕಂಪನಿಯು ಕಾನೂನುಬಾಹಿರವಾಗಿ/ಅಕ್ರಮವಾಗಿ ಹಣಕಾಸು ಸಂಪಾದನೆ ಮಾಡಿದ್ದಕ್ಕೆ ಸಮನಾಗಿದ್ದು ಹಾಗೂ ಅಲ್ಲದೆಯೇ ಹೊರಗುತ್ತಿಗೆ ಉದ್ಯೋಗಿಗಳಿಗೆ ಶಾಸನಬದ್ಧ ಪ್ರಯೋಜನಗಳನ್ನು ನಿರಾಕರಿಸುವಲ್ಲಿ ಪರಿಣಮಿಸಿತು. ಮುಂದುವರೆದು, ಹೊರಗುತ್ತಿಗೆ ಸಂಸ್ಥೆಗೆ ನೀಡಬೇಕಾದ ಸೇವಾ ಶುಲ್ಕಗಳು ಮತ್ತು ಒಟ್ಟು ವೇತನ/ಕೂಲಿ ವೇತನಗಳನ್ನು ಸಮರ್ಪಕವಾಗಿ ಲೆಕ್ಕಹಾಕುವಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಆಗಿದ್ದಂತಹ ಕರ್ತವ್ಯ ಲೋಪದ ಕಾರಣ ಹೊರಗುತ್ತಿಗೆ ಸಂಸ್ಥೆಗೆ ₹ 5.14 ಕೋಟಿ[26] ಮೊತ್ತದಷ್ಟು ಅಧಿಕ ಪಾವತಿ ಮಾಡುವಲ್ಲಿ ಪರಿಣಮಿಸಿತು.

***ಶಿಫಾರಸು:***

**ಹೊರಗುತ್ತಿಗೆ ಸಂಸ್ಥೆಗೆ ಪಾವತಿಸಲಾಗಿರುವ ಶಾಸನಬದ್ಧ ಕೊಡುಗೆಗಳನ್ನು ಉದ್ಯೋಗಿಗಳ ಭವಿಷ್ಯ ನಿಧಿ ಮತ್ತು ಉದ್ಯೋಗಿಗಳ ರಾಜ್ಯ ವಿಮೆ ದಾಖಲೆಗಳ ಜೊತೆಯಲ್ಲಿ ಸಮನ್ವಯಗೊಳಿಸುವುದು, ತಪ್ಪಾಗಿ ಮಾಡಲಾದ ಲೆಕ್ಕಾಚಾರಗಳ ಕಾರಣ ಹೊರಗುತ್ತಿಗೆ ಸಂಸ್ಥೆಗೆ ಅಧಿಕ ಪ್ರಮಾಣದಲ್ಲಿ ಮಾಡಲಾಗಿರುವ ಪಾವತಿಗಳನ್ನು ವಸೂಲಾತಿ ಮಾಡುವುದು ಹಾಗೂ ಲೆಕ್ಕಪರಿಶೋಧನೆಯಲ್ಲಿ ಸ್ಪಷ್ಟಪಡಿಸಲಾಗಿರುವ ಲೋಪದೋಷಗಳಿಗೆ ಕಾರಣರಾಗಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಮೇಲೆ ಹೊಣೆಗಾರಿಕೆ/ಜವಾಬ್ದಾರಿಯನ್ನು ನಿಗದಿಗೊಳಿಸುವುದು ಸಲುವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ತತ್‌ಕ್ಷಣದ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತಿದೆ.**

**ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ**

**ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ**

## *2.6. ಗುತ್ತಿಗೆದಾರರುಗಳಿಗೆ ಅನರ್ಹ ಲಾಭಗಳನ್ನು ಮಾಡಿಕೊಟ್ಟಿದ್ದುದು*

**ದರಗಳ ಪಟ್ಟಿಯನ್ನು (ಷೆಡ್ಯೂಲ್ ಆಫ್ ರೇಟ್ಸ್) ತಪ್ಪಾಗಿ ಅಳವಡಿಸಿಕೊಂಡಿದ್ದು ಗುತ್ತಿಗೆದಾರರುಗಳಿಗೆ ₹ 2.04 ಕೋಟಿ ಮೊತ್ತದಷ್ಟು ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಪರಿಣಮಿಸಿತು.**

ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿಯು (ಮಂಡಳಿ) ಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದು, ಸ್ಥಾಪಿಸುವುದು ಹಾಗೂ ಅಭಿವೃದ್ಧಿಪಡಿಸುವ ಸಲುವಾಗಿ ಸ್ಥಾಪಿಸಲಾದಂತಹ ಒಂದು ಶಾಸನಬದ್ಧ ಸಂಸ್ಥೆಯಾಗಿರುತ್ತದೆ ಹಾಗೂ ಅದು ರಾಜ್ಯದಲ್ಲಿನ ಕೈಗಾರಿಕಾ ಪ್ರದೇಶಗಳಲ್ಲಿ ಕೈಗಾರಿಕಾ ಮೂಲಸೌಕರ್ಯ ಅನುಕೂಲತೆಗಳು ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸುತ್ತದೆ. ಮಂಡಳಿಯು ಮೂಲಸೌಕರ್ಯ ಕಾಮಗಾರಿಗಳನ್ನು (ರಸ್ತೆಗಳು, ಸೇತುವೆಗಳು, ಅಡ್ಡಕಾಲುವೆಗಳು/ ಸುರಂಗ ಕಾಲುವೆಗಳು (ಕಲ್ವರ್ಟುಗಳು) ಮತ್ತು ಕಟ್ಟಡಗಳು, ಇತ್ಯಾದಿ) ಕಾರ್ಯಗತಗೊಳಿಸುವ ಸಲುವಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯ ದರಗಳ ಪಟ್ಟಿಯನ್ನು ಅಳವಡಿಸಿಕೊಳ್ಳುತ್ತದೆ. ಕರ್ನಾಟಕ ಲೋಕೋಪಯೋಗಿ ಇಲಾಖೆಯು ಕಟ್ಟಡಗಳಿಗಾಗಿ ಪ್ರತ್ಯೇಕವಾದಂತಹ ದರಗಳ ಪಟ್ಟಿಗಳನ್ನು (ಕರ್ನಾಟಕ ಕಟ್ಟಡಗಳಿಗಾಗಿ ಪ್ರಮಾಣಕ ದರಗಳು (ಕೆಎಸ್‌ಆರ್‌ಬಿ[27]) ಹಾಗೂ ರಸ್ತೆಗಳು ಮತ್ತು ಸೇತುವೆಗಳಿಗಾಗಿ ಪ್ರತ್ಯೇಕವಾದಂತಹ ದರಗಳ ಪಟ್ಟಿಯನ್ನು (ಕರ್ನಾಟಕ ರಸ್ತೆಗಳು ಮತ್ತು ಸೇತುವೆಗಳಿಗಾಗಿ ಪ್ರಮಾಣಕ ದರಗಳು (ಕೆಎಸ್‌ಆರ್‌ಆರ್‌ಬಿ[28]) ಒದಗಿಸಿದ್ದಿತು.

[26] ಅಧಿಕ ಪ್ರಮಾಣದಲ್ಲಿ ಪಾವತಿಸಲಾಗಿದ್ದ ಸೇವಾ ಶುಲ್ಕಗಳು ₹ 2.26 ಕೋಟಿ ಹಾಗೂ ಅಧಿಕ ಪ್ರಮಾಣದಲ್ಲಿ ಲೆಕ್ಕಹಾಕಲಾಗಿದ್ದ ಒಟ್ಟು ಕೂಲಿ ವೇತನಗಳು ₹ 2.88 ಕೋಟಿ.

[27] ಕರ್ನಾಟಕ ಕಟ್ಟಡಗಳಿಗಾಗಿ ಪ್ರಮಾಣಕ ದರ ವಿಶ್ಲೇಷಣೆ.

[28] ಕರ್ನಾಟಕ ರಸ್ತೆಗಳು ಮತ್ತು ಸೇತುವೆಗಳಿಗಾಗಿ ಪ್ರಮಾಣಕ ದರ ವಿಶ್ಲೇಷಣೆ.

ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ನಾಲ್ಕು ಕೈಗಾರಿಕಾ ಪ್ರದೇಶಗಳಲ್ಲಿ[29] ಕೈಗಾರಿಕಾ ಬಡಾವಣೆಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ 2014–15ರಿಂದ 2018–19ರ ಅವಧಿಯಲ್ಲಿ ನೀಡಲಾಗಿದ್ದಂತಹ (5 ಕಾಮಗಾರಿಗಳು) ರಸ್ತೆಗಳ[30] ನಿರ್ಮಾಣಕ್ಕೆ ಸಂಬಂಧಿತ ಗುತ್ತಿಗೆಗಳನ್ನು ಲೆಕ್ಕಪರಿಶೋಧನೆಯು ಪರೀಕ್ಷಾ–ಪರಿಶೀಲನೆ ನಡೆಸಿತು (ನವೆಂಬರ್ 2020. ಐದು ಕಾಮಗಾರಿಗಳ ಪೈಕಿ ನಾಲ್ಕನ್ನು 2018–19 ಹಾಗೂ 2020–21ರಲ್ಲಿ ಪೂರ್ಣಗೊಳಿಸಲಾಗಿದ್ದಿತು ಹಾಗೂ ಒಂದು ಕಾಮಗಾರಿಯು ಪ್ರಗತಿಯಲ್ಲಿದ್ದಿತು (ಏಪ್ರಿಲ್ 2022). ಕಾಮಗಾರಿಗಳು ಆರ್‌ಸಿಸಿ ಪಾರ್ಶ್ವ ಚರಂಡಿಗಳು, ಆರ್‌ಸಿಸಿ ಮಳೆ ನೀರು ಚರಂಡಿಗಳು, ಪರೀಕ್ಷಣಾ ಚೇಂಬರುಗಳು ಹಾಗೂ ವಾಲ್ವ್ ಚೇಂಬರುಗಳ ನಿರ್ಮಾಣಕ್ಕಾಗಿ ಸಾಮಾನ್ಯ/ಗಟ್ಟಿ ಮಣ್ಣಿನಲ್ಲಿ ಭೂಮಿ ಅಗೆತವನ್ನು ಒಳಗೊಂಡಿದ್ದವು.

ಕೆಎಸ್‌ಆರ್‌ಆರ್‌ಬಿ–300 ರಸ್ತೆಗಳು, ಚರಂಡಿಗಳು ಮತ್ತು ಅಂತಹುದೇ ಕಾಮಗಾರಿಗಳಿಗಾಗಿ ಭೂಮಿ ಅಗೆತಕ್ಕಾಗಿ ನಿರ್ದಿಷ್ಟವಾದಂತಹ ದರಗಳನ್ನು ಅನುವು ಮಾಡಿರುವುದು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಈ ಕಾಮಗಾರಿಗಳಿಗಾಗಿ ಅಂದಾಜುಗಳನ್ನು ರಸ್ತೆಗಳು ಮತ್ತು ಸೇತುವೆಗಳಿಗಾಗಿ ಅನ್ವಯಗೊಳ್ಳುವಂತಹ ಕಲೋಇ ದರಗಳ ಪಟ್ಟಿ ಸಂಪುಟ IIರ ಕೆಎಸ್‌ಆರ್‌ಆರ್‌ಬಿ (300–1, 300–2, 300–6) ಅನುಸಾರ ಅಳವಡಿಸಿಕೊಳ್ಳುವ ಬದಲು ಕಟ್ಟಡಗಳಿಗೆ ಅನ್ವಯಗೊಳ್ಳುವಂತಹ ಕೆಎಸ್‌ಆರ್‌ಬಿ (2–2.1, 2–2.2, 2–2.4) ಅನುಸಾರ ದರಗಳನ್ನು ಅಳವಡಿಸಿಕೊಳ್ಳುವ ಮೂಲಕ ತಪ್ಪಾಗಿ ತಯಾರಿಸಲಾಗಿದ್ದಿತು. ಕಾಮಗಾರಿಗಳು ರಸ್ತೆಗಳ ನಿರ್ಮಾಣಕ್ಕೆ ಸಂಬಂಧಿಸಿದ್ದವಾದ್ದರಿಂದ ಹಾಗೂ ಅಲ್ಲದೆಯೇ ಮೇಲೆ ತಿಳಿಸಲಾದಂತಹ ಕಾಮಗಾರಿಗಳಿಗಾಗಿ ಕೆಎಸ್‌ಆರ್‌ಆರ್‌ಬಿ ಅಡಿಯಲ್ಲಿ ದರಗಳನ್ನು ಅನುವು ಮಾಡಲಾಗಿರುವುದರಿಂದ, ಕಟ್ಟಡಗಳಿಗೆ ಅನ್ವಯಗೊಳ್ಳುವಂತಹ ದರಗಳ ಪಟ್ಟಿಯನ್ನು ಅಳವಡಿಸಿಕೊಂಡಿದ್ದುದು ಸರಿಯಾದ ಕ್ರಮವಾಗಿರಲಿಲ್ಲ. ಕೆಎಸ್‌ಆರ್‌ಬಿ ಅನುಸಾರ ಮೇಲೆ ತಿಳಿಸಲಾದಂತಹ ಕಾಮಗಾರಿಗಳ ಐಟಂಗಳಿಗೆ ಒಪ್ಪಿಕೊಳ್ಳಲಾಗಿದ್ದಂತಹ ದರಗಳು ಕೆಎಸ್‌ಆರ್‌ಆರ್‌ಬಿಯಲ್ಲಿ ಅನುವು ಮಾಡಲಾಗಿರುವ ದರಗಳಿಗಿಂತ ಅಧಿಕವಾಗಿದ್ದವಾದ್ದರಿಂದ, ಇದು ಗುತ್ತಿಗೆದಾರರುಗಳಿಗೆ ₹ 2.04 ಕೋಟಿ ಮೊತ್ತದಷ್ಟು ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಪರಿಣಮಿಸಿತು ***(ಅನುಬಂಧ–12ನ್ನು ಉಲ್ಲೇಖಿಸುವುದು).***

ನೀರು ಸರಬರಾಜು ಮತ್ತು ಒಳಚರಂಡಿ/ಚರಂಡಿ ಮಾರ್ಗಗಳ ಉಪ–ಐಟಂಗಳನ್ನು ಕಾರ್ಯಗತಗೊಳಿಸಿರುವೆಡೆಗಳಲ್ಲಿ ಕೆಎಸ್‌ಆರ್‌ಬಿ ಅನುಸಾರ ದರಗಳನ್ನು ಆರ್‌ಸಿಸಿ ಚರಂಡಿಗಳು ಮತ್ತು ಪರೀಕ್ಷಣಾ/ವಾಲ್ವ್ ಚೇಂಬರುಗಳ ಕಾಮಗಾರಿಗಳಿಗೆ ಮಾತ್ರ ಅಳವಡಿಸಿಕೊಳ್ಳಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಮೇ 2022).

ರಸ್ತೆಗಳು, ಚರಂಡಿಗಳು ಮತ್ತು ಅದೇ ರೀತಿಯ ಕಾಮಗಾರಿಗಳಿಗಾಗಿ ನಿರ್ದಿಷ್ಟವಾಗಿ ದರಗಳನ್ನು ಅನುವು ಮಾಡಿರುವಂತಹ ಕೆಎಸ್‌ಆರ್‌ಆರ್‌ಬಿ–300ರ ಅನುಸಾರ ದರಗಳನ್ನು ಅಳವಡಿಸಿಕೊಳ್ಳದಿರುವುದಕ್ಕೆ ಸಂಬಂಧಿಸಿದಂತೆ ಉತ್ತರವು ಮೌನವಾಗಿದ್ದಿತು. ಈ ರೀತಿಯಾಗಿ, ಅನ್ವಯಗೊಳ್ಳುವಂತಹ ದರಗಳ ಪಟ್ಟಿಯ ಅನುಸಾರ ಅಂದಾಜುಗಳನ್ನು ತಯಾರಿಸಿರುವುದನ್ನು ಹಾಗೂ ಪಾವತಿಗಳನ್ನು ಮಾಡಿರುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಒಂದು ವ್ಯವಸ್ಥೆಯು ಇರಲಿಲ್ಲ, ಇದು ₹ 2.04 ಕೋಟಿ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ವೆಚ್ಚವಾಗುವಲ್ಲಿ ಹಾಗೂ ಗುತ್ತಿಗೆದಾರರುಗಳಿಗೆ ಅಷ್ಟರಮಟ್ಟಿಗೆ ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಪರಿಣಮಿಸಿತು ಎಂಬುದನ್ನು ಮಂಡಳಿಯ ಕ್ರಮವು ಸೂಚಿಸುತ್ತದೆ.

---

[29] 1)ನೆಲಮಂಗಲ ತಾಲೂಕಿನ ಅವ್ವೇರಹಳ್ಳಿ ಕೈಗಾರಿಕಾ ಪ್ರದೇಸ, 2) ಕನಕಪುರ ತಾಲ್ಲೂಕಿನ ಹಾರೋಹಳ್ಳೀ ಕೈಗಾರಿಕಾ ಪ್ರದೇಶ 3ನೇ ಹಂತ, 3) ದೇವನಹಳ್ಳಿಯ ಪ್ಲಾಟುಗಳು 4, 5, ಮತ್ತು 6 ಹೈ ಟೆಕ್, ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಹಾಗೂ 4) ಮುಡಿಪು ಮುಖ್ಯ ರಸ್ತೆಯಿಂದ ಕೆನರಾ ಕೈಗಾರಿಕಾ ಪ್ರದೇಶ 1ನೇ ಹಂತ.

[30] **ಕಾಮಗಾರಿಯ ಹೆಸರು**: ಡಾಂಬರು ಹಾಕುವುದು, ಆರ್‌ಸಿಸಿ ಪಾರ್ಶ್ವ ಚರಂಡಿಗಳು, ಆರ್‌ಸಿಸಿ ಅಡ್ಡ ಚರಂಡಿ ಕಾಮಗಾರಿಗಳು, ಆರ್‌ಸಿಸಿ ಮಳೆನೀರು ಚರಂಡಿ ಮತ್ತು ಎಚ್‌ಡಿಪಿಇ ನೀರು ಸರಬರಾಜು ಕೊಳವೆ ಮಾರ್ಗಗಳನ್ನು ಒಳಗೊಂಡಂತೆ (18ಮೀ/24 ಮೀ/30ಮೀ/32ಮೀ/45ಮೀ) ಅಗಲ ರಸ್ತೆಗಳ ನಿರ್ಮಾಣ.

***ಶಿಫಾರಸು:***

**ತಪ್ಪಿಸಬಹುದಾಗಿದ್ದಂತಹ ಹೆಚ್ಚುವರಿ ವೆಚ್ಚಗಳಿಗೆ ಕಾರಣವಾಗುವಂತೆ ದರಗಳ ಪಟ್ಟಿಯನ್ನು ತಪ್ಪಾಗಿ ಅಳವಡಿಸಿಕೊಂಡು ಅಂದಾಜುಗಳನ್ನು ತಯಾರಿಸಿದ್ದಕ್ಕಾಗಿ ಮಂಡಳಿಯು ಸಂಬಂಧಪಟ್ಟ ಅಧಿಕಾರಿಗಳು/ಸಿಬ್ಬಂದಿಯ ಮೇಲೆ ಜವಾಬ್ದಾರಿ/ಹೊಣೆಗಾರಿಕೆಯನ್ನು ನಿಗದಿಗೊಳಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ. ಅಂದಾಜುಗಳನ್ನು ಅನ್ವಯಗೊಳ್ಳುವಂತಹ ದರಗಳ ಪಟ್ಟಿಯೊಂದಿಗೆ ತಯಾರಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಸೂಕ್ತ ನಿಯಂತ್ರಣಗಳನ್ನು ಸ್ಥಾಪಿಸಬೇಕು.**

**ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ**

## *2.7.* ಅನುದಾನವನ್ನು ನಿಯಮಬಾಹಿರವಾಗಿ ಬಿಡುಗಡೆಗೊಳಿಸಿದ್ದು

**ಒಂದು ಔಪಚಾರಿಕ ಒಡಂಬಡಿಕೆ ಮತ್ತು ಭದ್ರತೆಯನ್ನು ಪಡೆದುಕೊಳ್ಳದೆಯೇ ಸುವರ್ಣ ಕಾಯಕ ಕೌಶಲ್ಯಾಭಿವೃದ್ಧಿ ಯೋಜನೆ ಅಡಿಯಲ್ಲಿ ಕುಂದಾಪುರದ ಮೂಡಲಕಟ್ಟೆ ಇನ್ಸ್‌ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ₹ 1.01 ಕೋಟಿ ಮೊತ್ತದಷ್ಟು ಅನುದಾನವನ್ನು ಬಿಡುಗಡೆಗೊಳಿಸಿದ್ದು ಯೋಜನೆಯ ಮಾರ್ಗಸೂಚಿಗಳ ಉಲ್ಲಂಘನೆಯಾಗಿದ್ದಿತು.**

ಕರ್ನಾಟಕ ಸರ್ಕಾರದ ಕೈಗಾರಿಕಾ ಕಾರ್ಯನೀತಿ 2006–11ರ (2014–19ರಲ್ಲಿ ಪರಿಷ್ಕರಿಸಲಾಗಿರುವುದು) ಅಡಿಯಲ್ಲಿ ಜಾರಿಗೆ ತರಲಾದಂತಹ ಸುವರ್ಣ ಕಾಯಕ ಕೌಶಲ್ಯಾಭಿವೃದ್ಧಿ ಯೋಜನೆಯು (i) ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ನಿರುದ್ಯೋಗಿ ಯುವಕರು ಸ್ವಯಂಉದ್ಯೋಗಗಳನ್ನು ಸೃಷ್ಟಿಸಿಕೊಳ್ಳುವಲ್ಲಿ ಸಾಮರ್ಥ್ಯರಾಗುವುದು/ಸ್ವಾವಲಂಭಿಗಳಾಗುವುದು, (ii) ಕೌಶಲ್ಯಾಭಿವೃದ್ಧಿಯ ಮೂಲಕ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸುವ ಮೂಲಕ ಸಾಮಾಜಿಕ ಆರ್ಥಿಕ ಅಭಿವೃದ್ಧಿ; ಹಾಗೂ (iii) ನಿರುದ್ಯೋಗಿ ಯುವಕರಿಗೆ ಆಧುನಿಕ ಕೌಶಲ್ಯ ತರಬೇತಿ ನೀಡುವ ಮೂಲಕ ಕೈಗಾರಿಕೆಗಳಿಗೆ ಅಗತ್ಯವಿರುವ ಸಿಬ್ಬಂದಿಯನ್ನು ಒದಗಿಸುವುದು, ಇವುಗಳತ್ತ ಗುರಿಯಾಗಿಸಿಕೊಂಡಿರುವುದು. ತರಬೇತಿ ನೀಡುವ ಸಲುವಾಗಿ ಸೂಕ್ತ ಕಟ್ಟಡವನ್ನು ಹೊಂದಿರುವಂತಹ ಪ್ರಸ್ತುತ ಇರುವಂತಹ ಸರ್ಕಾರೇತರ ತರಬೇತಿ ಸಂಸ್ಥೆಗಳಿಗೆ/ಕೈಗಾರಿಕಾ ಸಂಘಗಳಿಗೆ/ ಖಾಸಗಿ ವಲಯದ ದೊಡ್ಡ ಪ್ರಮಾಣದ ಕೈಗಾರಿಕೆಗಳಿಗೆ ಅಗತ್ಯವಿರುವ ಯಂತ್ರಗಳು/ಉಪಕರಣಗಳ ಮೌಲ್ಯದ ಶೇಕಡ 75ರಷ್ಟರವರೆಗೆ, ಆದರೆ ₹ 200 ಲಕ್ಷ ಮೊತ್ತದ ಗರಿಷ್ಠ ಮಿತಿಯ ಷರತ್ತಿಗೆ ಒಳಪಟ್ಟಂತೆ ಅನುದಾನ ಮಂಜೂರು ಮಾಡುವುದನ್ನು ಯೋಜನೆಯ ಮಾರ್ಗಸೂಚಿಗಳು[31] ಚಿಂತಿಸಿರುವವು.

ಮಂಜೂರಾತಿ ಮಾಡಲಾದಂತಹ ಅನುದಾನದ ಶೇಕಡಾ 75ರಷ್ಟು ಮೊತ್ತವನ್ನು ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸಿರುವ ಸಂಸ್ಥೆಯು ತನ್ನ ಮಾಲೀಕತ್ವದಲ್ಲಿರುವಂತಹ ಕಟ್ಟಡವನ್ನು ಇಲಾಖೆಯ ಪರವಾಗಿ 10 ವರ್ಷಗಳ ಅವಧಿಗೆ ಅಡಮಾನ ಪತ್ರವನ್ನು ನೋಂದಣಿ ಮಾಡಿಕೊಟ್ಟನಂತರ ಬಿಡುಗಡೆಗೊಳಿಸಬೇಕಿದ್ದಿತು. ಉಳಿದ ಶೇಕಡಾ 25ರಷ್ಟನ್ನು ಯಂತ್ರೋಪಕರಣಗಳನ್ನು ಖರೀದಿಸಿ ಹಾಗೂ ಸ್ಥಾಪಿಸಿದ ನಂತರ ಬಿಡುಗಡೆಗೊಳಿಸಬೇಕಿದ್ದಿತು. ಮುಂದುವರೆದು, ಯೋಜನೆಯನ್ನು ಕಾರ್ಯಾಚರಣೆಗೊಳಿಸುವುದಕ್ಕೆ ಸಂಬಂಧಿತ ಮಾರ್ಗಸೂಚಿಗಳ ಅನುಸಾರ, ಯೋಜನೆಯ ಪ್ರಸ್ತಾವನೆಯನ್ನು ಸಲ್ಲಿಸಿರುವ ಸಂಸ್ಥೆಯು ಇಲಾಖೆಯೊಂದಿಗೆ ಒಂದು ಪರಸ್ಪರ ತಿಳಿವಳಿಕೆ ಪತ್ರವನ್ನು (ಎಂಒಯು) ಮಾಡಿಕೊಳ್ಳಬೇಕಿದ್ದಿತು ಹಾಗೂ ಬಿಡುಗಡೆಗೊಳಿಸಲಾದ ಅನುದಾನದ ಮೌಲ್ಯಕ್ಕೆ ಸಮನಾದ ಮೊತ್ತಕ್ಕೆ ಬ್ಯಾಂಕು ಖಾತರಿಯನ್ನು ಸಲ್ಲಿಸಬೇಕಿದ್ದಿತು. ಪರಸ್ಪರ ತಿಳಿವಳಿಕೆ ಪತ್ರದಲ್ಲಿ (ಎಂಒಯು) ನಿರ್ದಿಷ್ಟಪಡಿಸಲಾಗಿರುವ ಕಾಲಾವಧಿಯ ಒಳಗೆ ತರಬೇತಿ ಕೇಂದ್ರವನ್ನು ಸ್ಥಾಪಿಸುವಲ್ಲಿ ವಿಫಲಗೊಂಡಲ್ಲಿ, ಪರಸ್ಪರ ತಿಳಿವಳಿಕೆ ಪತ್ರದಲ್ಲಿ (ಎಂಒಯು) ನಿರ್ದಿಷ್ಟಪಡಿಸಲಾಗಿರುವ ದರದ ಬಡ್ಡಿಯೊಂದಿಗೆ ಅನುದಾನದ ಮೊತ್ತವನ್ನು ಇಲಾಖೆಗೆ ಮರುಪಾವತಿಸತಕ್ಕದ್ದು ಹಾಗೂ ಇದಕ್ಕೆ ತಪ್ಪಿದಲ್ಲಿ ಬ್ಯಾಂಕು ಖಾತರಿಯನ್ನು ನಗದೀಕರಣಗೊಳಿಸಿಕೊಳ್ಳಬೇಕಿದ್ದಿತು.

[31] ಡಿಸೆಂಬರ್ 2014ರಲ್ಲಿ ನೀಡಲಾಗಿರುವ ಕೈಗಾರಿಕಾ ಕಾರ್ಯನೀತಿ2014–19ರ ಅನುಸಾರ.

ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯು (ಇಲಾಖೆ) ಈ ಕೆಳಗೆ ಚರ್ಚಿಸಿರುವಂತೆ ಯೋಜನೆ/ಕಾರ್ಯಾಚರಣೆಗಳಿಗೆ ಸಂಬಂಧಿತ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾಗಿರುವ ಷರತ್ತುಗಳನ್ನು ಉಲ್ಲಂಘಿಸಿ ಓರ್ವ ಅರ್ಜಿದಾರರಿಗೆ ₹ 1.01 ಕೋಟಿ ಮೊತ್ತದಷ್ಟು ಅನುದಾನವನ್ನು ಬಿಡುಗಡೆಗೊಳಿಸಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಫೆಬ್ರವರಿ 2021).

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿನ ಒಂದು ನೋಂದಾಯಿತ ಟ್ರಸ್ಟಾದ ಮೂಡಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ (ಎಂಐಟಿ) ಈ ಯೋಜನೆಯ ಅಡಿಯಲ್ಲಿ ₹ 6.55 ಕೋಟಿ ಅಂದಾಜು ವೆಚ್ಚದಲ್ಲಿ ಕೌಶಲ್ಯ ತರಬೇತಿ ಕೇಂದ್ರವನ್ನು ಸ್ಥಾಪಿಸುವದಕ್ಕಾಗಿ ಅನುದಾನ ಕೋರುತ್ತ ಅರ್ಜಿಯನ್ನು ಸಲ್ಲಿಸಿತು (ಫೆಬ್ರವರಿ 2017). ಯೋಜನಾ ವೆಚ್ಚವು ತರಬೇತಿ ಕೇಂದ್ರಕ್ಕೆ ಅಗತ್ಯವಿದ್ದಂತಹ ಯಂತ್ರಗಳ ಖರೀದಿಯ ಕಡೆಗೆ ₹ 3.17ಕೋಟಿ ಮೊತ್ತವನ್ನು ಒಳಗೊಂಡಿದ್ದಿತು. ಪ್ರಸ್ತಾವನೆಗಳನ್ನು ಆಯ್ಕೆ ಸಮಿತಿಯು[32] ಪರಿಗಣಿಸಿತು ಹಾಗೂ ₹ 1.58 ಕೋಟಿ ಮೊತ್ತದಷ್ಟು ಅಂದರೆ ಯಂತ್ರಗಳ ಮೌಲ್ಯದ ಶೇಕಡಾ 50ರಷ್ಟರ ಒಟ್ಟಾರೆ ಅನುದಾನದ ಮಂಜೂರಾತಿಗೆ ಶಿಫಾರಸು ಮಾಡಿತು (ಡಿಸೆಂಬರ್ 2017). ಅದರಂತೆಯೇ, ಇಲಾಖೆಯು ಎಂಐಟಿಗೆ ₹ 1.58 ಕೋಟಿ ಮೊತ್ತದಷ್ಟು ಅನುದಾನವನ್ನು ಮಂಜೂರು ಮಾಡಿತು (ಫೆಬ್ರವರಿ 2018) ಹಾಗೂ ₹ 1.01 ಕೋಟಿ ಮೊತ್ತದಷ್ಟು ಮೊದಲ ಕಂತಿನ ಅನುದಾನವನ್ನು ಬಿಡುಗಡೆಗೊಳಿಸಿತು (ಮಾರ್ಚ್ 2018). ಪರಸ್ಪರ ತಿಳಿವಳಿಕೆ ಪತ್ರದಲ್ಲಿ ನಿರ್ದಿಷ್ಟಪಡಿಸಲಾಗಿರುವ ಅವಧಿಯ ಒಳಗೆ ತರಬೇತಿ ಕೇಂದ್ರವನ್ನು ಸ್ಥಾಪಿಸುವಲ್ಲಿ ವಿಫಲಗೊಂಡಲ್ಲಿ ಅನುದಾನವನ್ನು ವರ್ಷ ಒಂದಕ್ಕೆ ಶೇಕಡಾ 6ರ ದರದಲ್ಲಿ ಬಡ್ಡಿಯೊಂದಿಗೆ ಇಲಾಖೆಗೆ ಮರುಪಾವತಿಸತಕ್ಕದ್ದು ಹಾಗೂ ಮರುಪಾವತಿಗೆ ತಪ್ಪಿತಸ್ತಗೊಂಡಲ್ಲಿ ಬ್ಯಾಂಕು ಖಾತರಿಯನ್ನು ನಗದೀಕರಿಸಿಕೊಳ್ಳಲಾಗುವುದು ಎಂಬುದಾಗಿ ಮಂಜೂರಾತಿ/ಅನುದಾನ ಬಿಡುಗಡೆ ಆದೇಶವು ನಿರ್ದಿಷ್ಟಪಡಿಸಿದ್ದಿತು. ಮೂಡಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ತರಬೇತಿ ಕೇಂದ್ರದ ಹೆಸರಿನಲ್ಲಿ ಒಂದು ಪ್ರತ್ಯೇಕ ಬ್ಯಾಂಕು ಖಾತೆಯನ್ನು ತೆರೆಯುವ ಅಗತ್ಯತೆಯಿದ್ದಿತು.

ಆಯುಕ್ತರು (ಕೈಗಾರಿಕಾ ಅಭಿವೃದ್ಧಿ) ಮತ್ತು ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಇವರು ಮೂಡಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಮೊದಲ ಕಂತಿನ ಕಡೆಗೆ ₹ 1.01 ಕೋಟಿ ಮೊತದ ಅನುದಾನವನ್ನು ಬಿಡುಗಡೆಗೊಳಿಸಿದರು (ಮಾರ್ಚ್ 2018) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದಾಗ್ಯೂ, ಮೂಡಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯೊಂದಿಗೆ ಪರಸ್ಪರ ತಿಳಿವಳಿಕೆ ಪತ್ರವನ್ನು (ಎಂಒಯು) ಮಾಡಿಕೊಂಡಿದ್ದಕ್ಕೆ, ಕಟ್ಟಡದ ನೋಂದಣಿ ಮಾಡಿಸಲ್ಪಟ್ಟ ಅಡಮಾನ ಪತ್ರವನ್ನು ಪಡೆದುಕೊಂಡಿದ್ದಕ್ಕೆ ಹಾಗೂ ಬಿಡುಗಡೆಗೊಳಿಸಲಾದ ಅನುದಾನದ ಮೊತ್ತಕ್ಕೆ ಸಮನಾದ ಮೊತ್ತಕ್ಕೆ ಬ್ಯಾಂಕು ಖಾತರಿಯನ್ನು ಪಡೆದುಕೊಂಡಿದ್ದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳು ದಾಖಲೆಗಳಲ್ಲಿ ಇರಲಿಲ್ಲ. ಅಲ್ಲದೆಯೇ, ಮೂಡಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ತರಬೇತಿ ಕೇಂದ್ರದ ಹೆಸರಿನಲ್ಲಿ ಒಂದು ಪ್ರತ್ಯೇಕ ಬ್ಯಾಂಕು ಖಾತೆಯನ್ನು ತೆರೆದಿರುವುದಕ್ಕೆ ಸಂಬಂಧಿಸಿದಂತೆಯೂ ಯಾವುದೇ ದಾಖಲೆಗಳೂ ಇರಲಿಲ್ಲ.

ಅನುದಾನವನ್ನು ಬಿಡುಗಡೆಗೊಳಿಸಿದ ದಿನಾಂಕದಿಂದ ನಾಲ್ಕು ವರ್ಷಗಳು ಕಳೆದನಂತರವೂ ಈ ದಿನಾಂಕದವರೆವಿಗೂ (ಮಾರ್ಚ್ 2022) ಮೂಡಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯು ತರಬೇತಿ ಕೇಂದ್ರವನ್ನು ಸ್ಥಾಪಿಸಿರಲಿಲ್ಲವಾದರೂ ಹಾಗೂ ಅಗತ್ಯ ದಾಖಲೆಗಳನ್ನು (ಪರಸ್ಪರ ತಿಳಿವಳಿಕೆ ಪತ್ರ, ಅಡಮಾನ ಪತ್ರ, ಬ್ಯಾಂಕು ಖಾತರಿ, ಯಂತ್ರಗಳ ಖರೀದಿಗೆ ಸಂಬಂಧಿಸಿದಂತೆ ಬಿಲ್ಲುಗಳು, ಇತ್ಯಾದಿ) ಒದಗಿಸುವಂತೆ ಮಾಡಲಾಗಿದ್ದ ಕೋರಿಕೆಗಳನ್ನು (ಜೂನ್ 2020 /ಏಪ್ರಿಲ್ 2021) ಹೊರತುಪಡಿಸಿದಂತೆ ಅನುದಾನದ ಮೊತ್ತದ ವಸೂಲಾತಿಗಾಗಿ ಇಲಾಖೆಯು ಯಾವುದೇ ಕ್ರಮಗಳನ್ನೂ ತೆಗೆದುಕೊಂಡಿರಲಿಲ್ಲ ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

ಆದ್ದರಿಂದ, ಅನುದಾನದ ಮಂಜೂರಾತಿಗೆ ಹೊಂದಿಕೊಂಡಂತಿದ್ದ ಷರತ್ತುಗಳನ್ನು ಪೂರೈಸಿರುವುದನ್ನು ಖಚಿತಪಡಿಸಿಕೊಳ್ಳದೆಯೇ ಅನುದಾನವನ್ನು ಬಿಡುಗಡೆಗೊಳಿಸಿದ ಆಯುಕ್ತರು (ಕೈಗಾರಿಕಾ ಅಭಿವೃದ್ಧಿ)

[32] ಸಂಸ್ಥೆಗಳನ್ನು ಆಯ್ಕೆ ಮಾಡುವುದಕ್ಕೆ ಮತ್ತು ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುವುದನ್ನು ಮೇಲ್ವಿಚಾರಣೆ ಮಾಡುವುದಕ್ಕೆ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಆಯುಕ್ತರು ಮತ್ತು ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾದ ಒಂದು ರಾಜ್ಯಮಟ್ಟದ ಸಮಿತಿ.

ಮತ್ತು ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಇವರ ಕ್ರಮವು ಅನುದಾನವನ್ನು ಅಕ್ರಮವಾಗಿ/ನಿಯಮಬಾಹಿರವಾಗಿ ಬಿಡುಗಡೆಗೊಳಿಸುವಲ್ಲಿ ಹಾಗೂ ಮೂಡಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಅರ್ಹತೆಯಿಲ್ಲದ ಲಾಭವನ್ನು ಮಾಡಿಕೊಟ್ಟಂತಾಗಿದ್ದಿತು. ಈ ರೀತಿಯಾಗಿ, ಇಲಾಖೆಯು ₹ 1.01 ಕೋಟಿ ಮೊತ್ತದಷ್ಟು ಅನುದಾನವನ್ನು ಒಂದು ಖಾಸಗಿ ಸಂಸ್ಥೆಯು ದುರುಪಯೋಗಪಡಿಸಿಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದಿತು. ಈ ನಿಯಮಬಾಹಿರ ಕ್ರಮವು ಸಂಬಂಧಿತ ಅಧಿಕಾರಿಗಳು/ಸಿಬ್ಬಂದಿಯ ಮೇಲೆ ಜವಾಬ್ದಾರಿಯನ್ನು/ಉತ್ತರದಾಯಿತ್ವವನ್ನು ನಿಗದಿಪಡಿಸುವ ಅಗತ್ಯತೆಯನ್ನು ಹೊಂದಿರುತ್ತದೆ.

ಸಂಸ್ಥೆಯಿಂದ ಕಟ್ಟಡದ ಅಡಮಾನ ಪತ್ರವನ್ನು ಪಡೆದುಕೊಳ್ಳದೆಯೇ ಅನುದಾನದ ಮೊತ್ತವನ್ನು ಬಿಡುಗಡೆಗೊಳಿಸಲಾಗಿದ್ದಿತು ಎಂಬುದಾಗಿ ಸರ್ಕಾರವು ತಿಳಿಸಿತು (ಮಾರ್ಚ್ 2022). ಮಾರ್ಗಸೂಚಿಗಳ ಅನುಸಾರ ದಾಖಲೆಗಳನ್ನು ಸಲ್ಲಿಸುವಂತೆ ಹಾಗೂ ಮೊತ್ತವನ್ನು ಬಡ್ಡಿಯ ಜೊತೆಯಲ್ಲಿ ಮರುಪಾವತಿಸುವಂತೆ 2018ರಿಂದಲೂ ಸಂಸ್ಥೆಗೆ ಪುನಃಪುನಃ ಪತ್ರವ್ಯವಹಾರಗಳನ್ನು ಮಾಡಲಾಗಿದ್ದಿತು ಎಂಬುದಾಗಿಯೂ ತಿಳಿಸಿತು. ಆದಾಗ್ಯೂ ಅನುದಾನದ ಮೊತ್ತವನ್ನು ಯಾವ ಕಾರಣಗಳಿಂದಾಗಿ ಯೋಜನೆಯ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಮೂಡಲಕಟ್ಟೆ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಬಿಡುಗಡೆಗೊಳಿಸಲಾಗಿದ್ದಿತು ಹಾಗೂ ಎಂಐಟಿ ಯಿಂದ ಮೊತ್ತವನ್ನು ವಸೂಲಿ ಮಾಡಲು ಪ್ರಸ್ತಾಪಿಸಿರುವ ಕ್ರಮದ ಬಗ್ಗೆ ಉತ್ತರವು ಮೌನವಾಗಿದ್ದಿತು.

***ಶಿಫಾರಸು:***

**ಅನುದಾನದ ಮಂಜೂರಾತಿಗೆ ಹೊಂದಿಕೊಂಡಂತಿದ್ದಹ ಷರತ್ತುಗಳನ್ನು ಉಲ್ಲಂಘಿಸಿ ಅನುದಾನವನ್ನು ನಿಯಮಬಾಹಿರವಾಗಿ ಬಿಡುಗಡೆಗೊಳಿಸುವಲ್ಲಿ ಕಾರಣರಾಗಿರುವಂತಹ ಅಧಿಕಾರಿಗಳು/ಸಿಬ್ಬಂದಿಯ ಮೇಲೆ ಜವಾಬ್ದಾರಿಯನ್ನು/ಉತ್ತರದಾಯಿತ್ವವನ್ನು ನಿಗದಿಗೊಳಿಸಬೇಕು ಹಾಗೂ ಮೊತ್ತವನ್ನು ವಸೂಲಿ ಮಾಡುವ ಕ್ರಮವನ್ನು ಪ್ರಾರಂಭಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು.**

**ಲೋಕೋಪಯೋಗಿ ಇಲಾಖೆ**

## *2.8. ಗುತ್ತಿಗೆದಾರರಿಗೆ ಅಧಿಕ ಪ್ರಮಾಣದಲ್ಲಿ ಪಾವತಿಗಳನ್ನು ಮಾಡಿದ್ದುದು*

**ಮೆದು ಕಲ್ಲು ಬಂಡೆಯಿದ್ದ ಪ್ರದೇಶದಲ್ಲಿ ಯಾಂತ್ರಿಕ ಪದ್ಧತಿಯಲ್ಲಿ ಅಗೆತವನ್ನು ಕೈಗೊಂಡಿದ್ದರೂ ನಿಯಮ ಬಾಹಿರವಾಗಿ ಮಾನವ ನಿಯೋಜಿತ ರೀತಿಗೆ ಅನ್ವಯಿಸುವ ದರಗಳಲ್ಲಿ ಪಾವತಿ ಮಾಡಿದ್ದರಿಂದ ₹ 1.56 ಕೋಟಿ ಹೆಚ್ಚುವರಿಯಾಗಿ ಪಾವತಿಸುವಂತಾಯಿತು.**

ಸಾಧಾರಣ/ಮೆದು ಕಲ್ಲುಬಂಡೆಯಲ್ಲಿ ಅಗೆತವನ್ನು ಕೈಯಾರೆ, ಯಾಂತ್ರಿಕವಾಗಿ ಅಥವಾ ಸ್ಫೋಟಕಗಳನ್ನು ಉಪಯೋಗಿಸುವ ಮೂಲಕ ಮಾಡಬಹುದು ಹಾಗೂ ನಿರ್ಮಾಣ ಕಾಮಗಾರಿಗಳಲ್ಲಿ ಯೋಜನೆಯ ಸ್ಥಳ, ಒಳಗೊಂಡಿರುವ ಅಗೆತದ ಪರಿಮಾಣ ಅಥವಾ ಅಗೆತ ಮಾಡಬೇಕಾದ ಪ್ರದೇಶದ ಸುತ್ತಳತೆ[33] ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಂಡನಂತರ ಒಂದು ನಿರ್ದಿಷ್ಟ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ದರಗಳ ಪಟ್ಟಿಯು ಪ್ರತಿಯೊಂದು ಪದ್ಧತಿಯ ಅಗೆತಕ್ಕೆ ದರಗಳನ್ನು ಒಳಗೊಂಡಿರುತ್ತದೆ. ಅಗೆತದ ಪರಿಮಾಣವು ಅತ್ಯಲ್ಪವಾಗಿದ್ದಲ್ಲಿ ಅಥವಾ ಯಂತ್ರಗಳನ್ನು ಉಪಯೋಗಿಸಲು ಸಾಧ್ಯವಿರದ ಸಂದರ್ಭಗಳಲ್ಲಿ/ಸ್ಥಳಗಳಲ್ಲಿ ಅಥವಾ ಸುರಕ್ಷತೆಯ ಕಾರಣದಿಂದ ಸ್ಫೋಟಕಗಳನ್ನು ಉಪಯೋಗಿಸಲು ಸಾಧ್ಯವಿರದಿದ್ದಲ್ಲಿ ಕೈಯಾರೆ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗುವುದು.

[33] ಟಿ.ಜಿ. ರಾಧಾಕೃಷ್ಣ ಸಮಿತಿ ವರದಿಯ ಅಧ್ಯಾಯ 1ರ ಕಂಡಿಕೆ 7.6.1 – ಕಟ್ಟಡಗಳು, ರಸ್ತೆಗಳು ಮತ್ತು ಸೇತುವೆಗಳಿಗಾಗಿ ನಿರ್ದಿಷ್ಟ ನಿರೂಪಣೆಗಳು ಮತ್ತು ದರ ವಿಶ್ಲೇಷಣೆಗಳನ್ನು ತಯಾರಿಸುವ ಸಲುವಾಗಿ ಸರ್ಕಾರವು ಸಮಿತಿಯನ್ನು ರಚಿಸಿದ್ದಿತು (ಆಗಸ್ಟ್ 1999).

ಕಾರ್ಯನಿರ್ವಾಹಕ ಇಂಜಿನಿಯರ್ ನಂ.1 ಕಟ್ಟಡ ವಿಭಾಗ, ಬೆಂಗಳೂರು ಇವರು ಬೆಂಗಳೂರಿನ ಕುಮಾರ ಕೃಪಾ ಅತಿಥಿ ಗೃಹದ ಹೆಚ್ಚುವರಿ ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಮೆ॥ ಶಿರ್ಕೆ ಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್ ರವರಿಗೆ ₹ 70.49 ಕೋಟಿ[34] ಮೊತ್ತಕ್ಕೆ ವಹಿಸಿದ್ದು, ಈ ಕೆಲಸದ ಟೆಂಡರ್ ವಿವಿಧ ಸ್ತರಗಳಲ್ಲಿ 16,08422 ಘನ ಮೀಟರ್ ಅಡಿಪಾಯದ ಅಗೆತದ ಪ್ರಮಾಣವನ್ನು ಒಳಗೊಂಡಿತ್ತು. ಮುಖ್ಯ ವಾಸ್ತುಶಿಲ್ಪಿಯವರು ನೀಡಿದ (2016) ಪರಿಷ್ಕೃತ ವಿನ್ಯಾಸದ ಅನುಸಾರ ಕಟ್ಟಡದ ಸ್ಥಳವನ್ನು ಸ್ವಲ್ಪಮಟ್ಟಿಗೆ ಸ್ಥಳಾಂತರಿಸಲಾಯಿತು, ಈ ಸ್ಥಳಾಂತರವು ಕಾಮಗಾರಿಯು ಪ್ರಗತಿಯಲ್ಲಿರುವ ವೇಳೆಯಲ್ಲಿ ಮಣ್ಣಿನಲ್ಲಿರುವಂತಹ ನಿರ್ಮಾಣದ ಹೊರೆಯನ್ನು ತಡೆದುಕೊಳ್ಳುವಂತಹ/ ಬೆಂಬಲಿಸುವಂತಹ ಸಾಮರ್ಥ್ಯವನ್ನು (ಎಸ್‌ಬಿಸಿ) ಖಚಿತಪಡಿಸಿಕೊಳ್ಳುವ ಅಗತ್ಯತೆಯನ್ನು ಉಂಟು ಮಾಡಿತು. ಮಣ್ಣಿನಲ್ಲಿರುವಂತಹ ನಿರ್ಮಾಣದ ಹೊರೆಯನ್ನು ತಡೆದುಕೊಳ್ಳುವಂತಹ/ಬೆಂಬಲಿಸುವಂತಹ ಸಾಮರ್ಥ್ಯವನ್ನು (ಎಸ್‌ಬಿಸಿ) ಅಪೇಕ್ಷಿತ ಪ್ರಮಾಣದಲ್ಲಿ ಪಡೆದುಕೊಳ್ಳುವ ಸಲುವಾಗಿ ಅಗೆತದ ಆಳವನ್ನು ಹೆಚ್ಚಳಗೊಳಿಸಬೇಕಾಯಿತು ಹಾಗೂ ಅಡಿಪಾಯಕ್ಕಾಗಿ ಭೂಮಿಯನ್ನು ಅಗೆಯುವ ವೇಳೆಯಲ್ಲಿ ಮೆದು ಕಲ್ಲುಬಂಡೆಯನ್ನು ಎದುರಿಸಲಾಯಿತು. ಈ ಐಟಂ ಅನ್ನು ಟೆಂಡರಿನಲ್ಲಿ ಅನುವು ಮಾಡಿರಲಿಲ್ಲವಾದ್ದರಿಂದ ಮೆದು ಕಲ್ಲುಬಂಡೆಯಲ್ಲಿನ ಭೂ ಅಗೆತವನ್ನು ಒಂದು **"ಹೆಚ್ಚುವರಿ ಐಟಂ"** ಎಂಬುದಾಗಿ ಪರಿಗಣಿಸಲಾಗಿದ್ದಿತು ಹಾಗೂ ಘನ ಮೀಟರು ಒಂದಕ್ಕೆ ₹ 1093.89ರಷ್ಟಕ್ಕೆ (ಕೈಯಾರೆ ಅಗೆತದ ಮಾದರಿಯ ದರ) ಮುಖ್ಯ ಇಂಜಿನಿಯರ್‌ರವರು, ಕಟ್ಟಡ ವಿಭಾಗ, ಇವರು ಅನುಮೋದಿಸಿದ್ದರು. ಅಗೆತ ಮಾಡಲಾದ 16084.22 ಘನ ಮೀಟರುಗಳಷ್ಟು ಪರಿಮಾಣಕ್ಕಾಗಿ ಗುತ್ತಿಗೆದಾರರ ಸಂಸ್ಥೆಗೆ ₹ 1.56 ಕೋಟಿ ಮೊತ್ತವನ್ನು ಪಾವತಿಸಲಾಗಿದ್ದಿತು.

ದಾಖಲೆಗಳ ಲೆಕ್ಕಪರಿಶೋಧನೆಯು (ಅಕ್ಟೋಬರ್ 2020), ಮೆದುಕಲ್ಲಿನಲ್ಲಿ ಕೈಯಾರೆ ಅಗೆಯುವ ಅಗೆತವನ್ನು ಕೆಳಕಂಡ ಕಾರಣಗಳಿಗಾಗಿ ಸೂಕ್ತವಾಗಿರಲಿಲ್ಲ ಎಂದು ತಿಳಿಸಿತು.

1. ಗುತ್ತಿಗೆದಾರರು ಯಾಂತ್ರಿಕ ಕ್ರಷರುಗಳನ್ನು ಬಳಸಿ ಮೆದುಕಲ್ಲಿನ ಅಗೆತವನ್ನು ಮಾಡಿದ್ದರು ಹಾಗೂ ಕಾಮಗಾರಿಯ ಕಾರ್ಯಗತಗೊಳಿಸುವಲ್ಲಿ ಅಧಿಕಾರ ಹೊಂದಿದ್ದಂತಹ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಕಾಮಗಾರಿಯು ಪ್ರಗತಿಯಲ್ಲಿರುವ ವೇಳೆಯಲ್ಲಿ ಛಾಯಾಚಿತ್ರಗಳನ್ನು ತೆಗೆದಿದ್ದರು (ಡಿಸೆಂಬರ್ 2015) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

2. ಮುಖ್ಯ ಇಂಜಿನಿಯರ್‌ರವರು ಕಾಮಗಾರಿಯ ಸ್ಥಳವನ್ನು ಪರಿವೀಕ್ಷಿಸಿ (11ನೇ ಮಾರ್ಚ್ 2016), ಮೆದು ಕಲ್ಲುಬಂಡೆಗಳು ಹಾಗೂ ಗಟ್ಟಿ ಕಲ್ಲುಬಂಡೆಗಳು ಮಣ್ಣಿನಲ್ಲಿ ಸಮ್ಮಿಶ್ರಗೊಂಡಿರುವುದನ್ನು ಗಮನಿಸಿದರು. ಲೋಕೋಪಯೋಗಿ ಇಲಾಖೆಯ ಗುಣಮಟ್ಟ ಭರವಸೆ ವಿಭಾಗದಿಂದ ಕಲ್ಲುಬಂಡೆಯ ವರ್ಗೀಕರಣವನ್ನು ಪಡೆದುಕೊಳ್ಳುವಂತೆ ಮುಖ್ಯ ಇಂಜಿನಿಯರ್‌ರವರು ನಿರ್ದೇಶಿಸಿದರು. ಕಾರ್ಯನಿರ್ವಾಹಕ ಇಂಜಿನಿಯರ್‌ರವರು, ಗುಣಮಟ್ಟ ಭರವಸೆ ವಿಭಾಗ, ಬೆಂಗಳೂರು, ಇವರು 14ನೇ ಮಾರ್ಚ್ 2016ರಂದು ಸ್ಥಳ ಪರಿಶೀಲನೆ ಮಾಡಿ ಕಣ್ಣು ಪರೀಕ್ಷೆಯ ಪ್ರಕಾರ ಮೆದುಕಲ್ಲೆಂದು ವರ್ಗೀಕರಿಸಿದ್ದರು.

3. ಕಾಮಗಾರಿಯ ಕಾರ್ಯಗತಗೊಳಿಸುವ ಸಲುವಾಗಿ ಆದೇಶ ನೀಡುವ ಸಮಯದಲ್ಲಿ ಜಾರಿಯಲ್ಲಿರುವಂತಹ ದರಗಳ ಪಟ್ಟಿಯ ಅನುಸಾರದ ದರಗಳ ಆಧಾರದ ಮೇರೆಗೆ **"ಹೆಚ್ಚುವರಿ ಐಟಂಗಳಿಗೆ"** ಪೂರಕ ಅಂದಾಜನ್ನು ತಯಾರಿಸತಕ್ಕದ್ದು ಎಂಬುದಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯ ಸಂಹಿತೆ, 2014ರ ಕಂಡಿಕೆ 184 (7 ಮತ್ತು 8) ನಿರ್ದಿಷ್ಟಪಡಿಸಿರುವುದು, ಆದರೆ ಈ ಪ್ರಕರಣದಲ್ಲಿ ಅದನ್ನು ಮಾಡಿರುವುದಿಲ್ಲ. ಮೆದು ಕಲ್ಲುಬಂಡೆಯಲ್ಲಿ ಅಗೆತವು ಪ್ರಾರಂಭಗೊಂಡ ಮೂರು ತಿಂಗಳುಗಳ ನಂತರ ಕಾರ್ಯನಿರ್ವಾಹಕ ಇಂಜಿನಿಯರ್‌ರವರು ಪೂರಕ ಅಂದಾಜನ್ನು ಸಲ್ಲಿಸಿದರು ಹಾಗೂ ಯಾಂತ್ರಿಕ ಪದ್ಧತಿಯ ಮೂಲಕ ಮೆದು ಕಲ್ಲುಬಂಡೆಯಲ್ಲಿ ಭೂ ಅಗೆತಕ್ಕಾಗಿನ ಯಾಂತ್ರಿಕ

[34] ಪರಿಷ್ಕೃತ ಮೊತ್ತ ₹ 99.45 ಕೋಟಿ.

ಪದ್ಧತಿಗೆ ಅನ್ವಯಗೊಳ್ಳುವ ದರವನ್ನು (ಘನ ಮೀಟರು ಒಂದಕ್ಕೆ ₹ 126.60[35]) ಅಳವಡಿಸಿಕೊಳ್ಳುವುದರ ಬದಲು ಕೈಯಾರೆ ಅಗೆಯುವ ದರವನ್ನು (ಘನ ಮೀಟರು ಒಂದಕ್ಕೆ ₹ 1093.89) ಅಳವಡಿಸಿಕೊಳ್ಳಲಾಗಿದ್ದಿತು. ಗುತ್ತಿಗೆದಾರರು ಮೆದು ಕಲ್ಲುಬಂಡೆಯಲ್ಲಿ ಭೂ ಅಗೆತಕ್ಕಾಗಿ ಯಾಂತ್ರಿಕ ಪದ್ಧತಿಯನ್ನು ಅಳವಡಿಸಿಕೊಂಡಿದ್ದರಾದ್ದರಿಂದ ಇದು ನಿಯಮಬಾಹಿರ ಕ್ರಮವಾಗಿದ್ದಿತು. ದರಗಳನ್ನು ತಪ್ಪಾಗಿ ಅಳವಡಿಸಿಕೊಂಡಿದ್ದುದು ಗುತ್ತಿಗೆದಾರರಿಗೆ ಪಾವತಿಗಳನ್ನು ಅಧಿಕ ಪ್ರಮಾಣದಲ್ಲಿ ಮಾಡುವಲ್ಲಿ ಪರಿಣಮಿಸಿತು.

ಸಾಮಾನ್ಯ ಕಲ್ಲುಬಂಡೆಯು ಮೆದು ಕಲ್ಲುಬಂಡೆಯಾಗಿರುತ್ತದೆ ಎಂಬುದನ್ನು ಒಪ್ಪಿಕೊಳ್ಳುವ ವೇಳೆಯಲ್ಲಿ ಸರ್ಕಾರವು ಈ ಕೆಳಗಿನಂತೆ ಉತ್ತರಿಸಿತು (ಫೆಬ್ರವರಿ 2021):

1. ಭೂಮಿ ಅಗೆತವನ್ನು ಯಾಂತ್ರಿಕ ಪದ್ಧತಿಯಲ್ಲಿ ಮಾಡಲಾಗಿದ್ದಿತು ಎಂಬುದಾಗಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶವು ವಾಸ್ತವಾಂಶದಿಂದ ಕೂಡಿರುವುದಿಲ್ಲ ಹಾಗೂ ಕಾಮಗಾರಿಯನ್ನು ಕಾರ್ಯಗತಗೊಳಿಸುವ ವೇಳೆಯಲ್ಲಿ ಮೆದು ಕಲ್ಲುಬಂಡೆಯನ್ನು ಎದುರಿಸಲಾಯಿತು, ಇದಕ್ಕೆ ಟೆಂಡರಿನಲ್ಲಿ ಅನುವು ಮಾಡಿರುವುದಿಲ್ಲ.

2. ಸಮೀಪದಲ್ಲಿ ಕಟ್ಟಡವು ಇದ್ದಿತಾದ್ದರಿಂದ ಸ್ಫೋಟಕಗಳನ್ನು ಉಪಯೋಗಿಸಿ ಭೂ ಅಗೆತವನ್ನು ಮಾಡಲಾಗಲಿಲ್ಲ. ಆದ್ದರಿಂದ ಕಲ್ಲಿನ ಸ್ವರೂಪದ ಬಗ್ಗೆ ಗುಣಮಟ್ಟ ಭರವಸೆ ವಿಭಾಗ ಬೆಂಗಳೂರು ಇವರಿಂದ ಪ್ರಮಾಣಪತ್ರವನ್ನು ಪಡೆದುಕೊಂಡನಂತರ ಹೆಚ್ಚುವರಿ ಐಟಂಗೆ ಉಳಿ ಕೆಲಸ ಮಾಡುವುದು ಹಾಗೂ ಬೆಣೆಹಾಕುವಿಕೆಯನ್ನು ಸೇರಿಸುವ ಮೂಲಕ ಭೂ ಅಗೆತಕ್ಕಾಗಿ ಮೆದು ಕಲ್ಲುಬಂಡೆಗೆ ದರವನ್ನು ಅಳವಡಿಸಿಕೊಳ್ಳಲಾಯಿತು.

3. ಅಗೆದ ಸಾಮಗ್ರಿಗಳನ್ನು ತುಂಬುವುದಕ್ಕಾಗಿ ಯಂತ್ರಗಳನ್ನು ಉಪಯೋಗಿಸಲಾಗಿದ್ದಿತು. ಮುಖ್ಯ ಇಂಜಿನಿಯರ್ ಮತ್ತು ಕಾರ್ಯಪಾಲಕ ಇಂಜಿನಿಯರ್ ಗುಣ ಭರವಸೆ ವಿಭಾಗ ಇವರ ಅಭಿಪ್ರಾಯಗಳನ್ನು ಪರಿಗಣಿಸದೆ ಲೆಕ್ಕಪರಿಶೋಧನೆಯು ಮೆದು ಕಲ್ಲನ್ನು ಸಾಧಾರಣ ಕಲ್ಲಿಗೆ ಹೋಲಿಸಿದೆ.

ಉತ್ತರವು ಈ ಕೆಳಗಿನ ಕಾರಣಗಳಿಂದ ಸಮರ್ಥನೀಯವಾಗಿರುವುದಿಲ್ಲ:

ಕಾಮಗಾರಿಯ ಕಾರ್ಯಗತಗೊಳಿಸುವಲ್ಲಿ ನೇರವಾಗಿ ಅಧಿಕಾರ ಹೊಂದಿದ್ದಂತಹ ಉಪ–ವಿಭಾಗೀಯ ಅಧಿಕಾರಿಯು ಪ್ರಮಾಣೀಕರಿಸುವಾಗ ಗುತ್ತಿಗೆದಾರರು ಅನುಸರಿಸಿದ ಮಾದರಿಯನ್ನು ಅಂದರೆ ಯಾಂತ್ರಿಕ ಬ್ರೇಕರ್ ಉಪಯೋಗಿಸಿ ಮೆದು ಮಣ್ಣಿನ ಅಗೆತ ಮಾಡಿದ್ದರು.

ಕಾರ್ಯನಿರ್ವಾಹಕ ಇಂಜಿನಿಯರ್‌ರವರು, ಗುಣಮಟ್ಟ ನಿಯಂತ್ರಣ, ಇವರು ತಾವು ನಡೆಸಿದ ಪರೀಕ್ಷಣೆಯ ವೇಳೆಯಲ್ಲಿ ಮೆದು ಕಲ್ಲುಬಂಡೆಯನ್ನು ಸ್ಫೋಟಕಗಳಿಂದ ತೆಗೆಯಬಹುದು ಅಥವಾ ಕ್ರೋ ಬಾರುಗಳಿಂದ ವಿಭಜಿಸಬಹುದು ಹಾಗೂ ಅಲ್ಲದೆಯೇ ಒಣ ಸ್ಥಿತಿಯಲ್ಲಿರುವಂತಹ ಯಾವುದೇ ಕಲ್ಲು ಬಂಡೆಯು ಗಟ್ಟಿಯಾಗಿರಬಹುದು ಹಾಗೂ ಸ್ಫೋಟಕಗೊಳಿಸುವ ಅಗತ್ಯತೆಯನ್ನು ಹೊಂದಬಹುದು, ತೇವವಾದಾಗ ಮೆದುವಾದಾಗ ಸ್ಫೋಟಕಗಳನ್ನು ಉಪಯೋಗಿಸದೆಯೇ ಇತರೆ ಪದ್ಧತಿಗಳ ಮೂಲಕ ನಿರ್ವಹಿಸಬಹುದು ಎಂಬುದಾಗಿ ಮಾತ್ರ ತಿಳಿಸಿದ್ದರು. ಇದನ್ನೇ ಮತ್ತೊಂದು ರೀತಿಯಲ್ಲಿ ತಿಳಿಸುವುದಾದರೆ, ಕಾರ್ಯನಿರ್ವಾಹಕ ಇಂಜಿನಿಯರ್, ಗುಣಮಟ್ಟ ಭರವಸೆ, ಇವರು ಮೆದು ಕಲ್ಲುಬಂಡೆಯಲ್ಲಿ ಯಾವ ಮೂರು ಮಾದರಿಗಳಲ್ಲಿ ಭೂ ಅಗೆತ ಮಾಡಬಹುದು ಎಂಬುದರ ಬಗ್ಗೆ ಮಾತ್ರ ತಿಳಿಸಿರುವರೇ ಹೊರತು ಈ ಪ್ರಕರಣದಲ್ಲಿ ಮೆದು ಕಲ್ಲುಬಂಡೆಯಲ್ಲಿ ಕೈಯಿಂದ ಮಾಡಲಾಗುವ ಪದ್ಧತಿಯ ಮೂಲಕ ಭೂ ಅಗೆತವನ್ನು ಮಾಡತಕ್ಕದ್ದು ಎಂಬುದಾಗಿ ನಿರ್ದೇಶಿಸಿರುವುದಿಲ್ಲ/

[35] ಮೂಲ ದರ = ಘನ ಮೀಟರು ಒಂದಕ್ಕೆ ₹ 53 (ದರಗಳ ಪಟ್ಟಿ ಪುಟ ಸಂಖ್ಯೆ 7 ಐಟಂ 2.23.2) + ಹೆಚ್ಚುವರಿ ಸಾಗಾಣಿಕೆ ವೆಚ್ಚ ಘನ ಮೀಟರು ಒಂದಕ್ಕೆ ₹ 48.64 (ಮೂಲ ದರದಲ್ಲಿ 1 ಕಿಮೀ ಸೇರಿರುವುದರಿಂದ 19 ಕಿಮೀಗಳಿಗೆ) + 6% ಪ್ರದೇಶಕ್ಕಾಗಿ ಹೆಚ್ಚಳ (₹ 6.10) ಹಾಗೂ 17.51% ಟೆಂಡರು ಪ್ರೀಮಿಯಂ (₹ 18.86) – ಯಾಂತ್ರಿಕ ಅಗೆತ ದರದಲ್ಲಿ ತುಂಬುವಿಕೆ ಹಾಗೂ ಹೊರಹಾಕುವಿಕೆ ವೆಚ್ಚಗಳು ಒಳಸೇರ್ಪಡೆಗೊಂಡಿರುತ್ತವೆಯಾದ್ದರಿಂದ ತುಂಬುವಿಕೆ ಹಾಗೂ ಹೊರಹಾಕುವಿಕೆ ವೆಚ್ಚಗಳನ್ನು ಪ್ರತ್ಯೇಕವಾಗಿ ಸೇರಿಸಬೇಕಾಗಿರುವುದಿಲ್ಲ.

ತಿಳಿಸಿರುವುದಿಲ್ಲ. ಯಂತ್ರಗಳನ್ನು ಉಪಯೋಗಿಸಿ ಸಾಮಗ್ರಿಗಳನ್ನು ತುಂಬುವುದಕ್ಕೆ ಹಾಗೂ ಸಾಗಾಣಿಕೆಗೆ ಸಂಬಂಧಿತ ವೆಚ್ಚಗಳನ್ನು ಪಾವತಿಸಬೇಕಾದ ದರಗಳಲ್ಲಿ ಸೇರ್ಪಡೆಗೊಳಿಸಲಾಗಿರುವುದು ಹಾಗೂ ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಯಾವುದೇ ಆಕ್ಷೇಪಣೆಗಳನ್ನು ಮಾಡಿರುವುದಿಲ್ಲ.

ಈ ರೀತಿಯಾಗಿ, ಪಾವತಿಸಲಾದ ದರವು (ಘಮೀ ಒಂದಕ್ಕೆ ₹ 1,093.89) ಅರ್ಹ ದರಗಳಿಗಿಂತ (ಘಮೀ ಒಂದಕ್ಕೆ ₹ 126.60) ಅಧಿಕವಾಗಿದ್ದಿತು, ಇದರ ಪರಿಣಾಮವಾಗಿ ಗುತ್ತಿಗೆದಾರರಿಗೆ ₹ 1.56[36] ಕೋಟಿ ಮೊತ್ತದಷ್ಟು ಅಧಿಕವಾಗಿ ಪಾವತಿಯನ್ನು ಮಾಡಲಾಯಿತು.

***ಶಿಫಾರಸು:***

**ಅಧಿಕ ಪ್ರಮಾಣದಲ್ಲಿ ಮಾಡಲಾಗಿರುವ ಪಾವತಿಗಳನ್ನು ವಸೂಲಾತಿ ಮಾಡುವ ಅಗತ್ಯತೆಯಿರುತ್ತದೆ ಹಾಗೂ ಪಾವತಿಗಳನ್ನು ನಿಯಮಬಾಹಿರವಾಗಿ ಮಾಡಿರುವುದಕ್ಕಾಗಿ ಸಂಬಂಧಿತ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಮೇಲೆ ಜವಾಬ್ದಾರಿ ಹೊರಿಸುವ ಬಗ್ಗೆ ಸರ್ಕಾರವು ಪರಿಗಣಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಶಿಫಾರಸು ಮಾಡುತ್ತದೆ.**

**ಸಾರಿಗೆ ಇಲಾಖೆ**

## 2.9. ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಿದ್ದುದು

**ವಾಹನಗಳನ್ನು ಯಾವುದೇ ಸ್ಥಳಗಳಿಗೆ ಸಾಗಣೆ ಮಾಡುವಂತಹ (ರಿಕವರಿ ವೆಹಿಕಲ್ಸ್) ವಾಹನಗಳನ್ನು ತಪ್ಪಾಗಿ ವರ್ಗೀಕರಿಸಿದ್ದರಿಂದ ಹಾಗೂ ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳ ಅನುಸಾರ ತ್ರೈಮಾಸಿಕ ತೆರಿಗೆಯನ್ನು ವಿಧಿಸದಿದ್ದ ಕಾರಣ ₹ 97.66 ಲಕ್ಷ ಮೊತ್ತದಷ್ಟು ಜೀವಿತಾವಧಿ ತೆರಿಗೆಯನ್ನು ಹಾಗೂ ತ್ರೈಮಾಸಿಕ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಿತು.**

ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ (ಕೆಎಂವಿಟಿ) ಅಧಿನಿಯಮ 1957 ಹಾಗೂ ಅದರ ಅಡಿಯಲ್ಲಿ ರೂಪಿಸಿರುವಂತಹ ನಿಯಮಗಳು ಮೋಟಾರು ವಾಹನಗಳ ಮೇಲಿನ ತೆರಿಗೆಯನ್ನು ವಿಧಿಸುವಿಕೆ ಹಾಗೂ ಸಂಗ್ರಹಣೆ/ವಸೂಲಾತಿಯನ್ನು ನಿಯಂತ್ರಿಸುತ್ತವೆ. ಮೂರು ಪ್ರಾದೇಶಿಕ ಸಾರಿಗೆ ಕಚೇರಿಗಳು (ಆರ್‌ಟಿಓಗಳು)/ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳ (ಎಆರ್‌ಟಿಓಗಳು) ಲೆಕ್ಕಪರಿಶೋಧನೆಯಲ್ಲಿ ಕರ್ನಾಟಕ ಮೋಟಾರು ವಾಹನಗಳ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸಿರುವುದರ ಮೇಲೆ ಗಮನಿಸಲಾಗಿರುವ ಅಂಶಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

### 2.9.1. ತಪ್ಪು ವರ್ಗೀಕರಣದಿಂದಾಗಿ ಕಡಿಮೆ ತೆರಿಗೆ ವಿಧಿಸಿರುವುದು

ಕರ್ನಾಟಕ ಸರ್ಕಾರದ ಸಾರಿಗೆ ಇಲಾಖೆಯ ಮಾರ್ಚ್ 2020ರವರೆಗೆ ತಿದ್ದುಪಡಿಯಾಗಿರುವಂತಹ ಮೋಟಾರು ವಾಹನಗಳ ಮೇಲೆ ತೆರಿಗೆ ವಿಧಿಸುವಿಕೆ ಷೆಡ್ಯೂಲಿನ ಭಾಗ ಎ5ರ (ವಿಭಾಗ 3(1) ಹಾಗೂ ಭಾಗ ಎ7) ಅನುಸಾರ ಸಾರಿಗೆಯೇತರ ವಾಹನಗಳು ಹಾಗೂ ನಿರ್ಮಾಣ ಉಪಕರಣ ವಾಹನಗಳ ಮೇಲೆ ಜೀವಿತಾವಧಿ ತೆರಿಗೆಯನ್ನು ವಾಹನಗಳ ಇನ್ವಾಯ್ಸುಗಳಲ್ಲಿನ ದರದ ಮೇಲೆ ಅನುಕ್ರಮವಾಗಿ ಶೇಕಡಾ 18ರ ದರದಲ್ಲಿ ಹಾಗೂ ಶೇಕಡಾ ಆರರ ದರದಲ್ಲಿ ವಿಧಿಸಬೇಕಿದ್ದಿತು. ಭಾರತ ಸರ್ಕಾರದ ಅಧಿಸೂಚನೆ ದಿನಾಂಕ 5 ನವಂಬರ್ 2004ರ ಅನುಸಾರ, ಟೋ ಟ್ರಕ್ಕುಗಳು, ಬ್ರೇಕ್ ಡೌನ್ ವ್ಯಾನುಗಳು ಹಾಗೂ ರಿಕವರಿ ವೆಹಿಕಲ್ಸ್ ವಾಹನಗಳನ್ನು ಸಾರಿಗೆಯೇತರ ವಾಹನಗಳು ಎಂಬುದಾಗಿ ವರ್ಗೀಕರಿಸಲಾಗಿರುವುದು ಮತ್ತು ಆದ್ದರಿಂದ ಇವುಗಳು ಶೇಕಡಾ 18ರ ದರದಲ್ಲಿ ಜೀವಿತಾವಧಿ ತೆರಿಗೆಯನ್ನು ಆಕರ್ಷಿಸುತ್ತವೆ.

ಬೆಂಗಳೂರಿನ ಶಾಂತಿನಗರದ ಪ್ರಾದೇಶಿಕ ಸಾರಿಗೆ ಕಚೇರಿಯ ದಾಖಲೆಗಳನ್ನು 2020–21ರಲ್ಲಿ ಪರೀಕ್ಷಾ ಪರಿಶೀಲನೆ ಮಾಡಲಾಗಿ (ಜುಲೈ 2021), ಕರಾರಸಾನಿವು ಮೂರು ರಿಕವರಿ ವಾಹನಗಳನ್ನು

[36] 16084.22 ಘಮೀ × ₹ (1093.89-126.6=967.29)/ಘಮೀ = ₹ 1,55,58,105.

ಖರೀದಿಸುವ ವೇಳೆಯಲ್ಲಿ ಅನ್ವಯಗೊಳ್ಳುವಂತಹ ಇನ್ವಾಯ್ಸುಗಳಲ್ಲಿನ ಮೌಲ್ಯದ ಮೇಲೆ ಶೇಕಡಾ 18ಕ್ಕೆ ಬದಲಾಗಿ ಶೇಕಡಾ ಆರರ ದರದಲ್ಲಿ ಜೀವಿತಾವಧಿ ತೆರಿಗೆಯನ್ನು ವಿಧಿಸಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು. ನಿಯಮಗಳಲ್ಲಿ ಯಾವುದೇ ಗೊಂದಲಗಳು ಇರಲಿಲ್ಲವಾದರೂ ಬೆಂಗಳೂರಿನ ಶಾಂತಿನಗರದ ಪ್ರಾದೇಶಿಕ ಸಾರಿಗೆ ಕಚೇರಿಯು ಶೇಕಡಾ ಆರರ ದರದಲ್ಲಿ ಜೀವಿತಾವಧಿ ತೆರಿಗೆಯನ್ನು ವಿಧಿಸಿದ್ದಿತು. ಈ ರೀತಿಯಾಗಿ ವಾಹನಗಳನ್ನು ತಪ್ಪಾಗಿ ವರ್ಗೀಕರಿಸಿದ್ದು ***ಅನುಬಂಧ-13ಎ*** ಅಡಿಯಲ್ಲಿ ತೋರಿಸಿರುವಂತೆ ₹ 15.18 ಲಕ್ಷ ಮೊತ್ತದಷ್ಟು ಜೀವಿತಾವಧಿ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ವಿಧಿಸುವಲ್ಲಿ ಪರಿಣಮಿಸಿತು.

ಇದನ್ನು ಗಮನಕ್ಕೆ ತಂದನಂತರ (ಜುಲೈ 2021), ಬೆಂಗಳೂರಿನ ಶಾಂತಿನಗರದ ಪ್ರಾದೇಶಿಕ ಸಾರಿಗೆ ಕಚೇರಿಯು ವ್ಯತ್ಯಾಸದ ತೆರಿಗೆ ಮೊತ್ತವನ್ನು ವಸೂಲಾತಿ ಮಾಡುವುದಾಗಿಯೂ ಹಾಗೂ ವಸೂಲಾತಿಯ ವಿವರಗಳನ್ನು ತಿಳಿಸುವುದಾಗಿಯೂ ಒಪ್ಪಿಕೊಂಡಿತು. ಆದಾಗ್ಯೂ, ಸರ್ಕಾರವು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಕ್ಕೆ (ಡಿಸೆಂಬರ್ 2021) ಪ್ರತಿಕ್ರಿಯೆ ನೀಡಿ, ಟೌ ಟ್ರಕ್ಕುಗಳು/ಎಚ್‌ಎಂವಿಗಳು/ಕ್ರೇನು ಇರುವ ವಾಹನಗಳಿಗೆ ವರ್ಗೀಕರಣವು ಇಲ್ಲದಿರುವುದರಿಂದ ನಿರ್ಮಾಣ ಉಪಕರಣ ವಾಹನಗಳಿಗೆ ಅನ್ವಯಗೊಳ್ಳುವ ರೀತಿಯಲ್ಲಿ ಶೇಕಡಾ ಆರರ ದರದಲ್ಲಿ ಜೀವಿತಾವಧಿ ತೆರಿಗೆಯನ್ನು ವಿಧಿಸಲಾಗಿರುವುದು ಎಂಬುದಾಗಿ ತಿಳಿಸಿತು (ಮೇ 2022).

ಭಾರತ ಸರ್ಕಾರದ ಅಧಿಸೂಚನೆಯ ಅನುಸಾರ ರಿಕವರಿ ವಾಹನಗಳು ಸಾರಿಗೆಯೇತರ ವಾಹನಗಳಾಗಿರುತ್ತವೆ ಮತ್ತು ಆದ್ದರಿಂದ ಶೇಕಡಾ 18ರ ದರದಲ್ಲಿ ಜೀವಿತಾವಧಿ ತೆರಿಗೆಯನ್ನು ಆಕರ್ಷಿಸುತ್ತವೆ. ಮುಂದುವರೆದು, ತೆರಿಗೆ ವಿಧಿಸುವ ಉದ್ದೇಶಕ್ಕಾಗಿ ರಿಕವರಿ ವಾಹನಗಳಿಗೆ ವರ್ಗೀಕರಣವು ಇಲ್ಲವಾದಲ್ಲಿ, ರಾಜ್ಯ ಸರ್ಕಾರವು ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿ ಅದನ್ನು ಜಾರಿಗೊಳಿಸಬೇಕಿದ್ದಿತು/ವಿಧಿಸಬೇಕಿದ್ದಿತು, ಆದರೆ ಆ ರೀತಿ ಈವರೆವಿಗೂ ಮಾಡಿರುವುದಿಲ್ಲ. ಈ ಕಾರಣಗಳಿಂದ ಉತ್ತರವು ಸಮರ್ಥನೀಯವಲ್ಲ.

### 2.9.2. ತ್ರೈಮಾಸಿಕ ತೆರಿಗೆಯನ್ನು ಕಡಿಮೆ ಪ್ರಮಾಣದಲ್ಲಿ ನಿರ್ಧಾರಣೆ ಮಾಡಿದ್ದುದು

ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು, 1989ರ ನಿಯಮ 151(2)ರ ಅನುಸಾರ ಒಂದು ವಾಹನದ ಸೀಟುಗಳ ಸಾಮರ್ಥ್ಯವು ವಾಹನದ ಹಿಂದಿನ ಮತ್ತು ಮುಂದಿನ ಗಾಲಿಯಚ್ಚುಗಳ ನಡುವಣ ಅಂತರಕ್ಕೆ ನೇರವಾಗಿ ಪ್ರಮಾಣಾನುಗುಣವಾಗಿರತಕ್ಕದ್ದು ಹಾಗೂ 4080 ಮಿಮೀನಿಂದ 5340 ಮಿಮೀವರೆಗಿನ ವಾಹನದ ಹಿಂದಿನ ಮತ್ತು ಮುಂದಿನ ಗಾಲಿಯಚ್ಚುಗಳ ನಡುವಣ ಅಂತರದೊಂದಿಗಿನ ವಾಹನಗಳ ಸೀಟು ಸಾಮರ್ಥ್ಯವು 35ರಿಂದ 50 ರ ವ್ಯಾಪ್ತಿಯಲ್ಲಿರುತ್ತದೆ. ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮದ ಅಡಿಯಲ್ಲಿನ ತೆರಿಗೆ ವಿಧಿಸುವಿಕೆ ಷೆಡ್ಯೂಲಿನ ಅನುಸಾರ, ಪ್ರತಿಯೋರ್ವ ಕುಳಿತಿರುವ ಪ್ರಯಾಣಿಕರಿಗೆ, ಪಾವತಿಸಬೇಕಿರುವ ತ್ರೈಮಾಸಿಕ ತೆರಿಗೆಯು 12 ಪ್ರಯಾಣಿಕರುಗಳನ್ನು ಮೀರಿದಂತೆ ಸಾಗಿಸುವ ಸಲುವಾಗಿ ಅನುಮತಿಸಲಾಗಿರುವ ವಾಹನಗಳಿಗೆ ₹ 900 ಆಗಿರುವುದು.

ಬಂಟ್ವಾಳದ ಸಹಾಯಕ ಪ್ರಾದೇಶಿಕ ಕಛೇರಿ (12 ಬಸ್ಸುಗಳು) ಹಾಗೂ ಮಂಗಳೂರಿನ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ (131 ಬಸ್ಸುಗಳು) 2018-19ರಿಂದ 2020-21ರ ನಡುವೆ ನೊಂದಾಯಿಸಲಾದ 143 ಬಸ್ಸುಗಳ ದಾಖಲೆಗಳ ಪರೀಕ್ಷಾ ಪರಿಶೀಲನೆಯು ತ್ರೈಮಾಸಿಕ ತೆರಿಗೆ ನಿರ್ಧಾರವನ್ನು ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು 1989ರ ನಿಯಮ 151(2)ರ ಅನುಸಾರ ಮಾಡದಿರುವುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತೆರಿಗೆಯನ್ನು ಮಾರ್ಪಾಡು ಮಾಡಲಾಗಿದ್ದಂತಹ ಸೀಟುಗಳ ಸಾಮರ್ಥ್ಯದ ಮೇಲೆ ವಿಧಿಸಲಾಗಿದ್ದಿತು ಹಾಗೂ ವಸೂಲಾತಿ ಮಾಡಲಾಗಿದ್ದಿತು, ಅದು ಷೆಡ್ಯೂಲಿನಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತಹ ಕನಿಷ್ಠ ಸೀಟುಗಳ ಸಾಮರ್ಥ್ಯಕ್ಕಿಂತ

ಕಡಿಮೆ ಪ್ರಮಾಣದಲ್ಲಿದ್ದಿತು. ಕಡಿಮೆ ಪ್ರಮಾಣದಲ್ಲಿ ವಿಧಿಸಲಾಗಿದ್ದಂತಹ ತ್ರೈಮಾಸಿಕ ತೆರಿಗೆಯು ***ಅನುಬಂಧ–13ಬಿ***ಯಲ್ಲಿ ತೋರಿಸಿರುವಂತೆ ಒಟ್ಟಾರೆ ₹ 82.48 ಲಕ್ಷ[37] ಆಗಿದ್ದಿತು.

ಈ ಪ್ರಕರಣಗಳನ್ನು ಸರ್ಕಾರಕ್ಕೆ ಜನವರಿ 2022ರಲ್ಲಿ ತಿಳಿಸಿದಾಗ, 15 ಸೆಪ್ಟಂಬರ್ 2018ರ ನಂತರ ಹೊಸ ಸಾರಿಗೆ ವಾಹನಗಳನ್ನು ಕೇಂದ್ರ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು 1989ರ ನಿಯಮ 125–ಸಿ ಅನುಸಾರ ನೋಂದಣಿ ಮಾಡತಕ್ಕದ್ದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಮೇ 2022). ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು, 1989ರ ನಿಯಮ 151(2) ಹಾಗೂ ಕೇಂದ್ರ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು 1989 ಇವೆರಡೂ ನಿಯಮಗಳು ಈ ವಿಷಯದಲ್ಲಿ ಅನ್ವಯಗೊಳ್ಳುತ್ತವೆ ಎಂಬುದಾಗಿಯೂ ತಿಳಿಸಿತು.

ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳು ಹಾಗೂ ನಿರಾಕರಣೆಗಳನ್ನು ತೆಗೆದುಹಾಕುವ ಸಲುವಾಗಿ ಕೇಂದ್ರ ಮೋಟಾರು ವಾಹನಗಳ ಮೇಲಿನ ತೆರಿಗೆ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾಗಿರುವಂತೆ ಎಐಎಸ್ ಪ್ರಮಾಣಕಗಳ ಅನುಸಾರ ಆಗಿರುವುದನ್ನು ಖಚಿತಪಡಿಸಿಕೊಳ್ಳುವ ರೀತಿಯಲ್ಲಿ ತ್ರೈಮಾಸಿಕ ತೆರಿಗೆ ವಿಧಿಸುವ ಸಲುವಾಗಿ ಈ ನಿಯಮಗಳಿಗೆ ಮಾಡಲಾಗಿರುವ ತಿದ್ದುಪಡಿಗಳಲ್ಲಿ ತ್ರೈಮಾಸಿಕ ತೆರಿಗೆಯನ್ನು ವಾಹನದ ಹಿಂದಿನ ಮತ್ತು ಮುಂದಿನ ಗಾಲಿಯಚ್ಚುಗಳ ನಡುವಣ ಅಂತರವನ್ನು ಅವಲಂಭಿಸಿದಂತೆ ಕನಿಷ್ಠ ಸೀಟಿಂಗ್ ಸಾಮರ್ಥ್ಯವನ್ನು ನಿರ್ದಿಷ್ಟಪಡಿಸಲಾಗಿರುವುದರಿಂದ ಉತ್ತರವು ಒಪ್ಪುವಂತಿಲ್ಲ.

ಈ ರೀತಿಯಾಗಿ ನಿಯಮಗಳನ್ನು ತಪ್ಪಾಗಿ ಅನ್ವಯಿಸಿದ್ದು ಮೇಲೆ ತಿಳಿಸಲಾದಂತಹ ಪ್ರಕರಣಗಳಲ್ಲಿ ಜೀವಿತಾವಧಿ ತೆರಿಗೆಯನ್ನು/ತ್ರೈಮಾಸಿಕ ತೆರಿಗೆಯನ್ನು ₹ 97.66 ಲಕ್ಷ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡುವಲ್ಲಿ ಪರಿಣಮಿಸಿತು.

***ಶಿಫಾರಸು:***

**ಇಲಾಖೆಯು ಆದಾಯವನ್ನು ಗಳಿಸಲು ಮೇಲೆ ತಿಳಿಸಲಾದಂತಹುದೇ ಪ್ರಕರಣಗಳನ್ನು ಇತರೆ ಪ್ರಾದೇಶಿಕ ಸಾರಿಗೆ ಕಚೇರಿಗಳು/ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿ ಸಮೀಕ್ಷಿಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು.**

[37] ಬಂಟವಾಳ ಸಹಾಯಕ ಪ್ರಾದೇಶಿಕ ಸಾರಿಗೆ ಕಚೇರಿಗೆ ಸಂಬಂಧಿಸಿದಂತೆ 12 ಬಸ್ಸುಗಳು ಹಾಗೂ ಮಂಗಳೂರು ಪ್ರಾದೇಶಿಕ ಸಾರಿಗೆ ಕಚೇರಿಗೆ ಸಂಬಂಧಿಸಿದಂತೆ 100 ಬಸ್ಸುಗಳಿಗೆ ಸಂಬಂಧಿಸಿದಂತೆ ವಿಧಿಸಬೇಕಿದ್ದಂತಹ ₹ 1.25 ಕೋಟಿ ಮೊತ್ತದಷ್ಟು ತೆರಿಗೆಗೆ (ಸೆಸ್ ಸೇರಿದಂತೆ) ಪ್ರತಿಯಾಗಿ ಕೇವಲ ₹ 42.04 ಲಕ್ಷ ಮೊತ್ತದಷ್ಟು ತೆರಿಗೆಯನ್ನು ವಿಧಿಸಲಾಗಿದ್ದಿತು.

# ಭಾಗ–II

# ಅಧ್ಯಾಯ–I

## ಪೀಠಿಕೆ

## 1. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯವೈಖರಿ

### ಸಾಮಾನ್ಯ

**1.1.** ಕರ್ನಾಟಕದಲ್ಲಿನ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳು (ಸಾವಉಗಳು) ರಾಜ್ಯ ಸರ್ಕಾರದ ಕಂಪನಿಗಳು ಹಾಗೂ ಶಾಸನಬದ್ಧ ನಿಗಮಗಳನ್ನು ಒಳಗೊಂಡಿವೆ. ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಜನತೆಯ ಕ್ಷೇಮಾಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ವಾಣಿಜ್ಯ ಸ್ವರೂಪದ ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಸ್ಥಾಪಿಸಲಾಗಿದೆ ಹಾಗೂ ಅವು ರಾಜ್ಯದ ಆರ್ಥಿಕ ವಲಯದಲ್ಲಿ ಒಂದು ಪ್ರಮುಖ ಸ್ಥಾನವನ್ನು ಹೊಂದಿದೆ. 31 ಮಾರ್ಚ್ 2021ರಲ್ಲಿದ್ದಂತೆ, ಕರ್ನಾಟಕದಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವ್ಯಾಪ್ತಿಗೆ ಬರುವಂತಹ ಆರು ಶಾಸನಬದ್ಧ ನಿಗಮಗಳು ಹಾಗೂ 13 ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳೂ ಸೇರಿದಂತೆ 124 ಸಾರ್ವಜನಿಕ ವಲಯ ಉದ್ದಿಮೆಗಳು ಇದ್ದವು. ಇವುಗಳ ಪೈಕಿ, ಒಂದು ಸಾರ್ವಜನಿಕ ವಲಯ ಉದ್ದಿಮೆಯನ್ನು[38] ಷೇರು ವಿನಿಮಯ ಕೇಂದ್ರದಲ್ಲಿ ದಾಖಲಿಸಲಾಗಿದೆ. 31 ಮಾರ್ಚ್ 2021ರಲ್ಲಿದ್ದಂತೆ ಹೊಸದಾಗಿ ಸ್ಥಾಪಿಸಲಾಗಿದ್ದಂತಹ/ ಲೆಕ್ಕಪರಿಶೋಧನೆಗೆ ವಹಿಸಲಾದಂತಹ ನಾಲ್ಕು ಸಾರ್ವಜನಿಕ ವಲಯ ಉದ್ದಿಮೆಗಳನ್ನು[39] ಸೇರಿಸಲಾಗಿದೆ. 124 ಸಾರ್ವಜನಿಕ ವಲಯ ಉದ್ದಿಮೆಗಳ ಪಟ್ಟಿಯನ್ನು ***ಅನುಬಂಧ–14***ರಲ್ಲಿ ನೀಡಲಾಗಿದೆ.

**1.2.** 30 ನವೆಂಬರ್ 2021ರಲ್ಲಿದ್ದಂತೆ[40] ಅಂತಿಮ ರೂಪಕ್ಕೆ ತರಲ್ಪಟ್ಟಿರುವಂತಹ ಇತ್ತೀಚಿನ ಲೆಕ್ಕಪತ್ರಗಳ ಆಧಾರದ ಮೇರೆಗೆ ಸಾರ್ವಜನಿಕ ವಲಯ ಉದ್ದಿಮೆಗಳ ಹಣಕಾಸಿನ ಕಾರ್ಯನಿರ್ವಹಣೆಯನ್ನು ಈ ವರದಿಯಲ್ಲಿ ವ್ಯಾಪಿಸಲಾಗಿದೆ. ಸಾರ್ವಜನಿಕ ವಲಯ ಉದ್ದಿಮೆಗಳ ಸ್ವರೂಪ ಹಾಗೂ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರಲಾಗಿರುವ ಬಗ್ಗೆ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

**ಕೋಷ್ಟಕ ಸಂಖ್ಯೆ 1: ಈ ವರದಿಯಲ್ಲಿ ಒಳಗೊಂಡ ಸಾರ್ವಜನಿಕ ವಲಯ ಉದ್ದಿಮೆಗಳ ಸ್ವರೂಪ**

| ಕ್ರಮ ಸಂಖ್ಯೆ | ಸಾರ್ವಜನಿಕ ವಲಯ ಉದ್ದಿಮೆಗಳ ಮಾದರಿ | ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ವರದಿಯು ವ್ಯಾಪಿಸಿರುವ ಅವಧಿಯಲ್ಲಿ[41] ಲೆಕ್ಕಪತ್ರಗಳನ್ನು ಸ್ವೀಕರಿಸಲಾಗಿರುವ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | | | | 30 ನವೆಂಬರ್ 2021ರಲ್ಲಿದ್ದಂತೆ ಲೆಕ್ಕಪತ್ರಗಳ ಸಲ್ಲಿಕೆಯು ಬಾಕಿಯಿದ್ದಂತಹ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ (ಸಲ್ಲಿಸಲು ಬಾಕಿಯಿದ್ದಂತಹ ಲೆಕ್ಕಪತ್ರಗಳ ಒಟ್ಟಾರೆ ಸಂಖ್ಯೆ) |
|---|---|---|---|---|---|---|---|
| | | | **2020–21** | **2019–20** | **2018–19 ಹಾಗೂ ಅದಕ್ಕೂ ಮುಂಚಿನ** | ಒಟ್ಟು | |
| 1 | ಕಾರ್ಯನಿರತ ಸರ್ಕಾರಿ ಕಂಪನಿಗಳು | 105 | 38 | 20 | 7 | 65 | 64 (101) |
| 2 | ಶಾಸನಬದ್ಧ ನಿಗಮಗಳು | 6 | – | 6 | – | 6 | 6 (6) |
| **ಕಾರ್ಯನಿರತ ಸಾವಉಗಳ ಒಟ್ಟಾರೆ ಸಂಖ್ಯೆ** | | **111** | **38** | **26** | 7 | **71** | **70 (107)**[42] |
| 3 | ಕಾರ್ಯಸ್ಥಗಿತ ಸರ್ಕಾರಿ ಕಂಪನಿಗಳು | 13 | 5 | 1 | 1 | 7 | 8 (79[43]) |
| **ಸಾವಉಗಳ ಒಟ್ಟಾರೆ ಸಂಖ್ಯೆ (ಕಾರ್ಯನಿರತ ಮತ್ತು ಕಾರ್ಯಸ್ಥಗಿತ)** | | **124** | **43** | **27** | 8[44] | **78** | **78 (186)** |

---

[38] ಮೈಸೂರು ಪೇಪರ್ ಮಿಲ್ಸ್ ಲಿಮಿಟೆಡ್.

[39] ಬೆಂಗಳೂರು ಇಂಟಿಗ್ರೇಟೆಡ್ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್‌ಪ್ರೈಸಸ್ ನಿಯಮಿತ (ಬಿ–ರೈಡ್), ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ (ಕೆವಿಎಲ್‌ಡಿಸಿಎಲ್), ಅಂತರರಾಷ್ಟ್ರೀಯ ಹೂವಿನ ಹರಾಜು ಬೆಂಗಳೂರು ನಿಯಮಿತ (ಐಎಫ್‌ಎಬಿಎಲ್) ಮತ್ತು ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ (ಕೆಎಸ್‌ಎಂಎಸ್‌ಸಿ).

[40] 2020–21 ಹಣಕಾಸು ಸಾಲಿಗೆ ಸಾರ್ವಜನಿಕ ವಲಯ ಉದ್ದಿಮೆಗಳ ವಾರ್ಷಿಕ ಸರ್ವಸದಸ್ಯರುಗಳ ಸಭೆಯನ್ನು ನಡೆಸಲು ಕಂಪನಿಗಳ ನಿಬಂಧಕರು, ಬೆಂಗಳೂರು, ಇವರು ತಮ್ಮ ಆದೇಶ ಸಂಖ್ಯೆ ದಿನಾಂಕ 23 ಸೆಪ್ಟಂಬರ್ 2021ರ ಮೂಲಕ ನಿಗದಿತ ದಿನಾಂಕವನ್ನು 30 ನವೆಂಬರ್ 2021ರವರೆಗೂ ವಿಸ್ತರಿಸಿದರು.

[41] ಜನವರಿ 2021ರಿಂದ ನವೆಂಬರ್ 2021ರವರೆಗೆ.

[42] 2020–21ರ ಸಾಲಿಗೆ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರದಿದ್ದಂತಹ 56 ಸಾರ್ವಜನಿಕ ವಲಯ ಉದ್ದಿಮೆಗಳು ಹಾಗೂ 51 ಲೆಕ್ಕಪತ್ರಗಳ ಸಲ್ಲಿಕೆಯು ಬಾಕಿಯಿರುವಂತಹ 14 ಸಾರ್ವಜನಿಕ ವಲಯ ಉದ್ದಿಮೆಗಳನ್ನು (2020–21 ಮತ್ತು ಅದಕ್ಕೂ ಮುಂಚಿನ ಅವಧಿಗೆ ಸಂಬಂಧಿಸಿದ್ದು) ಒಳಗೊಂಡಿದೆ.

[43] ಸಮಾಪನ ಹಂತದಲ್ಲಿರುವಂತ ನಾಲ್ಕು ಸಾರ್ವಜನಿಕ ವಲಯ ಉದ್ದಿಮೆಗಳ (ಕೆಎಸ್‌ವಿಎಲ್, ಎಂಸಿಎಲ್, ಕೆಟಿಎಲ್ ಮತ್ತು ಎಂಎಸಿಸಿಎಲ್) 68 ಲೆಕ್ಕಪತ್ರಗಳನ್ನು ಒಳಗೊಂಡಿದೆ.

[44] 2018–19ರ ಸಾಲಿಗೆ ಒಂದು ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆ (ಎನ್‌ಜಿಇಎಫ್), 2018–19ರ ಸಾಲಿಗೆ ಎರಡು ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಯುಡಿಸಿಎಲ್ ಮತ್ತು ಲಿಡ್ಕರ್), 2017–18ರ ಸಾಲಿಗೆ ಒಂದು ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆ (ಕೆಎಸ್‌ಎಸ್‌ಕೆಡಿಸಿಎಲ್), 2016–17ರ ಸಾಲಿಗೆ ಒಂದು ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆ (ಕೆಎಮ್‌ಡಿಸಿ), 2015–16ರ ಸಾಲಿಗೆ ಒಂದು ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆ (ಕೆಎಸ್‌ಸಿಸಿಎಲ್) ಹಾಗೂ 2014–15ರ ಸಾಲಿಗೆ ಎರಡು ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳನ್ನು (ಎಮ್‌ಪಿಎಮ್ ಮತ್ತು ಕೆವಿಟಿಎಸ್‌ಡಿಸಿಎಲ್) ಒಳಗೊಂಡಿದೆ.

ಲೆಕ್ಕಪತ್ರಗಳ ಸಲ್ಲಿಕೆಯು ಬಾಕಿಯಿರುವಂತಹ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು ಮೂರರಿಂದ ಏಳು ವರ್ಷಗಳ ಬಾಕಿಗಳನ್ನು ಹೊಂದಿರುವಂತಹ ಎಂಟು ಸಾರ್ವಜನಿಕ ವಲಯ ಉದ್ದಿಮೆಗಳನ್ನು (ಡಿಡಿಯುಟಿಟಿಎಲ್, ಕೆಎಸ್‌ಎಸ್‌ಕೆಡಿಸಿಎಲ್, ಕೆಎಂಡಿಸಿ, ಕೆಎಸ್‌ಎಡಬ್ಲ್ಯುಡಿಸಿಎಲ್, ಎಂಪಿಎಂ, ಕೆಎಸ್‌ಸಿಸಿಎಲ್, ಕೆವಿಟಿಎಸ್‌ಡಿಸಿಎಲ್ ಹಾಗೂ ಮೈಶುಗರ್) ಒಳಗೊಂಡಿವೆ. ಮುಂದುವರೆದು, ನಾಲ್ಕು ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್‌ವಿಎಲ್, ಎಂಸಿಎಲ್, ಕೆಟಿಎಲ್ ಹಾಗೂ ಎಂಎಸಿಸಿಎಲ್) 16ರಿಂದ 18 ವರ್ಷಗಳವರೆಗಿನ ಲೆಕ್ಕಪತ್ರಗಳ ಸಲ್ಲಿಕೆಗಳ ಬಾಕಿಗಳನ್ನು ಹೊಂದಿವೆ. ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು, ನವೆಂಬರ್ 2021ರಲ್ಲಿದ್ದಂತೆ ಅವುಗಳ ಇತ್ತೀಚಿನ ಅಂತಿಮ ರೂಪಕ್ಕೆ ತರಲಾಗಿದ್ದಂತಹ ಲೆಕ್ಕಪತ್ರಗಳ ಅನುಸಾರ ₹ 77,607.61 ಕೋಟಿ ಮೊತ್ತದಷ್ಟು ವಹಿವಾಟನ್ನು ದಾಖಲಿಸಿದ್ದವು. ಈ ವಹಿವಾಟು 2020–21 ಸಾಲಿಗೆ ರಾಜ್ಯದ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ)ಯ (ಅಂದರೆ ₹ 16,65,320 ಕೋಟಿ) ಶೇಕಡಾ 4.66ರಷ್ಟು ಆಗಿತ್ತು. ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು ನವೆಂಬರ್ 2021ರಲ್ಲಿದ್ದಂತೆ ಅವುಗಳ ಇತ್ತೀಚಿನ ಅಂತಿಮ ರೂಪಕ್ಕೆ ತರಲ್ಪಟ್ಟಿದ್ದಂತಹ ಲೆಕ್ಕಪತ್ರಗಳ ಅನುಸಾರ ₹ 5,137.65 ಕೋಟಿ ಮೊತ್ತದಷ್ಟು ನಿವ್ವಳ ಒಟ್ಟಾರೆ ನಷ್ಟವನ್ನು ಭರಿಸಿದ್ದವು. ಮಾರ್ಚ್ 2021ರ ಅಂತ್ಯದಲ್ಲಿದ್ದಂತೆ ಸಾರ್ವಜನಿಕ ವಲಯ ಉದ್ದಿಮೆಗಳು 2.01 ಲಕ್ಷ ಉದ್ಯೋಗಿಗಳನ್ನು ಹೊಂದಿದ್ದವು.

31 ಮಾರ್ಚ್ 2021ರಲ್ಲಿದ್ದಂತೆ, ₹ 670.18 ಕೋಟಿ ಮೊತ್ತದಷ್ಟು ಹೂಡಿಕೆಗಳನ್ನು ಮಾಡಲಾಗಿದ್ದಂತಹ 13 ಸಾರ್ವಜನಿಕ ವಲಯ ಉದ್ದಿಮೆಗಳು ಕಳೆದ 18 ವರ್ಷಗಳಿಂದ ಕಾರ್ಯಸ್ಥಗಿತಗೊಂಡಿದ್ದವು. ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗುವ ಹೂಡಿಕೆಗಳು ರಾಜ್ಯದ ಆರ್ಥಿಕ ಬೆಳವಣಿಗೆಗೆ ಯಾವುದೇ ಕಾಣಿಕೆಯನ್ನೂ ನೀಡುವುದಿಲ್ಲವಾದ್ದರಿಂದ, ಇದು ಗಮನ ಹರಿಸುವ ಅಗತ್ಯತೆಯನ್ನು ಹೊಂದಿರುವಂತಹ ವಿಷಮಾವಸ್ಥೆಯ ಕ್ಷೇತ್ರವಾಗಿದೆ.

## ಉತ್ತರದಾಯಿತ್ವದ ಚೌಕಟ್ಟು

**1.3**. ಸರ್ಕಾರಿ ಕಂಪನಿಗಳ ಲೆಕ್ಕಪರಿಶೋಧನೆಯ ಪ್ರಕ್ರಿಯೆಯು ಕಂಪನಿಗಳ ಅಧಿನಿಯಮ, 1956ರ ಪರಿಚ್ಛೇದ 619ರ ಹಾಗೂ ಕಂಪನಿಗಳ ಅಧಿನಿಯಮ, 2013ರ (ಅಧಿನಿಯಮ) ಪರಿಚ್ಛೇದ 139 ಹಾಗೂ 143ರ ಸಂಬಂಧಿತ ಅನುವುಗಳಿಂದ ನಿಯಂತ್ರಿಸಲ್ಪಡುತ್ತದೆ. ಅಧಿನಿಯಮದ ಪರಿಚ್ಛೇದ 2(45)ರ ಅನುಸಾರ, ಒಂದು ಸರ್ಕಾರಿ ಕಂಪನಿ ಎಂದರೆ ಪಾವತಿಸಲ್ಪಟ್ಟಿರುವಂತಹ ಷೇರು ಬಂಡವಾಳದ ಶೇಕಡಾ ಐವತ್ತೊಂದಕ್ಕಿಂತ ಕಡಿಮೆ ಇಲ್ಲದಂತೆ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳು ಅಥವಾ ಭಾಗಶಃವಾಗಿ ಕೇಂದ್ರ ಸರ್ಕಾರದಿಂದ ಮತ್ತು ಭಾಗಶಃವಾಗಿ ಒಂದು ಅಥವಾ ಅದಕ್ಕಿಂತ ಹೆಚ್ಚಿನ ರಾಜ್ಯ ಸರ್ಕಾರಗಳು ಷೇರು ಬಂಡವಾಳವನ್ನು ಹೊಂದಿರುವಂತಹ ಯಾವುದೇ ಕಂಪನಿಯಾಗಿರಬಹುದು ಹಾಗೂ ಅಂತಹ ಸರ್ಕಾರಿ ಕಂಪನಿಯ ಒಂದು ಸಹ/ಉಪ–ಕಂಪನಿಯಾಗಿರುವಂತಹ ಒಂದು ಕಂಪನಿಯನ್ನು ಒಳಗೊಂಡಿರುತ್ತದೆ.

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಒಂದು ಸರ್ಕಾರಿ ಕಂಪನಿಯ ಅಥವಾ ಸರ್ಕಾರಿ ನಿಯಂತ್ರಿತ ಇತರೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರುಗಳನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139 (5) ಮತ್ತು (7)ರ ಅಡಿಯಲ್ಲಿ ನೇಮಕ ಮಾಡುವರು. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139 (5) ಒಂದು ಸರ್ಕಾರಿ ಕಂಪನಿ ಅಥವಾ ಸರ್ಕಾರಿ ನಿಯಂತ್ರಿತ ಇತರೆ ಕಂಪನಿಗೆ ಸಂಬಂಧಿಸಿದಂತೆ ಶಾಸನಬದ್ಧ ಲೆಕ್ಕಪರಿಶೋಧಕರುಗಳನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಹಣಕಾಸು ವರ್ಷ ಪ್ರಾರಂಭಗೊಂಡಂತಹ ದಿನಾಂಕದಿಂದ ಒಂದು ನೂರ ಎಂಭತ್ತು ದಿನಗಳ ಒಳಗೆ ನೇಮಕ ಮಾಡತಕ್ಕದ್ದು ಎಂಬುದಾಗಿ ಅನುವು ಮಾಡಲಾಗಿದೆ. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 139 (7) ಒಂದು ಸರ್ಕಾರಿ ಕಂಪನಿ ಅಥವಾ ಸರ್ಕಾರಿ ನಿಯಂತ್ರಿತ ಇತರೆ ಕಂಪನಿಗೆ ಸಂಬಂಧಿಸಿದಂತೆ, ಪ್ರಪ್ರಥಮ ಲೆಕ್ಕಪರಿಶೋಧಕರನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಕಂಪನಿಯು ನೋಂದಣಿಗೊಂಡ ದಿನಾಂಕದಿಂದ ಅರವತ್ತು ದಿನಗಳ ಒಳಗೆ ನೇಮಕ ಮಾಡತಕ್ಕದ್ದು ಎಂಬುದಾಗಿ ಅನುವು ಮಾಡಲಾಗಿದೆ. ಒಂದು ವೇಳೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಈ ಅವಧಿಯಲ್ಲಿ ಲೆಕ್ಕಪರಿಶೋಧಕರನ್ನು ನೇಮಕ ಮಾಡದಿದ್ದಲ್ಲಿ ಕಂಪನಿಯ ನಿರ್ದೇಶಕರ ಮಂಡಳಿ ಅಥವಾ ಕಂಪನಿಯ ಸದಸ್ಯರು ಲೆಕ್ಕಪರಿಶೋಧಕರನ್ನು ನೇಮಿಸಬೇಕು.

ಮುಂದುವರೆದು, ಅಧಿನಿಯಮದ ಪರಿಚ್ಛೇದ 143ರ ಉಪ–ಪರಿಚ್ಛೇದ 7ರ ಅನುಸಾರ, ಪರಿಚ್ಛೇದ 139ರ ಉಪ–ಪರಿಚ್ಛೇದ (5) ಅಥವಾ (7)ರ ಅಡಿಯಲ್ಲಿ ವ್ಯಾಪಿಸಿರುವಂತಹ ಯಾವುದೇ ಕಂಪನಿಗೆ ಸಂಬಂಧಿಸಿದಂತೆ, ಅಗತ್ಯವೆಂಬುದಾಗಿ ಪರಿಗಣಿಸಿದಲ್ಲಿ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಒಂದು ಆದೇಶದ ಮೂಲಕ, ಅಂತಹ ಕಂಪನಿಯ ಲೆಕ್ಕಪತ್ರಗಳನ್ನು ಪರೀಕ್ಷಾ–ಪರಿಶೀಲನೆ ಮಾಡಿಸಬಹುದು. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19 ಎ ಅಡಿಯಲ್ಲಿನ ಅನುವುಗಳನ್ನು ಅಂತಹ ಪರೀಕ್ಷಾ–ಪರಿಶೀಲನೆಯ ವರದಿಗೆ ಅನ್ವಯಗೊಳಿಸತಕ್ಕದ್ದು. ಈ ರೀತಿಯಾಗಿ, ಕೇಂದ್ರ ಸರ್ಕಾರ, ಅಥವಾ ಇತರೆ ಯಾವುದೇ ರಾಜ್ಯ ಸರ್ಕಾರ ಅಥವಾ ಸರ್ಕಾರಗಳು ಅಥವಾ ಭಾಗಶಃವಾಗಿ ಕೇಂದ್ರ ಸರ್ಕಾರದ ಹಾಗೂ ಭಾಗಶಃವಾಗಿ ಒಂದು ಅಥವಾ ಇನ್ನೂ ಹೆಚ್ಚಿನ ರಾಜ್ಯ ಸರ್ಕಾರಗಳ ನೇರ ಅಥವಾ ಪರೋಕ್ಷವಾದ ನಿಯಂತ್ರಣದಲ್ಲಿರುವ ಒಂದು ಸರ್ಕಾರಿ ಕಂಪನಿ ಅಥವಾ ಇತರೆ ಯಾವುದೇ ಕಂಪನಿಯು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನೆಯ ವ್ಯಾಪ್ತಿಗೆ ಬರುತ್ತದೆ. 31 ಮಾರ್ಚ್ 2014ರಂದು ಅಥವಾ ಅದಕ್ಕೂ ಮುಂಚಿತವಾಗಿ ಪ್ರಾರಂಭಗೊಂಡಂತಹ ಹಣಕಾಸು ಸಾಲಿಗೆ ಸಂಬಂಧಿಸಿದಂತೆ ಒಂದು ಕಂಪನಿಯ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯು ಕಂಪನಿಗಳ ಅಧಿನಿಯಮ, 1956ರ ಅನುವುಗಳ ನಿಯಂತ್ರಣಗಳಿಂದ ಮುಂದುವರೆಯತಕ್ಕದ್ದು.

***ಶಾಸನಬದ್ಧ ಲೆಕ್ಕಪರಿಶೋಧನೆ***

**1.4**. ಸರ್ಕಾರಿ ಕಂಪನಿಗಳ ಹಣಕಾಸು ತಃಖ್ತೆಗಳನ್ನು ಅಧಿನಿಯಮದ ಪರಿಚ್ಛೇದಗಳು 139(5) ಅಥವಾ 139(7)ರ ಅನುವುಗಳ ಅನುಸಾರ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೇಮಕ ಮಾಡಿರುವಂತಹ ಶಾಸನಬದ್ಧ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡುವರು. ತದನಂತರ, ಇನ್ನಿತರವುಗಳ ಜೊತೆಗೆ ಕಂಪನಿಯ ಹಣಕಾಸು ತಃಖ್ತೆಗಳನ್ನು ಒಳಗೊಂಡಿರುವಂತಹ ಲೆಕ್ಕಪರಿಶೋಧನಾ ವರದಿಯ ಒಂದು ಪ್ರತಿಯನ್ನು ಅಧಿನಿಯಮದ ಪರಿಚ್ಛೇದ 143 (5)ರ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ಸಲ್ಲಿಸಲಾಗುವುದು. ಅಧಿನಿಯಮದ ಪರಿಚ್ಛೇದ 143 (6)ರ ಅನುವುಗಳ ಅಡಿಯಲ್ಲಿ ಲೆಕ್ಕಪರಿಶೋಧನಾ ವರದಿಯು ಸ್ವೀಕೃತಗೊಂಡಂತಹ ದಿನಾಂಕದಿಂದ ಅರವತ್ತು ದಿನಗಳ ಒಳಗೆ ಈ ಹಣಕಾಸು ತಃಖ್ತೆಗಳು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಪೂರಕ ಲೆಕ್ಕಪರಿಶೋಧನೆಗೆ ಒಳಪಡುತ್ತವೆ.

ಶಾಸನಬದ್ಧ ನಿಗಮಗಳ ಲೆಕ್ಕಪರಿಶೋಧನೆಯು ಸಂಬಂಧಿತ ಕಾನೂನುಗಳಿಂದ ನಿರ್ವಹಿಸಲ್ಪಡುತ್ತದೆ. ಕರ್ನಾಟಕದಲ್ಲಿನ ಆರು ಶಾಸನಬದ್ಧ ನಿಗಮಗಳ ಪೈಕಿ, ನಾಲ್ಕು ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ[45] ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಏಕೈಕ ಲೆಕ್ಕಪರಿಶೋಧಕರಾಗಿರುತ್ತಾರೆ. ಕರ್ನಾಟಕ ರಾಜ್ಯ ಉಗ್ರಾಣ ನಿಗಮ ಹಾಗೂ ರಾಜ್ಯ ಹಣಕಾಸು ನಿಗಮಕ್ಕೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯನ್ನು ಸನ್ನದು ಲೆಕ್ಕಪರಿಶೋಧಕರು ನಡೆಸುತ್ತಾರೆಯಾದಲ್ಲಿ, ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಪೂರಕ ಲೆಕ್ಕಪರಿಶೋಧನೆ ನಡೆಸುವರು.

**ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ**

***ಸಮಯೋಚಿತವಾಗಿ ಅಂತಿಮ ರೂಪಕ್ಕೆ ತರುವ ಹಾಗೂ ಸಲ್ಲಿಸುವ ಅಗತ್ಯತೆ***

**1.5**. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದಗಳು 394 ಮತ್ತು 395ರ ಅನುಸಾರ, ಒಂದು ಸರ್ಕಾರಿ ಕಂಪನಿಯ ಕಾರ್ಯವೈಖರಿ ಹಾಗೂ ವ್ಯವಹಾರಗಳ ಮೇಲಿನ ವಾರ್ಷಿಕ ವರದಿಯನ್ನು ಅದರ ವಾರ್ಷಿಕ ಸರ್ವಸದಸ್ಯರ ಸಭೆಯು ನಡೆದಂತಹ ದಿನಾಂಕದಿಂದ ಮೂರು ತಿಂಗಳುಗಳ ಒಳಗೆ ತಯಾರಿಸತಕ್ಕದ್ದು ಹಾಗೂ ಆ ರೀತಿ ತಯಾರಿಸಿದನಂತರ ಲೆಕ್ಕಪರಿಶೋಧನಾ ವರದಿಯ ಒಂದು ಪ್ರತಿ ಹಾಗೂ ಅದರ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳು ಅಥವಾ ಪೂರಕ ಲೆಕ್ಕಪರಿಶೋಧನಾ ವರದಿಗಳು ಯಾವುದಾದರೂ ಇದ್ದಲ್ಲಿ ಅವುಗಳ

[45] ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಈ ಹಿಂದೆ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ) ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ.

ಜೊತೆಯಲ್ಲಿ ಆದಷ್ಟು ಬೇಗನೆ ಶಾಸನಸಭೆಯ ಸದನದ ಮುಂದೆ ಅಥವಾ ಎರಡೂ ಸದನಗಳ ಮುಂದೆ ಮಂಡಿಸತಕ್ಕದ್ದು. ಹೆಚ್ಚುಕಡಿಮೆ ಅದೇ ರೀತಿಯ ಅನುವುಗಳು ಶಾಸನಬದ್ಧ ನಿಗಮಗಳನ್ನು ನಿಯಂತ್ರಿಸುವಂತಹ ಸಂಬಂಧಿತ ಅಧಿನಿಯಮಗಳಲ್ಲಿಯೂ ಇರುವವು. ಈ ವ್ಯವಸ್ಥೆಯು ರಾಜ್ಯದ ಸಂಚಿತ ನಿಧಿಯಿಂದ ಕಂಪನಿಗಳಲ್ಲಿ ಹೂಡಿಕೆ ಮಾಡಲಾದಂತಹ ಸಾರ್ವಜನಿಕರ ಹಣಕಾಸನ್ನು ಉಪಯೋಗಿಸಿಕೊಳ್ಳುವುದರ ಮೇಲೆ ಅಗತ್ಯ ಶಾಸನಬದ್ಧ ನಿಯಂತ್ರಣವನ್ನು ಒದಗಿಸುತ್ತದೆ.

ಪ್ರತೀ ಕಂಪನಿಯೂ ಪ್ರತಿಯೊಂದು ಕ್ಯಾಲೆಂಡರ್ ವರ್ಷದಲ್ಲಿಯೂ ಷೇರುದಾರರುಗಳ ವಾರ್ಷಿಕ ಸರ್ವಸದಸ್ಯರುಗಳ ಸಭೆಯನ್ನು ನಡೆಸುವ ಅಗತ್ಯತೆಯನ್ನು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 96 ಹೊಂದಿರುತ್ತದೆ. ಒಂದು ವಾರ್ಷಿಕ ಸರ್ವಸದಸ್ಯರುಗಳ ಸಭೆಯ ದಿನಾಂಕ ಹಾಗೂ ಅದರ ನಂತರದ ವಾರ್ಷಿಕ ಸರ್ವಸದಸ್ಯರುಗಳ ಸಭೆಯ ದಿನಾಂಕದ ನಡುವಿನ ಅಂತರವು 15 ತಿಂಗಳುಗಳನ್ನು ಮೀರಕೂಡದು ಎಂಬುದಾಗಿಯೂ ಅದು ತಿಳಿಸಿರುತ್ತದೆ. ಮುಂದುವರೆದು, ಹಣಕಾಸು ಸಾಲಿಗೆ ಲೆಕ್ಕಪರಿಶೋಧನೆಗೆ ಒಳಪಟ್ಟಂತಹ ಹಣಕಾಸು ತಃಖ್ತೆಗಳನ್ನು ಮೇಲೆ ತಿಳಿಸಲಾದಂತಹ ವಾರ್ಷಿಕ ಸರ್ವಸದಸ್ಯರುಗಳ ಸಭೆಯ ಮುಂದೆ ಅದರ ಪರಿಗಣನೆಗಾಗಿ ಮಂಡಿಸತಕ್ಕದ್ದು ಎಂಬುದಾಗಿ ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129 ನಿರ್ದಿಷ್ಟಪಡಿಸಿರುತ್ತದೆ. ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129ರ ಅನುವುಗಳನ್ನು ಅನುಸರಿಸದಿರುವಲ್ಲಿ ಇದಕ್ಕೆ ಜವಾಬ್ದಾರರಾಗಿರುವ ಕಂಪನಿಯ ನಿರ್ದೇಶಕರುಗಳನ್ನು ಒಳಗೊಂಡಂತೆ ವ್ಯಕ್ತಿಗಳಿಗೆ ದಂಡದ ಶುಲ್ಕವನ್ನು ವಿಧಿಸುವುದು ಮತ್ತು ಜೈಲುವಾಸ ಮುಂತಾದ ದಂಡನೆಗಳನ್ನು ವಿಧಿಸಲು ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 129 (7) ಅನುವು ಮಾಡಿದೆ.

***ಸರ್ಕಾರ ಹಾಗೂ ಶಾಸಕಾಂಗದ ಪಾತ್ರ***

**1.6**. ರಾಜ್ಯ ಸರ್ಕಾರವು ತನ್ನ ಆಡಳಿತಾತ್ಮಕ ಇಲಾಖೆಗಳ ಮೂಲಕ ಈ ಸಾರ್ವಜನಿಕ ವಲಯ ಉದ್ದಿಮೆಗಳ ವ್ಯವಹಾರಗಳ ಮೇಲೆ ತನ್ನ ನಿಯಂತ್ರಣವನ್ನು ಚಲಾಯಿಸುತ್ತದೆ. ನಿರ್ದೇಶಕರುಗಳ ಮಂಡಳಿಗೆ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳನ್ನು ಹಾಗೂ ನಿರ್ದೇಶಕರುಗಳನ್ನು ಸರ್ಕಾರವು ನೇಮಕ ಮಾಡುತ್ತದೆ.

ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿರುವ ಸರ್ಕಾರಿ ಹೂಡಿಕೆಗಳ ಲೆಕ್ಕವನ್ನಿಡುವಿಕೆಯನ್ನು ಹಾಗೂ ಅವುಗಳ ಉಪಯೋಗವನ್ನು ರಾಜ್ಯ ಶಾಸಕಾಂಗವು ಮೇಲ್ವಿಚಾರಣೆ ಮಾಡುತ್ತದೆ. ಈ ಉದ್ದೇಶಕ್ಕಾಗಿ, ರಾಜ್ಯ ಸರ್ಕಾರಿ ಕಂಪನಿಗಳಿಗೆ ಸಂಬಂಧಿಸಿದಂತೆ ವಾರ್ಷಿಕ ವರದಿಗಳ ಜೊತೆಗೆ ಶಾಸನಬದ್ಧ ಲೆಕ್ಕಪರಿಶೋಧಕರುಗಳ ವರದಿ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಟೀಕೆಟಿಪ್ಪಣಿಗಳನ್ನು ಹಾಗೂ ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಅಧಿನಿಯಮದ ಪರಿಚ್ಛೇದ 394(2) ಮತ್ತು/ಅಥವಾ 395ರ ಅಡಿಯಲ್ಲಿ ಅಥವಾ ಸಂಬಂಧಿತ ಅಧಿನಿಯಮಗಳ ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ಶಾಸಕಾಂಗದ ಮುಂದೆ ಮಂಡಿಸಲಾಗುವುದು. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1971ರ ಪರಿಚ್ಛೇದ 19ಎ ಅಡಿಯಲ್ಲಿ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತದೆ.

**ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹೂಡಿಕೆಗಳು**

**1.7**. ಕರ್ನಾಟಕ ಸರ್ಕಾರವು ಈ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಹಣಕಾಸಿನ ಹೂಡಿಕೆಗಳನ್ನು ಹೊಂದಿದೆ. ಈ ಹೂಡಿಕೆಗಳು ಪ್ರಮುಖವಾಗಿ ಮೂರು ಮಾದರಿಗಳಲ್ಲಿರುತ್ತವೆ:

- **ಷೇರು ಬಂಡವಾಳ ಮತ್ತು ಸಾಲಗಳು** – ಕರ್ನಾಟಕ ಸರ್ಕಾರವು, ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಕಾಲಾನುಕಾಲಕ್ಕೆ ಷೇರು ಬಂಡವಾಳ ಕಾಣಿಕೆ ಹಾಗೂ ಸಾಲಗಳ ರೂಪದಲ್ಲಿ ಹಣಕಾಸಿನ ಸಹಾಯವನ್ನು ಒದಗಿಸುತ್ತದೆ.

➢ **ವಿಶೇಷ ಹಣಕಾಸು ಬೆಂಬಲ** – ಕರ್ನಾಟಕ ಸರ್ಕಾರವು, ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಅಗತ್ಯಬಿದ್ದಂತೆಲ್ಲ ಅನುದಾನಗಳು ಹಾಗೂ ಸಹಾಯಧನಗಳ ರೂಪದಲ್ಲಿ ಆಯವ್ಯಯ ಬೆಂಬಲವನ್ನು ನೀಡುತ್ತದೆ; ಹಾಗೂ

➢ **ಖಾತರಿಗಳು** – ಕರ್ನಾಟಕ ಸರ್ಕಾರವು, ಸಾರ್ವಜನಿಕ ವಲಯ ಉದ್ದಿಮೆಗಳು ಹಣಕಾಸು ಸಂಸ್ಥೆಗಳಿಂದ ಉಪಯೋಗಿಸಿಕೊಳ್ಳುವಂತಹ ಸಾಲಗಳ ಮರುಪಾವತಿಗೆ (ಬಡ್ಡಿಯೊಂದಿಗೆ) ಖಾತರಿಗಳನ್ನೂ ಸಹ ನೀಡುತ್ತದೆ.

**1.8.** 31 ಮಾರ್ಚ್ 2021ರಲ್ಲಿದ್ದಂತೆ, ಈ ಕೆಳಗೆ ನೀಡಲಾಗಿರುವಂತಹ ವಿವರಗಳ ಅನುಸಾರ 124 ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿರುವಂತಹ ಹೂಡಿಕೆಯು (ಬಂಡವಾಳ ಮತ್ತು ದೀರ್ಘಾವಧಿ ಸಾಲಗಳು) ₹ 1,85,804.43 ಕೋಟಿ[46] ಮೊತ್ತದಷ್ಟು ಆಗಿತ್ತು:

**ಕೋಷ್ಟಕ ಸಂಖ್ಯೆ 2 : ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಒಟ್ಟಾರೆ ಹೂಡಿಕೆಗಳು**

(₹ ಕೋಟಿಯಲ್ಲಿ)

| ಕ್ರಮ ಸಂಖ್ಯೆ | ಸಾರ್ವಜನಿಕ ವಲಯ ಉದ್ದಿಮೆಗಳ ಮಾದರಿ | ಸರ್ಕಾರಿ ಕಂಪನಿಗಳು | | | ಶಾಸನಬದ್ಧ ನಿಗಮಗಳು | | | ಒಟ್ಟಾರೆ ಮೊತ್ತ |
|---|---|---|---|---|---|---|---|---|
| | | ಬಂಡವಾಳ | ದೀರ್ಘಾವಧಿ ಸಾಲಗಳು | ಒಟ್ಟು | ಬಂಡವಾಳ | ದೀರ್ಘಾವಧಿ ಸಾಲಗಳು | ಒಟ್ಟು | |
| 1 | ಕಾರ್ಯನಿರತ ಸಾವಉಗಳು | 88,524.14 | 91,059.38 | 1,79,583.52 | 1,883.46 | 3,667.27 | 5,550.73 | 1,85,134.25 |
| 2 | ಕಾರ್ಯಸ್ಥಗಿತ ಸಾವಉಗಳು | 160.21 | 509.97 | 670.18 | – | – | – | 670.18 |
| | **ಒಟ್ಟು** | **88,684.35** | **91,569.35** | **1,80,253.70** | **1,883.46** | **3,667.27** | **5,550.73** | **1,85,804.43** |

31 ಮಾರ್ಚ್ 2021ರಲ್ಲಿದ್ದಂತೆ, ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಒಟ್ಟಾರೆ ಹೂಡಿಕೆಗಳ ಪೈಕಿ, ಶೇಕಡಾ 99.64ರಷ್ಟು ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಆಗಿತ್ತು ಹಾಗೂ ಶೇಕಡಾ 0.36ರಷ್ಟು ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಆಗಿತ್ತು. ಈ ಒಟ್ಟಾರೆ ಹೂಡಿಕೆಯು ಶೇಕಡಾ 48.74ರಷ್ಟು ಬಂಡವಾಳ ಹೂಡಿಕೆಯ ಕಡೆಗೆ ಹಾಗೂ ಶೇಕಡಾ 51.26ರಷ್ಟು ದೀರ್ಘಾವಧಿ ಸಾಲಗಳ ಕಡೆಗೆ ಒಳಗೊಂಡಿತ್ತು. ಈ ಕೆಳಗಿನ ನಕಾಶೆಯಲ್ಲಿ ತೋರಿಸಿದಂತೆ ಹೂಡಿಕೆಯು 2016–17 ಸಾಲಿನಲ್ಲಿದ್ದಂತಹ ₹ 1,03,717.40 ಕೋಟಿ ಮೊತ್ತದಿಂದ 2020–21 ಸಾಲಿಗೆ ಶೇಕಡಾ 79.14ರಷ್ಟು ಅಂದರೆ ₹ 1,85,804.43 ಕೋಟಿ ಮೊತ್ತಕ್ಕೆ ಬೆಳವಣಿಗೆಯನ್ನು ಕಂಡಿತ್ತು.

**ರೇಖಾಚಿತ್ರ ಸಂಖ್ಯೆ 1: ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿದ್ದಂತಹ ಒಟ್ಟಾರೆ ಹೂಡಿಕೆಗಳು**

**(₹ ಕೋಟಿಯಲ್ಲಿ)**




[46] ಇಪ್ಪತ್ತೇಳು ಸಾರ್ವಜನಿಕ ವಲಯ ಉದ್ದಿಮೆಗಳು ಮಾರ್ಚ್ 2021ರ ಅಂತ್ಯದಲ್ಲಿದ್ದಂತೆ ಹೂಡಿಕೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಲಿಲ್ಲವಾದ್ದರಿಂದ, ಹಿಂದಿನ ಸಾಲುಗಳಲ್ಲಿ ಒದಗಿಸಿದ್ದಂತಹ ಮಾಹಿತಿ/ಇತ್ತೀಚೆಗೆ ಅಂತಿಮ ರೂಪಕ್ಕೆ ತರಲಾಗಿದ್ದಂತಹ ಲೆಕ್ಕಪತ್ರಗಳ ಅನುಸಾರ ಮಾಹಿತಿಯನ್ನು ಪರಿಗಣಿಸಲಾಯಿತು.

**1.9.** 31 ಮಾರ್ಚ್ 2021ರಲ್ಲಿದ್ದಂತೆ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮಾಡಲಾಗಿದ್ದಂತಹ ಹೂಡಿಕೆಗಳ ವಲಯವಾರು ಸಂಕ್ಷಿಪ್ತ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 3 : ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ವಲಯವಾರು ಹೂಡಿಕೆಗಳು**

| ಕ್ರಮ ಸಂಖ್ಯೆ | ವಲಯದ ಹೆಸರು | ಸರ್ಕಾರಿ ಕಂಪನಿಗಳು | | ಶಾಸನಬದ್ಧ ನಿಗಮಗಳು | ಒಟ್ಟು | ಹೂಡಿಕೆಗಳು (₹ ಕೋಟಿಯಲ್ಲಿ) |
|---|---|---|---|---|---|---|
| | | ಕಾರ್ಯನಿರತ | ಕಾರ್ಯಸ್ಥಗಿತ | | | |
| 1 | ಕೃಷಿ ಹಾಗೂ ಸಂಬಂಧಿತ ಚಟುವಟಿಕೆಗಳು | 14 | 5 | 1 | 20 | 1,053.34 |
| 2 | ಹಣಕಾಸು | 25 | – | 1 | 26 | 4,801.90 |
| 3 | ಮೂಲಸೌಕರ್ಯ | 25 | 1 | – | 26 | 93,226.24 |
| 4 | ಉತ್ಪಾದನೆ | 19 | 7 | – | 26 | 2,186.54 |
| 5 | ಇಂಧನ | 11 | – | – | 11 | 81,974.15 |
| 6 | ಸೇವೆಗಳು | 6 | – | 4 | 10 | 2,552.19 |
| 7 | ಇತರವುಗಳು | 5 | – | – | 5 | 10.07 |
| | **ಒಟ್ಟು** | **105** | **13** | **6** | **124** | **1,85,804.43** |

31 ಮಾರ್ಚ್ 2017 ಹಾಗೂ 31 ಮಾರ್ಚ್ 2021ರಲ್ಲಿದ್ದಂತೆ ನಾಲ್ಕು ಗಮನಾರ್ಹವಾದಂತಹ ವಲಯಗಳಲ್ಲಿನ ಹೂಡಿಕೆಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಲಾಗಿದೆ:

**ರೇಖಾಚಿತ್ರ ಸಂಖ್ಯೆ 2 : ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ವಲಯವಾರು ಹೂಡಿಕೆಗಳು**

(₹ ಕೋಟಿಯಲ್ಲಿ)




ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಮೂಲಸೌಕರ್ಯಗಳು ಹಾಗೂ ಇಂಧನ ವಲಯಗಳಲ್ಲಿ ಹೂಡಿಕೆಗಳಿಗೆ ಒತ್ತು ನೀಡಲಾಗಿದೆ, ಅವು, 2020–21 ಸಾಲಿನಲ್ಲಿ ಅನುಕ್ರಮವಾಗಿ ಶೇಕಡಾ 50.17 ಹಾಗೂ ಶೇಕಡಾ 44.12ರಷ್ಟು ಆಗಿದ್ದವು. 2016–17 ಹಾಗೂ 2020–21ರ ನಡುವೆ ಮೂಲಸೌಕರ್ಯಗಳು ಹಾಗೂ ಇಂಧನ ವಲಯಗಳಲ್ಲಿನ ಹೂಡಿಕೆಗಳು ಅನುಕ್ರಮವಾಗಿ ₹ 39,667.67 ಕೋಟಿ ಹಾಗೂ ₹ 39,781.19 ಕೋಟಿ ಮೊತ್ತಗಳಷ್ಟು ಹೆಚ್ಚಳಗೊಂಡಿದ್ದವು.

## ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳ ಸಲ್ಲಿಕೆ

**1.10**. ಪ್ರತಿಯೊಂದು ಹಣಕಾಸು ವರ್ಷಕ್ಕೂ ಕಂಪನಿಗಳ ಹಣಕಾಸು ತಃಖ್ತೆಗಳನ್ನು ಸಂಬಂಧಿತ ಹಣಕಾಸು ವರ್ಷ ಮುಕ್ತಾಯಗೊಂಡ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಸೆಪ್ಟೆಂಬರ್[47] ಅಂತ್ಯದ ಒಳಗೆ, ಕಂಪನಿಗಳ ಅಧಿನಿಯಮ, 2013ರ ಪರಿಚ್ಛೇದ 96 (1)ರ ಅನುವುಗಳ ಅನುಸಾರ ಅಂತಿಮರೂಪಕ್ಕೆ ತರುವ ಅಗತ್ಯತೆಯಿರುತ್ತದೆ. ಆ ರೀತಿ ಮಾಡಲು ತಪ್ಪಿದಲ್ಲಿ ಅಧಿನಿಯಮದ ಪರಿಚ್ಛೇದ 99ರ ಅಡಿಯಲ್ಲಿ ದಂಡನೆಯ ಅನುವುಗಳನ್ನು ಸೆಳೆಯಲ್ಪಡಬಹುದು. ಅದರಂತೆಯೇ, ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದಂತೆ, ಅವುಗಳ ಸಂಬಂಧಿತ ಅಧಿನಿಯಮಗಳ ಅನುವುಗಳ ಅನುಸಾರ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರಲಾಗುವುದು, ಲೆಕ್ಕಪರಿಶೋಧನೆಗೆ ಒಳಪಡಿಸಲಾಗುವುದು ಹಾಗೂ ಶಾಸಕಾಂಗದ ಮುಂದೆ ಮಂಡಿಸಲಾಗುವುದು.

ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳಿಂದ 30 ನವೆಂಬರ್ 2021ರ[48] ವೇಳೆಗೆ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿನ ಪ್ರಗತಿಯ ವಿವರಗಳನ್ನು ಈ ಕೆಳಗಿನ ಕೋಷ್ಟಕವು ನೀಡುತ್ತದೆ:

**ಕೋಷ್ಟಕ ಸಂಖ್ಯೆ. 4: ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವುದಕ್ಕೆ ಸಂಬಂಧಿತ ಸ್ಥಿತಿಗತಿಗಳು**

| ಕ್ರಮ ಸಂಖ್ಯೆ | ವಿವರಗಳು | 2016–17 | 2017–18 | 2018–19 | 2019–20 | 2020–21 |
|---|---|---|---|---|---|---|
| 1 | ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | 90 | 94 | 101 | 107 | 111 |
| 2 | ಪ್ರಸಕ್ತ ಸಾಲಿನಲ್ಲಿ ಅಂತಿಮರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 72 | 83 | 106 | 110 | 76 |
| 3 | ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ ಅಂತಿಮರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 30 | 32 | 49 | 61 | 38 |
| 4 | ಹಿಂದಿನ ಸಾಲುಗಳಿಗೆ ಸಂಬಂಧಿಸಿದಂತೆ ಅಂತಿಮರೂಪಕ್ಕೆ ತರಲಾದ ಲೆಕ್ಕಪತ್ರಗಳ ಸಂಖ್ಯೆ | 42 | 51 | 57 | 49 | 38 |
| 5 | ಅಂತಿಮರೂಪಕ್ಕೆ ತರಲು ಬಾಕಿಯಿರುವಂತಹ ಲೆಕ್ಕಪತ್ರಗಳ ಸಂಖ್ಯೆ | 75 | 81 | 80 | 76 | 107 |
| 6 | ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿ ಬಾಕಿಗಳನ್ನು ಹೊಂದಿರುವ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | 59 | 62 | 52 | 45 | 70 |
| 7 | ಬಾಕಿಗಳ ವಿಸ್ತೀರ್ಣ (ವರ್ಷಗಳ ಸಂಖ್ಯೆ) | 1ರಿಂದ 4 ವರ್ಷಗಳು | 1ರಿಂದ 5 ವರ್ಷಗಳು | 1ರಿಂದ 6 ವರ್ಷಗಳು | 1ರಿಂದ 6 ವರ್ಷಗಳು | 1ರಿಂದ 7 ವರ್ಷಗಳು |

ಪ್ರಸಕ್ತ ಸಾಲಿನಲ್ಲಿ, 71 ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿತ 76 ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರಲಾಗಿತ್ತು. ಅವುಗಳ ಪೈಕಿ ಆರು ಶಾಸನಬದ್ಧ ನಿಗಮಗಳ ಆರು ಲೆಕ್ಕಪತ್ರಗಳು ಒಳಗೊಂಡಿದ್ದವು. ಬಾಕಿಗಳಲ್ಲಿದ್ದಂತಹ ಲೆಕ್ಕಪತ್ರಗಳ ಸಂಖ್ಯೆ 75ರಿಂದ (2016–17) 107ಕ್ಕೆ (2020–21) ಏರಿಕೆಯಾಗಿತ್ತು. ಬಾಕಿಗಳಲ್ಲಿದ್ದಂತಹ 107 ಲೆಕ್ಕಪತ್ರಗಳ ಪೈಕಿ, 101 ಲೆಕ್ಕಪತ್ರಗಳು ಕಾರ್ಯನಿರತ ಸರ್ಕಾರಿ ಕಂಪನಿಗಳಿಗೆ ಸೇರಿದ್ದವು, ಇವು ಒಂದರಿಂದ ಏಳು ವರ್ಷಗಳ ಬಾಕಿಗಳಲ್ಲಿದ್ದವು ಹಾಗೂ ಆರು ಶಾಸನಬದ್ಧ ನಿಗಮಗಳಿಗೆ ಸಂಬಂಧಿಸಿದ್ದಂತಹ ಆರು ಲೆಕ್ಕಪತ್ರಗಳು ಒಂದು ವರ್ಷದ ಅವಧಿಗೆ ಬಾಕಿಗಳಲ್ಲಿದ್ದವು.

[47] 2020–21 ಹಣಕಾಸು ಸಾಲಿಗೆ ಕಂಪನಿಗಳ ನಿಬಂಧಕರು, ಬೆಂಗಳೂರು, ಇವರು, ತಮ್ಮ ಆದೇಶ ದಿನಾಂಕ 23 ಸೆಪ್ಟೆಂಬರ್ 2021ರ ಮೂಲಕ ನಿಗದಿತ ದಿನಾಂಕವನ್ನು 30 ನವೆಂಬರ್ 2021ರವರೆಗೂ ವಿಸ್ತರಿಸಿದ್ದರು.

[48] 2016–17ರಿಂದ 2018–19ರ ಹಣಕಾಸು ವರ್ಷಗಳಿಗೆ ಪ್ರಗತಿಯು ಆಯಾ ವರ್ಷದ 30 ಸೆಪ್ಟೆಂಬರ್‌ರಲ್ಲಿದ್ದಂತೆ ಇತ್ತು ಮತ್ತು 2019–20ರ ಹಣಕಾಸು ವರ್ಷಕ್ಕೆ 31.12.2020 ಆಗಿತ್ತು.

ಆಡಳಿತಾತ್ಮಕ ಇಲಾಖೆಗಳು ಈ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡುವಲ್ಲಿ ಹಾಗೂ ಈ ಸಾರ್ವಜನಿಕ ವಲಯ ಉದ್ದಿಮೆಗಳು ನಿರ್ದಿಷ್ಟ ಅವಧಿಯ ಒಳಗೆ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತಂದಿವೆ ಹಾಗೂ ಅವುಗಳನ್ನು ಅಳವಡಿಸಿಕೊಂಡಿವೆ/ಅನುಮೋದಿಸಿವೆ ಎಂಬುದನ್ನು ಖಚಿತಪಡಿಸಿಕೊಳ್ಳುವಲ್ಲಿ ಜವಾಬ್ದಾರಿಯನ್ನು ಹೊಂದಿವೆ. ಲೆಕ್ಕಪತ್ರಗಳ ಈ ಬಾಕಿಗಳನ್ನು ಸಮಾಪ್ತಿಗೊಳಿಸುವ ಉದ್ದೇಶದಿಂದ ಪ್ರಧಾನ ಮಹಾಲೇಖಾಪಾಲರು/ಮಹಾಲೇಖಾಪಾಲರು ರಾಜ್ಯ ಸರ್ಕಾರ/ಸಂಬಂಧಿತ ಆಡಳಿತಾತ್ಮಕ ಇಲಾಖೆಗಳೊಂದಿಗೆ ಈ ವಿಷಯವನ್ನು ಕಾಲಾನುಕಾಲಕ್ಕೆ ಕೈಗೆತ್ತಿಕೊಂಡಿದ್ದರು.

**1.11**. ರಾಜ್ಯ ಸರ್ಕಾರವು ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರದೇ ಇದ್ದ 70 ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ 36ರಲ್ಲಿ ಆ ಅವಧಿಗೆ **₹** 18,319.38 ಕೋಟಿ ಮೊತ್ತವನ್ನು ಹೂಡಿಕೆ ಮಾಡಿದೆ. ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿನ ಹಾಗೂ ತದನಂತರದಲ್ಲಿ ಅವುಗಳ ಲೆಕ್ಕಪರಿಶೋಧನೆಯ ಅನುಪಸ್ಥಿತಿಯಲ್ಲಿ ಮಾಡಲಾಗಿರುವ ಹೂಡಿಕೆಗಳು ಹಾಗೂ ಭರಿಸಲಾಗಿರುವಂತಹ ವೆಚ್ಚಗಳನ್ನು ಸಮರ್ಪಕವಾದಂತಹ ರೀತಿಯಲ್ಲಿ ಲೆಕ್ಕವನ್ನಿಡಲಾಗಿರುವುದೇ ಹಾಗೂ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಹೂಡಿಕೆ ಮಾಡಲಾಗಿತ್ತೋ ಅಂತಹ ಉದ್ದೇಶವು ಈಡೇರಿರುವುದೋ ಅಥವಾ ಇಲ್ಲವೋ ಎಂಬುದನ್ನು ಖಚಿತಪಡಿಸಿಕೊಳ್ಳಲಾಗಲಿಲ್ಲ. ಈ ರೀತಿಯಾಗಿ, ಅಂತಹ ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿನ ಸರ್ಕಾರದ ಹೂಡಿಕೆಯು ರಾಜ್ಯ ಶಾಸಕಾಂಗದ ನಿಯಂತ್ರಣದಿಂದ ಹೊರಗೆ ಉಳಿದಿತ್ತು.

**1.12**. ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳಿಂದ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿ ಬಾಕಿಗಳಿದ್ದವು. 13 ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, ನಾಲ್ಕು[49] ಉದ್ದಿಮೆಗಳು ಸಮಾಪನ ಪ್ರಕ್ರಿಯೆಯ ಅಡಿಯಲ್ಲಿದ್ದವು, ಈ ನಾಲ್ಕು ಉದ್ದಿಮೆಗಳ ಲೆಕ್ಕಪತ್ರಗಳು ಹದಿನಾರರಿಂದ ಹದಿನೆಂಟು ಸಾಲುಗಳವರೆಗೆ ಬಾಕಿಗಳಲ್ಲಿದ್ದವು. ಉಳಿದ ಒಂಭತ್ತು ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಐದು[50] ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳ ಬಾಕಿಗಳಿರಲಿಲ್ಲ ಹಾಗೂ ನಾಲ್ಕು ಸಾರ್ವಜನಿಕ ವಲಯ ಉದ್ದಿಮೆಗಳ (ಎನ್‌ಜಿಇಎಫ್, ಬಿಎಸ್‌ಆರ್‌ಸಿಎಲ್, ಎಮ್‌ಎಲ್‌ಡಬ್ಲೂ ಹಾಗೂ ಎಂಎಂಸಿಎಲ್) ಲೆಕ್ಕಪತ್ರಗಳು ಎರಡು ವರ್ಷಗಳಿಗೆ (ಎನ್‌ಜಿಇಎಫ್), ಏಳು ವರ್ಷಗಳಿಗೆ (ಬಿಎಸ್‌ಆರ್‌ಸಿಎಲ್) ಹಾಗೂ ಒಂದು ವರ್ಷಕ್ಕೆ (ಎಮ್‌ಎಲ್‌ಡಬ್ಲೂ ಹಾಗೂ ಎಂಎಂಸಿಎಲ್) ಬಾಕಿಗಳಲ್ಲಿದ್ದವು. ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳನ್ನು ಅಂತಿಮ ರೂಪಕ್ಕೆ ತರುವಲ್ಲಿನ ಬಾಕಿಗಳಿಗೆ ಸಂಬಂಧಿಸಿದಂತೆ ಸ್ಥಿತಿಗತಿಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 5: ಕಾರ್ಯಸ್ಥಗಿತ ಸಾರ್ವಜನಿಕ ವಲಯ ಉದ್ದಿಮೆಗಳ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತರುವಲ್ಲಿನ ಬಾಕಿಗಳಿಗೆ ಸಂಬಂಧಿಸಿದಂತೆ ಸ್ಥಿತಿಗತಿ**

| ಕ್ರಮ ಸಂಖ್ಯೆ | ಕಾರ್ಯಸ್ಥಗಿತ ಕಂಪನಿಗಳ ಸಂಖ್ಯೆ | ಲೆಕ್ಕಪತ್ರಗಳು ಬಾಕಿಯಿದ್ದಂತಹ ಅವಧಿಗಳು | ಲೆಕ್ಕಪತ್ರಗಳು ಎಷ್ಟು ವರ್ಷಗಳಿಗೆ ಬಾಕಿಯಿದ್ದವು |
|---|---|---|---|
| 1 | 2 | 2020–21 | 1 |
| 2 | 1 | 2019–20 ರಿಂದ 2020–21 | 2 |
| 3 | 1 | 2014–15 ರಿಂದ 2020–21 | 7 |
| 4 | 1 | 2005–06 ರಿಂದ 2020–21 | 16 |
| 5 | 2 | 2004–05 ರಿಂದ 2020–21 | 17 |
| 6 | 1 | 2003–04 ರಿಂದ 2020–21 | 18 |

**ಇತ್ತೀಚಿನ ಅಂತಿಮರೂಪಕ್ಕೆ ತರಲಾಗಿರುವ ಲೆಕ್ಕಪತ್ರಗಳ ಅನುಸಾರ ಸಾರ್ವಜನಿಕ ವಲಯ ಉದ್ದಿಮೆಗಳ ಕಾರ್ಯನಿರ್ವಹಣೆ**

**1.13**. 2016–17ರಿಂದ 2020–21 ಸಾಲುಗಳಲ್ಲಿ ರಾಜ್ಯದಲ್ಲಿನ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು, ಅವುಗಳ ಇತ್ತೀಚಿನ ಅಂತಿಮರೂಪಕ್ಕೆ ತರಲ್ಪಟ್ಟಿರುವ ಲೆಕ್ಕಪತ್ರಗಳ ಅನುಸಾರ 30

[49] ಕೆಎಸ್‌ವಿಎಲ್, ಎಂಸಿಎಲ್, ಕೆಟಿಎಲ್ ಮತ್ತು ಎಂಎಸಿಸಿಎಲ್.

[50] ಕೆಎಐಸಿ, ಎಮ್‌ಟಿಸಿ, ಕೆಪಿಎಲ್, ವಿಎಸ್‌ಎಲ್ ಮತ್ತು ಎಂಸಿಟಿ.

ನವೆಂಬರ್ 2021ರಲ್ಲಿದ್ದಂತೆ ಗಳಿಸಲಾದಂತಹ (ಭರಿಸಲಾದಂತಹ) ಲಾಭ (ನಷ್ಟಗಳ)[51] ವಿವರಗಳನ್ನು ಈ ಕೆಳಗಿನ ದಂಡನಕ್ಷೆಯಲ್ಲಿ (ಬಾರ್–ಚಾರ್ಟ್) ನೀಡಲಾಗಿದೆ :

**ರೇಖಾಚಿತ್ರ ಸಂಖ್ಯೆ 3: ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಲಾಭ/ನಷ್ಟ**

**(₹ ಕೋಟಿಯಲ್ಲಿ)**




**(ಆವರಣದಲ್ಲಿನ ಅಂಕಿಸಂಖ್ಯೆಗಳು ಸಂಬಂಧಿತ ಸಾಲುಗಳಲ್ಲಿ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆಯನ್ನು ತೋರಿಸುತ್ತದೆ)**

ಅವುಗಳ ಇತ್ತೀಚಿನ ಅಂತಿಮರೂಪಕ್ಕೆ ತರಲ್ಪಟ್ಟಿರುವಂತಹ ಲೆಕ್ಕಪತ್ರಗಳ ಅನುಸಾರ, 124 ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, 111 ಸಾರ್ವಜನಿಕ ವಲಯ ಉದ್ದಿಮೆಗಳು ಕಾರ್ಯನಿರತವಾಗಿರುತ್ತವೆ ಹಾಗೂ 13 ಸಾರ್ವಜನಿಕ ವಲಯ ಉದ್ದಿಮೆಗಳು ಕಾರ್ಯಸ್ಥಗಿತವಾಗಿರುತ್ತವೆ. 111 ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ, 47 ಸಾರ್ವಜನಿಕ ವಲಯ ಉದ್ದಿಮೆಗಳು ₹ 2,986.47 ಕೋಟಿ ಮೊತ್ತದಷ್ಟು ಲಾಭವನ್ನು ಗಳಿಸಿರುವವು ಹಾಗೂ 42 ಸಾರ್ವಜನಿಕ ವಲಯ ಉದ್ದಿಮೆಗಳು ₹ 8,124.12 ಕೋಟಿ ಮೊತ್ತದಷ್ಟು ನಷ್ಟವನ್ನು ಭರಿಸಿರುವವು. ಮೂರು ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಸ್ಎಸ್ಡಿಸಿಎಲ್, ಕೆಎಮ್ಎಮ್ಡಿಸಿಎಲ್, ಕೆಎಡಿಸಿಎಲ್) ತಮ್ಮ ಮೊದಲ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತಂದಿರುವುದಿಲ್ಲ. ಹನ್ನೊಂದು[52] ಸಾರ್ವಜನಿಕ ವಲಯ ಉದ್ದಿಮೆಗಳು ಕೇವಲ ಆದಾಯ ಮತ್ತು ವೆಚ್ಚ ತಃಖ್ತೆಯನ್ನು ತಯಾರಿಸಿರುವವು. ನಾಲ್ಕು ಸಾರ್ವಜನಿಕ ವಲಯ ಉದ್ದಿಮೆಗಳು (ಕೆಎಮ್ಐಸಿಎಲ್, ಎಫ್‌ಕೆಎಲ್, ಕೆವಿಸಿಡಿಸಿಎಲ್ ಮತ್ತು ಕೆಬಿಡಿಬಿ) ವೆಚ್ಚವು ಅದರ ಆದಾಯಕ್ಕೆ ಸಮನಾಗಿತ್ತು. ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಸ್ಥಾಪಿಸಲಾದಂತಹ ನಾಲ್ಕು ಸಾರ್ವಜನಿಕ ವಲಯ ಉದ್ದಿಮೆಗಳ ಪೈಕಿ ಒಂದು ಸಾವಲು (ಕೆಎಸ್ಎಮ್ಎಸ್ಸಿಎಲ್) ಲೆಕ್ಕಪತ್ರಗಳು ಬಾಕಿ ಇದ್ದಾಗ್ಯೂ ತಮ್ಮ ಪ್ರಪ್ರಥಮ ಲೆಕ್ಕಪತ್ರಗಳನ್ನು ಅಂತಿಮರೂಪಕ್ಕೆ ತಂದಿರಲಿಲ್ಲ ಹಾಗೂ ಮೂರು ಸಾವಲುಗಳ (ಬಿ–ರೈಡ್, ಕೆವಿಎಲ್ಡಿಸಿಎಲ್ ಮತ್ತು ಐಎಫ್ಎಬಿಎಲ್) 2020–21ರ ಸಾಲಿನ ಲೆಕ್ಕಪತ್ರಗಳು ಬಾಕಿಗೆ ಬಂದಿರಲಿಲ್ಲ.

ಗಳಿಸಲಾಗಿರುವಂತಹ ಲಾಭಕ್ಕೆ ಪ್ರಮುಖವಾಗಿ ಕಾಣಿಕೆ ನೀಡಿರುವ ಉದ್ದಿಮೆಗಳೆಂದರೆ ಕೆಪಿಸಿಎಲ್ (₹ 1,209.56 ಕೋಟಿ) ಹಾಗೂ ಕೆಪಿಟಿಸಿಎಲ್ (₹ 398.93 ಕೋಟಿ). ಹೆಸ್ಕಾಂ (₹ 2,490.26 ಕೋಟಿ) ಹಾಗೂ ಆರ್‌ಪಿಸಿಎಲ್ (₹ 1,431.84 ಕೋಟಿ) ಗಮನಾರ್ಹ ಮೊತ್ತದ ನಷ್ಟಗಳನ್ನು ಭರಿಸಿದ್ದವು.

ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು 2016–17ರಲ್ಲಿ ₹ 155.12 ಕೋಟಿ ಮೊತ್ತದಷ್ಟು ನಿವ್ವಳ ಒಟ್ಟಾರೆ ಲಾಭಗಳನ್ನು ತೋರಿಸಿದ್ದವು ಹಾಗೂ 2017–18, 2018–19, 2019–20 ಹಾಗೂ

[51] 2017–18, 2018–19, 2019–20 ಮತ್ತು 2020–21 ಸಾಲುಗಳಲ್ಲಿನ ಲಾಭ/ನಷ್ಟಗಳನ್ನು ಇತರೆ ಸಮಗ್ರ ವರಮಾನವನ್ನು (ಒಸಿಐ) ಪರಿಗಣಿಸಿದನಂತರ ಲೆಕ್ಕಹಾಕಲಾಗಿರುವುದು.

[52] ಕೆಎಸ್‌ಡಬ್ಲ್ಯೂಡಿಸಿ, ಕೆಎಸ್ಎಸ್‌ಕೆಡಿಸಿಎಲ್, ಕೆಎಜೆಡಿಸಿ, ಆರ್‌ಜಿಎಚ್‌ಸಿಎಲ್, ಕೆಎಫ್‌ಸಿಎಸ್‌ಸಿಎಲ್, ಕೆವಿಟಿಎಸ್‌ಡಿಸಿಎಲ್, ಐಕೆಎಫ್, ಬಿಬಿಸಿ, ಟಿಎಂಟಿಪಿ, ಎಸ್‌ಜಿಬಿ ಹಾಗೂ ಕೆಎಂಇಆರ್‌ಸಿಎಲ್.

2020–21 ಸಾಲುಗಳಲ್ಲಿ ಅನುಕ್ರಮವಾಗಿ ₹ 2,099.69 ಕೋಟಿ, ₹ 2,340.99 ಕೋಟಿ, ₹ 3,374.05 ಕೋಟಿ ಹಾಗೂ ₹ 5,137.65 ಕೋಟಿ ಮೊತ್ತದಷ್ಟು ನಿವ್ವಳ ಒಟ್ಟಾರೆ ನಷ್ಟವನ್ನು ಭರಿಸಿದ್ದವು.

2016–17ರಿಂದ 2020–21ರಲ್ಲಿ ಲಾಭ ಗಳಿಸಿದ/ನಷ್ಟ ಭರಿಸಿದ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳ ಸ್ಥಿತಿಗತಿಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 6: ಲಾಭ ಗಳಿಸಿದ/ನಷ್ಟ ಭರಿಸಿದ ಕಾರ್ಯನಿರತ ಸಾರ್ವಜನಿಕ ವಲಯ ಉದ್ದಿಮೆಗಳು**

| ಕ್ರಮ ಸಂಖ್ಯೆ | ವರ್ಷ | ಒಟ್ಟು ಸಾರ್ವಜನಿಕ ವಲಯ ಉದ್ದಿಮೆಗಳು | ಪ್ರಸಕ್ತ ಸಾಲಿನಲ್ಲಿ ಲಾಭಗಳನ್ನು ಗಳಿಸಿದ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಪ್ರಸಕ್ತ ಸಾಲಿನಲ್ಲಿ ನಷ್ಟಗಳನ್ನು ಭರಿಸಿದ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ | ಲಾಭ ಮತ್ತು ನಷ್ಟ ತಃಖ್ತೆಯನ್ನು[53]ತಯಾರಿಸದಿದ್ದಂತಹ ಸಾರ್ವಜನಿಕ ವಲಯ ಉದ್ದಿಮೆಗಳ ಸಂಖ್ಯೆ |
|---|---|---|---|---|---|
| 1 | 2016–17 | 90 | 52 | 22 | 16 |
| 2 | 2017–18 | 94 | 51 | 29 | 14 |
| 3 | 2018–19 | 101 | 54 | 34 | 13 |
| 4 | 2019–20 | 107 | 53 | 37 | 17 |
| 5 | 2020–21 | 111 | 47 | 42 | 22 |

## ಈ ವರದಿಯ ವ್ಯಾಪ್ತಿ

**1.14**. ಅಧ್ಯಾಯ IIರಲ್ಲಿ ಸೇರಿಸಲಾಗಿರುವಂತಹ ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು ಎಂಟು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು ಒಳಗೊಂಡಿವೆ.

ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳಲ್ಲಿ ಒಳಗೊಂಡಿರುವಂತಹ ಹಣಕಾಸಿನ ಬಾಧ್ಯತೆಯು ₹ 367.57 ಕೋಟಿ ಆಗಿದೆ.

## ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ

***ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳು***

**1.15**. ಸಾರ್ವಜನಿಕ ವಲಯ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಎಂಟು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳನ್ನು, ಅವುಗಳಿಗೆ ಸಂಬಂಧಿಸಿದಂತೆ ಉತ್ತರಗಳನ್ನು ಒದಗಿಸುವ ಸಲುವಾಗಿ ಕೋರಿಕೆಯೊಂದಿಗೆ ಕರ್ನಾಟಕ ಸರ್ಕಾರಕ್ಕೆ ನೀಡಲಾಗಿತ್ತು (ನವೆಂಬರ್ 2021ರಿಂದ ಏಪ್ರಿಲ್ 2022ರ ನಡುವೆ). ಎಲ್ಲಾ ಎಂಟು ಅನುಪಾಲನಾ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಉತ್ತರಗಳನ್ನು ಸ್ವೀಕರಿಸಲಾಗಿದೆ ಹಾಗೂ ಅವುಗಳನ್ನು ವರದಿಯಲ್ಲಿ ಸೂಕ್ತ ರೀತಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

## ಲೆಕ್ಕಪರಿಶೋಧನಾ ವರದಿಗಳಿಗೆ ಸಂಬಂಧಿಸಿದಂತೆ ಅನುಸರಣಾ ಕ್ರಮಗಳು

***ಸ್ವೀಕರಿಸಲು ಬಾಕಿಯಿರುವಂತಹ ಉತ್ತರಗಳು***

**1.16**. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳು ಲೆಕ್ಕಪರಿಶೋಧನಾ ಪರಿಶೀಲನಾ ಪ್ರಕ್ರಿಯೆಯ ಮುಕ್ತಾಯವನ್ನು ಪ್ರತಿನಿಧಿಸುತ್ತವೆ. ಆದ್ದರಿಂದ, ಅವುಗಳು ಕಾರ್ಯಾಂಗದಿಂದ ಸೂಕ್ತವಾದಂತಹ ಮತ್ತು ಸಮಯೋಚಿತ ಪ್ರತಿಕ್ರಿಯೆಯನ್ನು ಹೊರಸೆಳೆಯುವುದು ಅತ್ಯಗತ್ಯವಾಗಿರುತ್ತದೆ. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯು, ಭಾರತದ ಲೆಕ್ಕನಿಯಂತ್ರಕರು ಮತ್ತು

[53] ಯೋಜನೆಯು ಪೂರ್ಣಗೊಳ್ಳುವುದು ಬಾಕಿಯಿದ್ದಂತೆ ಲಾಭ ಮತ್ತು ನಷ್ಟ ತಃಖ್ತೆಯನ್ನು ತಯಾರಿಸದಿರುವ ಸಾರ್ವಜನಿಕ ವಲಯ ಉದ್ದಿಮೆಗಳು, ತಮ್ಮ ಕಾರ್ಯಾಚರಣೆಯ ಮೊದಲ ವರ್ಷದಿಂದಲೂ ಲೆಕ್ಕಪತ್ರಗಳನ್ನು ತಯಾರಿಸದಿರುವ ಸಾರ್ವಜನಿಕ ವಲಯ ಉದ್ದಿಮೆಗಳು, ಲಾಭ ಮತ್ತು ನಷ್ಟ ತ:ಖ್ತೆಗೆ ಬದಲಾಗಿ ಆದಾಯ ಮತ್ತು ವೆಚ್ಚ ತಃಖ್ತೆಯನ್ನು ತಯಾರಿಸಿರುವ ಸಾರ್ವಜನಿಕ ವಲಯ ಉದ್ದಿಮೆಗಳು ಹಾಗೂ ಲಾಭ/ನಷ್ಟವು ಶೂನ್ಯವಾಗಿರುವ ಸಾರ್ವಜನಿಕ ವಲಯ ಉದ್ದಿಮೆಗಳನ್ನು ಒಳಗೊಂಡಿದೆ.

ಮಹಾಲೆಕ್ಕಪರಿಶೋಧಕರ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲಾಗಿರುವಂತಹ ಕಂಡಿಕೆಗಳು ಮತ್ತು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಗಳಿಗೆ, ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯ ಪ್ರಶ್ನೆಗಳ ಪಟ್ಟಿಗೆ ಕಾಯದೇ ಅವುಗಳನ್ನು ಶಾಸಕಾಂಗದ ಮುಂದೆ ಮಂಡಿಸಲಾದ ದಿನಾಂಕದಿಂದ ಮೂರು ತಿಂಗಳುಗಳ ಅವಧಿಯ ಒಳಗೆ ಉತ್ತರಗಳನ್ನು ಸಲ್ಲಿಸತಕ್ಕದ್ದು ಎಂಬುದಾಗಿ ಎಲ್ಲಾ ಆಡಳಿತಾತ್ಮಕ ಇಲಾಖೆಗಳಿಗೆ ನಿರ್ದೇಶನಗಳನ್ನು ನೀಡಿದೆ (ಜನವರಿ 1974). ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಿಗೆ ಕರ್ನಾಟಕ ಸರ್ಕಾರದಿಂದ ಉತ್ತರಗಳ ಸ್ವೀಕೃತಿಯ ಸ್ಥಿತಿಗತಿಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ :

**ಕೋಷ್ಟಕ ಸಂಖ್ಯೆ 7: 30 ನವೆಂಬರ್ 2021ರಲ್ಲಿದ್ದಂತೆ ಉತ್ತರಗಳು ಸ್ವೀಕೃತಗೊಂಡಿಲ್ಲದಿರುವುದು**

| ಕ್ರಮ ಸಂಖ್ಯೆ | ಲೆಕ್ಕಪರಿಶೋಧನಾ ವರದಿಯ (ಸಾಮಲು) ವರ್ಷ | ರಾಜ್ಯ ಶಾಸಕಾಂಗದ ಮುಂದೆ ಲೆಕ್ಕ ಪರಿಶೋಧನಾ ವರದಿಯನ್ನು ಮಂಡಿಸಿದ ದಿನಾಂಕ | ಲೆಕ್ಕಪರಿಶೋಧನಾ ವರದಿಗಳಲ್ಲಿನ ಒಟ್ಟಾರೆ ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳು | | ಉತ್ತರಗಳು ಸ್ವೀಕೃತಗೊಳ್ಳದಿರುವ ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ಸಂಖ್ಯೆ | |
|---|---|---|---|---|---|---|
| | | | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 1 | 2016–17 | 22.02.2018 | 2 | 12 | – | 1 |
| 2 | 2017–18 | 18.02.2020 | 2 | 13 | – | 1 |
| 3 | 2018–19 | 03.02.2021 | 2 | 5 | 1 | 4 |
| | ಒಟ್ಟು | | **6** | **30** | **1** | **6** |

***ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯಿಂದ ಲೆಕ್ಕಪರಿಶೋಧನಾ ವರದಿಗಳ ಮೇಲಿನ ಚರ್ಚೆ***

**1.17.** ಲೆಕ್ಕಪರಿಶೋಧನಾ ವರದಿಗಳಲ್ಲಿ ಪ್ರಕಟಗೊಂಡಿರುವಂತಹ ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳು ಹಾಗೂ 30 ನವೆಂಬರ್ 2021ರಲ್ಲಿದ್ದಂತೆ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯಿಂದ ಚರ್ಚಿಸಲಾಗಿರುವ ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ಸ್ಥಿತಿಗತಿಗಳು ಈ ಕೆಳಗಿನಂತಿದ್ದವು:

**ಕೋಷ್ಟಕ ಸಂಖ್ಯೆ.8: ಸಾಧನಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳಿಗೆ ಸಂಬಂಧಿಸಿದಂತೆ ಚರ್ಚೆಗಳ ಸ್ಥಿತಿಗತಿಗಳು**

| ಕ್ರಮ ಸಂಖ್ಯೆ | ಲೆಕ್ಕಪರಿಶೋಧನಾ ವರದಿಯ ಅವಧಿ | ಸಾಧನಾ ಲೆಕ್ಕಪರಿಶೋಧನೆಗಳು / ಕಂಡಿಕೆಗಳ ಸಂಖ್ಯೆ | | | |
|---|---|---|---|---|---|
| | | ಲೆಕ್ಕಪರಿಶೋಧನಾ ವರದಿಯಲ್ಲಿ ಪ್ರಕಟಗೊಂಡಿರುವುದು | | ಚರ್ಚಿಸಲಾಗಿರುವುದು | |
| | | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು | ಸಾಧನಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 1 | 2010–11 | 2 | 11 | 1 | 11 |
| 2 | 2011–12 | 2 | 12 | 1 | 12 |
| 3 | 2012–13 | 2 | 12 | 2 | 11 |
| 4 | 2013–14 | 2 | 19 | 2 | 18 |
| 5 | 2014–15 | 2 | 17 | 2 | 17 |
| 6 | 2015–16 | 2 | 14 | 2 | 12 |
| 7 | 2016–17 | 2 | 12 | 1 | 11 |
| 8 | 2017–18 | 2 | 13 | 2 | 8 |
| 9 | 2018–19 | 2 | 5 | 1 | 0 |
| | ಒಟ್ಟು | **18** | **115** | **14** | **100** |

**ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯ ವರದಿಗಳಿಗೆ ಅನುಪಾಲನಾ ಕ್ರಮಗಳ ಬಗ್ಗೆ ವರದಿಗಳ ಸಲ್ಲಿಕೆ**

**1.18.** ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯ ಮೂರು ವರದಿಗಳು (ವರದಿ ಸಂಖ್ಯೆ 127, 128 ಮತ್ತು 130) 2008–09 ಮತ್ತು 2014–15ರ ನಡುವಿನ ಅವಧಿಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ವರದಿಗಳಲ್ಲಿ ಪ್ರಕಟವಾಗಿದ್ದಂತಹ ಮೂರು

ಇಲಾಖೆಗಳಿಗೆ[54] ಸಂಬಂಧಿತ ಕಂಡಿಕೆಗಳಿಗೆ ಸಂಬಂಧಿಸಿದಂತೆ 24 ಶಿಫಾರಸುಗಳನ್ನು ಹಾಗೂ ಸಮಿತಿಯ ಸ್ವಪ್ರೇರಿತ ಐದು (ವರದಿ ಸಂಖ್ಯೆ 125, 129, 131, 132 ಮತ್ತು 133) ವರದಿಗಳು 52 ಶಿಫಾರಸುಗಳನ್ನು ಒಳಗೊಂಡಿದ್ದವು. ಈ ವರದಿಗಳನ್ನು ರಾಜ್ಯ ಶಾಸಕಾಂಗಕ್ಕೆ ಡಿಸೆಂಬರ್ 2011 ಮತ್ತು ಫೆಬ್ರವರಿ 2018ರ ನಡುವೆ ಮಂಡಿಸಲಾಗಿತ್ತು.

ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯ ಮೇಲೆ ತಿಳಿಸಲಾದಂತಹ ಮೂರು ವರದಿಗಳ ಮೂರು ಕಂಡಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯ ಸ್ವಪ್ರೇರಿತ ಐದು ವರದಿಗಳ ಮೇಲೆ ಸಂಬಂಧಿತ ಇಲಾಖೆಗಳು ತೆಗೆದುಕೊಳ್ಳಲಾಗಿರುವ ಕ್ರಮಗಳ ಬಗ್ಗೆ ಇಲಾಖಾ ಟಿಪ್ಪಣಿಗಳು ಸ್ವೀಕೃತಗೊಂಡಿರುವುದಿಲ್ಲ (ನವೆಂಬರ್ 2021).

**ಲೆಕ್ಕಪರಿಶೋಧನಾ ವರದಿಗಳ ಕಂಡಿಕೆಗಳು/ಸಾಧನಾ ಲೆಕ್ಕಪರಿಶೋಧನೆಗಳಿಗೆ ಉತ್ತರಗಳು ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಸಮಿತಿಯ ಶಿಫಾರಸುಗಳ ಮೇಲೆ ಸಂಬಂಧಿತ ಇಲಾಖೆಗಳಿಂದ ತೆಗೆದುಕೊಳ್ಳಲಾಗಿರುವ ಕ್ರಮಗಳ ಬಗ್ಗೆ ಇಲಾಖಾ ಟಿಪ್ಪಣಿಗಳನ್ನು ನಿರ್ದಿಷ್ಟ ಕಾಲಮಿತಿಯ ಅನುಸಾರ ಕಳುಹಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.**

**ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ**

**1.19**. ಲೆಕ್ಕಪರಿಶೋಧನೆಯ ವೇಳೆಯಲ್ಲಿ ಗಮನಿಸಲಾದಂತಹ ಅಂಶಗಳು ಹಾಗೂ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಸ್ಥಳದಲ್ಲಿಯೇ ಇತ್ಯರ್ಥಪಡಿಸಲು ಸಾಧ್ಯವಾಗದ ಅಂಶಗಳನ್ನು ಸಾರ್ವಜನಿಕ ವಲಯ ಉದ್ದಿಮೆಗಳ ಮುಖ್ಯಸ್ಥರಿಗೆ ಹಾಗೂ ರಾಜ್ಯ ಸರ್ಕಾರದ ಸಂಬಂಧಿತ ಇಲಾಖೆಗಳಿಗೆ ಪರೀಕ್ಷಣಾ ವರದಿಗಳ ಮೂಲಕ ಕಳುಹಿಸಲಾಗುವುದು. ಸಾರ್ವಜನಿಕ ವಲಯ ಉದ್ದಿಮೆಗಳ ಮುಖ್ಯಸ್ಥರುಗಳು ಪರೀಕ್ಷಣಾ ವರದಿಗಳಿಗೆ ಉತ್ತರಗಳನ್ನು ಸಂಬಂಧಿತ ಇಲಾಖೆಗಳ ಮುಖ್ಯಸ್ಥರ ಮೂಲಕ ಒಂದು ತಿಂಗಳ ಅವಧಿಯ ಒಳಗೆ ಸಲ್ಲಿಸತಕ್ಕದ್ದು. 31 ಮಾರ್ಚ್ 2021ರಲ್ಲಿದ್ದಂತೆ ಬಾಕಿಯಿರುವಂತಹ ಪರೀಕ್ಷಣಾ ವರದಿಗಳು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವಂತಹ ಅಂಶಗಳ ಇಲಾಖಾವಾರು ವಿಘಟನೆಯನ್ನು ***ಅನುಬಂಧ–15ರಲ್ಲಿ*** ನೀಡಲಾಗಿದೆ.

**(ಎ) ಸರ್ಕಾರವು ರಚಿಸಿರುವಂತಹ ಲೆಕ್ಕಪರಿಶೋಧನಾ ಮೇಲ್ವಿಚಾರಣಾ ಕೋಶದ ವರದಿಗಳ ಆಧಾರದ ಮೇರೆಗೆ ಪರೀಕ್ಷಣಾ ವರದಿಗಳಿಗೆ ಪ್ರತಿಕ್ರಿಯೆ ನೀಡುವಲ್ಲಿ ತಪ್ಪಿತಸ್ಥರಾಗುವ ಅಧಿಕಾರಿಗಳ ವಿರುದ್ಧ ಕ್ರಮವನ್ನು ಕೈಗೊಳ್ಳುವ ಸಲುವಾಗಿ ಮತ್ತು (ಬಿ) ನಷ್ಟಗಳನ್ನು/ಬಾಕಿಯಿರುವಂತಹ ಮುಂಗಡಗಳನ್ನು/ಮಿತಿಮೀರಿದ ಪಾವತಿಗಳನ್ನು ನಿರ್ದಿಷ್ಟ ಕಾಲಾವಧಿಯ ಒಳಗೆ ವಸೂಲಾತಿ ಮಾಡುವ ಸಲುವಾಗಿ ಒಂದು ಕಾರ್ಯವಿಧಾನವು ಇರುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಈ ಮೂಲಕ ಶಿಫಾರಸು ಮಾಡಲಾಗುತ್ತಿದೆ.**

[54] ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ನಗರಾಭಿವೃದ್ಧಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ.

# ಅಧ್ಯಾಯ–II
# ಸಾರ್ವಜನಿಕ ವಲಯ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು

# ಅಧ್ಯಾಯ – II

## 2. ಸಾರ್ವಜನಿಕ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳು

ಈ ಅಧ್ಯಾಯವು ಸಾರ್ವಜನಿಕ ಉದ್ದಿಮೆಗಳ ಮೇಲಿನ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳೊಂದಿಗೆ ವ್ಯವಹರಿಸುವುದು. ಸಾರ್ವಜನಿಕ ವಲಯ ಉದ್ದಿಮೆಗಳಲ್ಲಿ ಪೂರ್ವಭಾವಿಯಾಗಿ ಯೋಜಿಸುವಿಕೆ, ಹೂಡಿಕೆ ಹಾಗೂ ಗುತ್ತಿಗೆ ನಿರ್ವಹಣೆಗಳಲ್ಲಿನ ಲೋಪದೋಷಗಳನ್ನು ಪ್ರಮುಖವಾಗಿ ಎತ್ತಿ ತೋರಿಸುವ ಲೆಕ್ಕಪರಿಶೋಧನೆಯಿಂದ ಹೊರಬಂದಂತಹ ಪ್ರಮುಖಾಂಶಗಳನ್ನು ಈ ಅಧ್ಯಾಯದಲ್ಲಿ ಸೇರಿಸಲಾಗಿರುವುದು.

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ**

### *2.1. ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್‌ನ ಕಾರ್ಯಗತಗೊಳಿಸುವಿಕೆ*

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್‌ನ ಯೋಜನೆಯನ್ನು ₹ 572.64 ಕೋಟಿ ಒಟ್ಟಾರೆ ವೆಚ್ಚದಲ್ಲಿ ನಿಗದಿತ ದಿನಾಂಕವನ್ನು ಮೀರಿದಂತೆ ಎಂಟು ವರ್ಷಗಳ ವಿಳಂಬದೊಂದಿಗೆ ಕಾರ್ಯಗತಗೊಳಿಸಿತು. ವಿಳಂಬದ ತತ್ಪರಿಣಾಮವೆಂಬಂತೆ, ವ್ಯವಸ್ಥೆಯ ಭಾಗಗಳು ತಮ್ಮ ಸೇವಾ ಅವಧಿಯ ಮುಕ್ತಾಯವನ್ನು ಕಂಡಿದ್ದವು ಹಾಗೂ ತಂತ್ರಾಂಶ ಅನ್ವಯ ಮತ್ತು ಯಂತ್ರಾಂಶ ಅನ್ವಯಗಳೆರಡನ್ನೂ ಮೇಲ್ದರ್ಜೆಗೇರಿಸುವ ಅಗತ್ಯತೆಯನ್ನು ಹೊಂದಿದ್ದವು.**

**2.1.1.** ಬೆಂಗಳೂರು ನಗರದಲ್ಲಿ ಪ್ರಸರಣಾ ಮತ್ತು ವಿತರಣಾ ನಷ್ಟಗಳು 2004ರಲ್ಲಿ ಶೇಕಡಾ 12.5ರಷ್ಟು ಆಗಿದ್ದವು ಹಾಗೂ ಪದೇಪದೇ ಆಗುತ್ತಿದ್ದಂತಹ ವಿದ್ಯುತ್ ಸ್ಥಗಿತಗಳು ವಿತರಣಾ ವ್ಯವಸ್ಥೆಯಲ್ಲಿ ಒಂದು ಗುರುತರವಾದಂತಹ ಅಡಚಣೆಯಾಗಿದ್ದವು. ಬೆಂಗಳೂರು ನಗರದಲ್ಲಿ, ಪ್ರತೀ ಗ್ರಾಹಕರೊಬ್ಬರಿಗೆ ವಾರ್ಷಿಕ ಸರಾಸರಿ ಸ್ಥಗಿತಗಳು (ಸಿಸ್ಟಮ್ ಆವರೇಜ್ ಇಂಟರಪ್ಷನ್ ಡ್ಯುರೇಷನ್ ಇಂಡೆಕ್ಸ್ – ಎಸ್‌ಎಐಡಿಐ) ಚೆನ್ನೈನಲ್ಲಿನ 21 ಗಂಟೆಗಳು ಹಾಗೂ ದೆಹಲಿಯಲ್ಲಿನ 31.5 ಗಂಟೆಗಳಿಗೆ ಹೋಲಿಸಿದಂತೆ 2003–04ರಲ್ಲಿ 86.2 ಗಂಟೆಗಳಾಗಿದ್ದವು[55]. ಪದೇಪದೇ ಆಗುತ್ತಿದ್ದಂತಹ ವಿದ್ಯುತ್ ಸ್ಥಗಿತಗಳ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ ಹಾಗೂ ವಿದ್ಯುತ್ ಸರಬರಾಜಿನ ವಿಶ್ವಸನೀಯತೆಯನ್ನು ಉತ್ತಮಗೊಳಿಸುವ ಸಲುವಾಗಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತವು (ಕಂಪನಿ) ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್[56] ಅನ್ನು (ಡಿಎಎಸ್) ಕಾರ್ಯಗತಗೊಳಿಸುವ ತೀರ್ಮಾನವನ್ನು ಕೈಗೊಂಡಿತು (ಡಿಸೆಂಬರ್ 2004). ಯೋಜನೆಯನ್ನು ಕಂಪನಿಯ ಕಾರ್ಯಾಚರಣೆ ಅಧಿಕಾರ ವ್ಯಾಪ್ತಿಯ 14 ವಿಭಾಗಗಳಲ್ಲಿ[57] 31 ಮಾರ್ಚ್ 2021ರಲ್ಲಿದ್ದಂತೆ ₹ 572.64 ಕೋಟಿಯಷ್ಟು ಒಂದು ಒಟ್ಟಾರೆ ವೆಚ್ಚದಲ್ಲಿ (₹ 403.29 ಕೋಟಿ ಮೊತ್ತದಷ್ಟು ಹಣಕಾಸನ್ನು ಜಪಾನೀಸ್ ಇಂಟರ್‌ನ್ಯಾಷನಲ್ ಕೋ–ಆಪರೇಷನ್‌ಏಜನ್ಸಿ – ಜೆಐಸಿಎಯಿಂದ ಒದಗಿಸಲಾಗಿದ್ದಿತು ಹಾಗೂ

---

[55] ಪ್ರತಿ ಗ್ರಾಹಕರೊಬ್ಬರಿಗೆ ವಾರ್ಷಿಕ ಸರಾಸರಿ ನಷ್ಟವಾದ ಗಂಟೆಗಳು (i) 11 ಕೆವಿ ಫೀಡರ್ ಅಡಚಣೆಗಳಿಂದ 64.57 ಗಂಟೆಗಳು; (ii) 66 ಕೆವಿ ಫೀಡರ್/ಉಪಸ್ಟೇಷನ್‌ನಿಂದ 20.22 ಗಂಟೆಗಳು; ಮತ್ತು (iii) ಡಿಟಿಸಿ/ಎಲ್‌ಟಿ ಅಡಚಣೆಗಳಿಂದ 1.43 ಗಂಟೆಗಳು.

[56] ಡಿಎಎಸ್ ಮೇಲ್ವಿಚಾರಣಾ ನಿಯಂತ್ರಣ ಹಾಗೂ ಮಾಹಿತಿ ಸ್ವಾಧೀನಪಡಿಸಿಕೊಳ್ಳುವಿಕೆ (ಎಸ್‌ಸಿಎಡಿಎ) ಹಾಗೂ ನಾವೀನ್ಯತೆಯಿಂದ ಕೂಡಿದ ಡಿಎಂಎಸ್ ಅನ್ವಯ ತಂತ್ರಾಂಶ ಅನ್ವಯ ಸಾಧ್ಯತೆಯಿರುವ ಒಂದು ನೈಜ ಸಮಯದ ವಿದ್ಯುತ್ ಉಪಯುಕ್ತತೆಯ ಮೇಲ್ವಿಚಾರಣೆ, ಸಮನ್ವಯಗೊಳಿಸುವಿಕೆ ಹಾಗೂ ವಿತರಣಾ ಭಾಗಗಳನ್ನು ಸಮಯೋಚಿತ ಮಾದರಿಯಲ್ಲಿ ಸಾಧನ ಪ್ರೇಷಿತವಾದ ಸೂಚನೆಗಳಿಂದ ನಿಯಂತ್ರಿಸುವ ಮೂಲಕ (ರಿಮೋಟ್ಲಿ) ಕಾರ್ಯಾಚರಣೆಗೊಳಿಸುವುದು. ಇದು ದೋಷಪೂರಿತ ಸ್ಥಳವನ್ನು ತ್ವರಿತವಾಗಿ ಕಂಡುಹಿಡಿಯುವುದರಿಂದ ಹಾಗೂ ವಿದ್ಯುತ್ತನ್ನು ಪುನರ್–ಪಡೆದುಕೊಳ್ಳುವ ಮೂಲಕ ವಿದ್ಯುತ್ ಸ್ಥಗಿತದ ಅವಧಿಯನ್ನು ಕಡಿತಗೊಳಿಸುತ್ತದೆ.

[57] ಎಚ್‌ಎಸ್‌ಆರ್ ಬಡಾವಣೆ, ಕೋರಮಂಗಲ, ಜಯನಗರ, ಇಂದಿರಾನಗರ, ಶಿವಾಜಿನಗರ, ವಿಧಾನ ಸೌಧ, ವೈಟ್‌ಫೀಲ್ಡ್, ರಾಜಾಜಿನಗರ, ಆರ್.ಆರ್. ನಗರ, ಕೆಂಗೇರಿ, ಹೆಬ್ಬಾಳ, ಪೀಣ್ಯ, ಮಲ್ಲೇಶ್ವರ ಮತ್ತು ಜಾಲಹಳ್ಳಿ.

₹ 169.35 ಕೋಟಿ ಮೊತ್ತವನ್ನು ಕಂಪನಿಯು ಭರಿಸಿದ್ದಿತು) ಕಾರ್ಯಗತಗೊಳಿಸಲಾಯಿತು. ಯೋಜನೆಯು ಇನ್ನಿತರವುಗಳ ಜೊತೆಗೆ, ಪ್ರತೀ ಗ್ರಾಹಕರೊಬ್ಬರಿಗೆ ವಾರ್ಷಿಕ ಸರಾಸರಿ ಸ್ಥಗಿತಗಳ ಸೂಚ್ಯಾಂಕವನ್ನು (86.2 ಗಂಟೆಗಳಿಂದ 31.4 ಗಂಟೆಗಳಿಗೆ) ತಗ್ಗಿಸುವುದನ್ನು, ದೋಷದ ಮರುಸ್ಥಾಪನೆಯ ಅವಧಿಯ ಕಡಿತ (155–230 ನಿಮಿಷಗಳಿಂದ 43 ನಿಮಿಷಗಳಿಗೆ), ವಿತರಣಾ ನಷ್ಟಗಳನ್ನು ತಗ್ಗಿಸುವುದು (ಶೇಕಡಾ 10.62ರಿಂದ ಶೇಕಡಾ 9ಕ್ಕೆ) ಹಾಗೂ ವಿದ್ಯುತ್ ಮಾರಾಟವನ್ನು ಹೆಚ್ಚಳಗೊಳಿಸುವುದನ್ನು (ವಾರ್ಷಿಕ ₹ 13 ಕೋಟಿ ಮೊತ್ತದಷ್ಟು ಸಂಚಿತಗೊಳ್ಳುವುದು) ಚಿಂತಿಸಿದ್ದಿತು. ಯೋಜನೆಯನ್ನು ಜನವರಿ 2012ರ ವೇಳೆಗೆ ಪೂರ್ಣಗೊಳಿಸತಕ್ಕದ್ದು ಎಂಬುದಾಗಿ ನಿರ್ದಿಷ್ಟಪಡಿಸಲಾಗಿದ್ದಿತು.

ಲೆಕ್ಕಪರಿಶೋಧನೆಯು ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್‌ನ ಪೂರ್ವಭಾವಿಯಾಗಿ ಯೋಜಿಸುವುದು, ಕಾರ್ಯಗತಗೊಳಿಸುವಿಕೆ ಹಾಗೂ ಕಾರ್ಯಾಚರಣೆಯನ್ನು ಪ್ರತೀ ಗ್ರಾಹಕರೊಬ್ಬರಿಗೆ ವಾರ್ಷಿಕ ಸರಾಸರಿ ಸ್ಥಗಿತಗಳ (ಎಸ್ಎಐಡಿಐ) ಸೂಚ್ಯಾಂಕವನ್ನು ತಗ್ಗಿಸುವುದು, ದೋಷದ ಮರುಸ್ಥಾಪನೆಯ ಅವಧಿಯ ಕಡಿತ, ವಿತರಣಾ ನಷ್ಟಗಳನ್ನು ತಗ್ಗಿಸುವುದು ಹಾಗೂ ವಿದ್ಯುತ್ ಮಾರಾಟವನ್ನು ಹೆಚ್ಚಳಗೊಳಿಸುವುದು, ಇವೇ ಮುಂತಾದ ಚಿಂತಿಸಲಾಗಿದ್ದಂತಹ ಪ್ರಯೋಜನಗಳನ್ನು ಸಾಧಿಸಲಾಗಿದ್ದಿತೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಯೋಜನೆಯ ಕಾರ್ಯಗತಗೊಳಿಸಿರುವಿಕೆಯನ್ನು ಸಮೀಕ್ಷಿಸಿತು. (ಮಾರ್ಚ್ 2021)

### A. ಯೋಜನೆಯನ್ನು ಪೂರ್ವಭಾವಿಯಾಗಿ ಯೋಜಿಸುವಿಕೆ ಹಾಗೂ ಕಾರ್ಯಗತಗೊಳಿಸುವಿಕೆ

**2.1.2.** ಯೋಜನೆಯು ಭೌತಿಕ ಭಾಗಗಳು (ಪ್ರಸ್ತುತ ಇದ್ದಂತಹ ಓವರ್‌ಹೆಡ್ ವಿದ್ಯುತ್ ಮಾರ್ಗಗಳು ಹಾಗೂ ನೆಲದಡಿಯ ಕೇಬಲ್ಲುಗಳನ್ನು ಮೇಲ್ದರ್ಜೆಗೇರಿಸುವಿಕೆ ಮತ್ತು/ಅಥವಾ ಬದಲಾಯಿಸುವಿಕೆ, ಹೆಚ್ಚುವರಿ ಫೀಡರುಗಳ ನಿರ್ಮಾಣ, ಎರಡು ಅಂತರ–ಸಂಪರ್ಕಿತ ನಿಯಂತ್ರಣ ಕೇಂದ್ರಗಳ ನಿರ್ಮಾಣ (ಐಸಿಸಿ) ಹಾಗೂ ಲೈನು ರೀ–ಕ್ಲೋಷರುಗಳು (ಎಲ್ಆರ್‌ಸಿಗಳು), ಲೋಡ್ ಬ್ರೇಕ್ ಸ್ವಿಚ್ಚುಗಳು (ಎಲ್‌ಬಿಸಿಗಳು), ರಿಂಗ್ ಮೈನ್ ಯೂನಿಟ್ಟುಗಳ (ಆರ್‌ಎಂಯುಗಳು) ರೂಪದಲ್ಲಿ ಎಸ್‌ಸಿಎಡಿಎ[58] ಸಿದ್ಧತೆಯಿರುವಂತಹ ಸ್ವಿಚ್ಚುಗಳನ್ನು ಒಳಗೊಂಡಂತೆ ಯಂತ್ರಾಂಶಗಳು/ತಂತ್ರಾಂಶಗಳನ್ನು ಒಳಗೊಂಡಿದ್ದಿತು. ಈ ಸಾಧನಗಳನ್ನು ಸ್ವಿಚ್ಚುಗಳೊಂದಿಗೆ ಅಂತರ–ಕಾರ್ಯಾಚರಣೆಯನ್ನು ಡಿಎಎಸ್‌ಗೆ ಸಾಧ್ಯಗೊಳಿಸುವ ಡಿಸ್ಟ್ರಿಬ್ಯೂಷನ್ ಆಟೋಮೇಷನ್ ಸಿಸ್ಟಮ್ ಹಾಗೂ ರಿಮೋಟ್ ಟರ್ಮಿನಲ್ ಯೂನಿಟ್ಟುಗಳೊಂದಿಗೆ (ಆರ್‌ಟಿಯುಗಳು) ಸಜ್ಜುಗೊಂಡಿರುವಂತಹ ಎರಡು ವಿತರಣಾ ನಿಯಂತ್ರಣ ಕೇಂದ್ರಗಳಿಂದ ಮೇಲ್ವಿಚಾರಣೆ ಮಾಡಬೇಕಿದ್ದಿತು ಹಾಗೂ ನಿಯಂತ್ರಿಸಬೇಕಿದ್ದಿತು ಹಾಗೂ ಈ ವ್ಯವಸ್ಥೆಯು ಯೋಜನೆಯ ಭಾಗವಾಗಿರುವುದು. ಯೋಜನೆಯ ತಾಂತ್ರಿಕ ಪದಗಳ ಒಂದು ಶಬ್ದಾವಳಿಯನ್ನು ಈ ವರದಿಗೆ ಲಗತ್ತಿಸಲಾಗಿರುವುದು.

ಯೋಜನೆಯ ಮೇಲೆ ತಿಳಿಸಲಾದ ಯಂತ್ರಾಂಶಗಳು/ತಂತ್ರಾಂಶಗಳನ್ನು ವಿವಿಧ ಅಂತರ–ಸಂಬಂಧಿತ ನಿರ್ಮಾಣ ಗುತ್ತಿಗೆಗಳ (ಏಳು ಪ್ಯಾಕೇಜುಗಳಲ್ಲಿ 15 ಗುತ್ತಿಗೆಗಳು) ಮೂಲಕ ಕಾರ್ಯಗತಗೊಳಿಸಲಾಯಿತು, ಅಲ್ಲದೆಯೇ ವ್ಯವಸ್ಥೆಯ ರೂಪುರೇಖೆ/ವಿನ್ಯಾಸ, ತಾಂತ್ರಿಕತೆ, ಟೆಂಡರು ಪ್ರಕ್ರಿಯೆಗಳು ಹಾಗೂ ಖರೀದಿಗಳು, ನಿರ್ಮಾಣ, ಪರೀಕ್ಷಣೆ ಹಾಗೂ ಸಾಮರ್ಥ್ಯ ನಿರ್ಮಾಣಕ್ಕಾಗಿ ಓರ್ವ ಯೋಜನಾ ನಿರ್ವಹಣಾ ಸಲಹೆಗಾರರನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಭೌತಿಕ ಭಾಗಗಳು ಹಾಗೂ ಅಲ್ಲದೆಯೇ ಯಂತ್ರಾಂಶಗಳು /ತಂತ್ರಾಂಶಗಳನ್ನು ಸ್ಥಾಪಿಸುವಲ್ಲಿ ಅಳವಡಿಸುವಲ್ಲಿಯೂ ವಿಳಂಬಗಳಾಗಿದ್ದವು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯೋಜನೆಯನ್ನು ಪೂರ್ಣಗೊಳಿಸುವಿಕೆಯ ಮೂಲ ದಿನಾಂಕದೊಂದಿಗೆ (ಜನವರಿ 2012) ಹೋಲಿಸಿದಂತೆ, ಎರಡನೆಯ ಅಂತರ–ಸಂಪರ್ಕಿತ ನಿಯಂತ್ರಣ ಕೇಂದ್ರವನ್ನು ಪೂರ್ಣಗೊಳಿಸುವಲ್ಲಿ (ಐದು ವರ್ಷಗಳು), ಎಲ್ಆರ್‌ಸಿಗಳು, ಎಲ್‌ಬಿಎಸ್ ಹಾಗೂ ಆರ್‌ಟಿಯುಗಳು/ ಆರ್‌ಎಂಯುಗಳನ್ನು ಕಾರ್ಯೋದ್ಯುಕ್ತಗೊಳಿಸುವಲ್ಲಿ (ಏಳರಿಂದ ಎಂಟು ವರ್ಷಗಳು) ಗಮನಾರ್ಹವಾದಂತಹ ವಿಳಂಬಗಳನ್ನು ಗಮನಿಸಲಾಯಿತು. ವಿಳಂಬಕ್ಕೆ ಕಾರಣಗಳ ಜೊತೆಗೆ ಘಟಕವಾರು ವಿವರಗಳನ್ನು ***ಅನುಬಂಧ – 16ರಲ್ಲಿ*** ನೀಡಲಾಗಿದೆ.

[58] ಮೇಲ್ವಿಚಾರಣಾ ನಿಯಂತ್ರಣ ಮತ್ತು ಮಾಹಿತಿ ಸ್ವಾಧೀನಪಡಿಸಿಕೊಳ್ಳುವಿಕೆ ವ್ಯವಸ್ಥೆ.

ಒಡಂಬಡಿಕೆಯ ಅನುಸಾರ, ಡಿಎಎಸ್‌ನ ಸಂಪೂರ್ಣ ವ್ಯವಸ್ಥೆಯನ್ನು ಜನವರಿ 2012ರ ವೇಳೆಗೆ ಪೂರ್ಣಗೊಳಿಸುವುದನ್ನು ನಿರೀಕ್ಷಿಸಲಾಗಿದ್ದಿತಾದರೂ, ಬೆವಿಸಕಂಯು ಯೋಜನೆಯ ಭೌತಿಕ ಭಾಗಗಳನ್ನು ಅಂದರೆ ಎರಡನೆಯ ನಿಯಂತ್ರಣ ಕೇಂದ್ರಕ್ಕೆ ಸ್ಥಳವನ್ನು (ಬಿಸಿಸಿ–2) ಜುಲೈ 2014ರಲ್ಲಿ ಅಂತಿಮಗೊಳಿಸಲಾಯಿತು ಹಾಗೂ ನಿರ್ಮಾಣದ ಪೂರ್ಣಗೊಳಿಸುವಿಕೆಯನ್ನು ಡಿಸೆಂಬರ್ 2016ರಲ್ಲಿ ಮಾಡಲು ಸಾಧ್ಯವಾಯಿತು (ಅಂದರೆ ಸಂಪೂರ್ಣ ಯೋಜನೆಯ ಪೂರ್ಣಗೊಳಿಸುವಿಕೆಗಾಗಿ ನಿಗದಿತಗೊಂಡಿದ್ದ ಮೂಲ ದಿನಾಂಕದಿಂದ ನಾಲ್ಕು ವರ್ಷಗಳ ವಿಳಂಬದ ನಂತರ) ಹಾಗೂ ಅಲ್ಟ್ರಾ ಹೈ ಫ್ರೀಕ್ವೆನ್ಸಿ (ಯುಎಚ್‌ಎಫ್) ಮತ್ತು ರೇಡಿಯೋ ಫ್ರೀಕ್ವೆನ್ಸಿ ಹಂಚಿಕೆಯನ್ನು ಪಡೆದುಕೊಳ್ಳುವಲ್ಲಿ ಇನ್ನೂ ಹೆಚ್ಚಿನ ವಿಳಂಬಗಳಾಗಿದ್ದವು, ಇವುಗಳನ್ನು ಫೆಬ್ರವರಿ 2017ರಲ್ಲಿಯಷ್ಟೇ ಪೂರ್ಣಗೊಳಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆಯೇ, ಪಡೆದುಕೊಳ್ಳಲಾಗಿದ್ದಂತಹ ಮಾಹಿತಿಯು ವಾಸ್ತವಿಕ ಕ್ಷೇತ್ರ ಸಂದರ್ಭಗಳೊಂದಿಗೆ ತಾಳೆ ಹೊಂದುತ್ತಿರಲಿಲ್ಲವಾದ್ದರಿಂದ ಕಂಪನಿಯು ನಿರ್ವಹಿಸಿದ್ದಂತಹ ಜಿಐಎಸ್ ಮಾಹಿತಿಯಲ್ಲಿ ಅಸಮಂಜಸತೆಗಳಿದ್ದವು, ಕೆಲವು ಭಾಗಗಳು ಕಾಣೆಯಾಗಿದ್ದವು ಹಾಗೂ ಗುಣಮಟ್ಟದ ಸಮಸ್ಯೆಗಳಿದ್ದವು ಮತ್ತು ಆದ್ದರಿಂದ ಫೀಡರು ಆಟೋಮೇಷನ್ ಡಿಸೈನಿಗೆ ಅವು ಸೂಕ್ತವಾಗಿರುವುದಿಲ್ಲ ಎಂಬುದು ಕಂಡುಬಂದಿದ್ದಿತು. ಇದು ಫೀಡರುಗಳನ್ನು ಮರುಸಮೀಕ್ಷಿಸುವ ಅಗತ್ಯತೆಯನ್ನುಂಟುಮಾಡಿತು. ಈ ವಿಳಂಬಗಳು ಯೋಜನೆಯ ಒಟ್ಟಾರೆ ಪೂರ್ಣಗೊಳಿಸುವಿಕೆಯ ಮೇಲೆ ಪರಿಣಾಮ ಬೀರಿದವು. ಈ ಕಾರ್ಯಚಟುವಟಿಕೆಗಳಿಗೆ ತೆಗೆದುಕೊಳ್ಳಲಾದಂತಹ ಸಮಯದ ವಿವರಗಳನ್ನು ***ಅನುಬಂಧ–17ರಲ್ಲಿ*** ವಿವರಿಸಲಾಗಿದೆ.

ಮೇಲೆ ತಿಳಿಸಲಾದಂತಹ ಲೋಪದೋಷಗಳ ಕಾರಣ, ನಿಗದಿತ ದಿನಾಂಕ ಡಿಸೆಂಬರ್ 2012/ನವಂಬರ್ 2013ಕ್ಕೆ[59] ಪ್ರತಿಯಾಗಿ, ಯೋಜನೆಯು ಕಾರ್ಯೋದ್ಯುಕ್ತವಾಗಿದೆ/ಕಾರ್ಯಾಚರಣೆಗೊಂಡಿದೆ ಎಂಬುದಾಗಿ ಮಾರ್ಚ್ 2019ರಲ್ಲಿ ಘೋಷಿಸಲಾಗಿದ್ದಿತು. ಯೋಜನೆಯನ್ನು ಪೂರ್ಣಗೊಳಿಸುವಲ್ಲಿ ವಿಳಂಬಗಳು ಮೂಲ ಗುತ್ತಿಗೆ ಅವಧಿಯನ್ನು ಮೀರಿದಂತೆ ವ್ಯಾಪ್ತಿಯು ಐದರಿಂದ ಏಳು ವರ್ಷಗಳಿಗೂ ಅಧಿಕವಾಗಿದ್ದವು. ಮಾರ್ಚ್ 2019ರಲ್ಲಿ 14 ವಿಭಾಗಗಳ ಪೈಕಿ 5ರಲ್ಲಿ ವ್ಯವಸ್ಥೆಯು ಕಾರ್ಯೋದ್ಯುಕ್ತವಾಗಿದೆ/ಕಾರ್ಯಾಚರಣೆಗೊಂಡಿದೆ ಎಂಬುದಾಗಿ ಘೋಷಿಸಲಾಗಿದ್ದಿತು ಹಾಗೂ ಉಳಿದ ಒಂಬತ್ತು ವಿಭಾಗಗಳನ್ನು ಕೇವಲ ಜೂನ್ 2020ರಲ್ಲಿ ಅಂದರೆ ಪೂರ್ಣಗೊಳ್ಳಲು ನಿಗದಿತಗೊಂಡಿದ್ದ ದಿನಾಂಕದ ನಂತರ ಎಂಟು ವರ್ಷಗಳ ನಂತರ ಹಂತಾನುಹಂತವಾಗಿ ವ್ಯವಸ್ಥೆಯ ಒಳಕ್ಕೆ ತರಲಾಯಿತು. ಕಾಮಗಾರಿಗಳ ಪೂರ್ಣಗೊಂಡಿರುವಿಕೆಯ ಸ್ಥಿತಿಗತಿಗಳನ್ನು ***ಅನುಬಂಧ–16ರಲ್ಲಿ*** ನೀಡಲಾಗಿದೆ.

ಶಾಸನಬದ್ಧ ಅನುಮತಿಗಳಿಗೆ ಅದರಲ್ಲೂ ನಿರ್ದಿಷ್ಟವಾಗಿ ಫ್ರೀಕ್ವೆನ್ಸಿ ಸ್ಪೆಕ್ಟ್ರಮ್ ಹಂಚಿಕೆಯಲ್ಲಿ ವಿಪರೀತವಾದಂತಹ ಸಮಯವನ್ನು ತೆಗೆದುಕೊಂಡಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಮಾರ್ಚ್ 2022). ವಿಳಂಬವು ಅನಿರೀಕ್ಷಿತವಾಗಿದ್ದಿತು ಹಾಗೂ ಅದು ಬೆಂವಿಸಕಂನ ನಿಯಂತ್ರಣದಲ್ಲಿರಲಿಲ್ಲ, ಹೀಗಾಗಿ ಅದು ಯೋಜನೆಯ ಪೂರ್ಣಗೊಳ್ಳುವಿಕೆಯ ಮೇಲೆ ಪರಿಣಾಮ ಬೀರಿತು.

ಕಂಪನಿಯು ನಿಯಂತ್ರಣದ ಒಳಗೇ ಇದ್ದಂತಹ ಫೀಡರುಗಳನ್ನು ಪುನರ್–ಸಮೀಕ್ಷಿಸುವ ಹಾಗೂ ಎರಡನೆಯ ನಿಯಂತ್ರಣ ಕೇಂದ್ರಕ್ಕೆ ಸ್ಥಳವನ್ನು ಅಂತಿಮ ರೂಪಕ್ಕೆ ತರಲು ಕಂಪನಿಯು ಜೆಐಸಿಎಯೊಂದಿಗೆ ಮಾಡಿಕೊಳ್ಳಲಾದ ಸಾಲದ ಒಡಂಬಡಿಕೆಯ ದಿನಾಂಕದಿಂದ (ಮಾರ್ಚ್ 2007) ಮೂರರಿಂದ ಒಂಬತ್ತು ವರ್ಷಗಳಿಗೂ ಮೀರಿದ ಅವಧಿಯನ್ನು ತೆಗೆದುಕೊಂಡಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಯೋಜನೆಯನ್ನು ಕಾರ್ಯೋದ್ಯುಕ್ತಗೊಳಿಸಿದ ನಂತರವೂ, ಈ ಕೆಳಗೆ ಚರ್ಚಿಸಲಾಗಿರುವ ಕಾರಣಗಳಿಂದಾಗಿ ಕಂಪನಿಯು ವ್ಯವಸ್ಥೆಯನ್ನು ಅದರ ಗರಿಷ್ಠ/ಅತ್ಯುತ್ತಮ ಸಾಮರ್ಥ್ಯಕ್ಕೆ ತಕ್ಕಂತೆ ಕಾರ್ಯಾಚರಣೆಗೊಳಿಸಲಾಗಲಿಲ್ಲ ಹಾಗೂ ಗುರಿಯಾಗಿಸಿಕೊಳ್ಳಲಾಗಿದ್ದಂತಹ ಪ್ರತಿಫಲವನ್ನು ಪಡೆದುಕೊಳ್ಳಲಾಗಲಿಲ್ಲ ಎಂಬುದನ್ನು ಸಹ ಲೆಕ್ಕಪರಿಶೋಧನೆಯು ಗಮನಿಸಿತು.

[59] ಸ್ಥಳವನ್ನು ಅಂತಿಮರೂಪಕ್ಕೆ ತರುವಲ್ಲಿನ ವಿಳಂಬದ ಕಾರಣ ತದನಂತರದಲ್ಲಿ ನೀಡಲಾಗಿದ್ದ ನಿಯಂತ್ರಣ ಕೇಂದ್ರಗಳ ನಿರ್ಮಾಣಕ್ಕೆ ಸಂಬಂಧಿತ 1ಎ ಮತ್ತು 1ಬಿ ಪ್ಯಾಕೇಜುಗಳನ್ನು ಹೊರತುಪಡಿಸಿದಂತೆ.

**ಬಿ. ಕಾರ್ಯಾಚರಣೆಯಲ್ಲಿನ ಅಡೆತಡೆಗಳು**

**2.1.3.** ಗ್ರಾಹಕರುಗಳನ್ನು ಸಂಬಂಧಿತ ವ್ಯವಸ್ಥೆಗಳೊಂದಿಗೆ/ಆಸ್ತಿಗಳೊಂದಿಗೆ ಗುರುತಿಸುವಿಕೆ, ಆಟೋಮೇಷನ್ ಕೇಂದ್ರಗಳನ್ನು ಅಂತರ–ಸಂಪರ್ಕಗೊಳಿಸುವುದು, ಆಟೋಮೇಷನ್ ಕೇಂದ್ರಗಳು ಕಾರ್ಯಸ್ಥಗಿತಗೊಂಡಿದ್ದುದು, ಇತ್ಯಾದಿ ಅಡೆತಡೆಗಳನ್ನು/ಅಡಚಣೆಗಳನ್ನು ಕಂಪನಿಯಿಂದ ಬಗೆಹರಿಸಲಾಗಲಿಲ್ಲ. ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ:

***ಗ್ರಾಹಕರ ಮಾಹಿತಿ ವ್ಯವಸ್ಥೆಯ ಗುರುತಿಸುವಿಕೆಯು ಅಪೂರ್ಣವಾಗಿದ್ದುದು***

**2.1.3.1.** ಗ್ರಾಹಕರುಗಳನ್ನು ಡಿಎಎಸ್ ಪರಿಸರದ ಒಳಗಡೆಗೆ ತರುವ ರೀತಿಯಲ್ಲಿ ಹಾಗೂ ವ್ಯವಸ್ಥೆಯ ಸರಾಸರಿ ಅಡಚಣೆಗಳ ಅವಧಿ ಸೂಚ್ಯಾಂಕದ (ಎಸ್ಎಐಡಿಐ) ನಿಖರ ಅಂದಾಜಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಗ್ರಾಹಕರುಗಳನ್ನು ಜಿಐಎಸ್‌ನಲ್ಲಿನ ಅವರುಗಳ ಸಂಬಂಧಿತ ಆಸ್ತಿಗಳಿಗೆ ಅವೆಂದರೆ ಫೀಡರುವಾರು ಹಾಗೂ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರವಾರು ಜಿಐಎಸ್‌ನಲ್ಲಿ ಗುರುತಿಸಲಾಗುವುದು (ಟ್ಯಾಗಿಂಗ್). ಈ ಉದ್ದೇಶಕ್ಕಾಗಿ, 'ಆರ್–ಎಪಿಡಿಆರ್‌ಪಿ'ಯ[60] ಗ್ರಾಹಕರ ಮಾಹಿತಿ ವ್ಯವಸ್ಥೆಯನ್ನು ಜಿಐಎಸ್‌ನಲ್ಲಿ ಗುರುತಿಸಬೇಕಿದ್ದಿತು.

14 ವಿಭಾಗಗಳ ಪೈಕಿ 12ರಲ್ಲಿ ಹೆಚ್ಚುವರಿಯಾಗಿ ಸೇರಿಸಲಾಗಿದ್ದಂತಹ ಆಸ್ತಿಗಳ (ಎಲ್‌ಟಿ ಮತ್ತು ಎಚ್‌ಟಿ ವಿದ್ಯುತ್ ಸಂಪರ್ಕಜಾಲಗಳು) ಜಿಐಎಸ್ ಗುರುತಿಸುವಿಕೆಯು ಪೂರ್ಣಗೊಂಡಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಮುಂದುವರೆದು, ಮಾರ್ಚ್ 2022ರಲ್ಲಿದ್ದಂತೆ, 50,655 ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ ಪೈಕಿ 12,832 ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಿಗೆ ಗ್ರಾಹಕರುಗಳನ್ನು ಗುರುತಿಸುವುದು ಅಪೂರ್ಣವಾಗಿದ್ದಿತು. ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳು, ಗುರುತಿಸಲಾಗಿದ್ದಂತಹ ಗ್ರಾಹಕರುಗಳು ಹಾಗೂ ಗ್ರಾಹಕರುಗಳನ್ನು ಗುರುತಿಸದೇ ಇದ್ದಂತಹ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ ವಿಭಾಗಾವಾರು ವಿವರಗಳನ್ನು ***ಅನುಬಂಧ–18ರಲ್ಲಿ*** ನೀಡಲಾಗಿದೆ.

ಆಸ್ತಿಗಳನ್ನು ಜಿಐಎಸ್‌ನಲ್ಲಿ ಗುರುತಿಸುವುದು ಅಪೂರ್ಣಗೊಂಡಿರುವ ಕಾರಣ, ಡಿಎಎಸ್ ಮೂಲಕ ಆಟೋಮೇಶನ್ ಕೇಂದ್ರಗಳನ್ನು ಮೇಲ್ವಿಚಾರಣೆ ಮಾಡುವುದು ಸಾಧ್ಯವಿರಲಿಲ್ಲ ಹಾಗೂ ಅಲ್ಲದೆಯೇ ಗ್ರಾಹಕರುಗಳನ್ನು ಸಂಬಂಧಿತ ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳೊಂದಿಗೆ ಗುರುತಿಸದಿರುವ ಕಾರಣ, ವ್ಯವಸ್ಥೆಯ ಸರಾಸರಿ ಅಡಚಣೆಗಳ ಅವಧಿ ಸೂಚ್ಯಾಂಕವನ್ನು (ಎಸ್ಎಐಡಿಐ) ನಿಖರವಾಗಿ ಲೆಕ್ಕಹಾಕಲು ಸಾಧ್ಯವಾಗುವುದಿಲ್ಲ.

ಜಿಐಎಸ್ ಮಾಹಿತಿಯೊಂದಿಗೆ ಗ್ರಾಹಕರ ಮಾಹಿತಿಯನ್ನು ಸೆರೆಹಿಡಿಯುವ ಸಲುವಾಗಿ ಬೆಂವಿಸಕಂಯು ಅವಿರತ ಪ್ರಯತ್ನಗಳನ್ನು ಮಾಡುತ್ತಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಮಾರ್ಚ್ 2022). ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳನ್ನು ಗ್ರಾಹಕರುಗಳೊಂದಿಗೆ ಗುರುತಿಸುವ ಸಮಸ್ಯೆಯನ್ನು ಗ್ರಾಹಕರು–ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳ ಪುನರ್–ಸೂಚ್ಯಾಂಕಗೊಳಿಸುವ ಮೂಲಕ ಬಗೆಹರಿಸಲಾಗಿರುವುದು ಹಾಗೂ ಈ ದಿನಾಂಕದಲ್ಲಿದ್ದಂತೆ, 12,832 ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳು ಪುನರ್–ಸೂಚ್ಯಾಂಕಗೊಳಿಸಲು ಬಾಕಿಯಿದ್ದವು.

***ಆಟೋಮೇಷನ್ ಕೇಂದ್ರಗಳನ್ನು ಅಂತರ–ಸಂಪರ್ಕಗೊಳಿಸುವಿಕೆ***

**2.1.3.2.** ಯೋಜನೆಯ ಪ್ರಾರಂಭದಲ್ಲಿ (2003–04), ಡಿಎಎಸ್ ಅಡಿಯಲ್ಲಿ ಆಟೋಮೇಷನ್‌ಗಾಗಿ 21 ಲಕ್ಷ ಗ್ರಾಹಕರೊಂದಿಗೆ 700 ಫೀಡರುಗಳನ್ನು ಪೂರ್ವಭಾವಿಯಾಗಿ ಯೋಜಿಸಲಾಗಿದ್ದಿತು. ಈ 700 ಫೀಡರುಗಳಿಗಾಗಿ, ಕಂಪನಿಯು 3,130 ಆಟೋಮೇಷನ್ ಕೇಂದ್ರಗಳ (1,590 ಆರ್‌ಎಂಯುಗಳು, 745 ಎಲ್‌ಬಿಎಸ್ ಹಾಗೂ 795 ಎಲ್‌ಆರ್‌ಸಿ) ಸ್ಥಾಪನೆಗಾಗಿ ಪೂರ್ವಭಾವಿಯಾಗಿ ಯೋಜಿಸಿತು.

[60] ಪುನರ್‌ರಚಿತ ತ್ವರಿತಗೊಳಿಸಲ್ಪಟ್ಟ ವಿದ್ಯುತ್ ಅಭಿವೃದ್ಧಿ ಮತ್ತು ಸುಧಾರಣೆಗಳ ಕಾರ್ಯಕ್ರಮ (ಆರ್‌ಎಪಿಡಿಆರ್‌ಪಿ), ಒಂದು ಮಾಹಿತಿ ತಂತ್ರಜ್ಞಾನ ಅನ್ವಯವಾಗಿದ್ದು ವಿದ್ಯುತ್ತಿನ ಲೆಕ್ಕವನ್ನಿಡುವ ಸಲುವಾಗಿ/ಲೆಕ್ಕಪರಿಶೋಧನೆಗಾಗಿ ಹಾಗೂ ಮಾಹಿತಿ ತಂತ್ರಜ್ಞಾನ ಆಧಾರಿತ ಗ್ರಾಹಕ ಸೇವಾ ಕೇಂದ್ರಗಳಿಗೆ ಮೂಲ ಮಾಹಿತಿಯನ್ನು ಒದಗಿಸುತ್ತದೆ.

ಸೆಪ್ಟಂಬರ್ 2021ರಲ್ಲಿದ್ದಂತೆ, ಎಲ್‌ಬಿಎಸ್ ಹಾಗೂ ಎಲ್‌ಆರ್‌ಸಿಗಾಗಿ ಡಿಎಎಸ್‌ನೊಂದಿಗೆ ಅಂತರ-ಸಂಪರ್ಕ ಕಲ್ಪಿಸುವಿಕೆಯು ಪೂರ್ಣಗೊಂಡಿದ್ದಿತು (ಶೇಕಡಾ 99), ಆದಾಗ್ಯೂ, 149 ಆರ್‌ಎಂಯುಗಳ ಅಂತರ-ಸಂಪರ್ಕ ಕಲ್ಪಿಸುವಿಕೆಯು ಬಾಕಿಯಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಇದಕ್ಕೆ ಕಂಪನಿಯು ನೀಡಿದ (ಅಕ್ಟೋಬರ್ 2021) ಕಾರಣಗಳೆಂದರೆ ಸ್ಥಗಿತಗೊಂಡಿದ್ದ ಆರ್‌ಎಂಯುಗಳು, ದೋಷಪೂರಿತ ಸ್ಥಿತಿ, ಪ್ರಗತಿಯಲ್ಲಿರುವ ಮೂಲಸೌಕರ್ಯ ಕಾಮಾಗಾರಿಗಳು, ಇತ್ಯಾದಿ. ಆರ್‌ಎಂಯುಗಳ ಸ್ಥಾಪನೆಯು ಸೆಪ್ಟಂಬರ್ 2012ರಿಂದಲೂ ನಡೆಸಿಕೊಂಡು ಬರಲಾಗುತ್ತಿರುವುದು ಹಾಗೂ ಈ ಆರ್‌ಎಂಯುಗಳನ್ನು ಯೋಜನೆಯ ಕಾರ್ಯೋದ್ಯುಕ್ತಗೊಳಿಸುವಿಕೆಯ ಘೋಷಣೆಯಲ್ಲಿನ ವಿಳಂಬದ ಕಾರಣ ಡಿಎಎಸ್ ಒಳಗಡೆಗೆ ತರದೆಯೇ ಕಾರ್ಯೋದ್ಯುಕ್ತಗೊಳಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಬ್ಯಾಟರಿಗಳನ್ನು ಕಳ್ಳತನ ಮಾಡಲಾಗಿದ್ದ ಹಲವಾರು ದೃಷ್ಟಾಂತಗಳಿದ್ದುದು, ಆಂತರಿಕ ಕೇಬಲ್ಲುಗಳು ಹಾಳಾಗಿದ್ದುದು, ಆರ್‌ಎಂಯುಗಳು ಕಾರ್ಯಸ್ಥಗಿತಗೊಂಡಿದ್ದುದು, ಇತರೆ ಮೂಲಸೌಕರ್ಯ ಕಾಮಗಾರಿಗಳ ವೇಳೆಯಲ್ಲಿ ಸಾಧನಗಳನ್ನು ಕಡೆಗಣಿಸಿದ್ದುದು ವರ್ಷಗಳು ಕಳೆದಂತೆಲ್ಲಾ ಆರ್‌ಎಂಯುಗಳ ಕಾರ್ಯಚಟುವಟಿಕೆಗಳು ವಿಫಲಗೊಂಡಿದ್ದುದು/ಸ್ಥಗಿತಗೊಂಡಿದ್ದುದು ಹಾಗೂ ನಿಯತ ನಿರ್ವಹಣೆಯ ಕೊರತೆ, ಇತ್ಯಾದಿಗಳ ಕಾರಣ ಸಾಧನಗಳ ಅಂತರ-ಸಂಪರ್ಕಗೊಳಿಸುವಿಕೆಯನ್ನು ಮಾಡಲಾಗಲಿಲ್ಲ ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆಯೇ, ವಾರ್ಷಿಕ ನಿರ್ವಹಣಾ ಗುತ್ತಿಗೆಯನ್ನು (ಎಎಂಸಿ) 3,130 ಆಟೋಮೇಷನ್ ಸಾಧನಗಳ ಪೈಕಿ 2,391ರಲ್ಲಿ (ಶೇಕಡಾ 76) ಮಾತ್ರ ಮಾಡಿಕೊಳ್ಳಲಾಗಿದ್ದಿತು, ಉಳಿದ ಕೇಂದ್ರಗಳು ವಾರ್ಷಿಕ ನಿರ್ವಹಣಾ ಗುತ್ತಿಗೆ ಇಲ್ಲದೆಯೇ ಉಳಿದಿದ್ದವು.

ಮುಂದುವರೆದು, ಮಾರ್ಚ್ 2021ರಲ್ಲಿದ್ದಂತೆ 72 ಆರ್‌ಟಿಯುಗಳು ಕಾರ್ಯಸ್ಥಗಿತಗೊಂಡಿದ್ದವು (34 ಆರ್‌ಟಿಯುಗಳು ಎರಡು ವರ್ಷಗಳಿಗೂ ಮೀರಿದಂತೆ ಕಾರ್ಯಸ್ಥಗಿತಗೊಂಡಿದ್ದವು), ಇವುಗಳನ್ನು ಬದಲಾಯಿಸುವ ಅಗತ್ಯತೆಯಿದ್ದಿತು. ಈ ಕಾರ್ಯಸ್ಥಗಿತಗೊಂಡಿದ್ದ ಆರ್‌ಟಿಯುಗಳು 'ಡಿಎಎಸ್'ನ ಹೊರಗೆ ಉಳಿದಿದ್ದವು. ಯೋಜನೆಯನ್ನು ಸಮೀಕ್ಷಿಸುವ ಸಲುವಾಗಿ ನೇಮಕ ಮಾಡಲಾಗಿದ್ದ (ಸೆಪ್ಟೆಂಬರ್ 2020) ತಾಂತ್ರಿಕ ಸಮಿತಿಯೂ ಸಹ ದೋಷಪೂರಿತ ಮತ್ತು ರಿಪೇರಿ ಮಾಡಲು ಯೋಗ್ಯವಾಗಿರದ 106 ಆರ್‌ಎಂಯುಗಳ ಬದಲಾವಣೆಗೆ ಶಿಫಾರಸು ಮಾಡಿದ್ದಿತು. ಅಲ್ಲದೆಯೇ, ಸಮಿತಿಯು ಸಕ್ರಿಯವಾಗಿರುವ ವಿದ್ಯುತ್ ವಿತರಣಾ ಸಂಪರ್ಕಜಾಲದಲ್ಲಿ ಇರುವಂತಹ ಅನೇಕ ಆರ್‌ಎಂಯುಗಳು ಹಾಳಾಗಿದ್ದು ಒಟ್ಟಾರೆ ಕಾರ್ಯನಿರ್ವಹಣೆ ಮತ್ತು ದಕ್ಷತೆಯ ಮೇಲೆ ಪ್ರಭಾವ ಬೀರುತ್ತಿರುವುದಾಗಿಯೂ ಗಮನಿಸಿದ್ದಿತು.

ಆದ್ದರಿಂದ, ಮೇಲೆ ತಿಳಿಸಲಾದಂತೆ ಆಟೋಮೇಷನ್ ಕೇಂದ್ರಗಳ ಕಾರ್ಯಾಚರಣೆಗಳಲ್ಲಿನ ಅಸಮರ್ಪಕತೆಗಳ ಕಾರಣ, ಆಟೋಮೇಷನ್‌ನ ಪ್ರಯೋಜನಗಳನ್ನು ಅದರ ಅತ್ಯುತ್ತಮ ಸಾಮರ್ಥ್ಯಕ್ಕೆ ತಕ್ಕಂತೆ ಪಡೆದುಕೊಳ್ಳಲಾಗಿರಲಿಲ್ಲ.

ವಿಫಲಗೊಂಡಿರುವ/ಸ್ಥಗಿತಗೊಂಡಿರುವ/ರಿಪೇರಿಯ ಅಡಿಯಲ್ಲಿರುವ ಸಾಧನಗಳನ್ನು ಹೊರತುಪಡಿಸಿದಂತೆ ಎಲ್ಲಾ ಸಾಧನಗಳ ಅಂತರ-ಸಂಪರ್ಕ ಕಲ್ಪಿಸುವಿಕೆಯನ್ನು ಮಾಡಲಾಗಿದೆ ಎಂಬುದಾಗಿ ಸರ್ಕಾರವು ಉತ್ತರಿಸಿತು (ಮಾರ್ಚ್ 2022). ವಿಫಲಗೊಂಡಿರುವ/ ಸ್ಥಗಿತಗೊಂಡಿರುವ/ ರಿಪೇರಿಯ ಅಡಿಯಲ್ಲಿರುವ 149 ಆರ್‌ಎಂಯುಗಳನ್ನು ಬದಲಾಯಿಸಲು/ರಿಪೇರಿ ಮಾಡಿಸಲು ಕ್ರಮವನ್ನು ಕೈಗೊಳ್ಳಲಾಗಿರುವುದು. ಬೆಂಗಳೂರು ನಗರದಲ್ಲಿರುವ ಎಲ್ಲಾ ಆರ್‌ಎಂಯುಗಳ ಸಮಗ್ರ ವಾರ್ಷಿಕ ನಿರ್ವಹಣಾ ಗುತ್ತಿಗೆಯನ್ನು ನೀಡಲಾಗಿರುವುದು ಹಾಗೂ ನಿರ್ವಹಣೆಯ ಸಮಸ್ಯೆಯನ್ನು ಬಗೆಹರಿಸಲಾಗಿರುವುದು.

***ಮೇಲ್ವಿಚಾರಣೆ ಮಾಡಿರದ ಫೀಡರುಗಳು***

**2.1.3.3.** ಫೀಡರುಗಳ ಸಂಖ್ಯೆಯನ್ನು 2003-04ರಲ್ಲಿ ಇದ್ದಂತಹ 700 ಫೀಡರುಗಳಿಂದ ಮಾರ್ಚ್ 2021ರಲ್ಲಿದ್ದಂತೆ 1,792ಕ್ಕೆ ಹಾಗೂ ಗ್ರಾಹಕರುಗಳ ಸಂಖ್ಯೆಯನ್ನು 21 ಲಕ್ಷದಿಂದ 55.63 ಲಕ್ಷಕ್ಕೆ ಹೆಚ್ಚಳಗೊಳಿಸಲಾಗಿದ್ದಿತು. ಆಟೋಮೇಷನ್ ಕೇಂದ್ರಗಳ ಸಂಖ್ಯೆಯನ್ನು ಫೀಡರುಗಳ ಸಂಖ್ಯೆಗೆ ಪ್ರಮಾಣಾನುಗುಣವಾಗಿ ಹೆಚ್ಚಳಗೊಳಿಸಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಂಪನಿಯು, ಕೇವಲ ಏಪ್ರಿಲ್ 2021ರಲ್ಲಿ ಫೀಡರು ಸಂಪರ್ಕಜಾಲದಲ್ಲಿ 1,037 ಹೊಸ ಆಟೋಮೇಷನ್ ಕೇಂದ್ರಗಳನ್ನು ಗುರುತಿಸಿತು ಹಾಗೂ ಇನ್ನೂ ಹೆಚ್ಚಿನ ಆಟೋಮೇಷನ್

ಉಪಕರಣಗಳನ್ನು ಸ್ಥಾಪಿಸುವ ತೀರ್ಮಾನವನ್ನು ಕೈಗೊಂಡಿತು. ಆದಾಗ್ಯೂ, ಈ ನಿಟ್ಟಿನಲ್ಲಿ ಸೆಪ್ಟಂಬರ್ 2021ರಲ್ಲಿದ್ದಂತೆ ಯಾವುದೇ ಕ್ರಮವನ್ನು ಕೈಗೊಂಡಿರಲಿಲ್ಲ. ಮುಂದುವರೆದು, 1,792 ಫೀಡರುಗಳ ಪೈಕಿ, ಕೇವಲ 1,498 ಫೀಡರುಗಳನ್ನು[61] ಮಾತ್ರ ಡಿಎಎಸ್ ವ್ಯವಸ್ಥೆಯ ಒಳಕ್ಕೆ ತರಲಾಗಿದ್ದಿತು. ಈ 1,498 ಫೀಡರುಗಳ ಪೈಕಿ, ಕೇವಲ 1,012 ಫೀಡರುಗಳು ಡಿಎಎಸ್ ಸಾಧನಗಳೊಂದಿಗೆ ಇದ್ದವು ಹಾಗೂ ಡಿಎಎಸ್ ನಿಯಂತ್ರಣ ಕೇಂದ್ರಗಳಿಂದ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡಬಹುದಾಗಿದ್ದಿತು, ಹೀಗಾಗಿ 486 ಫೀಡರುಗಳು ಡಿಎಎಸ್ ಸಾಧನಗಳಿಲ್ಲದೆಯೇ ಉಳಿದಿದ್ದವು, ಇವುಗಳಿಗೆ ದೂರಸಂವೇದಿ/ರಿಮೋಟ್ ಕಾರ್ಯಾಚರಣೆಗಳು ಸಾಧ್ಯವಿರಲಿಲ್ಲ. ಇದು ಆಟೋಮೇಷನ್ನಿನ ಉದ್ದೇಶವನ್ನೇ ವಿಫಲಗೊಳಿಸಿದ್ದಿತು.

ಕೋರಮಂಗಲ ವಿಭಾಗದಲ್ಲಿ 225ರ ಪೈಕಿ 129 ಫೀಡರುಗಳು ಹಾಗೂ ಎಚ್ಎಸ್ಆರ್ ವಿಭಾಗದಲ್ಲಿ 195ರ ಪೈಕಿ 72 ಫೀಡರುಗಳು ಡಿಎಎಸ್ ಸ್ವಿಚ್ಚುಗಳ ಹೊರತಾಗಿದ್ದವು ಎಂಬುದನ್ನು ಡಿಎಎಸ್ ನಿಯಂತ್ರಣ ಕೇಂದ್ರಗಳಿಂದ ಪಡೆಯಲಾಗಿದ್ದ ಮಾಸಿಕ ವರದಿಗಳಿಂದ (ಜನವರಿ 2020ರಿಂದ ಫೆಬ್ರವರಿ 2021ರ ಅವಧಿಗೆ) ಲೆಕ್ಕಪರಿಶೋಧನೆಯು ಗಮನಿಸಿತು. ಈ ಫೀಡರುಗಳು ಡಿಎಎಸ್ ಸ್ವಿಚ್ಚುಗಳಿಲ್ಲದೆಯೇ ಇದ್ದಂತಹ ವಾಸ್ತವಾಂಶಗಳನ್ನು ಜನವರಿ 2020ರಿಂದ ಫೆಬ್ರವರಿ 2021ರ ಅವಧಿಯಲ್ಲಿ ಅವಿರತವಾಗಿ ವರದಿ ಮಾಡಲಾಗಿದ್ದಿತಾದರೂ ಈ ಫೀಡರುಗಳಿಗೆ ಡಿಎಎಸ್ ಸಾಧನಗಳನ್ನು ಅಳವಡಿಸುವ/ಸರಿಪಡಿಸುವ ಸಲುವಾಗಿ ಯಾವುದೇ ಕ್ರಮಗಳನ್ನು ಇನ್ನೂ ತೆಗೆದುಕೊಂಡಿರುವುದಿಲ್ಲ.

ಹೊಸ ಫೀಡರುಗಳ ಆಟೋಮೇಷನ್ ಕಾರ್ಯವು ಇತರೆ ಭಾಗಗಳನ್ನು/ಅನುಕೂಲತೆಗಳನ್ನು ಅಳವಡಿಸುವ ಅಗತ್ಯತೆ ಹೊಂದಿರುತ್ತದೆ. ಹಾಗೂ ಇದಕ್ಕಾಗಿ ಶಾಸನಬದ್ಧ ಅನುಮೋದನೆಗಳನ್ನು ಪಡೆದುಕೊಳ್ಳುವ ಅಗತ್ಯತೆಯಿರುತ್ತದೆ ಹಾಗೂ ಅಂತಹ ಅನುಕೂಲತೆಗಳನ್ನು ತಂಡೋಪತಂಡವಾಗಿ ತೆಗೆದುಕೊಳ್ಳಬಹುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಮಾರ್ಚ್ 2022). ಮುಂದುವರೆದು, ಇತರೆ ಸಂಸ್ಥೆಗಳು ಕೈಗೆತ್ತಿಕೊಳ್ಳುವ ಮೂಲಸೌಕರ್ಯ ಕಾಮಗಾರಿಗಳ ಮೇಲೆ ಬೆಂವಿಸಕಂಯು ತನ್ನ ನಿಯಂತ್ರಣ ಹೊಂದಿರುವುದಿಲ್ಲ, ಇದು ವಿತರಣಾ ಸಂಪರ್ಕಜಾಲದಲ್ಲಿನ ಬದಲಾವಣೆಗಳಲ್ಲಿ ಪರಿಣಮಿಸುತ್ತದೆ ಹಾಗೂ ಆಟೋಮೇಷನ್ ಕೇಂದ್ರಗಳಿಗಾಗಿ ಸ್ಥಳಗಳನ್ನು ಗುರುತಿಸುವುದು ಮತ್ತು ಅಂತಿಮರೂಪಕ್ಕೆ ತರುವುದರ ಮೇಲೆ ಪ್ರಭಾವ ಬೀರುತ್ತದೆ. ಕೋರಮಂಗಲ ಮತ್ತು ಎಚ್ಎಸ್ಆರ್ ವಿಭಾಗಗಳಲ್ಲಿ ಸ್ವಿಚ್ಚುಗಳಿಲ್ಲದ ಫೀಡರುಗಳಿಗೆ ಸಂಬಂಧಿಸಿದಂತೆ, 201 ಫೀಡರುಗಳ ಪೈಕಿ 96 ಸಮರ್ಪಿತ ಫೀಡರುಗಳಾಗಿದ್ದವು ಹಾಗೂ ಈ ಫೀಡರುಗಳಿಗೆ ಆಟೋಮೇಷನ್ ಕೇಂದ್ರಗಳನ್ನು ಒದಗಿಸುವುದರಿಂದ ಯಾವುದೇ ಮೌಲ್ಯ ವರ್ಧನೆ ಆಗುವುದಿಲ್ಲ ಎಂಬುದಾಗಿ ತಿಳಿಸಲಾಗಿದ್ದಿತು.

ಹೊಸ ಫೀಡರುಗಳಿಗೆ ಆಟೋಮೇಷನ್ ಕೇಂದ್ರಗಳನ್ನು ಗುರುತಿಸುವ ಸಲುವಾಗಿ ಹಾಗೂ ಹೊಸ ಫೀಡರುಗಳನ್ನು ಡಿಎಎಸ್ ವ್ಯಾಪ್ತಿಗೆ ತರುವ ರೀತಿಯಲ್ಲಿ ಅಗತ್ಯವಿರುವ ಶಾಸನಬದ್ಧ ಅನುಮೋದನೆಗಳನ್ನು ಪಡೆದುಕೊಳ್ಳುವ ಸಲುವಾಗಿ ಮಾಡಲಾಗಿರುವ ಕ್ರಿಯಾ ಯೋಜನೆಯ ಬಗ್ಗೆ ಉತ್ತರವು ಮೌನವಾಗಿದ್ದಿತು. ಅವಿರತವಾಗಿ ವರದಿ ಮಾಡಲಾಗುತ್ತಿದ್ದಿತಾದರೂ ಸಹ ಕೋರಮಂಗಲ ಮತ್ತು ಎಚ್ಎಸ್ಆರ್ ವಿಭಾಗಗಳಲ್ಲಿ ಸಮರ್ಪಿತ ಫೀಡರುಗಳಲ್ಲದ ಇತರವುಗಳಿಗೆ ಡಿಎಎಸ್ ಸ್ವಿಚ್ಚುಗಳನ್ನು ಒದಗಿಸುವ ಸಲುವಾಗಿ ಕ್ರಮಗಳನ್ನು ತೆಗೆದುಕೊಳ್ಳದಿರಲು ಕಾರಣಗಳ ಬಗ್ಗೆಯೂ ಉತ್ತರವು ಮೌನವಾಗಿದ್ದಿತು. ಸಮರ್ಪಿತ ಫೀಡರುಗಳು ಆಟೋಮೇಷನ್ ಕೇಂದ್ರಗಳ ಅಗತ್ಯತೆಯನ್ನು ಹೊಂದಿರುವುದಿಲ್ಲ ಎಂಬ ವಾದವು ಅನುಮೋದಿತ ಕಾರ್ಯನೀತಿ/ನಿರ್ಣಯಗಳ ಬೆಂಬಲದಿಂದ ಕೂಡಿರಲಿಲ್ಲವಾದ್ದರಿಂದ ಅದು ಊರ್ಜಿತಗೊಳ್ಳುವುದಿಲ್ಲ.

***ಸಿ. ಯೋಜನೆಯ ಪ್ರಯೋಜನಗಳು***

**2.1.3.4.** ಯೋಜನೆಯು ಇನ್ನಿತರವುಗಳ ಜೊತೆಗೆ ಈ ಕೆಳಗಿನ ಪರಿಮಾಣಾತ್ಮಕ ಗುರಿಗಳನ್ನು ಚಿಂತಿಸಿದ್ದಿತು:

[61] 1,792 ಫೀಡರುಗಳ ಪೈಕಿ 294 ಫೀಡರುಗಳು ಯಾವುದೇ ಮೇಲ್ವಿಚಾರಣೆಯ ಅಗತ್ಯತೆಯಿಲ್ಲದಂತೆ ವ್ಯರ್ಥವಾಗಿ/ ಪೂರಕವಾಗಿ ಇದ್ದವು ಎಂಬುದಾಗಿ ತಿಳಿಸಲಾಗಿದ್ದಿತು.

**ಕೋಷ್ಟಕ ಸಂಖ್ಯೆ 2.1.1 ಡಿಎಎಸ್ ಅಡಿಯಲ್ಲಿನ ಗುರಿಗಳು**

| ಕ್ರಮ ಸಂಖ್ಯೆ | ಪರಿಮಿತಿ | ಪ್ರಸಕ್ತ ಇದ್ದಂತಹ ಮಟ್ಟ (ಯೋಜನಾ ಪೂರ್ವ) (ಸಾಲು 2006) | ಗುರಿಯಾಗಿಸಿ ಕೊಳ್ಳಲಾಗಿದ್ದ ಮಟ್ಟ (ಯೋಜನೆಯ ನಂತರದ) |
|---|---|---|---|
| 1 | ವ್ಯವಸ್ಥೆಯ ಸರಾಸರಿ ಅಡಚಣೆಗಳ ಅವಧಿ ಸೂಚ್ಯಾಂಕ (ಎಸ್ಎಐಡಿಐ) (ಗ್ರಾಹಕರೊಬ್ಬರಿಗೆ ವರ್ಷ ಒಂದಕ್ಕೆ) | 86.2 | 31.4 |
| 2 | ಲೋಪದೋಷ ಸರಿಪಡಿಸಲು/ಪೂರ್ವಸ್ಥಿತಿಗೆ ತರಲು ಅವಧಿ | 155–230 | 43 |
| 3 | ವಿತರಣಾ ನಷ್ಟ (ಪ್ರತಿಶತ) | 10.62 | 9 |
| 4 | ವಿದ್ಯುತ್ ಮಾರಾಟಗಳಲ್ಲಿನ ಹೆಚ್ಚಳದ ಕಾರಣ ವಾರ್ಷಿಕ ಹಣಕಾಸು ಪ್ರಯೋಜನಗಳು | ವಿದ್ಯುತ್ ಮಾರಾಟಗಳಲ್ಲಿನ ಹೆಚ್ಚಳದ ಕಾರಣ ವಾರ್ಷಿಕವಾಗಿ ₹ 13 ಕೋಟಿ | |

**(ಮೂಲ: ಡಿಎಸ್‌ನ ವಿಸ್ತೃತ ಯೋಜನಾ ವರದಿ)**

ಡಿಎಎಸ್ ಅಡಿಯಲ್ಲಿ ಸಾಧಿಸುವುದನ್ನು ಚಿಂತಿಸಲಾಗಿದ್ದ ಪರಿಮಿತಿಗಳಲ್ಲಿ ಒಂದನ್ನು (ಅದೆಂದರೆ ಎಸ್ಎಐಡಿಐ) ಕಂಪನಿಯು ಮೌಲ್ಯಮಾಪನ ಮಾಡಿದ್ದಿತು. ಇತರೆ ಪರಿಮಿತಿಗಳು, ಅವೆಂದರೆ ವಿತರಣಾ ನಷ್ಟಗಳು, ಲೋಪದೋಷಗಳನ್ನು ಸರಿಪಡಿಸಿ ವಿದ್ಯುತ್ತನ್ನು ಪೂರ್ವಸ್ಥಿತಿಗೆ ತರುವುದು ಹಾಗೂ ವಿದ್ಯುತ್ ಮಾರಾಟಗಳಲ್ಲಿನ ಹೆಚ್ಚಳಗಳ ಬಗ್ಗೆ ಮೌಲ್ಯಮಾಪನ ಮಾಡಿರಲಿಲ್ಲ.

ವಾರ್ಷಿಕ ಸರಾಸರಿ ವಿದ್ಯುತ್ ಸ್ಥಗಿತ ಅವಧಿಯು ಗ್ರಾಹಕರೊಬ್ಬರಿಗೆ ಗಂಟೆಯೊಂದಕ್ಕೆ ಗುರಿಯಾಗಿಸಿಕೊಳ್ಳಲಾಗಿದ್ದ 31.4 ಗಂಟೆಗಳು ಹಾಗೂ ಯೋಜನಾಪೂರ್ವ ಮಟ್ಟ 86.2 ಗಂಟೆಗಳಿಗೆ ಪ್ರತಿಯಾಗಿ 42.84 ಗಂಟೆಗಳಿಂದ 134.54 ಗಂಟೆಗಳವರೆಗೆ[62] ಆಗಿದ್ದಿತು ಎಂಬುದನ್ನು ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶ ವಲಯಕ್ಕಾಗಿ (ಬಿಎಂಎಝುಡ್) 'ಎಸ್ಎಐಡಿಐ'ನ ಲೆಕ್ಕಪರಿಶೋಧನಾ ಸಮೀಕ್ಷೆಯು 2019–20 ಮತ್ತು 2020–21 ಅವಧಿಯಲ್ಲಿ ತೋರಿಸಿಕೊಟ್ಟಿತು.

ಕರ್ನಾಟಕ ಸಕಾರದ ನಿರ್ಣಯದ ಅನುಸಾರ ಲೈವ್ ವಿತರಣಾ ಜಾಲದಲ್ಲಿ ಕೈಗಿತ್ತಿಕೊಂಡ ಭೂಗತ ಕೇಬಲ್ ಯೋಜನೆಯ ಅನುಷ್ಠಾನದಿಂದ ಡಿಎಎಸ್ ಯೋಜನೆಯ ಸಾಧನೆ ಬಾಧಿತವಾಯಿತು ಎಂದು ಸರ್ಕಾರವು ಉತ್ತರಿಸಿತು (ಮಾರ್ಚ್ 2022). ಡಿಎಎಸ್ ನಿಯಂತ್ರಣ ಕೇಂದ್ರದ ಕಾರ್ಯಾಚರಣೆಗಳನ್ನು ಪ್ರಪ್ರಥಮವಾಗಿ ಕೈಗೆತ್ತಿಕೊಳ್ಳಲಾದ ಉನ್ನತಮಟ್ಟದ ತಂತ್ರಜ್ಞಾನ ವ್ಯವಸ್ಥೆಗಳಿಗೆ ಮುಕ್ತವಾಗಿದ್ದಂತಹ ಸಂಪನ್ಮೂಲಗಳಿಂದ ನಡೆಸಲಾಗಿತ್ತು, ಅದಕ್ಕಾಗಿ ನಿಯಂತ್ರಣ ಕೊಠಡಿ ಕಾರ್ಯಾಚರಣೆಗಳನ್ನು ನಡೆಸಿಕೊಂಡು ಹೋಗುವ ಸಲುವಾಗಿ ಒಂದು ಸಮರ್ಪಕ ಸಿದ್ಧತಾ ಅವಧಿಯ ಅಗತ್ಯತೆಯಿದ್ದಿತು ಎಂಬುದಾಗಿಯೂ ತಿಳಿಸಿದ್ದಿತು. ದೂರಸಂವೇದಿ ನಿಯಂತ್ರಣ/ರಿಮೋಟ್ ಮೂಲಕ ಮೇಲ್ವಿಚಾರಣೆ ಮಾಡಲಾದ ಫೀಡರುಗಳಿಗೆ ಸಂಬಂಧಿಸಿದಂತೆ ಡಿಎಎಸ್‌ನ ಕಾರ್ಯಗತಗೊಳಿಸಿದನಂತರ ಗ್ರಾಹಕರೊಬ್ಬರಿಗೆ ಗಂಟೆಯೊಂದಕ್ಕೆ ವಾರ್ಷಿಕ ವಿದ್ಯುತ್ ಸ್ಥಗಿತಗಳು ಗಮನಾರ್ಹವಾಗಿ 86.2 ಗಂಟೆಗಳಿಂದ 51.95 ಗಂಟೆಗಳವರೆಗೆ ತಗ್ಗಿರುವವು.

ಕಂಪನಿಯು, ಕಾರ್ಯಾಚರಣೆಗಳ ವೇಳೆಯಲ್ಲಿ ಎದುರಿಸಿದಂತಹ ಹಾಗೂ ತನ್ನ ಅಧಿಕಾರವ್ಯಾಪ್ತಿಯ ಒಳಗೇ ಇದ್ದಂತಹ ವಿವಿಧ ಅಡಚಣೆಗಳನ್ನು (ಆಟೋಮೇಷನ್ ಕೇಂದ್ರಗಳ ಅಂತರ–ಸಂಪರ್ಕ, ಕಾರ್ಯಸ್ಥಗಿತ ಆರ್‌ಟಿಯುಗಳ/ಆರ್‌ಎಂಯುಗಳ ಬದಲಾವಣೆ, ಗ್ರಾಹಕರುಗಳನ್ನು ಸಂಬಂಧಿತ ಆಸ್ತಿಗಳಿಗೆ ಗುರುತಿಸುವುದು, ಇತ್ಯಾದಿ) ಬಗೆಹರಿಸಿಕೊಳ್ಳುವಲ್ಲಿ ವಿಫಲಗೊಂಡಿದ್ದಿತು ಎಂಬ ವಾಸ್ತವಾಂಶವು ಉಳಿದುಕೊಂಡಿರುವುದು. ಡಿಎಎಸ್ ಮೂಲಕ ಮೇಲ್ವಿಚಾರಣೆ ಮಾಡಲಾದ ಫೀಡರುಗಳಿಗೆ ಸಂಬಂಧಿಸಿದಂತೆ ವಾರ್ಷಿಕ ವಿದ್ಯುತ್ ಸ್ಥಗಿತಗಳ ಗಂಟೆಗಳು ಗ್ರಾಹಕರೊಬ್ಬರಿಗೆ 51.95 ಗಂಟೆಗಳಿಗೆ ತಗ್ಗಿರುವುದನ್ನು ತೋರಿಸುತ್ತಿರುವುದಾದರೂ, ಅದು ಗುರಿಯಾಗಿಸಿಕೊಳ್ಳಲಾಗಿರುವ 31.4 ಗಂಟೆಗಳಿಗೆ ಬಹಳ ದೂರವಿರುವುದು. ಅಲ್ಲದೆಯೇ, 2019–20 ಹಾಗೂ 2020–21ರಲ್ಲಿ ಒಟ್ಟಾರೆ ವಿದ್ಯುತ್ ಸ್ಥಗಿತ ಗಂಟೆಗಳು 42.84 ಗಂಟೆಗಳಿಂದ 134.54 ಗಂಟೆಗಳ ವ್ಯಾಪ್ತಿಯಲ್ಲಿ ಉಳಿದುಕೊಂಡಿದ್ದವು. ಈ ರೀತಿಯಾಗಿ ಯೋಜನೆಯನ್ನು ಮಾರ್ಚ್ 2019ರಲ್ಲಿ

[62] **2019–20**: ಉತ್ತರ ವಲಯ: 99.56 ಗಂಟೆಗಳು, ಪೂರ್ವ ವಲಯ: 134.41 ಗಂಟೆಗಳು ದಕ್ಷಿಣ ವಲಯ: 91.64 ಗಂಟೆಗಳು, ಪಶ್ಚಿಮ ವಲಯ: 134.54 ಗಂಟೆಗಳು; **2020–21**: ಉತ್ತರ ವಲಯ: 48.84 ಗಂಟೆಗಳು, ಪೂರ್ವ ವಲಯ: 101.40 ಗಂಟೆಗಳು, ದಕ್ಷಿಣ ವಲಯ: 42.84 ಗಂಟೆಗಳು, ಪಶ್ಚಿಮ ವಲಯ: 126.12 ಗಂಟೆಗಳು.

ಕಾರ್ಯೋದ್ಯುಕ್ತಗೊಂಡಿರುವುದಾಗಿ ಘೋಷಿಸಲಾಯಿತಾದರೂ ಅಪೇಕ್ಷಿಸಲಾಗಿದ್ದ ಪ್ರಯೋಜನಗಳನ್ನು ಇನ್ನೂ ಪಡೆದುಕೊಳ್ಳಲಾಗಿರುವುದಿಲ್ಲ (ಮಾರ್ಚ್ 2022).

***ಡಿ. ವ್ಯವಸ್ಥೆಯ ಗತಿಸುತ್ತಿರುವಿಕೆ***

**2.1.3.5.** ಡಿಎಎಸ್ ಯೋಜನೆಯನ್ನು ಕಾರ್ಯಗತಗೊಳಿಸಿದ್ದನ್ನು ಮತ್ತು ಒಳಗೊಂಡಿರುವ ಸಂಕೀರ್ಣತೆಗಳನ್ನು ವಿಶ್ಲೇಷಣೆ ಮಾಡುವ ಸಲುವಾಗಿ ಒಂದು ತಾಂತ್ರಿಕ ಸಮಿತಿಯನ್ನು ಕಂಪನಿಯು ರಚಿಸಿತು (ಸೆಪ್ಟಂಬರ್ 2020). ಕಂಪನಿಯು ಇನ್ನಿತರವುಗಳ ಜೊತೆಯಲ್ಲಿ ಈ ಕೆಳಗಿನವುಗಳನ್ನು ಶಿಫಾರಸು ಮಾಡಿತು:

i. ಡಿಎಎಸ್ ಪ್ರಧಾನ/ಮಾಸ್ಟರ್ ಸ್ಟೇಷನ್ನು ಖಾತರಿ (ವಾರಂಟಿ) ಬೆಂಬಲ ಅಥವಾ ನಿರ್ವಹಣಾ ಬೆಂಬಲವಿಲ್ಲದೆಯೇ ನಡೆದುಕೊಂಡು ಹೋಗುತ್ತಿರುವುದು. ಜಟಿಲ/ಸಂಕೀರ್ಣ ತಂತ್ರಾಂಶ ಅನ್ವಯ ಅಥವಾ ತಂತ್ರಾಂಶ ಅನ್ವಯಗಳ ಕಾರಣ ಒಟ್ಟಾರೆ ವ್ಯವಸ್ಥೆಯು ವಿಫಲಗೊಳ್ಳುವ/ಸ್ಥಗಿತಗೊಳ್ಳುವ ಸಂಭಾವ್ಯ ಅಪಾಯವಿರುವುದು, ಇದು ಪಾಯಿಂಟ್‌ಗಳ ತ್ವರಿತ ಹೆಚ್ಚಳ ಅಥವಾ ಅನಿರೀಕ್ಷಿತ ಸಂದರ್ಭಗಳ ಕಾರಣ ಸಂಭವಿಸುತ್ತದೆ. ತಂತ್ರಾಂಶ ಅನ್ವಯವು ಮಾಲೀಕತನದಿಂದ ಕೂಡಿರುವುದರಿಂದ ಹಾಗೂ ಯಂತ್ರಾಂಶವು ಹಳೆಯದಾಗುತ್ತಾ ಹೋಗುವುದರಿಂದ ಇದು ಮೂಲ ಉಪಕರಣ ತಯಾರಕರಿಂದ (ಒಇಎಂ) ತಜ್ಞ ಬೆಂಬಲದ ಅಗತ್ಯತೆಯನ್ನು ಹೊಂದಿರುತ್ತದೆ.

ii. ವ್ಯವಸ್ಥೆಯ ಭಾಗಗಳು ತಮ್ಮ ಸೇವೆಯ ಅಂತ್ಯವನ್ನು ಕಾಣುತ್ತಿರುವವು ಹಾಗೂ ಉಪಯೋಗಿಸಬಹುದಾದ ಅವಧಿಯು ಕ್ಷೀಣಿಸುತ್ತಿರುವುದರಿಂದ ಉಪ–ವ್ಯವಸ್ಥೆಯ ಭಾಗಗಳು ವಿಫಲಗೊಳ್ಳುತ್ತಿರುವುದನ್ನು ಕಾಣುತ್ತಿರುವವು. ಮಾರಾಟಗಾರರಿಂದ ಬೆಂಬಲವಿಲ್ಲದಿರುವ ದೃಷ್ಟಿಯಿಂದ ಹಾಗೂ ಅಲ್ಲದೆಯೇ ಮಾರುಕಟ್ಟೆಯಲ್ಲಿ ಬಿಡಿಭಾಗಗಳ ಲಭ್ಯತೆ ಇಲ್ಲದಿರುವುದರಿಂದ ವ್ಯವಸ್ಥೆಯ ಊರ್ಜಿತಗೊಳ್ಳುವಿಕೆಯು ಒಂದು ದೊಡ್ಡ ಸವಾಲಾಗಿರುತ್ತದೆ. ವ್ಯವಸ್ಥೆಯ ಅಗತ್ಯತೆಗಳ ನಿರೀಕ್ಷಣೆಯನ್ನು 12 ವರ್ಷಗಳ ಹಿಂದೆ ವಿನ್ಯಾಸಗೊಳಿಸಿರುವುದರೊಂದಿಗೆ, ಪರಿಣಾಮಕಾರಿತ್ವದಿಂದ ಕೂಡಿದ ವಿತರಣಾ ನಿರ್ವಹಣೆಗೆ ಅನುಕೂಲ ಕಲ್ಪಿಸುವ ಸಲುವಾಗಿ ಯಂತ್ರಾಂಶಗಳು ಹಾಗೂ ಅಲ್ಲದೆಯೇ ತಂತ್ರಾಂಶಗಳ ಸಾಮರ್ಥ್ಯವನ್ನು ವಿದ್ಯುತ್ ವಿತರಣಾ ಸಂಪರ್ಕಜಾಲದ ಬೆಳವಣಿಗೆ ಹಾಗೂ ಹೆಚ್ಚಳಗೊಳ್ಳಲ್ಪಟ್ಟಿರುವ ಕಾರ್ಯಚಟುವಟಿಕೆಗಳ ಅಗತ್ಯತೆಯನ್ನು ಪರಿಗಣಿಸಿದಂತೆ ಮೇಲ್ದರ್ಜೆಗೇರಿಸುವ ಅಗತ್ಯತೆಯಿರುವುದು.

ವಿವಿಧ ಉಪಕರಣಗಳನ್ನು ಡಿಎಎಸ್ ಒಳಗಡೆಗೆ ಅಂತರ್ಗತಗೊಳಿಸುವ ಪ್ರಕ್ರಿಯೆಗಳು ಹಾಗೂ ಗ್ರಾಹಕರುಗಳನ್ನು ವಿತರಣಾ ಟ್ರಾನ್ಸ್‌ಫಾರ್ಮರು ಕೇಂದ್ರಗಳಿಗೆ ಗುರುತಿಸುವುದು ಮಾರ್ಚ್ 2022ರಲ್ಲಿದ್ದಂತೆಯೂ ಮುಂದುವರೆದಿರುವುದು ಹಾಗೂ ನಿರ್ವಹಣೆಯ ಕೊರತೆಯಿಂದಾಗಿ ವಲಯವಾರು ವರ್ತುಲ ಪ್ರಮುಖ ಘಟಕಗಳು/ದೂರ ಸಂವೇದಿ/ರಿಮೋಟ್ ಟರ್ಮಿನಲ್ ಯೂನಿಟ್ಟುಗಳು ಕಾರ್ಯಸ್ಥಗಿತವಾಗಿ ಉಳಿದಿರುವುದರಿಂದ ಹಾಗೂ ಕೆಲವು ಫೀಡರುಗಳು ಡಿಎಎಸ್ ಸ್ವಿಚ್ಚುಗಳಿಂದ ಸಜ್ಜುಗೊಂಡಿರಲಿಲ್ಲವಾದ್ದರಿಂದ ಗುರಿಯಾಗಿಸಿಕೊಳ್ಳಲಾಗಿದ್ದ ದಿನಾಂಕದ ನಂತರ ಎಂಟು ವರ್ಷಗಳು ಕಳೆದ ನಂತರ ಮಾರ್ಚ್ 2019ರಲ್ಲಿ ₹ 45 ಕೋಟಿ[63], ಒಟ್ಟಾರೆ ವೆಚ್ಚದಲ್ಲಿ ಕಾರ್ಯಾಚರಣೆಗಾಗಿ ಸ್ಥಾಪಿಸಲಾದ ವ್ಯವಸ್ಥೆಯು ಗತಿಸುತ್ತಿರುವಿಕೆ ಸ್ಥಿತಿಗೆ/ನಿಷ್ಪ್ರಯೋಜಕ ಸ್ಥಿತಿಗೆ ತಲಪುವ ಮುಂಚೆ ಕೇವಲ ಎರಡು ವರ್ಷಗಳ ಸೇವೆ ಸಲ್ಲಿಸಿರುವುದು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ವ್ಯವಸ್ಥೆಯು ಕಾರ್ಯೋದ್ಯುಕ್ತವಾಗಿ ಮುಂದುವರೆದಿರುವುದು ಹಾಗೂ ಸ್ವತಂತ್ರ ತಾಂತ್ರಿಕ ಸಮಿತಿಯು ಯೋಜನೆಯ ಉಪಯೋಗಿಸಬಹುದಾದ ಅವಧಿ ಹಾಗೂ ಒಇಎಂ, ಇವರಿಂದ ಬೆಂಬಲವು ಲಭ್ಯವಿಲ್ಲದಿರುವುದನ್ನು ಪರಿಗಣಿಸಿ, 2011–12ರಲ್ಲಿ ಖರೀದಿಸಲಾದ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು

[63] ಸರ್ಕಾರದ 31.3.2022 ದಿನಾಂಕದ ಉತ್ತರದಲ್ಲಿ ಖಚಿತಪಡಿಸಿರುವಂತೆ ಡಿಎಎಸ್ ಪ್ರಧಾನ/ಮಾಸ್ಟರ್ ಸ್ಟೇಷನ್ ಮಾಹಿತಿ ತಂತ್ರಜ್ಞಾನ ಭಾಗಗಳ ವೆಚ್ಚಗಳನ್ನು ಪ್ರತಿನಿಧಿಸುತ್ತದೆ.

ಬದಲಾಯಿಸುವಂತೆ ಬೆಂವಿಸಕಂಗೆ ಶಿಫಾರಸು ಮಾಡಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಮಾರ್ಚ್ 2022).

ಆದಾಗ್ಯೂ, ₹ 45 ಕೋಟಿ ಮೌಲ್ಯದಷ್ಟು ಉಪಕರಣವು ವಿಷಯಕ ಪ್ರಯೋಜನಗಳನ್ನು ಪಡೆದುಕೊಳ್ಳದೆಯೇ ಬದಲಾಯಿಸುವಂತೆ ಮಾಡಿತು ಎಂಬ ವಾಸ್ತವಾಂಶವು ಉಳಿದುಕೊಳ್ಳುತ್ತದೆ.

*ನಿರ್ಣಯ*

ಕಂಪನಿಯು ಅಗತ್ಯವಾಗಿದ್ದ ಶಾಸನಬದ್ಧ ಅನುಮತಿಗಳ ಪಡೆಯುವಿಕೆ, ಆಸ್ತಿಗಳ ಜಿಐಎಸ್ ಮಾಹಿತಿಯ ಯಥಾರ್ಥತೆ, ಆಟೋಮೇಷನ್ ಕೇಂದ್ರಗಳ ಗುರುತಿಸುವಿಕೆ, ನಿಯಂತ್ರಣ ಕೇಂದ್ರಗಳ ಸ್ಥಳ, ಇತ್ಯಾದಿ ಮೂಲ ಭಾಗಗಳನ್ನು ಖಚಿತಪಡಿಸಿಕೊಂಡಿರಲಿಲ್ಲವಾದ್ದರಿಂದ ಯೋಜನೆಯನ್ನು ಕಾರ್ಯಗತಗೊಳಿಸುವ ಮುಂಚಿತವಾಗಿ ಸಮರ್ಪಕ ಸಿದ್ಧತೆಯು ಕೊರತೆಯಿಂದ ಕೂಡಿದ್ದಿತು. ಪ್ಯಾಕೇಜು ಗುತ್ತಿಗೆಗಳು ಅಂತರ–ಅವಲಂಬಿತವಾಗಿದ್ದವಾದ್ದರಿಂದ ವಿವಿಧ ಕಾರ್ಯಚಟುವಟಿಕೆಗಳನ್ನು ಏಕಕಾಲಿಕವಾಗಿಸುವಲ್ಲಿನ ಕೊರತೆಯು ಕಾಮಗಾರಿಗಳನ್ನು ಗುರಿಯಾಗಿಸಿಕೊಳ್ಳಲಾಗಿದ್ದ ಸಮಯದೊಳಗೆ ಪೂರ್ಣಗೊಳಿಸುವುದರ ಮೇಲೆ ಪರಿಣಾಮ ಬೀರಿತು. ತತ್ಪರಿಣಾಮವಾಗಿ, ಯೋಜನೆಯನ್ನು ಪೂರ್ಣಗೊಳಿಸಲು ನಿಗದಿಯಾಗಿದ್ದ ದಿನಾಂಕದ ಎಂಟು ವರ್ಷಗಳ ನಂತರ ಪೂರ್ಣಗೊಳಿಸಲಾಗಿದ್ದಿತು.

ವ್ಯವಸ್ಥೆಯು ಕಾರ್ಯೋದ್ಯುಕ್ತಗೊಂಡಿರುವುದಾಗಿ ಮಾರ್ಚ್ 2019ರಲ್ಲಿ ಘೋಷಿಸಲಾಯಿತಾದರೂ, ವಾಸ್ತವವಾಗಿ ಎಲ್ಲಾ 14 ವಿಭಾಗಗಳನ್ನು ಸಂಪರ್ಕಜಾಲ ಕಾರ್ಯಾಚರಣೆ ಮಾಡ್ಯೂಲಿಗೆ ಕೇವಲ ಜೂನ್ 2020ರಲ್ಲಿಯಷ್ಟೇ ಒಳತರಲಾಯಿತು. ತತ್ಪರಿಣಾಮವಾಗಿ, 12 ವರ್ಷಗಳ ಹಿಂದೆ ವಿನ್ಯಾಸಗೊಳಿಸಲಾಗಿದ್ದ ತಂತ್ರಾಂಶ ಅನ್ವಯಗಳು ಹಾಗೂ ಯಂತ್ರಾಂಶಗಳು ಅಪೇಕ್ಷಿತ ಫಲಿತಾಂಶಗಳನ್ನು ಪಡೆದುಕೊಳ್ಳುವ ಮೊದಲೇ ಉಪಯೋಗವಿಲ್ಲದಂತಾದವು. ಪ್ರಮುಖ ಅಂಶವಾಗಿದ್ದ ವಿದ್ಯುತ್ ಸ್ಥಗಿತ ಗಂಟೆಗಳನ್ನು ವರ್ಷ ಒಂದಕ್ಕೆ ಗ್ರಾಹಕರೊಬ್ಬರಿಗೆ 31.4 ಗಂಟೆಗಳಿಗೆ ತಗ್ಗಿಸುವುದಕ್ಕೆ ಸಂಬಂಧಿಸಿದಂತೆ ಹಾಕಿಕೊಳ್ಳಲಾಗಿದ್ದ ಗುರಿಯನ್ನು ಸಾಧಿಸಲಾಗಿರಲಿಲ್ಲ, ಅದು 2020–21ರಲ್ಲಿ ವಾಸ್ತವಿಕವಾಗಿ 42.84 ಗಂಟೆಗಳಿಂದ 126.12 ಗಂಟೆಗಳಷ್ಟರಲ್ಲಿ ಇದ್ದಿತು. ಯೋಜನೆಯಲ್ಲಿ ಚಿಂತಿಸಲಾಗಿದ್ದ ಇತರೆ ಪರಿಮಿತಿಗಳು, ಅವೆಂದರೆ, ವಿತರಣಾ ನಷ್ಟಗಳು, ಲೋಪದೋಷಗಳನ್ನು ಸರಿಪಡಿಸಿ ವಿದ್ಯುತ್ತನ್ನು ಪೂರ್ವಸ್ಥಿತಿಗೆ ತರುವ ಅವಧಿ ಹಾಗೂ ವಿದ್ಯುತ್ ಮಾರಾಟಗಳಲ್ಲಿನ ಹೆಚ್ಚಳ, ಇವುಗಳನ್ನು ಕಂಪನಿಯು ಮೌಲ್ಯಮಾಪನ ಮಾಡಲಿಲ್ಲ. ಈ ರೀತಿಯಾಗಿ, ₹ 572.64 ಕೋಟಿ ಮೊತ್ತದಷ್ಟು ವೆಚ್ಚದೊಂದಿಗೆ ಕಾರ್ಯಗತಗೊಳಿಸಲಾದ ಯೋಜನೆಯು ಅಪೇಕ್ಷಿತ ಫಲಿತಾಂಶವನ್ನು ನೀಡಲಿಲ್ಲ, ಅಲ್ಲದೆಯೇ ವ್ಯವಸ್ಥೆಯನ್ನು ಹೆಚ್ಚುವರಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸುವಂತೆ ಮಾಡಿತು.

***ಶಿಫಾರಸು:***

**ಕಂಪನಿಯು ಎಲ್ಲಾ ಹೊಸ ಫೀಡರುಗಳನ್ನು ಡಿಎಎಸ್ ವ್ಯಾಪ್ತಿಯ ಒಳಗಡೆಗೆ ತರುವ ಸಲುವಾಗಿ ಒಂದು ಸಮಗ್ರ ಕ್ರಿಯಾ ಯೋಜನೆಯನ್ನು ತಯಾರಿಸತಕ್ಕದ್ದು, ಕಾರ್ಯಸ್ಥಗಿತಗೊಂಡಿರುವ ಉಪಕರಣಗಳನ್ನು ಗುರುತಿಸಬೇಕು, ಹಾಗೂ ವಾರ್ಷಿಕ ನಿರ್ವಹಣಾ ಗುತ್ತಿಗೆಗಳ ಮೂಲಕ ನಿಯತ ಆಧಾರದ ಮೇರೆಗೆ ಬದಲಾಯಿಸುವುದು/ರಿಪೇರಿ ಮಾಡಿಸುವುದು ಹಾಗೂ ಕಂಪನಿಯು ನೇಮಕ ಮಾಡಿರುವ ಸ್ವತಂತ್ರ ತಾಂತ್ರಿಕ ಸಮಿತಿಯು ಸಲಹೆ ನೀಡಿರುವಂತೆ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಇಂದಿನದಿನದನ್ನಾಗಿ ಮಾಡಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು.**

**ಸಾರ್ವಜನಿಕ ವಲಯ ಉದ್ದಿಮೆಗಳು**

## *2.2. ನಷ್ಟವನ್ನುಂಟು ಮಾಡುತ್ತಿರುವ ಸಾರ್ವಜನಿಕ ವಲಯ ಉದ್ದಿಮೆಗಳು*

**2.2.1.** ಕರ್ನಾಟಕ ಸರ್ಕಾರವು ಕಂಪನಿಗಳ ಅಧಿನಿಯಮ, 1956 ಹಾಗು 2013ರ ಅಡಿಯಲ್ಲಿ ಕಾಲಾನುಕಾಲಕ್ಕೆ ಕಂಪನಿಗಳು ಹಾಗೂ ನಿಗಮಗಳನ್ನು ಸ್ಥಾಪಿಸಿರುವುದು. ಅಲ್ಲದೆಯೇ, ಕರ್ನಾಟಕ ಸರ್ಕಾರವು ಶಾಸಕಾಂಗದ ವಿಶೇಷ ಕಾಯಿದೆಯ ಮೂಲಕ ಕೆಲವು ನಿಗಮಗಳನ್ನು, ಅವೆಂದರೆ ರಾಜ್ಯ ರಸ್ತೆ ಸಾರಿಗೆ ನಿಗಮಗಳು, ರಾಜ್ಯ ಹಣಕಾಸು ನಿಗಮ ಹಾಗೂ ರಾಜ್ಯ ಉಗ್ರಾಣಗಳ ನಿಗಮ,

ಇವುಗಳನ್ನು ನಿರ್ದಿಷ್ಟ ಉದ್ದೇಶಗಳೊಂದಿಗೆ ತಂದಿರುವುದು. ಈ ರಾಜ್ಯ ಸಾರ್ವಜನಿಕ ವಲಯ ಉದ್ದಿಮೆಗಳ (ರಾಸಾವಉಗಳು) ಕಾರ್ಯಾಚರಣೆಗಳು ವ್ಯಾಪಕವಾದ ಚಟುವಟಿಕೆಗಳಿಗೆ ಹರಡಿವೆ ಅಂದರೆ ಮೂಲಸೌಕರ್ಯ ಅಭಿವೃದ್ಧಿ, ತಯಾರಿಕೆ, ಸೇವೆಗಳನ್ನು ಒದಗಿಸುವುದು, ವ್ಯಾಪಾರ, ಮಾರುಕಟ್ಟೆ, ಹಣಕಾಸು ಒದಗಿಸುವುದು, ಇತ್ಯಾದಿಗಳು.

31 ಮಾರ್ಚ್ 2021ರಲ್ಲಿದ್ದಂತೆ ರಾಜ್ಯವು 118 ಸರ್ಕಾರಿ ಕಂಪನಿಗಳು (13 ಕಾರ್ಯಸ್ಥಗಿತ ಕಂಪನಿಗಳು ಒಳಗೊಂಡಂತೆ) ಹಾಗೂ ಆರು ಶಾಸನಬದ್ಧ ನಿಗಮಗಳನ್ನು ಒಳಗೊಂಡಂತೆ 124 ರಾಸಾವಉಗಳನ್ನು ಹೊಂದಿದ್ದಿತು. ರಾಜ್ಯ ಸರ್ಕಾರವು ಆಯವ್ಯಯ ಬೆಂಬಲದ ಮೂಲಕ ಷೇರು ಬಂಡವಾಳ, ಅನುದಾನಗಳು ಹಾಗೂ ಸಹಾಯಧನಗಳು ಹಾಗೂ ಸಾಲಗಳ ರೂಪದಲ್ಲಿ ಈ ಸಾವಉಗಳಲ್ಲಿ ಹಣಕಾಸನ್ನು ತೊಡಗಿಸಿರುವುದು. ಈ ಸಾವಉಗಳಲ್ಲಿ ಕೆಲವು, ಕಾಲವು ಕಳೆದಂತೆ ಕಾರ್ಯಾಚರಣೆಗೆ ಸಂಬಂಧಿತ ಅಸಮರ್ಪಕತೆಗಳು ಮುಂತಾದ ಅಂಶಗಳ ಕಾರಣ ನಷ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವವು.

ಪ್ರಸಕ್ತ ಅಧ್ಯಯನದ ಉದ್ದೇಶಕ್ಕಾಗಿ, ಹಿಂದಿನ ಆರು ವರ್ಷಗಳ (2015–16ರಿಂದ 2020–21) ಪೈಕಿ ಕಡೆಯ ಪಕ್ಷ ಮೂರು ವರ್ಷಗಳಲ್ಲಿ ನಷ್ಟಗಳನ್ನು ಭರಿಸಿರುವ ಸಾವಉಗಳನ್ನು ಪರಿಗಣಿಸಲಾಗಿರುವುದು. 64 ಕಾರ್ಯನಿರತ ಸಾವಉಗಳ[64] ಪೈಕಿ, 21 ಸಾವಉಗಳು ಪ್ರಮುಖವಾಗಿ ಸರ್ಕಾರದ ಬೆಂಬಲದೊಂದಿಗೆ ಕಾರ್ಯನಿರ್ವಹಿಸುತ್ತಿದ್ದವು ಹಾಗೂ ಅವುಗಳ ಸ್ವಂತ ಕಾರ್ಯಾಚರಣೆಗಳಿಂದ ಯಾವುದೇ ವರಮಾನ ಇರಲಿಲ್ಲ ಮತ್ತು ಆದ್ದರಿಂದ ಲೆಕ್ಕಪರಿಶೋಧನೆಯ ಮಾದರಿ ಆಯ್ಕೆಯಲ್ಲಿ ಇವುಗಳನ್ನು ಪರಿಗಣಿಸಿರುವುದಿಲ್ಲ. ಉಳಿದ 43 ಸಾವಉಗಳಲ್ಲಿ, ಐದು ಹಣಕಾಸು ಸಾಲುಗಳ ಪೈಕಿ ಕಡೆಯ ಪಕ್ಷ ಮೂರು ಸಾಲುಗಳಲ್ಲಿ ನಷ್ಟಗಳನ್ನು ಭರಿಸಿದ್ದ 12 ಸಾವಉಗಳು ಇದ್ದವು. ಅವುಗಳ ಪೈಕಿ 10 ಸಾವಉಗಳನ್ನು[65] ಸವಿವರ ಅಧ್ಯಯನಕ್ಕಾಗಿ ಆಯ್ಕೆ ಮಾಡಿಕೊಳ್ಳಲಾಯಿತು. 31 ಮಾರ್ಚ್ 2021ರಲ್ಲಿದ್ದಂತೆ, ಈ 10 ಆಯ್ಕೆ ಮಾಡಿಕೊಳ್ಳಲಾಗಿರುವ ಸಾವಉಗಳಲ್ಲಿ ಕರ್ನಾಟಕ ಸರ್ಕಾರವು₹ 3,793.18 ಕೋಟಿ ಮೊತ್ತದಷ್ಟು ಒಟ್ಟಾರೆ ಈಕ್ವಿಟಿಯನ್ನು ಹೂಡಿಕೆ ಮಾಡಿರುವುದು ಹಾಗೂ ಈ ದಿನಾಂಕದಲ್ಲಿದ್ದಂತೆ ಈ ಕಂಪನಿಗಳಲ್ಲಿ ಕ್ರೋಢೀಕೃತ ನಷ್ಟಗಳು ₹ 13,436.35 ಕೋಟಿ ಆಗಿದ್ದಿತು. 2015–16ರಿಂದ 2020–21ರಲ್ಲಿ ಹೂಡಿಕೆ ಮಾಡಲಾಗಿದ್ದ ಈಕ್ವಿಟಿಯ ವಿವರಗಳನ್ನು ***ಅನುಬಂಧ–19ರಲ್ಲಿ*** ನೀಡಲಾಗಿದೆ.

ಸಾವಉಗಳು ನಷ್ಟಗಳನ್ನು ಭರಿಸಲು ಕಾರಣಗಳು ಹಾಗೂ ಅಂಶಗಳನ್ನು ವಿಶ್ಲೇಷಣೆ ಮಾಡುವುದು ಹಾಗೂ ಅವುಗಳ ಕಾರ್ಯಾಚರಣೆ ಮತ್ತು ಹಣಕಾಸಿನ ಕಾರ್ಯನಿರ್ವಹಣೆಯನ್ನು ಉತ್ತಮಪಡಿಸುವ ಸಲುವಾಗಿ ತೆಗೆದುಕೊಳ್ಳಲಾಗಿರುವ ಪರಿಹಾರಕ ಕ್ರಮಗಳನ್ನು ಖಚಿತಪಡಿಸಿಕೊಳ್ಳುವುದು ಲೆಕ್ಕಪರಿಶೋಧನೆಯ ಉದ್ದೇಶವಾಗಿದ್ದಿತು.

ಲೆಕ್ಕಪರಿಶೋಧನೆಯು ಸಂಬಂಧಿತ ಆಡಳಿತ ಇಲಾಖೆಗಳಲ್ಲಿ ಹಾಗೂ ಸಾವಉಗಳ ಸಾಂಸ್ಥಿಕ ಕಛೇರಿಗಳಲ್ಲಿ ನಿರ್ವಹಿಸಲಾಗಿದ್ದ ಕಾರ್ಯನಿರ್ವಹಣೆಗೆ ಸಂಬಂಧಿತ ದಾಖಲೆಗಳನ್ನು ಪರೀಕ್ಷಾ–ಪರಿಶೀಲನೆ ಮಾಡಿತು (ಅಕ್ಟೋಬರ್ 2021ರಿಂದ ಫೆಬ್ರವರಿ 2022). ಆಯ್ಕೆ ಮಾಡಿಕೊಳ್ಳಲಾಗಿರುವ ಪ್ರತಿಯೊಂದು ಸಾವಉಗಳಿಗೆ ಸಂಬಂಧಿಸಿದಂತೆ ನಷ್ಟಗಳಿಗೆ ಕಾರಣಗಳಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾ ವಿಶ್ಲೇಷಣೆಯನ್ನು ಮುಂದಿನ ಕಂಡಿಕೆಗಳಲ್ಲಿ ನೀಡಲಾಗಿರುವುದು.

---

[64] ಮಹಾಲೇಖಪಾಲರ ಕಛೇರಿ, ಲೆಕ್ಕಪರಿಶೋಧನೆ–II, ಕರ್ನಾಟಕದ ಲೆಕ್ಕಪರಿಶೋಧನಾ ವ್ಯಾಪ್ತಿಯ ಅಡಿಯಲ್ಲಿ.

[65] **ಸಾರಿಗೆ ಇಲಾಖೆ**: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ನಿಗಮ; **ನಗರಾಭಿವೃದ್ಧಿ ಇಲಾಖೆ:** ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತ, **ಇಂಧನ ಇಲಾಖೆ:** ಕವಿನಿ ಅನಿಲ ವಿದ್ಯುತ್ ನಿಗಮ ನಿಯಮಿತ, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ; **ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ:** ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ, ಮೈಸೂರು ಸಕ್ಕರೆ ಕಂಪನಿ ನಿಯಮಿತ.

**ರಾಜ್ಯ ರಸ್ತೆ ಸಾರಿಗೆ ನಿಗಮಗಳು**

**2.2.2**. ಕಾರ್ಯಾಚರಣೆಗಳ ದಕ್ಷತೆಯನ್ನು ಹೆಚ್ಚಳಗೊಳಿಸುವ ಸಲುವಾಗಿ, ಪ್ರಯಾಣಿಕರಿಗೆ ಗುಣಮಟ್ಟದ ಸಾರಿಗೆ ಸೇವೆಗಳನ್ನು ಒದಗಿಸುವ ಸಲುವಾಗಿ ಹಾಗೂ ಕಾರ್ಯಾಚರಣೆಗಳ ಮೇಲೆ ಒಂದು ಪರಿಣಾಮಕಾರಿತ್ವದಿಂದ ಕೂಡಿದ ಮೇಲ್ವಿಚಾರಣಾ ವ್ಯವಸ್ಥೆಯನ್ನು ಹೊಂದುವ ಸಲುವಾಗಿ, ಕರ್ನಾಟಕದಲ್ಲಿ ರಾಜ್ಯ ರಸ್ತೆ ಸಾರಿಗೆ ನಿಗಮವನ್ನು ನಾಲ್ಕು ನಿಗಮಗಳನ್ನಾಗಿ ವಿಭಜಿಸಲಾಯಿತು (ಫೆಬ್ರವರಿ 1997), ಅವೆಂದರೆ ಕರ್ನಾಟಕ ರಾಜ್ಯ ಸಾರಿಗೆ ನಿಗಮ ನಿಯಮಿತ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಡಬ್ಲ್ಯುಕೆಆರ್‌ಟಿಸಿ) ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಇಕೆಆರ್‌ಟಿಸಿ), ಇದನ್ನು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಕೆಕೆಆರ್‌ಟಿಸಿ) ಎಂಬುದಾಗಿ ಮರು–ನಾಮಕರಣ ಮಾಡಲಾಗಿರುವುದು (ಜುಲೈ 2021).

ಎಲ್ಲಾ ನಾಲ್ಕು ನಿಗಮಗಳು ಮಧ್ಯಂತರ ಅವಧಿಗಳನ್ನು ಹೊರತುಪಡಿಸಿದಂತೆ ನಷ್ಟಗಳನ್ನು ಭರಿಸಿದ್ದವು. 2015–16ರಿಂದ 2020–21ರಲ್ಲಿ, ನಾಲ್ಕು ನಿಗಮಗಳು ಬೆಂಮಸಾನಿದಿಂದ ಲಾಭಗಳಿಸಿದ ಒಂದು ವರ್ಷವನ್ನು (2015–16) ಹಾಗೂ ಕರಾರಸಾನಿದಿಂದ ಎರಡು ವರ್ಷಗಳನ್ನು (2015–16 ಮತ್ತು 2017–18) ಹೊರತುಪಡಿಸಿದಂತೆ ನಷ್ಟಗಳನ್ನು ಭರಿಸಿದ್ದವು. ಕರ್ನಾಟಕ ಸರ್ಕಾರವು ಮಾರ್ಚ್ 2021ರಲ್ಲಿದ್ದಂತೆ ಹೂಡಿಕೆ ಮಾಡಿದ್ದ ₹ 659.07 ಕೋಟಿ ಮೊತ್ತದಷ್ಟು ಈಕ್ವಿಟಿಗೆ ಪ್ರತಿಯಾಗಿ ಕ್ರೋಡೀಕೃತ ನಷ್ಟಗಳು ₹ 4,689.09 ಕೋಟಿ ಆಗಿದ್ದಿತು. ನಷ್ಟಗಳಿಗೆ ಕಾರಣಗಳನ್ನು ಮುಂದಿನ ಕಂಡಿಕೆಗಳಲ್ಲಿ ವಿಶ್ಲೇಷಿಸಲಾಗಿದೆ.

***ಕಾರ್ಯಾಚರಣೆಗಳ ವೆಚ್ಚ***

**2.2.2.1**. 2015–16ರಿಂದ 2020–21ರಲ್ಲಿ ಕಾರ್ಯಾಚರಣೆಗಳ ವೆಚ್ಚದ ಪ್ರಮುಖ ಭಾಗಗಳು ಉದ್ಯೋಗಿಗಳಿಗೆ ಸಂಬಂಧಿತ ವೆಚ್ಚಗಳು (ಶೇಕಡಾ 44.81) ಹಾಗೂ ಇಂಧನ (ಡೀಸೆಲ್) ವೆಚ್ಚಗಳನ್ನು (ಶೇಕಡಾ 31.64) ಒಳಗೊಂಡಿದ್ದವು. ಈ ವೆಚ್ಚಗಳನ್ನು ಪ್ರಮುಖವಾಗಿ ಪ್ರಯಾಣಿಕರುಗಳಿಂದ ಬಸ್ಸು ಪ್ರಯಾಣ ದರ ಸಂಗ್ರಹಣೆಯ ಮೂಲಕ ವಸೂಲಾತಿ ಮಾಡಲಾಗಿದ್ದಿತು. ರಾಜ್ಯ ರಸ್ತೆ ಸಾರಿಗೆ ಉದ್ದಿಮೆಗಳು ಡೀಸೆಲ್ಲು ದರಗಳಲ್ಲಿನ ಹೆಚ್ಚಳ ಹಾಗೂ ಉದ್ಯೋಗಿಗಳಿಗೆ ಪಾವತಿಸಬೇಕಾದ ತುಟ್ಟಿಭತ್ಯೆಗಳ ಕಾರಣ ಹಣಕಾಸಿನ ನಷ್ಟಗಳನ್ನು ಭರಿಸುವುದನ್ನು ತಡೆಯುವ ಸಲುವಾಗಿ, ಡೀಸೆಲ್ಲಿನ ಮತ್ತು ತುಟ್ಟಿ ಭತ್ಯೆಗಳ ದರಗಳಲ್ಲಿನ ಹೆಚ್ಚಳಗಳನ್ನು ತಟಸ್ಥೀಕರಣಗೊಳಿಸುವ ಸಲುವಾಗಿ ಪೂರ್ವನಿರ್ಧಾರಿತ ಸೂತ್ರ ಅಂದರೆ ಸ್ವಯಂಚಾಲಿತ ದರ ಹೊಂದಾಣಿಕೆ ಸೂತ್ರದ (ಎಎಫ್‌ಎಎಫ್) ಆಧಾರದ ಮೇಲೆ ಟಿಕೇಟ್ಟುಗಳ ದರಪಟ್ಟಿಯನ್ನು ಹೆಚ್ಚಳಗೊಳಿಸುವ ಸಲುವಾಗಿ ಕರ್ನಾಟಕ ಸರ್ಕಾರವು ಅನುಮತಿ ನೀಡಿದ್ದಿತು (ಸೆಪ್ಟಂಬರ್ 2000) ಹಾಗೂ ಅಂತಹ ಟಿಕೇಟುಗಳ ದರಪಟ್ಟಿ ಪರಿಷ್ಕರಣೆಗಳು ಕೆಲವು ಷರತ್ತುಗಳನ್ನು ಪೂರೈಸುವ ಹಾಗೂ ಕರ್ನಾಟಕ ಸರ್ಕಾರದ ಅನುಮೋದನೆಯ ಷರತ್ತಿಗೆ ಒಳಪಟ್ಟಿದ್ದವು. ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

i. 2019–20ರಲ್ಲಿ ಕಾರ್ಯಾಚರಣೆಗೊಳಿಸಲಾದ ಕಿಲೋಮೀಟರು ಒಂದಕ್ಕೆ ವೆಚ್ಚಗಳು ಹಾಗೂ ಗಳಿಕೆಗಳನ್ನು ಈ ಕೆಳಗಿನ ರೇಖಾಚಿತ್ರವು ತೋರಿಸುತ್ತದೆ.

**ರೇಖಾಚಿತ್ರ ಸಂಖ್ಯೆ 2.2.1: 2019–20ರಲ್ಲಿ[66] ಕಿಮೀ ಒಂದಕ್ಕೆ ಗಳಿಕೆಗಳು, ವೆಚ್ಚಗಳು ಹಾಗೂ ವಸೂಲಾತಿ ಮಾಡದೇ ಇದ್ದಂತಹ ವೆಚ್ಚಗಳು**




2019–20ರಲ್ಲಿ ಕಾರ್ಯಾಚರಣೆ ಮಾಡಲಾದ ಕಿಲೋಮೀಟರು ಒಂದರ ವೆಚ್ಚವು ಎಲ್ಲಾ ನಾಲ್ಕು ನಿಗಮಗಳಲ್ಲಿ ಗಳಿಸಲಾದ ವರಮಾನಕ್ಕೆ ಪ್ರಮಾಣಾನುಗುಣವಾಗಿ ಹೋಲಿಸಿದಲ್ಲಿ ಅಧಿಕ ಮಟ್ಟದಲ್ಲಿದ್ದಿತು, ಇದು ಕಾರ್ಯಾಚರಣೆ ಮಾಡಲಾದ ಕಿಲೋಮೀಟರು ಒಂದಕ್ಕೆ ಕಾರ್ಯಾಚರಣೆ ವೆಚ್ಚಗಳನ್ನು ಕಿಲೋಮೀಟರು ಒಂದಕ್ಕೆ ₹ 1.52 ರಿಂದ ₹ 13.52 ವರೆಗೆ ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡುವಲ್ಲಿ ಪರಿಣಮಿಸಿದ್ದಿತು. ಮುಂದುವರೆದು, ಈ ಹಿಂದಿನ ಸಾಲುಗಳಲ್ಲಿಯೂ ಸಹ ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ ವಸೂಲಾತಿಯಲ್ಲಿ ಕೊರತೆಯಿದ್ದಿತು.

**ರೇಖಾಚಿತ್ರ ಸಂಖ್ಯೆ 2.2.2: 2015–16ರಿಂದ 2019–20ರ ಅವಧಿಯಲ್ಲಿ ಕಿಮೀ ಒಂದಕ್ಕೆ ವಸೂಲಾತಿ ಮಾಡದಿದ್ದಂತಹ ವೆಚ್ಚಗಳು**



| | 2015–16 | 2016–17 | 2017–18 | 2018–19 | 2019–20 |
|---|---|---|---|---|---|
| ಕರಾರಸಾನಿ | –0.52 | 1.8 | –0.04 | 1.27 | 1.52 |
| ವಾಕರಸಾನಿ | 0.66 | 2.04 | 1.19 | 1.52 | 3.31 |
| ಕಕರಸಾನಿ | 0.46 | 1.12 | 0.66 | 1.32 | 1.76 |
| ಬೆಂಮನಸಾ | –0.3 | 6.2 | 5.22 | 8.42 | 13.52 |

ಕರಾರಸಾನಿ ವಾಕರಸಾನಿ ಕಕರಸಾನಿ ಬೆಂಮನಸಾ

ii. ಮೇಲಿನ ರೇಖಾಚಿತ್ರದಿಂದ ಕಾಣಬಹುದಾದಂತೆ, ಎಲ್ಲಾ ನಾಲ್ಕು ನಿಗಮಗಳಿಗೆ ಸಂಬಂಧಿಸಿದಂತೆ ವಸೂಲಾತಿ ಮಾಡದಿದ್ದಂತಹ ವೆಚ್ಚಗಳು 2015–16ರಿಂದ 2019–20ರಲ್ಲಿ ಕ್ರಮೇಣ ಹೆಚ್ಚಳಗೊಳ್ಳುತ್ತಾ ಹೋಗಿದ್ದವು. 2014–15ರವರೆವಿಗೂ, ದರಗಳನ್ನು ವಾರ್ಷಿಕವಾಗಿ ಪರಿಷ್ಕರಿಸಲಾಗಿದ್ದಿತು, ಕಡೆಯ ಪರಿಷ್ಕರಣೆಯನ್ನು ಆ ಅವಧಿಯವರೆಗೆ ಜನವರಿ 2015ರಲ್ಲಿ

[66] 2020–21ರಲ್ಲಿ ಪ್ಯಾಂಡೆಮಿಕ್ ಕಾರಣ ಕಾರ್ಯಾಚರಣೆಗಳು ಸೀಮಿತವಾಗಿದ್ದವಾದ್ದರಿಂದ, 2019–20 ಸಾಲಿಗೆ ವಿಶ್ಲೇಷಣೆಯನ್ನು ತೋರಿಸಲಾಗಿರುವುದು.

ಮಾಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ತದನಂತರದಲ್ಲಿ, ನಿಗಮಗಳು ಟಿಕೇಟು ದರಗಳನ್ನು ಫೆಬ್ರವರಿ 2020ರವರೆವಿಗೂ ಪರಿಷ್ಕರಿಸಿರಲಿಲ್ಲ. 2015 ಹಾಗೂ 2020ರ ನಡುವೆ ಐದು ವರ್ಷಗಳಲ್ಲಿ ಕಾರ್ಯಾಚರಣೆಗಳ ವೆಚ್ಚಗಳು ಹೆಚ್ಚಳಗೊಂಡಿದ್ದ ಹೊರತಾಗಿಯೂ ನಿಗಮಗಳು ಎಎಫ್ಎಫ್ ಅನುಸಾರ ಟಿಕೇಟು ದರಗಳನ್ನು ಪರಿಷ್ಕರಿಸದಿರಲು ಕಾರಣಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ. ಮುಂದುವರೆದು, ಕರ್ನಾಟಕ ಸರ್ಕಾರವು ಫೆಬ್ರವರಿ 2020ರಲ್ಲಿ ದರ ಪರಿಷ್ಕರಣೆಗೆ ಅನುಮೋದನೆ ನೀಡುವ ವೇಳೆಯಲ್ಲಿ ನಿಗಮಗಳು ಕೋರಿದ್ದ ಶೇಕಡಾ 15ರಿಂದ 20ರ ಪ್ರತಿಯಾಗಿ ಶೇಕಡಾ 12ಕ್ಕೆ ನಿರ್ಬಂಧಿಸಿತ್ತು.

ವಸೂಲಾತಿ ಮಾಡದೇ ಇದ್ದಂತಹ ವೆಚ್ಚಗಳು ಅಧಿಕ ಪ್ರಮಾಣದಲ್ಲಿ ಇದ್ದಂತಹ (2020–21ರಲ್ಲಿ ಕಿಲೋಮೀಟರು ಒಂದಕ್ಕೆ ₹7.64) ಬೆಂಮಸಾನಿಕ್ಕೆ ಸಂಬಂಧಿಸಿದಂತೆ, ನಷ್ಟಗಳು ಏರುತ್ತಾ ಹೋಗಲು ಕಾರಣಗಳು ಇನ್ನಿತರವುಗಳ ಜೊತೆಗೆ ವರಮಾನದ ಬೆಳವಣಿಗೆ ದರದಲ್ಲಿ ಹೆಚ್ಚಿನ ವ್ಯತ್ಯಯಗಳಿಲ್ಲದೆಯೇ ಕಾರ್ಯಾಚರಣೆಗಳ ವೆಚ್ಚದಲ್ಲಿ ಹೆಚ್ಚಳಗಳಾಗಿರುವುದು, ಹೊಸ ಬಸ್ಸುಗಳನ್ನು ಖರೀದಿಸದ ಕಾರಣ ಉಪಯೋಗಿಸಬಹುದಾದ ಅವಧಿಯನ್ನು ಮೀರಿರುವ/ ಚಾಲನೆಗೆ ಅನರ್ಹವಾಗಿರುವ ಬಸ್ಸುಗಳ ಕಾರ್ಯಾಚರಣೆಗಳು ಎಂಬುದಾಗಿ ವ್ಯವಸ್ಥಾಪನೆಯು ಸರ್ಕಾರಕ್ಕೆ ತಿಳಿಸಿತು (ಜನವರಿ 2020). ಆದಾಗ್ಯೂ, ಇತರೆ ಮೂರು ನಿಗಮಗಳಿಗೆ ಫೆಬ್ರವರಿ 2020ರಲ್ಲಿ ಅನುಮೋದಿಸಲಾದ ದರ ಹೆಚ್ಚಳವನ್ನು ಬೆಂಮಸಾನಿಕ್ಕೆ ವಿಸ್ತರಿಸಿರಲಿಲ್ಲ. ಇದಕ್ಕೆ ಯಾವುದೇ ಕಾರಣಗಳು ದಾಖಲಾತಿಗಳಲ್ಲಿರಲಿಲ್ಲ.

ಸರ್ಕಾರಿ ಆದೇಶ ದಿನಾಂಕ 30 ಸೆಪ್ಟಂಬರ್ 2000ದ ಅನುಸಾರ ಪ್ರಯಾಣಿಕರ ಬಸ್ಸು ಟಿಕೇಟು ದರಗಳನ್ನು ಹೆಚ್ಚಳಗೊಳಿಸುವಲ್ಲಿ ನಿಗಮಗಳಿಗೆ ಸ್ವಾಯತ್ತತೆ ನೀಡಲಾಗಿರುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಏಪ್ರಿಲ್ 2022). ಸಾಮಾಜಿಕ ಜವಾಬ್ದಾರಿಗಳನ್ನು ಪರಿಗಣಿಸುವ ಮೂಲಕ ಹಾಗೂ ಸಾಮಾನ್ಯ ಜನತೆಗೆ ಸಾರಿಗೆ ಸೇವೆಗಳನ್ನು ಪಡೆಯುವಲ್ಲಿ ಸುಲಭಗಮ್ಯತೆ/ಸುಲಭ ಕೈಗೆಟಕುವ ದರಗಳಲ್ಲಿ ಪಡೆಯುವುದು ಇತ್ಯಾದಿಗಳನ್ನು ಪರಿಗಣಿಸುವ ಮೂಲಕ ಬಸ್ಸು ದರಗಳನ್ನು ಕಾಲಾನುಕಾಲಕ್ಕೆ ನಿಗದಿಪಡಿಸಲಾಗಿದ್ದಿತು. ನಿಗಮಗಳ ಕಾರ್ಯಕ್ಷಮತೆ/ಕಾರ್ಯನಿರ್ವಹಣೆಯನ್ನು ಅಧ್ಯಯನ ಮಾಡುವ ಸಲುವಾಗಿ ಹಾಗೂ ಅವುಗಳ ದಕ್ಷತೆಯನ್ನು ಉತ್ತಮಪಡಿಸುವ ಸಲುವಾಗಿ ಕ್ರಮಗಳನ್ನು ಶಿಫಾರಸು ಮಾಡುವ ಸಲುವಾಗಿ ಒಂದು ಏಕ ವ್ಯಕ್ತಿ ಸಮಿತಿಯನ್ನು ರಚಿಸಲಾಗಿರುವುದು, ಅದರ ವರದಿಯನ್ನು ಪರಿಶೀಲಿಸಲಾಗುವುದು.

ಕಾರ್ಯಾಚರಣೆಗಳಲ್ಲಿನ ವೆಚ್ಚಗಳಲ್ಲಿ ಹೆಚ್ಚಳಗೊಂಡಿದ್ದ ಹೊರತಾಗಿಯೂ ಸ್ವಯಂಚಾಲಿತ ದರ ಹೊಂದಾಣಿಕೆ ಸೂತ್ರದ ಅನುಸಾರ 2015 ಮತ್ತು 2020ರ ನಡುವೆ ದರ ಪರಿಷ್ಕರಣೆ ಮಾಡದಿರಲು ನಿರ್ದಿಷ್ಟ ಕಾರಣಗಳ ಬಗ್ಗೆ ಉತ್ತರವು ಮೌನವಾಗಿದ್ದಿತು.

***ಸಾರ್ವಜನಿಕರಿಗೆ ರಿಯಾಯಿತಿಗಳು***

**2.2.2.2.** ನಿಗಮಗಳು ವಿದ್ಯಾರ್ಥಿಗಳು, ಹಿರಿಯ ನಾಗರೀಕರುಗಳು, ವಿಕಲಚೇತನರು/ದೃಷ್ಟಿದೋಷ ಇರುವ ವ್ಯಕ್ತಿಗಳು, ಸ್ವಾತಂತ್ರ ಹೋರಾಟಗಾರರುಗಳು/ಸ್ವಾತಂತ್ರ ಹೋರಾಟಗಾರರ ವಿಧವೆಯರು, ಹುತಾತ್ಮರಾದವರುಗಳ ಅವಲಂಬಿತರು, ಇತ್ಯಾದಿಯವರಿಗೆ ಪ್ರಯಾಣಿಕೆ ದರಗಳಲ್ಲಿ ರಿಯಾಯಿತಿಗಳನ್ನು ನೀಡುತ್ತಿವೆ. ಅಂತಹ ರಿಯಾಯಿತಿಗಳ ನೀಡಿಕೆಯ ಕಡೆಗೆ ಹಣಕಾಸಿನ ಹೊರೆಯನ್ನು ಒಪ್ಪಿಕೊಳ್ಳಲಾಗಿರುವ ಸೂತ್ರದಂತೆ[67] ಕರ್ನಾಟಕ ಸರ್ಕಾರ ಹಾಗೂ ನಿಗಮಗಳ ನಡುವೆ ಹಂಚಿಕೆ ಮಾಡಿಕೊಳ್ಳಲಾಗುವುದು. ನಿಗಮಗಳು ವಿವಿಧ ರಿಯಾಯಿತಿಗಳ ಕಡೆಗೆ ಕೋರಲಾದ ಮತ್ತು ಸ್ವೀಕರಿಸಲಾದ ಮೊತ್ತಗಳ ವಿವರಗಳನ್ನು ***ಅನುಬಂಧ–20ರಲ್ಲಿ*** ವಿವರಿಸಲಾಗಿರುವುದು. ಸರ್ಕಾರಕ್ಕೆ

[67] **ವಿದ್ಯಾರ್ಥಿಗಳ ಬಸ್ ಪಾಸ್ ರಿಯಾಯಿತಿ**: 2013–14ರವರೆಗೆ, ವಾರ ಒಂದಕ್ಕೆ ಪಾಸು ಒಂದಕ್ಕೆ ವೆಚ್ಚದ ವ್ಯತ್ಯಾಸದ ದರ. 2014–15ರಿಂದ ಜಾರಿಗೆ ಬಂದಂತೆ, ವಾಸ್ತವಿಕ ವೆಚ್ಚದ ಆಧಾರದ ಮೇರೆಗೆ; **ಹಿರಿಯ ನಾಗರೀಕರುಗಳಿಗೆ ರಿಯಾಯಿತಿ:** ಬಸ್ಸಿನ ದರದ ಶೇಕಡಾ 75ರಷ್ಟನ್ನು ಫಲಾನುಭವಿಯು ಭರಿಸತಕ್ಕದ್ದು ಹಾಗೂ ಶೇಕಡಾ 25ರಷ್ಟನ್ನು ಸರ್ಕಾರ ಹಾಗೂ ನಿಗಮಗಳು (ಪ್ರತಿಯೊಂದು ಶೇಕಡಾ 12.50ಯಂತೆ) ಹಂಚಿಕೊಳ್ಳುವುದು.

ಮಾಡಲಾದ ಒಟ್ಟಾರೆ ಕೋರಿಕೆಗಳು ಹಾಗೂ ಅವುಗಳಿಗೆ ಪ್ರತಿಯಾಗಿ ಸ್ವೀಕೃತಿಗಳಲ್ಲಿನ ಕೊರತೆಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:

**ಕೋಷ್ಟಕ ಸಂಖ್ಯೆ 2.2.1: ರಿಯಾಯಿತಿಗಳ ಕಡೆಗೆ ಕೋರಿಕೆಗಳ ಸ್ಥಿತಿಗತಿಗಳು**

*(₹ ಕೋಟಿಯಲ್ಲಿ)*

| ಕ್ರಮ ಸಂಖ್ಯೆ | ವಿವರಗಳು | ಕರಾಸಸಾನಿ | ವಾಕರಸಾನಿ | ಕಕರಸಾನಿ | ಬೆಂಮಸಾನಿ | ಒಟ್ಟು |
|---|---|---|---|---|---|---|
| 1 | ದಾಖಲೆಗಳ ಅನುಸಾರ ಸ್ವೀಕರಿಸಬೇಕಾದ ಮೊತ್ತ | 4,601.43 | 2,490.39 | 2,442.49 | 2,741.19 | **12,275.50** |
| 2 | ವಾಸ್ತವಿಕವಾಗಿ ಸ್ವೀಕರಿಸಿರುವುದು | 3,065.24 | 1,421.32 | 1,655.52 | 1,867.62 | **8,009.70** |
| 3 | ಕೊರತೆ | 1,536.19 | 1,069.07 | 786.97 | 873.57 | **4,265.80** |

2000–01ರಿಂದ 2020–21ರ ಅವಧಿಗೆ ಸಂಬಂಧಿಸಿದಂತೆ ₹ 4,265.80 ಕೋಟಿ ಮೊತ್ತದಷ್ಟು ರಿಯಾಯಿತಿಗಳ ಕಡೆಗೆ ಕೋರಿಕೆಗಳನ್ನು ಕಡಿಮೆ ಪ್ರಮಾಣದಲ್ಲಿ ಸ್ವೀಕರಿಸಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಎಲ್ಲಾ ನಿಗಮಗಳು 31 ಮಾರ್ಚ್ 2021ರಲ್ಲಿದ್ದಂತೆ ₹ 4,689.09 ಕೋಟಿ ಮೊತ್ತದಷ್ಟು ಸಂಚಿತ ನಷ್ಟವನ್ನು ಭರಿಸಿದ್ದವಾದ್ದರಿಂದ, ಇದು ನಿಗಮಗಳ ಹಣಕಾಸಿನ ಸ್ಥಿತಿಗತಿಯ ಮೇಲೆ ಪ್ರಭಾವ ಬೀರಿದ್ದಿತು. ಪಾವತಿಗಾಗಿನ ಕೋರಿಕೆಗಳನ್ನು ಸಂಪೂರ್ಣವಾಗಿ ಬಿಡುಗಡೆಗೊಳಿಸದಿರಲು ಕಾರಣಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ.

ಪ್ರಯಾಣ ದರ ರಿಯಾಯಿತಿಯ ಕಡೆಗೆ ಹಣಕಾಸಿನ ಹಂಚಿಕೆಯನ್ನು ವಿವಿಧ ಅಂಶಗಳನ್ನು ಪರಿಗಣಿಸಿ ಸರ್ಕಾರದ ಆಯವ್ಯಯದಲ್ಲಿ ತೀರ್ಮಾನಿಸಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಏಪ್ರಿಲ್ 2022).

ಆದಾಗ್ಯೂ, ನಿಗಮಗಳು ರಿಯಾಯಿತಿಗಳನ್ನು ಸರ್ಕಾರದ ತೀರ್ಮಾನಗಳು/ನಿರ್ದೇಶನಗಳ ಅನುಸಾರ ನೀಡಲಾಗಿರುವುದು, ಆದಾಗ್ಯೂ, ಅವುಗಳಿಗೆ ಅನುಗುಣವಾದಂತಹ ವೆಚ್ಚಗಳನ್ನು ಸರ್ಕಾರವು ಮರುತುಂಬಿಕೊಟ್ಟಿರುವುದಿಲ್ಲ ಎಂಬ ವಾಸ್ತವಾಂಶವು ಉಳಿದುಕೊಳ್ಳುತ್ತದೆ.

***ಮೋಟಾರು ವಾಹನ ತೆರಿಗೆ***

**2.2.2.3.** ಕರ್ನಾಟಕ ಮೋಟಾರು ವಾಹನಗಳ ಮೇಲಿನ ತೆರಿಗೆ ಅಧಿನಿಯಮದ ಅನುಸಾರ ನಿಗಮಗಳು ಬಸ್ಸುಗಳನ್ನು ರಸ್ತೆಯ ಮೇಲೆ ಕಾರ್ಯಾಚರಣೆಗೊಳಿಸಿದ್ದಕ್ಕಾಗಿ ಮೋಟಾರು ವಾಹನ ತೆರಿಗೆ ಪಾವತಿಗೆ ಬಾಧ್ಯವಾಗಿದ್ದವು. ನಿಗಮಗಳಿಗೆ ಹಣಕಾಸಿನ ಬೆಂಬಲವನ್ನು ನೀಡುವ ಸಲುವಾಗಿ, ಕರ್ನಾಟಕ ಸರ್ಕಾರವು ನಿಗಮವು ನಗದು ನಷ್ಟವನ್ನು ಭರಿಸದಷ್ಟರ ಮಟ್ಟಿಗೆ, ತದನಂತರದ ದಿನಾಂಕಗಳಲ್ಲಿ ಸರ್ಕಾರದ ಖಾತೆಗೆ ಮರುಪಾವತಿಸುವ ಷರತ್ತಿಗೆ ಒಳಪಟ್ಟಂತೆ ನಿಗಮಗಳು ಪಾವತಿಸಬೇಕಾದ ಮೋಟಾರು ವಾಹನ ತೆರಿಗೆಯನ್ನು ತಮ್ಮಲ್ಲಿಯೇ ಉಳಿಸಿಕೊಳ್ಳಲು ಅನುಮತಿ ನೀಡಿತು (2000–21 ರಿಂದ 2019–20ರ ನಡುವೆ).

ಅದರಂತೆಯೇ, ಕರ್ನಾಟಕ ಸರ್ಕಾರವು 2000ದಿಂದ 2017ರ ಅವಧಿಗೆ ಕಕರಸಾನಿವು ಪಾವತಿಸಬೇಕಾದ ಮೋಟಾರು ವಾಹನ ತೆರಿಗೆಯನ್ನು ಉಳಿಸಿಕೊಳ್ಳಲು ಅನುಮತಿ ನೀಡಿತು (ಮಾರ್ಚ್ 2001). ಸರ್ಕಾರವು ಅದೇ ರೀತಿಯ ತೆರಿಗೆ ಪಾವತಿ ಮುಂದೂಡಿಕೆ ಆಯ್ಕೆಯನ್ನು ವಾಕರಸಾನಿಕ್ಕೆ 2012ರಿಂದ 2017ರ ಐದು ವರ್ಷಗಳ ಅವಧಿಗೆ ₹ 344.50 ಕೋಟಿ ಮೊತ್ತದಷ್ಟು ಹಾಗೂ ಬೆಂಮಸಾನಿಕ್ಕೆ 2017–18ರಿಂದ 2019–20ರ ಮೂರು ವರ್ಷಗಳ ಅವಧಿಗೆ ₹ 269.47 ಕೋಟಿ ಮೊತ್ತದಷ್ಟು ತೆರಿಗೆ ಪಾವತಿ ಮುಂದೂಡಿಕೆ ಆಯ್ಕೆಯನ್ನು ನೀಡಿತು.

ತೆರಿಗೆಯ ಮೊತ್ತವನ್ನು ವಿನಾಯಿತಿ ಅವಧಿಯು ಮುಕ್ತಾಯಗೊಂಡನಂತರ ತೆರಿಗೆ ಮೊತ್ತವನ್ನು ಸರ್ಕಾರಕ್ಕೆ ಪಾವತಿಸಬೇಕಿದ್ದಿತಾದ್ದರಿಂದ, ತೆರಿಗೆ ಪಾವತಿಯ ಮುಂದೂಡಿಕೆ ಆಯ್ಕೆಯನ್ನು ನಿಗಮಗಳಿಗೆ ಒಂದು ತಾತ್ಕಾಲಿಕ ಪರಿಹಾರವನ್ನಾಗಿ ಮಾತ್ರ ನೀಡಲಾಗಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು

ಗಮನಿಸಿತು. ಆದ್ದರಿಂದ, ತೆರಿಗೆ ಪಾವತಿ ಮುಂದೂಡಿಕೆ ಆಯ್ಕೆಯು ನಿಗಮಗಳಿಗೆ ತಮ್ಮ ನಷ್ಟಗಳನ್ನು ಮರು ತುಂಬಿಕೊಳ್ಳಲು ಯಾವುದೇ ರೀತಿಯಲ್ಲಿಯೂ ಸಹಾಯಕವಾಗಿರುವುದಿಲ್ಲ.

ನಿಗಮಗಳು ವರಮಾನ ನಷ್ಟ ಅನುಭವಿಸುತ್ತಿರುವಾಗಲೂ ಸಹ ಮೋಟಾರು ವಾಹನ ತೆರಿಗೆ ಪಾವತಿಗೆ ಬಾಧ್ಯತೆಯಿರುತ್ತದೆ ಎಂಬುದಾಗಿ ಸರ್ಕಾರವು ತಿಳಿಸಿತು (ಏಪ್ರಿಲ್ 2022).

ಈ ರೀತಿಯಾಗಿ ಮೋಟಾರು ವಾಹನ ತೆರಿಗೆ ವಿನಾಯಿತಿಯು ನಿಗಮಗಳಿಗೆ ತಮ್ಮ ನಷ್ಟಗಳನ್ನು ಮರುತುಂಬಿಕೊಳ್ಳಲು ಯಾವುದೇ ರೀತಿಯಲ್ಲಿಯೂ ಸಹಾಯಕವಾಗಿರಲಿಲ್ಲ.

**ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತ**

**2.2.3**. ಹುಬ್ಬಳ್ಳಿ–ಧಾರವಾಡ ಬಿಆರ್‌ಟಿಎಸ್ ಕಂಪನಿ ನಿಯಮಿತವು (ಎಚ್‌ಡಿಬಿಆರ್‌ಟಿಎಸ್) ಸಾರ್ವಜನಿಕ ಸಾರಿಗೆ ಸೇವೆಗಳನ್ನು ಉತ್ತಮಗೊಳಿಸುವ ಸಲುವಾಗಿ ಹುಬ್ಬಳ್ಳಿ–ಧಾರವಾಡ ಅವಳಿ ನಗರಗಳ ನಡುವೆ ತ್ವರಿತ ಬಸ್ ಸಂಚಾರ ವ್ಯವಸ್ಥೆಯನ್ನು (ಬಿಆರ್‌ಟಿಎಸ್) ಕಾರ್ಯಗತಗೊಳಿಸುವ ಸಲುವಾಗಿ ಪ್ರಾರಂಭಿಸಿರುವ (ಮೇ 2012) ಒಂದು ವಿಶೇಷ ಉದ್ದೇಶದ ವಾಹಕವಾಗಿರುತ್ತದೆ (ಎಸ್‌ಪಿವಿ). 22.25 ಕಿಮೀಗಳ ರಸ್ತೆ ಕಾರಿಡಾರಿನ ಅಭಿವೃದ್ಧಿ ಚಿಂತಿಸಿದ್ದಂತಹ ಯೋಜನೆಯು ಏಪ್ರಿಲ್ 2019ರಲ್ಲಿ ತನ್ನ ವಾಣಿಜ್ಯ ಕಾರ್ಯಾಚರಣೆಗಳನ್ನು ಪ್ರಾರಂಭಿಸಿತು. ಯೋಜನೆಯ ಒಟ್ಟು ವೆಚ್ಚವು ₹ 970.87 ಕೋಟಿ ಆಗಿದ್ದಿತು.

ಅಕ್ಟೋಬರ್ 2018ರಲ್ಲಿ ಪ್ರಾರಂಭಿಸಲಾದ ಪ್ರಾಯೋಗಿಕ ಸಂಚಾರದ ತತ್ಪರಿಣಾಮವಾಗಿ, ಒಟ್ಟಾರೆ ನಗರ ಕಾರ್ಯಾಚರಣೆಗಳನ್ನು ನೋಡಿಕೊಳ್ಳುವ ಸಲುವಾಗಿ ಒಂದು ಪ್ರತ್ಯೇಕ ನಗರ ವಿಭಾಗವನ್ನು ಪ್ರಾರಂಭಿಸುವ ಮೂಲಕ ಅವಳಿ ನಗರಗಳ ಕಾರ್ಯಾಚರಣೆಗಳನ್ನು ವಾಕರಸಾನಿದಿಂದ ನಡೆಸುವ ಒಂದು ಮಧ್ಯಂತರ ವ್ಯವಸ್ಥೆಯ ತೀರ್ಮಾನವನ್ನು ಕರ್ನಾಟಕ ಸರ್ಕಾರವು ತೆಗೆದುಕೊಂಡಿತು (ನವೆಂಬರ್ 2018). ಕರ್ನಾಟಕ ಸರ್ಕಾರವು ಎಚ್‌ಡಿಬಿಆರ್‌ಟಿಎಸ್ ಸೇವೆಗಳ ಕಾರ್ಯಾಚರಣೆಗಳಿಗಾಗಿ ₹ 35 ಕೋಟಿ ಮೊತ್ತದಷ್ಟು ಪ್ರಾರಂಭಿಕ ಹಣಕಾಸಿನ ಸಹಾಯವನ್ನೂ ನೀಡಿತು (ನವಂಬರ್ 2018).

ಮಾರ್ಚ್ 2021ರ ವರಗೆ ತ್ವರಿತ ಬಸ್ ಸಂಚಾರ ವ್ಯವಸ್ಥೆಯ ಬಿಆರ್‌ಟಿಎಸ್ ಕಾರ್ಯಾಚರಣೆಗಳ ಕಾರಣ ₹ 41.24 ಕೋಟಿ ಮೊತ್ತದಷ್ಟು ಕಾರ್ಯಾಚರಣೆಗಳ ನಷ್ಟವಾಗಿರುವುದಾಗಿ ವಾಕರಸಾನಿವು ವರದಿ ಮಾಡಿದ್ದಿತು. ಅಲ್ಲದೆಯೇ, ಎಚ್‌ಡಿಬಿಆರ್‌ಟಿಎಸ್ ಮಾರ್ಚ್ 2021ರಲ್ಲಿದ್ದಂತೆ ₹ 5.69 ಕೋಟಿ ಮೊತ್ತದಷ್ಟು ಕ್ರೋಡೀಕೃತ ನಷ್ಟವನ್ನು ಹೊಂದಿದ್ದಿತು. ಈ ಕೆಳಗೆ ಚರ್ಚಿಸಿರುವಂತೆ ಕಾರ್ಯಾಚರಣೆಗಳ ಕಾರ್ಯಸಾಧ್ಯತೆಯ ಮೇಲೆ ಪರಿಣಾಮ ಬೀರುವಂತಹ ಕೆಲವು ಅಸಮರ್ಪಕತೆಗಳನ್ನು ಲೆಕ್ಕಪರಿಶೋಧನೆಯು ಮಾಡಿದ 'ಎಚ್‌ಡಿಬಿಆರ್‌ಟಿಎಸ್'ನ ಕಾರ್ಯಾಚರಣೆ/ಹಣಕಾಸಿನ ನಿರ್ವಹಣೆಯ ವಿಶ್ಲೇಷಣೆಯು ತೋರಿಸಿಕೊಟ್ಟಿತು.

***ಕಾರ್ಯಸಾಧ್ಯತೆಯಿಂದ ಕೂಡಿರದ ಕಾರ್ಯಾಚರಣೆಗಳು***

**2.2.3.1** ಯೋಜನೆಯು ಮೊದಲ ವರ್ಷದ ಕಾರ್ಯಾಚರಣೆಗಳಿಂದ ಲಾಭಗಳಿಕೆಯನ್ನು ಚಿಂತಿಸಿದ್ದಿತು. ಆದಾಗ್ಯೂ, ಯೋಜನಾ ಕಾರ್ಯಾಚರಣೆಗಳು ಈ ಕೆಳಗಿನ ರೇಖಾಚಿತ್ರದಲ್ಲಿ ತಿಳಿಸಿರುವಂತೆ ಮೊದಲ ವರ್ಷದ ಕಾರ್ಯಾಚರಣೆಗಳಿಂದ ನಷ್ಟಗಳನ್ನು ಅನುಭವಿಸಿತು.

**ಕೋಷ್ಟಕ ಸಂಖ್ಯೆ 2.2.3: ಮೊದಲ ಮತ್ತು ಎರಡನೆಯ ವರ್ಷದ ಕಾರ್ಯಾಚರಣೆಗಳಲ್ಲಿ ಕಾರ್ಯಾಚರಣೆಗಳ ಕಾರ್ಯನಿರ್ವಹಣೆ (2019–20 ಮತ್ತು 2020–21)**




ಲೆಕ್ಕಪರಿಶೋಧನೆಯು ನಷ್ಟಗಳಿಗೆ ಕಾರಣವಾಗಿರುವಂತಹ ಈ ಕೆಳಗಿನ ಅಂಶಗಳನ್ನು ಗಮನಿಸಿತು:

i. ಬಿಆರ್‌ಟಿಎಸ್ ಯೋಜನೆಯ ಸವಿವರ ಕಾರ್ಯಸಾಧ್ಯತೆ ವರದಿಯು ಸಾಮಾನ್ಯ ಪ್ರಮಾಣಕದ (ಸ್ಟ್ಯಾಂಡರ್ಡ್) ಬಸ್ಸುಗಳ ಕಾರ್ಯಾಚರಣೆಯನ್ನು ಚಿಂತಿಸಿದ್ದಿತು ಆದಾಗ್ಯೂ, ವಾಸ್ತವಿಕ ಕಾರ್ಯಾಚರಣೆಗಳನ್ನು ತುಲನಾತ್ಮಕವಾಗಿ ಸ್ವಲ್ಪ ಕಡಿಮೆ ಪ್ರಮಾಣದ ಡೀಸೆಲ್ ದಕ್ಷತೆಯ ಸ್ಟ್ಯಾಂಡರ್ಡ್ ಪ್ರೀಮಿಯಮ್ ಗುಣಮಟ್ಟದ ಹವಾನಿಯಂತ್ರಿತ ಬಸ್ಸುಗಳ (ಓಲ್ವೋ) ಮೂಲಕ ಮಾಡಲಾಗಿದ್ದಿತು. ಅಲ್ಲದೆಯೇ, ಎಚ್‌ಬಿಡಿಆರ್‌ಟಿಎಸ್‌ನ ಕಾರ್ಯಾಚರಣೆಗಳಿಗೆ ಹವಾನಿಯಂತ್ರಿತ ಬಸ್ಸುಗಳನ್ನು ಉಪಯೋಗಿಸುತ್ತಿದ್ದರೂ 'ಎಚ್‌ಡಿಬಿಆರ್‌ಟಿಎಸ್'ನ ನಿರ್ದೇಶಕರುಗಳ ಮಂಡಳಿಯು ಪ್ರಸಕ್ತ ಇರುವಂತಹ ಹವಾನಿಯಂತ್ರಣೇತರ ಬಸ್ಸು ದರಗಳನ್ನು ಅಳವಡಿಸಿಕೊಳ್ಳುವ ಒಂದು ನಿರ್ಣಯವನ್ನು ಕೈಗೊಂಡಿತು (ಡಿಸೆಂಬರ್ 2018).

ii. ಸಾಮಾನ್ಯ ಪ್ರಮಾಣಕದ ಬಸ್ಸುಗಳನ್ನು ಪರಿಗಣಿಸಿ ಯೋಜನೆಯು ಎಚ್‌ಎಸ್‌ಡಿ ಒಂದು ಲೀಟರಿನ ಬಳಕೆಗೆ 3.50 ಕಿಮೀಗಳ ಇಂಧನ ದಕ್ಷತೆಯನ್ನು ಚಿಂತಿಸಿದ್ದಿತು. ಆದಾಗ್ಯೂ, ವಾಸ್ತವಿಕವಾಗಿ ಹವಾನಿಯಂತ್ರಿತ ಬಸ್ಸುಗಳಲ್ಲಿ ಸಾಧಿಸಲಾದ ಇಂಧನ ಬಳಕೆಯು 2019–20 ಮತ್ತು 2020–21ರಲ್ಲಿ ಎಚ್‌ಎಸ್‌ಡಿ ಲೀಟರು ಒಂದಕ್ಕೆ 2.49 ಕಿಮೀ ಹಾಗೂ 2.57 ಕಿಮೀ ಆಗಿದ್ದಿತು. ಇದು ಕಾರ್ಯಾಚರಣೆ ದಕ್ಷತೆಯ ಮೇಲೆ ಪರಿಣಾಮವನ್ನುಂಟು ಮಾಡಿತು ಹಾಗೂ 2019–21ರ ಅವಧಿಯಲ್ಲಿ ₹ 10.01 ಕೋಟಿ[68] ಮೊತ್ತದಷ್ಟು ಹೆಚ್ಚುವರಿ ಕಾರ್ಯಾಚರಣೆಗಳ ವೆಚ್ಚವಾಗುವಲ್ಲಿಗೆ ದಾರಿ ಮಾಡಿಕೊಟ್ಟಿತು.

iii. ಪ್ರಸಕ್ತ ಇದ್ದಂತಹ ದರ ವಿನ್ಯಾಸದೊಂದಿಗೆ ಕಾರ್ಯಾಚರಣೆಗಳ ಕಾರ್ಯಸಾಧ್ಯತೆ ಇರದಿದ್ದುದರ ವಾಸ್ತವಾಂಶವನ್ನು ಪರಿಗಣಿಸಿದಂತೆ, ಯೋಜನೆಯನ್ನು ಕಾರ್ಯಗತಗೊಳಿಸುವುದನ್ನು ಮೇಲ್ವಿಚಾರಣೆ ಮಾಡುವ ಸಲುವಾಗಿ ರಚಿಸಲಾಗಿದ್ದ (ಮಾರ್ಚ್ 2012) ಉನ್ನತ ಅಧಿಕಾರವನ್ನು ಹೊಂದಿದ್ದ ಸಮಿತಿಯು[69] (ಎಚ್‌ಪಿಸಿ) ಪ್ರಸಕ್ತ ಇರುವಂತಹ ದರವನ್ನು ಮೊದಲ ವರ್ಷದಲ್ಲಿ ಶೇಕಡಾ 50ರಷ್ಟು ಹಾಗೂ ಎರಡನೆಯ ಮತ್ತು ಮೂರನೆಯ ಸಾಲಿನಲ್ಲಿ ಪ್ರತೀ ವರ್ಷವೂ ಶೇಕಡಾ 10ರಷ್ಟನ್ನು ಪರಿಷ್ಕರಿಸುವಂತೆ ಶಿಫಾರಸು ಮಾಡಿದ್ದಿತು (ಆಗಸ್ಟ್ 2019). ಉನ್ನತ ಅಧಿಕಾರವನ್ನು ಹೊಂದಿದ್ದ ಸಮಿತಿಯು ಯೋಜನೆಯ

[68] **2019-20:** 90 ಲಕ್ಷ ಕಿಮೀಗಳ ಕಾರ್ಯಾಚರಣೆಗಳಿಗಾಗಿ ಹೆಚ್ಚುವರಿಯಾಗಿ ಬಳಕೆಯಾದ ಎಚ್‌ಎಸ್‌ಡಿ (10.43 ಲಕ್ಷ ಲೀಟರುಗಳು) × ಎಚ್‌ಎಸ್‌ಡಿಯ ಲೀಟರು ಒಂದರ ಸರಾಸರಿ ಖರೀದಿ ದರ (₹ 63.48); **2020–21**: 50.12 ಲಕ್ಷ ಕಿಮೀಗಳ ಕಾರ್ಯಾಚರಣೆಗಳಿಗಾಗಿ ಹೆಚ್ಚುವರಿಯಾಗಿ ಬಳಕೆಯಾದ ಎಚ್‌ಎಸ್‌ಡಿ (4.70 ಲಕ್ಷ ಲೀಟರುಗಳು) × ಎಚ್‌ಎಸ್‌ಡಿಯ ಲೀಟರು ಒಂದರ ಸರಾಸರಿ ಖರೀದಿ ದರ (₹ 72.14).

[69] ಎಚ್‌ಪಿಸಿ ಯು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಇಲಾಖೆಗಳ ಮುಖ್ಯಸ್ಥರು (ಸಾರಿಗೆ, ಹಣಕಾಸು, ನಗರಾಭಿವೃದ್ಧಿ, ಇತ್ಯಾದಿ) ಮತ್ತು ಎಚ್‌ಡಿಬಿಆರ್‌ಟಿಎಸ್ ಮತ್ತು ಕೆಆರ್‌ಡಿಸಿಎಲ್ ನ ವ್ಯವಸ್ಥಾಪಕ ನಿರ್ದೇಶಕರನ್ನು ಸದಸ್ಯರಾಗಿ ಒಳಗೊಂಡಿರುತ್ತದೆ.

ಕಾರ್ಯಗತಗೊಳಿಸುವುದಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಶಿಫಾರಸುಗಳನ್ನೂ ಮಾಡಿದ್ದಿತು (ನವೆಂಬರ್ 2017).

ಎ. ಬಿಆರ್‌ಟಿಎಸ್ ಕಾರ್ಯಾಚರಣೆಗಳ ಮೇಲೆ ಪರಿಣಾಮ ಬೀರಿದ್ದ ಅಡಚಣೆಗಳಲ್ಲಿ ಒಂದು ಎಂಬುದಾಗಿ ಪರಿಗಣಿಸಲಾಗಿದ್ದ ಖಾಸಗಿ ಬಸ್ಸುಗಳ ಕಾರ್ಯಚರಣೆಗಳನ್ನು ಸ್ಥಗಿತಗೊಳಿಸಿರುವುದರ ಬಗ್ಗೆ ಕಾನೂನಾತ್ಮಕ ಪರಿಣಾಮಗಳನ್ನು ಅಧ್ಯಯನ ಮಾಡುವುದನ್ನು ಕೈಗೆತ್ತಿಕೊಳ್ಳುವುದು;

ಬಿ. ಮೂರು ವರ್ಷಗಳಿಗೆ ದರಗಳನ್ನು ಪರಿಷ್ಕರಿಸುವುದು ಹಾಗೂ ಶಿಫಾರಸು ಮಾಡಲಾಗಿರುವ ಪರಿಷ್ಕೃತ ದರಗಳ ಆಧಾರದ ಮೇರೆಗೆ ಕಾರ್ಯಸಾಧ್ಯತೆ ಅಂತರ ಹಣಕಾಸನ್ನು (ವಿಜಿಎಫ್) ಲೆಕ್ಕಹಾಕುವುದು;

ಸಿ. ಮೋಟಾರು ವಾಹನ ತೆರಿಗೆಯನ್ನು ಪ್ರಾರಂಭಿಕ ಐದು ವರ್ಷಗಳಿಗೆ ಮನ್ನಾ ಮಾಡುವುದು;

ಡಿ. ಬಿಆರ್‌ಟಿಎಸ್, ಬಿಆರ್‌ಟಿಎಸ್ ಕಾರಿಡಾರ್ ಅಡಿಯಲ್ಲಿರುವ ಆಸ್ತಿಗಳ ಮಾಲಿಕತ್ವವನ್ನು ಒಳಗೊಂಡಂತೆ ರಾಜ್ಯ ಸಾರಿಗೆ ಉದ್ದಿಮೆಗಳಿಗೆ ಕಾರ್ಯಸಾಧ್ಯತೆ ಅಂತರ ಹಣಕಾಸನ್ನು ಒದಗಿಸುವ ಸಲುವಾಗಿ ರಾಜ್ಯದಲ್ಲಿ ಬಳಕೆಯಾಗುವ ಇಂಧನದ ಮೇಲೆ ಲೀಟರು ಒಂದಕ್ಕೆ ಎರಡು ರೂಪಾಯಿ ಸಾರ್ವಜನಿಕ ಸಾರಿಗೆ ಇಂಧನ ಸೆಸ್ ವಿಧಿಸುವುದು;

ಇ. ಬಿಆರ್‌ಟಿಎಸ್ ಕಾರ್ಯಾಚರಣೆಗಳಿಗಾಗಿ ಹೆಚ್ಚುವರಿ ಬಸ್ಸುಗಳ ಖರೀದಿ, ಇತ್ಯಾದಿ.

ಫೆಬ್ರವರಿ 2020ರಿಂದ ಜಾರಿಗೆ ಬಂದಂತೆ ಒಂದು ಸಲದ ದರ ಹೆಚ್ಚಳಕ್ಕೆ ಕರ್ನಾಟಕ ಸರ್ಕಾರವು ನೀಡಿದ್ದ ಅನುಮೋದನೆಯನ್ನು ಹೊರತುಪಡಿಸಿದಂತೆ ಸಮಿತಿಯ ಶಿಫಾರಸುಗಳ ಮೇಲೆ ಎಚ್‌ಡಿಬಿಆರ್‌ಟಿಎಸ್‌ನಿಂದ ತೆಗೆದುಕೊಳ್ಳಲಾದ ಯಾವುದೇ ಕ್ರಮಗಳ ಬೆಂಬಲವಾಗಿ ಯಾವುದೇ ಸಾಕ್ಷ್ಯಾಧಾರಗಳನ್ನು ಇಟ್ಟಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕರಡು ಕಾರ್ಯಸಾಧ್ಯತೆ ವರದಿಯಲ್ಲಿ ಮಾಡಲಾಗಿದ್ದ ಪ್ರಕ್ಷೇಪಣೆಗಳು 2014–15ರ ಅವಧಿಯ ಕಾರ್ಯಾಚರಣೆಗಾಗಿ ಆಗಿದ್ದವು ಹಾಗೂ ಮಾಡಲಾಗಿದ್ದ ಪ್ರಕ್ಷೇಪಣೆಗಳು ವಿವಿಧ ಅಂಶಗಳ ಕಾರಣ ಅಂದರೆ ವಾಸ್ತವಿಕವಾಗಿ ಯೋಜನೆಯ ಕಾರ್ಯಾರಂಭ (ಅಕ್ಟೋಬರ್ 2018), ಇಂಧನ ದರಗಳಲ್ಲಿ ಹೆಚ್ಚಳ, ದರ ಪರಿಷ್ಕರಣೆ, ಇತ್ಯಾದಿಗಳ ಕಾರಣ ಮಾರ್ಪಾಡುಗಳ ಸಂಭಾವ್ಯತೆಗೆ ಒಳಪಟ್ಟಿರುತ್ತವೆ ಎಂಬುದಾಗಿ ಸರ್ಕಾರವು ತಿಳಿಸಿತು (ಏಪ್ರಿಲ್ 2022).

ಉನ್ನತ ಮಟ್ಟದ ಸಮಿತಿಯು ಮಾಡಿದ ಶಿಫಾರಸುಗಳನ್ನು ಕಾರ್ಯಗತಗೊಳಿಸದಿದ್ದುದರ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದ ಅಂಶಗಳ ಬಗ್ಗೆ ಉತ್ತರವು ಮೌನವಾಗಿದ್ದಿತು.

**ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಹಾಗೂ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ**

**2.2.4**. ವಿದ್ಯುಚ್ಛಕ್ತಿ ಅಧಿನಿಯಮ, 2003ರ ಅನುವುಗಳಲ್ಲಿ ವಿತರಣಾ ಪರವಾನಿಗೆಗಳನ್ನು ಹೊಂದಿರುವ ವಿದ್ಯುತ್ ಸರಬರಾಜು ಕಂಪನಿಗಳು (ವಿಸಕಂಗಳು) ಚಿಲ್ಲರೆ ಗ್ರಾಹಕರುಗಳಿಗೆ ವಿದ್ಯುತ್ ವಿತರಣೆಗೆ ಹಾಗೂ ಅಲ್ಲದೆಯೇ ಖಾಸಗಿ ವಿದ್ಯುತ್ ತಯಾರಕರಿಗೆ ಮೂಲಸೌಕರ್ಯಗಳನ್ನು ಒದಗಿಸುವುದು, ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ರವಾನೆಗಳಿಗೆ ಜವಾಬ್ದಾರರಾಗಿರುತ್ತಾರೆ. ವಿಸಕಂಗಳನ್ನು ರಾಜ್ಯದಲ್ಲಿನ ಭೌಗೋಳಿಕ ಪ್ರಾಧಾನ್ಯತೆಯ ಆಧಾರದ ಮೇರೆಗೆ ರಚಿಸಲಾಗಿದ್ದಿತು (ಜೂನ್ 2002/ಏಪ್ರಿಲ್ 2005).

31 ಮಾರ್ಚ್ 2021ರಲ್ಲಿದ್ದಂತೆ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಏಳು ಜಿಲ್ಲೆಗಳೊಂದಿಗೆ ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹುವಿಸಕಂ) (ವಾಯವ್ಯ ಪ್ರದೇಶ) ಹಾಗೂ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಆರು ಜಿಲ್ಲೆಗಳೊಂದಿಗೆ ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಗುವಿಸಕಂ) (ಈಶಾನ್ಯ ಪ್ರದೇಶ), ಇವುಗಳು ಲಾಭಗಳಿಸಿದ 2018–19ನ್ನು ಹೊರತುಪಡಿಸಿದಂತೆ 2015–16ರಿಂದ 2020–21ರಲ್ಲಿ ನಷ್ಟಗಳನ್ನು ಭರಿಸಿದ್ದವು. ಎರಡು ವಿಸಕಂಗಳ ಕ್ರೋಢೀಕೃತ ನಷ್ಟಗಳು 31 ಮಾರ್ಚ್ 2021ರಲ್ಲಿದ್ದಂತೆ ₹ 8,180.92 ಕೋಟಿ ಆಗಿದ್ದಿತು. ಗುವಿಸಕಂ ಹಾಗೂ ಹುವಿಸಕಂ, ಇವೆರಡರ ಅಡಿಯಲ್ಲಿಯೂ ಗ್ರಾಹಕರುಗಳು ಪ್ರಮುಖವಾಗಿ/ವಿಶೇಷವಾಗಿ ಕೃಷಿ ವಲಯದಿಂದ ಆಗಿರುವರು ಹಾಗೂ ವಿದ್ಯುತ್ತಿನ ಶೇಕಡಾ 40ರಷ್ಟು ಹಾಗೂ ಶೇಕಡಾ 50ರಷ್ಟನ್ನು ನೀರಾವರಿ ಪಂಪುಸೆಟ್ಟುಗಳನ್ನು ಹೊಂದಿರುವ ಗ್ರಾಹಕರುಗಳಿಗೆ ಸರಬರಾಜು ಮಾಡಲಾಗುತ್ತಿರುವುದು. ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

***ರಿಯಾಯಿತಿ ದರಗಳಲ್ಲಿ ವಿದ್ಯುತ್ ಸರಬರಾಜು***

**2.2.4.1.** ಗ್ರಾಹಕರುಗಳಿಗೆ ಯಾವ ದರದಲ್ಲಿ ವಿದ್ಯುತ್ತನ್ನು ವಿತರಿಸಲಾಗುವುದು/ಸರಬರಾಜು ಮಾಡಲಾಗುವುದು ಎಂಬುದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದಿಂದ (ಕೆಇಆರ್‌ಸಿ) ನಿರ್ಧಾರಣೆಗೊಳ್ಳುವ ವಿದ್ಯುತ್ ದರಪಟ್ಟಿಯ ಆಧಾರದ ಮೇರೆಗೆ ಆಗಿರುತ್ತದೆ. ಅನುಮೋದಿತ ವಿದ್ಯುತ್ ದರಪಟ್ಟಿಯ ಅನುಸಾರ, ವಿದ್ಯುತ್ ದರಪಟ್ಟಿಯ ಎರಡು ಪ್ರವರ್ಗಗಳ ಅಡಿಯಲ್ಲಿ ಅವೆಂದರೆ ಎಲ್‌ಟಿ 1 (ಬಿಜೆ/ಕೆಜೆ[70] ಗ್ರಾಹಕರುಗಳಿಗೆ 40 ಯೂನಿಟ್ಟುಗಳವರೆಗೆ) ಹಾಗೂ ಎಲ್‌ಟಿ 4ಎ (10 ಎಚ್‌ಪಿಯನ್ನು ಒಳಗೊಂಡಂತೆ ಹಾಗೂ ಅದಕ್ಕೂ ಕಡಿಮೆ ಸಾಮರ್ಥ್ಯದ ನೀರಾವರಿ ಪಂಪುಸೆಟ್ಟುಗಳೊಂದಿಗಿನ ಗ್ರಾಹಕರು) ಗ್ರಾಹಕರುಗಳಿಗೆ ವಿದ್ಯುತ್ತನ್ನು ಉಚಿತವಾಗಿ ಸರಬರಾಜು ಮಾಡಲಾಗಿದ್ದಿತು ಹಾಗೂ ಅಂತಹ ಸರಬರಾಜಿನ ಮೇಲೆ ಭರಿಸಲಾದಂತಹ ವೆಚ್ಚಗಳನ್ನು ಸಹಾಯಧನದ ಮೂಲಕ ಕರ್ನಾಟಕ ಸರ್ಕಾರವು ಹೊಂದಾಣಿಕೆ ಮಾಡಿಕೊಳ್ಳಬೇಕಿದ್ದಿತು. ಒಟ್ಟಾರೆ 88.20 ಲಕ್ಷ ಗ್ರಾಹಕರ ಪೈಕಿ 27.44 ಲಕ್ಷ ಸಂಪರ್ಕಗಳು (ಶೇಕಡಾ 31.10) ಸಹಾಯಧನದ ಪ್ರವರ್ಗದ ಅಡಿಯಲ್ಲಿದ್ದವು ಹಾಗೂ ಕಳೆದ ಆರು ವರ್ಷಗಳಲ್ಲಿ (2015–21) ಬಿಲ್ಲುಗಳನ್ನು ಮಾಡಲ್ಪಟ್ಟ ಒಟ್ಟಾರೆ ವಿದ್ಯುತ್ತಿನ (₹ 35,097.67 ಕೋಟಿ) ಶೇಕಡಾ 50.49ರಷ್ಟು ಆಗಿದ್ದಿತು. ಸಹಾಯಧನದ ಪಾವತಿ ಮಾದರಿಯು ಕವಿನಿಆವು ನೀಡಿರುವ (ಫೆಬ್ರವರಿ 2008) ನಿಯಂತ್ರಣಗಳಿಂದ ನಿರ್ವಹಿಸಲ್ಪಡುತ್ತಿದ್ದಿತು.

2007–08ರಿಂದ 2020–21ರ ಅವಧಿಗೆ ಸಂಬಂಧಿಸಿದ್ದಂತಹ ₹ 6,879.99 ಕೋಟಿ[71] ದರಪಟ್ಟಿ ಸಹಾಯಧನ ಮತ್ತು ಮೊತ್ತದಷ್ಟು ಪಾವತಿಗಾಗಿನ ಕೋರಿಕೆಗಳ ಮೊತ್ತವನ್ನು ವಿಸಕಂಗಳು ಸ್ವೀಕರಿಸುವುದು ಮಾರ್ಚ್ 2021ರಲ್ಲಿದ್ದಂತೆ ಬಾಕಿಯಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (***ಅನುಬಂಧ–21***). ಸೀಮಿತ ಆಯವ್ಯಯ ಹಂಚಿಕೆಯ ಕಾರಣ ಹಣಕಾಸಿನ ಸಹಾಯವನ್ನು ಐಪಿ ಸೆಟ್ಟುಗಳಿಗೆ/ಬಿಜೆಕೆಜೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿರುವುದು ಎಂಬುದಾಗಿ ಸರ್ಕಾರವು ವಿಸಕಂಗಳಿಗೆ ತಿಳಿಸಿತು (ಜುಲೈ 2019). ಈ ಹಿಂದಿನ ಒಂದು ಸಂದರ್ಭದಲ್ಲಿ ವಿದ್ಯುತ್ ದರಪಟ್ಟಿ ಆದೇಶ 2018ಕ್ಕೆ ಅನುಮೋದನೆ ನೀಡುವ ವೇಳೆಯಲ್ಲಿ, ಕವಿನಿಆವು ಕರ್ನಾಟಕ ಸರ್ಕಾರವು ಸಹಾಯಧನವನ್ನು ಕಡಿಮೆ ಪ್ರಮಾಣದಲ್ಲಿ ಬಿಡುಗಡೆಗೊಳಿಸಿದ ಕಾರಣ ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸುವುದನ್ನು ಆಕ್ಷೇಪಾರ್ಹವಾಗಿ ತೆಗೆದುಕೊಂಡಿದ್ದಿತು (ಡಿಸೆಂಬರ್ 2017) ಎಂಬುದನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ.

ವಾಸ್ತವಿಕವಾಗಿ, ಬಂಡವಾಳ ಕಾಮಗಾರಿಗಳಿಗೆ ವೆಚ್ಚಗಳನ್ನು ಭರಿಸುವ ಸಲುವಾಗಿ ವಿಸಕಂಗಳು ಸಾಲ ಮಾಡಿದ ಹಣಕಾಸಿನ (ಬ್ಯಾಂಕುಗಳಿಂದ ಮತ್ತು ಹಣಕಾಸು ಸಂಸ್ಥೆಗಳಿಂದ) ಮೇಲೆ ಬಹಳಷ್ಟು ಪ್ರಮಾಣದಲ್ಲಿ ಅವಲಂಭಿತವಾಗಿದ್ದವು, 2015–16ರಿಂದ 2020–21ರಲ್ಲಿ ₹ 16,279.60 ಕೋಟಿ ಮೊತ್ತದಷ್ಟು (ಗುವಿಸಕಂ: ₹ 3,815.92 ಕೋಟಿ, ಹುವಿಸಕಂ: ₹ 12,463.68 ಕೋಟಿ) ಸಾಲಗಳನ್ನು ಮಾಡಲಾಗಿದ್ದಿತು ಹಾಗೂ ₹ 2,633.09 ಕೋಟಿ ಮೊತ್ತದಷ್ಟು (ಗುವಿಸಕಂ: ₹ 719.53 ಕೋಟಿ ಹಾಗೂ ಹುವಿಸಕಂ: ₹ 1,913.56 ಕೋಟಿ) ಬಡ್ಡಿ ವೆಚ್ಚಗಳನ್ನು ಭರಿಸಿದ್ದವು. ಆರು ವರ್ಷಗಳ ಅವಧಿಯಲ್ಲಿ (2015–21) ಹುವಿಸಕಂಯಲ್ಲಿ ಬಡ್ಡಿ ಪಾವತಿಗಳು ಶೇಕಡಾ 130ರಷ್ಟು ಹಾಗೂ

[70] ರಾಜ್ಯದ ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ ಯೋಜನೆ ಅಡಿಯಲ್ಲಿ ವಿದ್ಯುತ್ ಸಂಪರ್ಕಗಳನ್ನು ಒದಗಿಸಲ್ಪಟ್ಟಂತಹ ಗ್ರಾಹಕರುಗಳು.

[71] ಹುವಿಸಕಂ: ₹ 5,047.32 ಕೋಟಿ, ಗುವಿಸಕಂ: ₹ 1,832.67 ಕೋಟಿ.

ಗುವಿಸಕಂಯಲ್ಲಿ ಶೇಕಡಾ 176ರಷ್ಟು ಹೆಚ್ಚಳಗೊಂಡಿದ್ದವು. ಈ ವೆಚ್ಚಗಳು ವಿದ್ಯುತ್ ದರಪಟ್ಟಿ ನಿಗದಿಯಲ್ಲಿ ಸೇರಿಕೊಳ್ಳುವವು ಹಾಗೂ ಗ್ರಾಹಕರುಗಳಿಂದ ವಸೂಲಾತಿಯಾಗುವುದು.

ಸರ್ಕಾರವು ತನ್ನ ಉತ್ತರದಲ್ಲಿ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದ್ದ ವಾಸ್ತವಾಂಶಗಳನ್ನು ಖಚಿತಪಡಿಸುವ ವೇಳೆಯಲ್ಲಿಯೇ ಸಹಾಯಧನದ ಬಿಡುಗಡೆಯು ಹಣಕಾಸು ಇಲಾಖೆಯು ನೀಡುವ ಒಪ್ಪಿಗೆಯ ಆಧಾರದ ಮೇರೆಗೆ ಆಗಿರುತ್ತದೆ ಎಂಬುದಾಗಿ ತಿಳಿಸಿತು (ಮೇ 2022).

ವಿಸಕಂಗಳು ನಿರ್ದಿಷ್ಟ ಗ್ರಾಹಕರುಗಳಿಗೆ (ಬಿಜೆ/ಕೆಜೆ, ಐಪಿ ಸೆಟ್ಟು ಸ್ಥಾಪನೆಗಳು, ಇತ್ಯಾದಿ) ಅನುಮೋದಿತ ದರಪಟ್ಟಿಗಳ ಅನುಸಾರ ಸಹಾಯಧನವನ್ನು ಒಳಗೊಂಡಂತಹ ರಿಯಾಯಿತಿ ದರಗಳಲ್ಲಿ ವಿದ್ಯುತ್ ಸರಬರಾಜು ಮಾಡುವುದರಿಂದ ಅರ್ಹತೆಯಿರುವ ಸಹಾಯಧನವನ್ನು ಬಿಡುಗಡೆಗೊಳಿಸದಿರುವುದು ವಿಸಕಂಪಗಳ ಆರ್ಥಿಕ ಕಾರ್ಯನಿರ್ವಹಣೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರುತ್ತದೆ.

***ಕಾರ್ಯಾಚರಣೆಗಳಲ್ಲಿ ಅದಕ್ಷತೆಗಳು/ದಕ್ಷತೆ ಇಲ್ಲದಿರುವುದು***

**2.2.4.2.** ವಿಸಕಂಗಳು ಈ ಕೆಳಗೆ ವಿವರಿಸಿರುವಂತೆ ವಿವಿಧ ಇತರೆ ಅಂಶಗಳು, ಅವೆಂದರೆ ಐಪಿ ಸೆಟ್ಟುಗಳ ವಿದ್ಯುತ್ ಬಳಕೆಯನ್ನು ಪರಿಗಣಿಸದಿರುವುದು ತಿರಸ್ಕರಿಸುವುದು ಹಾಗೂ ತಡವಾಗಿ ಮಾಡಲಾದ ಪಾವತಿಗಳ ಮೇಲೆ ಸರ್‌ಚಾರ್ಜ್‌ಗಳು, ಗ್ರಾಹಕರುಗಳಿಂದ ಬಾಕಿಗಳನ್ನು ವಸೂಲಾತಿ ಮಾಡದಿರುವುದು, ಪ್ರಮಾಣಕಗಳನ್ನು ಮೀರಿದಂತೆ ವಿತರಣಾ ನಷ್ಟಗಳು ಹಾಗೂ ಗ್ರಾಮ ಪಂಚಾಯತಿಗಳಿಂದ ಬರಬೇಕಾದ ಬಾಕಿಗಳನ್ನು ದಾಖಲೆಗಳಿಂದ ತೆಗೆದುಹಾಕಿರುವುದು (ರೈಟ್ ಆಫ್) ಇವೇ ಮುಂತಾದವುಗಳ ಕಾರಣ ನಷ್ಟಗಳನ್ನು ಅನುಭವಿಸಿದ್ದವು:

i. 2017, 2018 ಮತ್ತು 2020ರ ವಿದ್ಯುತ್ ದರಪಟ್ಟಿ ಆದೇಶಗಳಲ್ಲಿ ಕವಿನಿಆವು ಐಪಿ ಸೆಟ್ಟುಗಳ ಬಳಕೆದಾರರುಗಳಿಗೆ ವಿದ್ಯುತ್ ಮಾರಾಟದ ಕಡೆಗೆ ₹ 281.11 ಕೋಟಿ ಮೊತ್ತದಷ್ಟು ಒಟ್ಟಾರೆ ಪಾವತಿಗಾಗಿನ ಕೋರಿಕೆಗಳನ್ನು ತಿರಸ್ಕರಿಸಿದ್ದಿತು. ಐಪಿ ಸೆಟ್ಟುಗಳ ಬಳಕೆದಾರರುಗಳಿಗೆ ವಿದ್ಯುತ್ ಮಾರಾಟಗಳನ್ನು ತಿರಸ್ಕರಿಸುವ ವೇಳೆಯಲ್ಲಿ ಐಪಿ ಸೆಟ್ಟುಗಳ ಸಂಪರ್ಕಗಳಲ್ಲಿ ಹೆಚ್ಚಳಗೊಂಡಿರುವ ವಿದ್ಯುತ್ ಬಳಕೆಗೆ ಹುವಿಸಕಂಯು ಪ್ರತ್ಯೇಕಗೊಳಿಸಲ್ಪಟ್ಟಂತಹ ಕೃಷಿ ಫೀಡರುಗಳ ಆಧಾರಿತ ಐಪಿ ಸೆಟ್ ಬಳಕೆಯನ್ನು ಸಲ್ಲಿಸಲು ವಿಫಲವಾಗಿರುವುದು ಹಾಗೂ ಅಲ್ಲದೆಯೇ ಕರ್ನಾಟಕ ಸರ್ಕಾರವು ನಿರ್ದಿಷ್ಟಪಡಿಸಿರುವ ನಿಗದಿತ ಏಳು ಗಂಟೆಗಳನ್ನು ಮೀರಿದಂತೆ ಐಪಿ ಸೆಟ್ಟುಗಳಿಗೆ ವಿದ್ಯುತ್ ಸರಬರಾಜು ಮಾಡಿರುವ ಕಾರಣಗಳನ್ನು ನೀಡಿದ್ದಿತು. 2020ರ ವಿದ್ಯುತ್ ದರಪಟ್ಟಿ ಆದೇಶದಲ್ಲಿ ಕವಿನಿಆವು ಕರ್ನಾಟಕ ಸರ್ಕಾರಕ್ಕೆ ಹಣಕಾಸಿನ ಹೊರೆಯನ್ನು ಕನಿಷ್ಠ ಮಟ್ಟಕ್ಕೆ ತರುವ ಸಲುವಾಗಿ ಮಾರಾಟಗಳನ್ನು ಅನುಮೋದಿತ ಮಾರಾಟಗಳ ಮಟ್ಟಕ್ಕೆ ತರುವಂತೆ ಹುವಿಸಕಂನಿಗೆ ನಿರ್ದೇಶಿಸಿದ್ದಿತು.

ii. ವಿದ್ಯುತ್ ಖರೀದಿ ಬಿಲ್ಲುಗಳ ಮೇಲೆ ಪಾವತಿಸಲಾಗಿದ್ದ ತಡ ಪಾವತಿಗಳ ಮೇಲಿನ ₹ 2,616.63 ಕೋಟಿ ಮೊತ್ತದಷ್ಟು (ಗುವಿಸಕಂ: ₹ 1,149.30 ಕೋಟಿ; ಹುವಿಸಕಂ: ₹ 1,467.33 ಕೋಟಿ) ಸರ್‌ಚಾರ್ಜ್ (ಎಲ್‌ಪಿಎಸ್) ಮೊತ್ತವನ್ನು ಕವಿನಿಆವು ತಿರಸ್ಕರಿಸಿದ್ದಿತು. ಹುವಿಸಕಂಗೆ ಸಂಬಂಧಿಸಿದಂತೆ ಕವಿನಿಆವು ವಿದ್ಯುತ್ ಖರೀದಿ ಬಿಲ್ಲುಗಳ ಮೇಲೆ ಪಾವತಿಸಲಾಗಿದ್ದ ತಡ ಪಾವತಿಗಳ ಮೇಲಿನ ಸರ್‌ಚಾರ್ಜ್ (ಎಲ್‌ಪಿಎಸ್) ಮೊತ್ತವನ್ನು ತಿರಸ್ಕರಿಸುವ ವೇಳೆಯಲ್ಲಿ (ದರಪಟ್ಟಿ ಆದೇಶ 2020) ಹುವಿಸಕಂಯು ಗ್ರಾಹಕರುಗಳಿಗೆ ಬಿಲ್ಲುಗಳನ್ನು ನೀಡುವಲ್ಲಿ ಹಾಗೂ ಮೊತ್ತಗಳನ್ನು ವಸೂಲಾತಿ ಮಾಡುವಲ್ಲಿ ತ್ವರಿತ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ ಹಾಗೂ ವೆಚ್ಚಗಳನ್ನು ಭರಿಸುವ ವೇಳೆಯಲ್ಲಿ ತನ್ನ ವಿವೇಚನೆಗಳನ್ನು ಚಲಾಯಿಸಿರುವುದಿಲ್ಲ ಎಂಬುದನ್ನು ಗಮನಿಸಿದ್ದಿತು. 2015–16ರಿಂದ 2020–21ರಲ್ಲಿ ಗುವಿಸಕಂಯಲ್ಲಿ ಪಾವತಿಗಾಗಿನ ಒಟ್ಟಾರೆ ತಗಾದೆಗೆ (ಬಾಕಿಗಳನ್ನು ಒಳಗೊಂಡಂತೆ) ಪ್ರತಿಯಾಗಿ ವಸೂಲಾತಿ ದಕ್ಷತೆಯು ಶೇಕಡಾ 64.43ರಿಂದ ಶೇಕಡಾ 80.57ರಷ್ಟು ಇದ್ದಿತು ಹಾಗೂ ಹುವಿಸಕಂಯಲ್ಲಿ ಅದು ಶೇಕಡಾ 71.96 ಹಾಗೂ ಶೇಕಡಾ 81.08ರ ನಡುವೆ ಇದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

iii. ಪ್ರತೀ ವರ್ಷಕ್ಕೂ ವಿದ್ಯುತ್ ದರಪಟ್ಟಿ ನಿರ್ಧಾರಣೆ ಮಾಡುವ ವೇಳೆಯಲ್ಲಿ, ಕವಿನಿಆಯು ವಿತರಣಾ ನಷ್ಟಗಳಿಗೆ ಗುರಿಯನ್ನು ನಿಗದಿಪಡಿಸುತ್ತದೆ ಹಾಗೂ ನಷ್ಟಗಳನ್ನು ತಗ್ಗಿಸುವ ಸಲುವಾಗಿ ಕಾಲಾನುಕಾಲಕ್ಕೆ ನಿರ್ದೇಶನಗಳನ್ನು ನೀಡುತ್ತದೆ. ವಾಸ್ತವಿಕ ಸಾಧನೆಗಳು ಹಾಗೂ ಅವುಗಳಿಗೆ ಅನುಗುಣವಾಗಿ ಕವಿನಿಆವು 2015–16ರಿಂದ 2020–21ರಲ್ಲಿ ನಿಗದಿಗೊಳಿಸಿರುವ ಗುರಿಗಳನ್ನು ತುಲನೆಯು ಹುವಿಸಕಂಯು ಗುರಿಗಳ ಒಳಗೇ ನಷ್ಟಗಳನ್ನು ವರದಿ ಮಾಡಿದ್ದಿತು ಎಂಬುದನ್ನು ತೋರಿಸಿಕೊಟ್ಟಿತು. ಆದಾಗ್ಯೂ, 2015–16 ಹಣಕಾಸು ಸಾಲಿಗೆ, ಐಪಿ ಸೆಟ್ಟುಗಳಿಗೆ (ಎಲ್‌ಟಿ 4 ಪ್ರವರ್ಗ) ಮಾರಾಟಗಳಲ್ಲಿನ ಪರಿಷ್ಕರಣೆಯ ಕಾರಣ, ಕವಿನಿಆವು ತನ್ನ ವಾರ್ಷಿಕ ಕಾರ್ಯನಿರ್ವಹಣಾ ಸಮೀಕ್ಷೆಯಲ್ಲಿ (ವಿದ್ಯುತ್ ದರಪಟ್ಟಿ ಆದೇಶ 2017) ವಾಸ್ತವಿಕ ವಿತರಣಾ ನಷ್ಟಗಳು ಗುರಿಯಾಗಿಸಿಕೊಳ್ಳಲಾಗಿದ್ದ ಶೇಕಡಾ 18ಕ್ಕೆ ಪ್ರತಿಯಾಗಿ ಶೇಕಡಾ 20.92ರಷ್ಟು ಆಗಿದ್ದಿತು. ತತ್ಪರಿಣಾಮವಾಗಿ ಗುರಿಯಾಗಿಸಿಕೊಳ್ಳಲಾಗಿದ್ದ ಮಟ್ಟಗಳನ್ನು ಮೀರಿದ್ದಕ್ಕಾಗಿ ಕವಿನಿಆವು ₹ 164.35 ಕೋಟಿ ಮೊತ್ತದಷ್ಟು ದಂಡವನ್ನು ವಿಧಿಸಿದ್ದಿತು. ಇದು ಅಪ್ಪರಮಟ್ಟಿಗೆ ಸರಬರಾಜುಗಳ ಮೌಲ್ಯಗಳನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡುವಲ್ಲಿ ಪರಿಣಮಿಸಿ ನಷ್ಟಕ್ಕೆ ಕಾಣಿಕೆ ನೀಡಿತ್ತು.

iv. ಕರ್ನಾಟಕ ಸರ್ಕಾರವು ಬಾಕಿಗಳ ಒಂದು ಕ್ರೋಢೀಕರಣ ಯೋಜನೆಗೆ ತನ್ನ ಅನುಮೋದನೆ ನೀಡಿತು (ಮಾರ್ಚ್ 2017), ಆ ಯೋಜನೆಯಲ್ಲಿ ಗ್ರಾಮ ಪಂಚಾಯತಿಗಳಿಂದ 31 ಮಾರ್ಚ್ 2015ರಲ್ಲಿದ್ದಂತೆ ಇದ್ದಂತಹ ಬಾಕಿಗಳನ್ನು ವಿಸಕಂಗಳು ಕರ್ನಾಟಕ ವಿದ್ಯುತ್ ನಿಗಮ ನಿಯಮಿತಕ್ಕೆ ಪಾವತಿಸಬೇಕಾಗಿದ್ದ ವಿದ್ಯುತ್ ಖರೀದಿಗಳಿಗೆ ಸಂಬಂಧಿತ ಬಾಕಿಗಳ ಇತ್ಯರ್ಥಕ್ಕಾಗಿ ವಿನಿಮಯ ಮಾಡಿಕೊಳ್ಳುವುದಾಗಿದ್ದಿತು. ಯೋಜನೆಯ ಅಡಿಯಲ್ಲಿ ಗುವಿಸಕಂಯು 2019–20ರಲ್ಲಿ ಅಂತಹ ವಿದ್ಯುತ್ ಬಾಕಿಗಳ ಮೇಲೆ ಮಾರ್ಚ್ 2015ರವರೆಗೆ ಪರಿಗಣಿಸಲಾಗಿದ್ದ ಬಡ್ಡಿಯ ಆದಾಯ ಹಿಂಪಡೆಯುವಿಕೆಯ ಕಾರಣ ₹ 206.13 ಕೋಟಿ ಮೊತ್ತವನ್ನು ದಾಖಲೆಗಳಿಂದ ತೆಗೆದುಹಾಕಿದ್ದಿತು (ರಿಟನ್ ಆಫ್).

ಗುವಿಸಕಂಯ ವಸೂಲಾತಿ ದಕ್ಷತೆಯು ಗ್ರಾಮೀಣ/ನಗರ ಸ್ಥಳೀಯ ಸಂಸ್ಥೆಗಳನ್ನು ಹೊರತುಪಡಿಸಿದಂತೆ ಶೇಕಡಾ 95ರಿಂದ ಶೇಕಡಾ 100ರಷ್ಟು ಆಗಿರುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಮೇ 2022). ಹುವಿಸಕಂಗೆ ಸಂಬಂಧಿಸಿದಂತೆ ಶೇಕಡಾ 50ಕ್ಕಿಂತಲೂ ಹೆಚ್ಚಿನ ವರಮಾನವನ್ನು ರಿಯಾಯಿತಿ/ಸಹಾಯಧನದ ಪ್ರವರ್ಗದಿಂದ ಪಡೆಯಲಾಗಿರುವುದು ಹಾಗೂ ವರಮಾನ ಸಮೀಕ್ಷಾ ಸಭೆಗಳನ್ನು ವೃತ್ತ/ವಲಯ ಮಟ್ಟದಲ್ಲಿ ಪ್ರತೀ ತಿಂಗಳು ನಡೆಸುವ ಮೂಲಕ ವಸೂಲಾತಿ ದಕ್ಷತೆಯಲ್ಲಿ ಸುಧಾರಣೆಗಾಗಿ ಪ್ರಯತ್ನಗಳನ್ನು ಮಾಡಲಾಗಿರುವುದು ಎಂಬುದಾಗಿ ಅದು ತಿಳಿಸಿದ್ದಿತು. ವಿತರಣಾ ನಷ್ಟಗಳಿಗೆ ಸಂಬಂಧಿಸಿದಂತೆ, ಹುವಿಸಕಂಯು ವಿತರಣಾ ನಷ್ಟಗಳನ್ನು ಕವಿನಿಆವು ನಿಗದಿಪಡಿಸಿರುವ ಗುರಿಗಳ ಒಳಗೇ ನಿರ್ವಹಿಸಿಕೊಂಡು ಹೋಗುವ ಸಲುವಾಗಿ ವಿವಿಧ ಕ್ರಮಗಳನ್ನು ತೆಗೆದುಕೊಂಡಿರುವುದು ಹಾಗು 2015–16ರಿಂದ 2020–21ರಲ್ಲಿ ನಷ್ಟಗಳು ಇಳಿಕೆ ಪ್ರವೃತ್ತಿಯಲ್ಲಿರುವವು. ಗ್ರಾಮ ಪಂಚಾಯತಿಗಳಿಂದ ಬರಬೇಕಾಗಿದ್ದ ಬಾಕಿಗಳ ಮೇಲೆ ಸಂಚಿತಗೊಂಡಿದ್ದ ₹ 206.13 ಕೋಟಿ ಮೊತ್ತದಷ್ಟು ಬಡ್ಡಿಯನ್ನು ಗುವಿಸಕಂಯು ಸರ್ಕಾರದ ತೀರ್ಮಾನದ (19 ಫೆಬ್ರವರಿ 2020) ಅನುಸಾರ ಹಾಗು ಗುವಿಸಕಂಯ ನಿರ್ದೇಶಕರುಗಳ ಮಂಡಳಿಯ ಅನುಮೋದನೆಯಂತೆ (12 ಆಗಸ್ಟ್ 2020) ದಾಖಲೆಗಳಿಂದ ತೆಗೆದುಹಾಕಿದ್ದಿತು.

**ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತ**

**2.2.5.** ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತವು (ಕೆಎಸ್‌ಸಿಡಿಸಿಎಲ್) ತೆಂಗಿನ ತೋಗಟೆಗಳಿಂದ ಪರಿಸರ–ಸ್ನೇಹಿ, ಬಾಳಿಕೆ ಬರುವಂತಹ ಕಡಿಮೆ ಖರ್ಚಿನ ಉತ್ತಮ ಗುಣಮಟ್ಟದ ಮೌಲ್ಯ ವರ್ಧಿತ ನಾರು ಉತ್ಪನ್ನಗಳ ತಯಾರಿಕೆ, ತರಬೇತಿ ಹಾಗೂ ಗ್ರಾಮೀಣ ಪ್ರದೇಶಗಳಿಂದ ಗುರುತಿಸಲಾದಂತಹ ಅರ್ಹ ಫಲಾನುಭವಿಗಳಿಗೆ ತೆಂಗಿನ ನಾರು ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗದ ಅವಕಾಶಗಳನ್ನು ಒದಗಿಸುವಿಕೆ, ಇತ್ಯಾದಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವುದು.

ರಾಜ್ಯದ ಉದ್ದಗಲಕ್ಕೂ 39 ಉತ್ಪಾದನಾ ಕೇಂದ್ರಗಳು ಹಾಗೂ ಐದು ಮಾರಾಟಗಳ ಪ್ರದರ್ಶನ ಮಳಿಗೆಗಳನ್ನು ಹೊಂದಿದ್ದ ಕೆಎಸ್‌ಸಿಡಿಸಿಎಲ್ ಅವಿರತವಾಗಿ 1997–98ರಿಂದ 2013–14ರವರೆಗೂ ಹಾಗು 2015–16ರಿಂದ 2017–18ರವರೆಗೂ ನಷ್ಟಗಳನ್ನು ಭರಿಸಿರುವುದು. ಕಂಪನಿಯು 2014–15, 2018–19, 2019–20 ಹಾಗೂ 2020–21ರಲ್ಲಿ ಲಾಭಗಳನ್ನು ಗಳಿಸಿರುವುದು. ಮಾರ್ಚ್ 2021ರಲ್ಲಿದ್ದಂತೆ ಕ್ರೋಡೀಕೃತ ನಷ್ಟವು ₹ 4.35 ಕೋಟಿ ಆಗಿದ್ದಿತು. ವ್ಯವಸ್ಥಾಪನೆಯು, ಸಾಲಗಳ ಮೇಲಿನ ಬಡ್ಡಿ ಬಾಧ್ಯತೆ, ಹಳೆಯದಾದಂತಹ ತಂತ್ರಜ್ಞಾನದ ಕಾರಣ ಅಸಮರ್ಪಕ ಉತ್ಪಾದನಾ ಸಾಮರ್ಥ್ಯ, ಇತ್ಯಾದಿಗಳು ನಷ್ಟಗಳಿಗೆ ಕಾರಣ ಎಂಬುದಾಗಿ ತಿಳಿಸಿತು.

ನಷ್ಟಗಳಿಗೆ ಕಾಣಿಕೆಗಳನ್ನು ನೀಡಿದ್ದಂತಹ ಈ ಕೆಳಗಿನ ಗಮನಾರ್ಹವಾದಂತಹ ಅಂಶಗಳನ್ನು ಲೆಕ್ಕಪರಿಶೋಧನೆಯು ಮಾಡಿದ ದಾಖಲೆಗಳ ಪರಿಶೀಲನೆ ಹಾಗೂ ಹಣಕಾಸು ತ:ಖ್ತೆಗಳ ವಿಶ್ಲೇಷಣೆಯು ತೋರಿಸಿಕೊಟ್ಟಿತು.

***ಸರ್ಕಾರಿ ಸಂಸ್ಥೆಗಳ ಮೇಲಿನ ಅವಲಂಭನೆ***

**2.2.5.1.** ಕಂಪನಿಯು ನಾರು ಉತ್ಪನ್ನಗಳನ್ನು ವಿವಿಧ ಮಾಧ್ಯಮಗಳ ಮೂಲಕ, ಅಂದರೆ ಚಿಲ್ಲರೆ ಮಾರಾಟ ಮಳಿಗೆಗಳು, ವರ್ತಕ ಪ್ರತಿನಿಧಿ/ಡೀಲರ್‌ಶಿಪ್ ವ್ಯವಸ್ಥೆ, ಪ್ರದರ್ಶನಗಳ ಮೂಲಕ ಮಾರಾಟ ಮಾಡುತ್ತದೆ ಹಾಗೂ ಮಾರಾಟಗಳ ಬಹಳಷ್ಟು ಭಾಗವು ಸರ್ಕಾರಿ ಸಂಸ್ಥೆಗಳಿಗೆ ಆಗಿರುತ್ತದೆ. ಒಟ್ಟು ಮಾರಾಟದ ಶೇಕಡಾ 90ಕ್ಕಿಂತ ಹೆಚ್ಚು ಸರ್ಕಾರಿ ಸಂಸ್ಥೆಗಳಿಗೆ ತೆಂಗಿನ ನಾರಿನ ಉತ್ಪನ್ನಗಳ ಮಾರಾಟವಾಗಿರುತ್ತದೆ. ಕಂಪನಿಯು ಮಾರುಕಟ್ಟೆಯಲ್ಲಿನ ಖಾಸಗಿ ಉದ್ದಿಮೆಗಳು/ವ್ಯಾಪಾರಸ್ಥರುಗಳ ಜೊತೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗದಿದ್ದರಿಂದ, ಕರ್ನಾಟಕ ಸರ್ಕಾರವು ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಪರಿಚ್ಛೇದ 4(ಜಿ) ಅಡಿಯಲ್ಲಿ 2013ರಿಂದಲೂ ವಿನಾಯಿತಿ ನೀಡಿತು, ಇದು ಉತ್ಪನ್ನಗಳನ್ನು ಸರ್ಕಾರಿ ಸಂಸ್ಥೆಗಳಿಗೆ/ಅಸ್ತಿತ್ವಗಳಿಗೆ ಟೆಂಡರುಗಳಲ್ಲಿ ಭಾಗವಹಿಸುವ ಅಗತ್ಯತೆಯಿಲ್ಲದೆಯೇ ತನ್ನ ಉತ್ಪನ್ನಗಳನ್ನು ನೇರವಾಗಿ ಸರಬರಾಜು ಮಾಡಲು ಅನುಕೂಲ ಕಲ್ಪಿಸಿತು.

ಮೇಲೆ ತಿಳಿಸಲಾದ ಅಧಿನಿಯಮದ ಅಡಿಯಲ್ಲಿ ವಿನಾಯಿತಿಯನ್ನು ಸೆಪ್ಟಂಬರ್ 2013ರಿಂದ ಸೆಪ್ಟಂಬರ್ 2015ರವರೆಗೆ ನೀಡಲಾಗಿದ್ದಿತು. ಜುಲೈ 2017ರಿಂದ, ವಿನಾಯಿತಿಯನ್ನು ಒಂದು ವರ್ಷಕ್ಕೆ (ಡಿಸೆಂಬರ್ 2018ರವರೆಗೆ ವಿಸ್ತರಿಸಲಾಗಿದ್ದಿತು) ನೀಡಲಾಯಿತು, ಅದರಲ್ಲಿ ಖರೀದಿ ಮಾಡುವ ಪ್ರತಿಯೊಂದು ಅಸ್ತಿತ್ವ/ಸಂಸ್ಥೆಗೆ ವಾರ್ಷಿಕ ₹ 10 ಲಕ್ಷ ಮಿತಿಯನ್ನು ನಿಗದಿಪಡಿಸಲಾಯಿತು, ಅದನ್ನು ತದನಂತರದಲ್ಲಿ ₹ 20 ಲಕ್ಷ ಮೊತ್ತಕ್ಕೆ ಹೆಚ್ಚಳಗೊಳಿಸಲಾಯಿತು (ಸೆಪ್ಟಂಬರ್ 2018). ವಿನಾಯಿತಿಯನ್ನು 2019–20 ಮತ್ತು 2020–21ರಲ್ಲಿ ಮುಂದುವರೆಸಲಾಗಿದ್ದಿತು.

ಅಧಿನಿಯಮದ ಪರಿಚ್ಛೇದ 4(ಜಿ) ಅಡಿಯಲ್ಲಿನ ವಿನಾಯಿತಿಯ ಕೊರತೆಯ ಕಾರಣ ಹಾಗೂ ತದನಂತರದ ಅವಧಿಯಲ್ಲಿ ಸರಬರಾಜುಗಳ ಹಣಕಾಸಿನ ಮೌಲ್ಯವನ್ನು ₹ 10 ಲಕ್ಷ/ ₹ 20 ಲಕ್ಷಕ್ಕೆ ಸೀಮಿತಗೊಳಿಸಿದ್ದ ಕಾರಣ ಸೆಪ್ಟಂಬರ್ 2015ರಿಂದ ಜೂನ್ 2017ರಲ್ಲಿ ಕಾರ್ಯಾಚರಣೆಗಳಿಂದ ವರಮಾನವು ಈ ಕೆಳಗಿನ ರೇಖಾಚಿತ್ರದಲ್ಲಿ ತೋರಿಸಿರುವಂತೆ ವಿಪರೀತವಾಗಿ ಕಡಿಮೆಯಾಯಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

**ರೇಖಾಚಿತ್ರ ಸಂಖ್ಯೆ 2.2.4: ಕಾರ್ಯಾಚರಣೆಗಳಿಂದ ವರಮಾನ ಹಾಗೂ ಲಾಭ/ನಷ್ಟ (₹ ಕೋಟಿ)**



2014–15ರಲ್ಲಿದ್ದುದಕ್ಕೆ ಹೋಲಿಸಿದಂತೆ 2015–16ರಲ್ಲಿ ಮಾರಾಟಗಳ ವಹಿವಾಟು ಶೇಕಡಾ 53ರಷ್ಟು (₹ 36.35 ಕೋಟಿಯಿಂದ ₹ 19.41 ಕೋಟಿಗೆ) ಇಳಿಮುಖಗೊಂಡಿದ್ದಿತು ಹಾಗೂ 2016–17 ಮತ್ತು 2017–18ರಲ್ಲಿ ಇನ್ನೂ ಮುಂದುವರೆದು ಅನುಕ್ರಮವಾಗಿ ಶೇಕಡಾ 13 ಹಾಗೂ ಶೇಕಡಾ 8.6ರಷ್ಟು ಇಳಿಮುಖಗೊಂಡಿದ್ದಿತು ಎಂಬುದು ಸುಸ್ಪಷ್ಟಗೊಳ್ಳುತ್ತದೆ. ಇಳಿಮುಖಗೊಂಡಿದ್ದ ಮಾರಾಟಗಳ ಕಾರ್ಯನಿರ್ವಹಣೆಯು ಪ್ರಮುಖವಾಗಿ ಅಧಿನಿಯಮದ ಪರಿಚ್ಛೇದ 4(ಜಿ) ಅಡಿಯಲ್ಲಿ ವಿನಾಯಿತಿ ಲಭ್ಯವಿರದಿದ್ದ ಹಾಗೂ ಸರಬರಾಜುಗಳ ಹಣಕಾಸು ಮೌಲ್ಯವನ್ನು ಸೀಮಿತಗೊಳಿಸಿದ್ದ ಪ್ರಮುಖ ಕಾರಣದಿಂದ ಆಗಿದ್ದಿತು. 2018–19ರಲ್ಲಿ ವಿನಾಯಿತಿಯನ್ನು ಪುನ: ನೀಡಿದ್ದರಿಂದ ಹಾಗೂ ಹಣಕಾಸಿನ ಮಿತಿಯನ್ನು ₹ 20 ಲಕ್ಷಕ್ಕೆ ಹೆಚ್ಚಳಗೊಳಿಸಿದ್ದರಿಂದ ಮಾರಾಟಗಳು ಉತ್ತಮಗೊಂಡವು. ಅದು ದೇಶೀಯ ಹಾಗೂ ವಿದೇಶಿ ಮಾರುಕಟ್ಟೆಗಳನ್ನು ಕಂಡುಕೊಳ್ಳದೆಯೇ, ಕೇವಲ ಸರ್ಕಾರಿ ಸಂಸ್ಥೆಗಳಿಂದ ಬರುವ ಆದೇಶಗಳ ಮೇಲೆ ವಿಪರೀತವಾಗಿ ಅವಲಂಭಿತವಾಗಿದ್ದುದು ಕಂಪನಿಯ ದೀರ್ಘಾವಧಿ ಕಾರ್ಯನಿರ್ವಹಣೆಯ ಮೇಲೆ ನಕಾರಾತ್ಮಕ ಪ್ರಭಾವ ಬೀರಿದ್ದಿತು ಎಂಬುದು ಸುಸ್ಪಷ್ಟಗೊಳ್ಳುತ್ತದೆ.

ವಾಸ್ತವಿಕವಾಗಿ, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು (ಕೆಇಎ) ಕಂಪನಿಯ ಕಾರ್ಯನಿರ್ವಹಣೆಯನ್ನು ಮೌಲ್ಯಮಾಪನ ಮಾಡಿದ್ದಿತು (1985–86ರಿಂದ 2013–14) ಹಾಗೂ ಸರ್ಕಾರಿ ಸಂಸ್ಥೆಗಳಿಗೆ ನಿರ್ಬಂಧಿತ ಮಾರಾಟಗಳು ಹಾಗೂ ತಯಾರಿಕಾ ಘಟಕಗಳ ತಂತ್ರಜ್ಞಾನಗಳ ಮೇಲ್ದರ್ಜೆಗೇರಿಸುವಿಕೆಯ ಕೊರತೆಯು ನಿಕೃಷ್ಟಮಟ್ಟದ ಹಣಕಾಸಿನ ಕಾರ್ಯನಿರ್ವಹಣೆಗೆ ಕಾರಣವಾಗಿರುವುದು ಎಂಬುದಾಗಿ ವರದಿ ಸಲ್ಲಿಸಿದ್ದಿತು (ಫೆಬ್ರವರಿ 2017). ಮಿತವ್ಯಯತೆಯಿಂದ ಉತ್ಪನ್ನಗಳನ್ನು ಉತ್ಪಾದಿಸುವ ಸಲುವಾಗಿ ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸುವಂತೆ, ನಾರು ಹಾಸಿಗೆಗಳನ್ನು ದೇಶೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದರ ಮೇಲೆ ಹಾಗೂ ನಾರು ಅಚ್ಚುಗಳನ್ನು (ಕಾಯಿರ್ ಬ್ರಿಕ್ವೆಟ್) ದೇಶೀಯವಾಗಿ ಹಾಗೂ ರಫ್ತು ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದರ ಮೇಲೆ ಗಮನಹರಿಸುವಂತೆ ಹಾಗೂ ಆನ್‌ಲೈನ್ ಮಾರುಕಟ್ಟೆ ಸ್ಥಳಗಳ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದರ ಜೊತೆಗೆ, ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪ್ರದರ್ಶನಗಳ ಮೂಲಕ ಮಾರುಕಟ್ಟೆಗಳ ವೇದಿಕೆಗಳನ್ನು ಒದಗಿಸುವ ಮೂಲಕ ನಾರು ಕೈಗಾರಿಕೆ/ಮಧ್ಯಮ, ಅತೀಸಣ್ಣ ಮತ್ತು ಸಣ್ಣ ಉದ್ದಿಮೆಗಳನ್ನು ಪ್ರೋತ್ಸಾಹಿಸುವುದರ ಮೇಲೆ ಗಮನ ಹರಿಸುವಂತೆಯೂ ಅದು ಶಿಫಾರಸು ಮಾಡಿದ್ದಿತು.

ಆದಾಗ್ಯೂ, 2014–15ರಿಂದ 2020–21ರಲ್ಲಿ ಮಾರಾಟಗಳ ಕಾರ್ಯನಿರ್ವಹಣೆಯಿಂದ (ಮೇಲಿನ ರೇಖಾಚಿತ್ರದಲ್ಲಿ ತೋರಿಸಲಾಗಿರುವುದು) ಸುಸ್ಪಷ್ಟಗೊಳ್ಳುವಂತೆ ಕಂಪನಿಯು ದೇಶೀಯ ಮಾರುಕಟ್ಟೆಗಳನ್ನು ಕಂಡುಕೊಳ್ಳದೆಯೇ, ಸರ್ಕಾರಿ ಸಂಸ್ಥೆಗಳಿಗಿನ ಮಾರಾಟದ ಮೇಲೆ ಅವಲಂಭಿತಗೊಳ್ಳುವುದನ್ನು ಮುಂದುವರೆಸಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಕಂಪನಿಯು ಕೆಟಿಪಿಪಿ ಕಾಯ್ದೆಯ ಅಡಿಯಲ್ಲಿ ಟೆಂಡರಿನಲ್ಲಿ ಭಾಗವಹಿಸುವುದರಿಂದ ನೀಡುವ ವಿನಾಯಿತಿ ಮೇಲೆ ಅವಲಂಬಿಸಿತ್ತು. ಮುಂದುವರೆದು, ಕಂಪನಿಯು ಐದು ವರ್ಷಗಳ ಅವಧಿಯಲ್ಲಿ (2016–21) 39 ಘಟಕಗಳ ಪೈಕಿ 16ರಲ್ಲಿ ಪ್ರಸ್ತುತ ಇದ್ದಂತಹ ಯಂತ್ರಗಳನ್ನು ಬದಲಾಯಿಸುವ ಸಲುವಾಗಿ ಸ್ವಯಂಚಾಲಿತ ಯಂತ್ರಗಳ ಸ್ಥಾಪನೆಯ ಮೇಲೆ ₹ 2.44 ಕೋಟಿ ಮೊತ್ತವನ್ನು ಹೂಡಿಕೆ ಮಾಡಿದ್ದನ್ನು ಹೊರತುಪಡಿಸಿದಂತೆ ತಯಾರಿಕಾ ಘಟಕಗಳಲ್ಲಿ ತಂತ್ರಜ್ಞಾನದ ಮೇಲ್ದರ್ಜೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಿರಲಿಲ್ಲ.

ಖಾಸಗಿ ವ್ಯಾಪಾರಸ್ಥರಿಂದ ಅಧಿಕ ಮಟ್ಟದ ಸ್ಪರ್ಧೆಯ ಕಾರಣ, ಕಂಪನಿಯು ಸ್ಪರ್ಧಿಸುವಲ್ಲಿ ಸಮಸ್ಯೆಯನ್ನು ಕಾಣುತ್ತಿರುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಜೂನ್ 2022). ಕಂಪನಿಯು ಹೊಸದಾದ ಮೌಲ್ಯ ವರ್ಧಿತ ಉತ್ಪನ್ನಗಳನ್ನು ತಯಾರಿಸುವ ಮೂಲಕ ದೇಶೀಯ ಮಾರುಕಟ್ಟೆ ಹಾಗೂ ಅಲ್ಲದೆಯೇ ರಫ್ತು ಮಾರುಕಟ್ಟೆಗಳನ್ನು ಕಂಡುಕೊಳ್ಳಲು ತನ್ನ ಪ್ರಯತ್ನಗಳನ್ನು ಮಾಡುತ್ತಿರುವುದು. ಕಂಪನಿಯು ತನ್ನ ಮಾರುಕಟ್ಟೆ ಕಾರ್ಯಚಟುವಟಿಕೆಗಳನ್ನು ಇ–ಮಾರುಕಟ್ಟೆ ವೇದಿಕೆಗಳ ಮೂಲಕ, ಆಸಕ್ತಿ ಪತ್ರಗಳನ್ನು ಆಹ್ವಾನಿಸುವ ಮೂಲಕ ರಫ್ತುದಾರರುಗಳನ್ನು ಗುರುತಿಸುವುದು, ಇತ್ಯಾದಿಗಳ ಮೂಲಕ ವಿಸ್ತರಿಸಿಕೊಳ್ಳಲು ಯೋಜಿಸುತ್ತಿರುವುದಾಗಿಯೂ ತಿಳಿಸಿತು. ಕಂಪನಿಯು ಉತ್ಪಾದನಾ ಕೇಂದ್ರಗಳನ್ನು ಗುತ್ತಿಗೆ/ಬಾಡಿಗೆ/ಸಾರ್ವಜನಿಕ ಖಾಸಗಿ ಸಹಭಾಗಿತ್ವ/ಜಂಟಿ–ಸಾಹಸೋದ್ಯಮ ಆಧಾರದ ಮೇರೆಗೆ ಖಾಸಗಿ ತಂಡಗಳಿಗೆ ಸರ್ಕಾರದ ಅಗತ್ಯ ಅನುಮೋದನೆಯೊಂದಿಗೆ ವಹಿಸಿಕೊಡುವ ಯೋಜನೆಯನ್ನೂ ಮಾಡಿರುವುದು.

**ಮೈಸೂರು ಸಕ್ಕರೆ ಕಂಪನಿ ನಿಯಮಿತ**

**2.2.6**. ಮೈಸೂರು ಸಕ್ಕರೆ ಕಂಪನಿ ನಿಯಮಿತವನ್ನು ಜನವರಿ 1933ರಲ್ಲಿ ಮಂಡ್ಯದ ಸುತ್ತಮುತ್ತಲ ಪ್ರದೇಶದ ಕಬ್ಬು ಬೆಳೆಯುವ ರೈತರುಗಳಿಗೆ ಸ್ಥಳೀಯ ಮಾರುಕಟ್ಟೆ ಒದಗಿಸುವ ಪ್ರಾಥಮಿಕ ಉದ್ದೇಶದೊಂದಿಗೆ ಸ್ಥಾಪಿಸಲಾಯಿತು. ಕಂಪನಿಯು ಸಕ್ಕರೆ, ಬಟ್ಟಿ ಇಳಿಸಿದ ಮದ್ಯಸಾರ (ರೆಕ್ಟಿಫೈಡ್ ಸ್ಪಿರಿಟ್) ಹಾಗೂ ಅದರ ಸಹ–ಉತ್ಪನ್ನಗಳನ್ನು (ಕಾಕಂಬಿ, ಅಳ್ಳಟ್ಟೆ, ಇತ್ಯಾದಿ) ತಯಾರಿಸುವುದರಲ್ಲಿ ತೊಡಗಿಸಿಕೊಂಡಿರುವುದು. ಕಂಪನಿಯು ಎರಡು ಕಬ್ಬು ಅರೆಯುವ ಮಿಲ್ಲುಗಳನ್ನು (ಎ–ಮಿಲ್ಲು ದಿನ ಒಂದಕ್ಕೆ 5000 ಟನ್ನುಗಳಷ್ಟು ಕಬ್ಬು–(ಟಿಸಿಡಿ) ಹಾಗೂ ಬಿ–ಮಿಲ್ಲು 2,500 ಟಿಸಿಡಿ) ಒಟ್ಟಾರೆ 7,500 ಟಿಸಿಡಿ ಸಾಮರ್ಥ್ಯದೊಂದಿಗೆ ಹೊಂದಿರುವುದು. ಎ ಮಿಲ್ಲನ್ನು ಫೆಬ್ರವರಿ 2015ರಲ್ಲಿ 2,500 ಟಿಸಿಡಿಯಿಂದ 5,000 ಟಿಸಿಡಿಗೆ ಆಧುನೀಕರಣಗೊಳಿಸಲಾಯಿತಾದಲ್ಲಿ ಬಿ–ಮಿಲ್ಲು ಕಾರ್ಯಸ್ಥಗಿತಗೊಂಡಿರುವುದು.

***2.2.6.1.* ನಿವ್ವಳ ಆಸ್ತಿಗಳು ಸವೆದುಹೋಗಿರುವುದು ಹಾಗೂ ಅವಿರತ ಕಾರ್ಯಾಚರಣೆಯ ವೆಚ್ಚಗಳು**

ಮಾರ್ಚ್ 2014ಕ್ಕೆ ಅಂತ್ಯಗೊಂಡ ಸಾಲಿಗೆ ಇತ್ತೀಚಿನ ಲೆಕ್ಕಪರಿಶೋಧನೆಗೆ ಒಳಗಾಗಿರುವ ಹಣಕಾಸು ತ:ಖ್ತೆಗಳ ಅನುಸಾರ ಕಂಪನಿಯ ನಿವ್ವಳ ಆಸ್ತಿಗಳು ಅಂದರೆ ಕರ್ನಾಟಕ ಸರ್ಕಾರದಿಂದ ₹ 53.06 ಕೋಟಿ ಮೌಲ್ಯದ ಈಕ್ವಿಟಿ ಹೂಡಿಕೆಯು ₹ 463.39 ಕೋಟಿ ಮೊತ್ತದಷ್ಟು ಕ್ರೋಢೀಕೃತ ನಷ್ಟಗಳಿಂದ ಸವೆದುಹೋಗಿರುವುದು. ಕಂಪನಿಯು 2014–15ರಿಂದ 2020–21ರ ಅವಧಿಗೆ ಒದಗಿಸಿದ ತಾತ್ಕಾಲಿಕ ಮಾಹಿತಿಯ[72] ಅನುಸಾರ, ಕಂಪನಿಯು ₹ 408.41 ಕೋಟಿ ಮೊತ್ತದಷ್ಟು ಅವಿರತವಾಗಿ ಕಾರ್ಯಾಚರಣೆಗಳ ವೆಚ್ಚಗಳನ್ನು ಭರಿಸಿತ್ತು ಹಾಗೂ ₹ 108.92 ಕೋಟಿ ಮೊತ್ತದಷ್ಟು ನಷ್ಟಗಳನ್ನು ಕಾರ್ಯಾಚರಣೆಗಳಿಂದ ಅನುಭವಿಸಿರುವುದು. 31 ಮಾರ್ಚ್ 2021ರಲ್ಲಿದ್ದಂತೆ ಒಟ್ಟು ಕ್ರೋಢೀಕೃತ ನಷ್ಟಗಳು ₹ 572.31 ಕೋಟಿ ಮೊತ್ತದಷ್ಟಿತ್ತು.

ದಾಖಲೆಗಳ ಲೆಕ್ಕಪರಿಶೋಧನೆಯು ಕೆಳಗಿನ ಅಂಶಗಳನ್ನು ಹೊರಗೆಡವಿದ್ದವು.

***ಕಾರ್ಯಸ್ಥಗಿತಗೊಂಡಿರುವ ಸಹ–ಉತ್ಪಾದನಾ ಸ್ಥಾವರ***

**2.2.6.2**. ಕಂಪನಿಯು ಒಂದು ವಿದ್ಯುಚ್ಛಕ್ತಿ ಸಹ–ಉತ್ಪಾದನಾ ಸ್ಥಾವರವನ್ನು 30 ಮೆವ್ಯಾ ಸಾಮರ್ಥ್ಯದೊಂದಿಗೆ ಸ್ಥಾಪಿಸಿದ್ದಿತು, ಅದಕ್ಕಾಗಿ ಪ್ರಾಯೋಗಿಕ/ಪರೀಕ್ಷಾರ್ಥ ಕಾರ್ಯಾಚರಣೆಗಳನ್ನು ಜನವರಿ 2007ರಲ್ಲಿ ನಡೆಸಲಾಯಿತು. ಕಂಪನಿಯು ₹ 74.78 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಭರಿಸಿದ್ದಿತು. ಆದಾಗ್ಯೂ, ಸ್ಥಾವರವು 5,000 ಟಿಸಿಡಿ ದರದಲ್ಲಿ ಕಚ್ಚಾ ಸಾಮಗ್ರಿಯ (ಅಳ್ಳಟ್ಟೆ) ಲಭ್ಯತೆ ಇರದ ಕಾರಣ ಅದನ್ನು ಕಾರ್ಯಾರಂಭಗೊಳಿಸಿದಂದಿನಿಂದಲೂ ನಿಷ್ಪ್ರಯೋಜಕವಾಗಿ ಇರುವುದು. ಬಿ–ಮಿಲ್ಲು ಕಾರ್ಯಸ್ಥಗಿತಗೊಂಡಿರುವುದರಿಂದ ಹಾಗೂ ಎ–ಮಿಲ್ಲು ಅದರ ಆಧುನೀಕರಣದ ನಂತರ ಅದರ ಸಾಮರ್ಥ್ಯಕ್ಕೆ ಎಂದಿಗೂ ಕಾರ್ಯನಿರ್ವಹಿಸಲಿಲ್ಲವಾದ್ದರಿಂದ, ಸಹ–ಉತ್ಪನ್ನ ಸ್ಥಾವರವನ್ನು ನಡೆಸಲು ಅಗತ್ಯ ಕಚ್ಚಾ ಸಾಮಗ್ರಿಯು ಲಭ್ಯವಿರಲಿಲ್ಲ. ಕಂಪನಿಯು ಎ–ಮಿಲ್ಲಿನ ಆಧುನೀಕರಣಕ್ಕಾಗಿ ₹ 49.10 ಕೋಟಿ ಮೊತ್ತವನ್ನು ಭರಿಸಿದ್ದಿತು ಹಾಗೂ ಅಲ್ಲದೆಯೇ ಕಂಪನಿಯು ಸಹ–ಉತ್ಪನ್ನ ಸ್ಥಾವರಕ್ಕಾಗಿ ಹುಡ್ಕೋದಿಂದ ಪಡೆದುಕೊಂಡಿದ್ದ ಸಾಲದ ಮೇಲೆ ₹ 59.04 ಕೋಟಿ ಮೊತ್ತದಷ್ಟು ಬಡ್ಡಿ ಹೊರೆಯನ್ನು ಕರ್ನಾಟಕ ಸರ್ಕಾರವು ಹೊತ್ತುಕೊಂಡಿದ್ದಿತು.

ಸಹ–ಉತ್ಪಾದನಾ ಸ್ಥಾವರ ಹಾಗೂ ಎ–ಮಿಲ್ಲಿನ ಆಧುನೀಕರಣಕ್ಕಾಗಿ ಭರಿಸಲಾಗಿದ್ದ ₹ 123.88 ಕೋಟಿ ನಿಷ್ಫಲ ವೆಚ್ಚದ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ವಲಯದ ಉದ್ಯಮಗಳ ಮೇಲಿನ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಮಾರ್ಚ್ 2015ಕ್ಕೆ ಅಂತ್ಯಗೊಂಡಂತಹ ವರ್ಷದ ವರದಿಯಲ್ಲಿ ಸೇರಿಸಲಾಗಿದ್ದಿತು. ವಿಷಯವನ್ನು ಸಾರ್ವಜನಿಕ ವಲಯ

[72] ಲೆಕ್ಕಪರಿಶೋಧನೆಗೆ ಒಳಪಡದ ಅಂಕಿಸಂಖ್ಯೆಗಳು.

ಉದ್ದಿಮೆಗಳ ಮೇಲಿನ ಸಮಿತಿಯು ಚರ್ಚಿಸಿದ್ದಿತು (ಸೆಪ್ಟಂಬರ್ 2016/ಫೆಬ್ರವರಿ 2022). ಅದರ ಶಿಫಾರಸುಗಳನ್ನು ನಿರೀಕ್ಷಿಸಲಾಗುತ್ತಿದೆ (ಮೇ 2022).

***ಪುನರಾರಂಭದ ಮೇಲಿನ ಕ್ರಮಗಳ ಕೊರತೆ***

**2.2.6.3**. ಕಂಪನಿಯನ್ನು ಬಿಐಎಫ್‌ಆರ್ 2005–06ರಲ್ಲಿ ರೋಗಗ್ರಸ್ಥವಾಗಿರುವುದಾಗಿ ಘೋಷಿಸಿದ್ದಿತು ಹಾಗೂ ಒಂದು ಕಾರ್ಯಾಚರಣೆಗೊಳಿಸುವ ಸಂಸ್ಥೆಯ (ಸ್ಟೇಟ್ ಬ್ಯಾಂಕ್ ಆಫ್ ಮೈಸೂರು) ಮೂಲಕ ಒಂದು ಕಾರ್ಯಸಾಧ್ಯತೆ ಅಧ್ಯಯನವನ್ನು ನಡೆಸಲಾಯಿತು. ಬಿಐಎಫ್‌ಆರ್‌ನ ನಿರ್ದೇಶನಗಳ ಅನುಸಾರ ಒಂದು ಕರಡು ಪುನರ್ವಸತಿ ಯೋಜನೆಯನ್ನೂ[73] ಸಹ ತಯಾರಿಸಲಾಯಿತು (ಜನವರಿ 2015), ಅದನ್ನು ಕಾರ್ಯಾಚರಣೆಗೊಳಿಸುವ ಸಂಸ್ಥೆಯು ಪರಿಶೀಲಿಬೇಕಿತ್ತು. ಆದಾಗ್ಯೂ, ಕರಡು ಪುನರ್ವಸತಿ ಯೋಜನೆಯ ಮೇಲೆ ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ಇದೇ ವೇಳೆಯಲ್ಲಿ, ಭಾರತ ಸರ್ಕಾರವು (ಅಧಿಸೂಚನೆ ದಿನಾಂಕ 25 ನವಂಬರ್ 2016) ರೋಗಗ್ರಸ್ಥ ಕೈಗಾರಿಕಾ ಕಂಪನಿಗಳು (ವಿಶೇಷ ಅನುವುಗಳು) ರದ್ದಿಯಾತಿ ಅಧಿನಿಯಮ, 2003ನ್ನು 1 ಡಿಸೆಂಬರ್ 2016ರಿಂದ ಜಾರಿಗೆ ತಂದಿತು ಹಾಗೂ ತತ್ಪರಿಣಾಮವಾಗಿ ಬಿಐಎಫ್‌ಆರ್ ಬದಲಾಗಿ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಿಕ ಪ್ರಾಧಿಕಾರವನ್ನು ಸ್ಥಾಪಿಸಲಾಯಿತು (ಎನ್‌ಸಿಎಲ್‌ಟಿ). ಹೊಸ ಕಾಯಿದೆಯ ಅಗತ್ಯತೆಯಂತೆ ಕಂಪನಿಯು ಎನ್‌ಸಿಎಲ್‌ಟಿ ಮುಂದೆ ಅರ್ಜಿಯನ್ನು ಹೊಸದಾಗಿ ಸಲ್ಲಿಸಲಿಲ್ಲ.

ಆದಾಗ್ಯೂ, ಕರ್ನಾಟಕ ಸರ್ಕಾರವು ಕಂಪನಿಯನ್ನು ಪುನರುಜ್ಜೀವನಗೊಳಿಸುವ ಕಡೆಗೆ ಒಂದು ಕ್ರಮವಾಗಿ, ಕಂಪನಿಯನ್ನು ಖಾಸಗಿ ಕಾರ್ಯಾಚರಣೆಗೊಳಿಸುವವರಿಗೆ 2021–22 ಕಬ್ಬು ಅರೆಯುವ ಸೀಸನ್ನಿನಿಂದ 40 ವರ್ಷಗಳ ಅವಧಿಗೆ ಎಲ್‌ಆರ್‌ಒಟಿ (ಗುತ್ತಿಗೆ, ಪುನರ್ವಸತಿ, ಕಾರ್ಯಾಚರಣೆ ಹಾಗೂ ವರ್ಗಾವಣೆ) ಆಧಾರದ ಮೇರೆಗೆ ನೀಡುವ ತೀರ್ಮಾನವನ್ನು ತೆಗೆದುಕೊಂಡಿತು (ನವೆಂಬರ್ 2020). ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಪ್ರಗತಿಯನ್ನು ಸಾಧಿಸಿರಲಿಲ್ಲ (ಮೇ 2022).

ಕರ್ನಾಟಕ ಸರ್ಕಾರವು 2006–07ರಿಂದಲೂ ಅಂದರೆ ಕಂಪನಿಯನ್ನು ಸೆಪ್ಟಂಬರ್ 2005ರಲ್ಲಿ ರೋಗಗ್ರಸ್ತವಾಗಿರುವುದಾಗಿ ಘೋಷಿಸಿದನಂತರ 2020–21ರವರೆವಿಗೂ ಈಕ್ವಿಟಿ, ಸಾಲ ಹಾಗೂ ಅನುದಾನಗಳ ರೂಪದಲ್ಲಿ ₹ 526.51 ಕೋಟಿ ಮೊತ್ತದಷ್ಟು ಹಣಕಾಸನ್ನು ಹೂಡಿಕೆ ಮಾಡಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. 2006–07ರಿಂದ 2020–21ರ ಅವಧಿಯಲ್ಲಿ ಕಂಪನಿಯು 31.47 ಲಕ್ಷ ಮೆಟ್ರಿಕ್ ಟನ್ನುಗಳಷ್ಟು ಕಬ್ಬಿನ ಅರೆಯುವಿಕೆಯನ್ನು ನಿರ್ವಹಿಸಲು ಸಾಧ್ಯವಾಗಿದ್ದಿತು ಹಾಗೂ ಅದೇ ಅವಧಿಯಲ್ಲಿ ಅದು ತನ್ನ ಕಾರ್ಯಾಚರಣೆಗಳಿಂದ ₹ 418.13 ಕೋಟಿ ಮೊತ್ತದಷ್ಟು ನಷ್ಟಗಳನ್ನು ಅನುಭವಿಸಿದ್ದಿತು. ಡಿಸ್ಟಿಲರಿ ಸ್ಥಾವರ ಹಾಗೂ ಸಹ–ಉತ್ಪಾದನಾ ಸ್ಥಾವರಗಳು ತಮ್ಮ ಕಾರ್ಯಚಟುವಟಿಕೆಗಳನ್ನು ನಡೆಸುತ್ತಿರಲಿಲ್ಲ. ಕರ್ನಾಟಕ ಸರ್ಕಾರವು ಸ್ವಯಂ–ನಿವೃತ್ತಿ ಯೋಜನೆಯನ್ನು ವಿಸ್ತರಿಸಿದ್ದರಿಂದ ಮಾರ್ಚ್ 2021ರಲ್ಲಿದ್ದಂತೆ ಸಿಬ್ಬಂದಿ ಸಂಖ್ಯೆಯನ್ನು 50ಕ್ಕೆ ಇಳಿಸಲಾಗಿದ್ದಿತು.

ಕರ್ನಾಟಕ ಸರ್ಕಾರವು ನೇಮಕ ಮಾಡಿದ್ದ ಒಂದು ಬಾಹ್ಯ ಸಂಸ್ಥೆಯು ನಡೆಸಿದ (ಜೂನ್ 2015) ಕಂಪನಿಯ ಕಾರ್ಯನಿರ್ವಹಣೆಯ ಮೇಲಿನ ಮೌಲ್ಯಮಾಪನ ಅಧ್ಯಯನವು ನಷ್ಟಗಳಿಗೆ ಸಕ್ಕರೆಯ ಮಾರಾಟದಿಂದ ಬರುವ ಸರಾಸರಿ ಮೌಲ್ಯವು ಸ್ಥಿರವಾಗಿ ಉಳಿಯುವುದರೊಂದಿಗೆ ಕಬ್ಬಿನ ಬೆಲೆಯು ಹಾಗೂ ಪರಿವರ್ತನಾ ವೆಚ್ಚವು ಗಮನಾರ್ಹವಾಗಿ ಹೆಚ್ಚಳಗೊಂಡಿದ್ದುದು, (2006–07ರಲ್ಲಿ ಸಕ್ಕರೆಯ ಉತ್ಪಾದನಾ ವೆಚ್ಚವು ಟನ್ನು ಒಂದಕ್ಕೆ ₹ 13,525 ಇದ್ದುದು 2012–13ರಲ್ಲಿ ಟನ್ನು ಒಂದಕ್ಕೆ ₹ 22,477ಕ್ಕೆ ಹೆಚ್ಚಳಗೊಂಡಿದ್ದಿತು) ಹಳೆಯ ಯಂತ್ರಗಳ ಕಾರ್ಯಾಚರಣೆಗಳಲ್ಲಿ ದಕ್ಷತೆ ಇರದಿದ್ದುದು (ಪದೇಪದೇ ಸ್ಥಗಿತಗೊಳ್ಳುತ್ತಿದ್ದವು ಹಾಗೂ ಕಬ್ಬು ಅರೆಯುವ ವೇಳೆಯಲ್ಲಿ ನಷ್ಟವಾಗುತ್ತಿದ್ದವು, ಸ್ಥಾವರಗಳು ಮತ್ತು ಯಂತ್ರಗಳ ಶೇಕಡ 40ಕ್ಕಿಂತ ಕಡಿಮೆಯ ಅತ್ಯಂತ ನಿಕೃಷ್ಟಮಟ್ಟದ ಉಪಯೋಗ)

[73] ಕರಡು ಪುನರ್ವಸತಿ ಯೋಜನೆಯು ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು ಅನುಮೋದಿಸಿರುವ ಒಂದು ಸಲದ ಇತ್ಯರ್ಥವನ್ನು ಒಳಗೊಂಡಿದ್ದಿತು, ಮೃದು ಸಾಲ/ಅನುದಾನಗಳ ರೂಪದಲ್ಲಿ ಕರ್ನಾಟಕ ಸರ್ಕಾರದ ಸಹಾಯ, ಸಕ್ಕರೆ ಕಾರ್ಖಾನೆಯ ಹೆಚ್ಚಳಗೊಳಿಸಲ್ಪಟ್ಟ ಸಾಮರ್ಥ್ಯದ ಪ್ರಸಕ್ತ ಸಿದ್ಧತೆ, ಸಹ–ಉತ್ಪಾದನಾ ಸ್ಥಾವರದ ಸ್ಥಿರತೆ ಹಾಗೂ ಅಲ್ಲದೆಯೇ ಯಾವೂದೇ ಮುಂದಿನ/ಇನ್ನೂ ಹೆಚ್ಚಿನ ಹೂಡಿಕೆಗಳಿಲ್ಲದೆಯೇ ಡಿಸ್ಟಿಲರಿ ವಿಭಾಗದಿಂದ ಕಾಣಿಕೆಯನ್ನು ಒಳಗೊಂಡಿದ್ದಿತು.

ಇತರೆ ಉತ್ಪಾದನಾ ಮಾರ್ಗಗಳನ್ನು ಸೀಮಿತ ಕಾರ್ಯಾಚರಣೆ/ಕಾರ್ಯಾಚರಣೆಗೊಳಿಸದಿದ್ದುದು (ಡಿಸ್ಟಿಲರಿ, ಸಹ ಉತ್ಪಾದನಾ ಸ್ಥಾವರ), ಇತ್ಯಾದಿಗಳು ಕಾರಣ ಎಂಬುದಾಗಿ ತಿಳಿಸಿದ್ದಿತು.

ಈ ರೀತಿಯಾಗಿ, 2005ರಷ್ಟು ಹಿಂದೆಯೇ ಕಂಪನಿಯನ್ನು ರೋಗಗ್ರಸ್ತ ಕಂಪನಿ ಎಂಬುದಾಗಿ ಘೋಷಿಸಿದ ಹೊರತಾಗಿಯೂ, ಕರಡು ಪುನರ್ವಸತಿ ಯೋಜನೆಯನ್ನು ಅಂತಿಮರೂಪಕ್ಕೆ ತರಲು (ಜನವರಿ 2015) ಹತ್ತು ವರ್ಷಗಳನ್ನು ತೆಗೆದುಕೊಂಡಿತು ಹಾಗೂ ಅಂತಿಮವಾಗಿ ಅದನ್ನು ಕಾರ್ಯಗತಗೊಳಿಸಲಿಲ್ಲ. ಎರಡನೆಯದಾಗಿ ಮೌಲ್ಯಮಾಪನ ಅಧ್ಯಯನವು ಜೂನ್ 2015ರಲ್ಲಿ ತೋರಿಸಿದಂತಹ ನಷ್ಟಗಳಿಗೆ ಕಾರಣಗಳನ್ನು ಬಗೆಹರಿಸಲು ಯಾವುದೇ ರಚನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಆದಾಗ್ಯೂ, ಸರ್ಕಾರವು 2006–07ರಿಂದ 2020–21ರ ಅವಧಿಯಲ್ಲಿ ₹ 526.51 ಕೋಟಿ ಮೊತ್ತದಷ್ಟು ಹಣಕಾಸನ್ನು ಹೂಡಿಕೆ ಮಾಡಿದ್ದಿತು. ಕಂಪನಿಯು ತನ್ನ ಕಾರ್ಯಾಚರಣೆಗಳಿಂದ ಮೇಲೆ ತಿಳಿಸಲಾದ ಅವಧಿಯಲ್ಲಿ ₹ 418.13 ಕೋಟಿ ಮೊತ್ತದಷ್ಟು ನಷ್ಟಗಳನ್ನು ಅನುಭವಿಸಿದ್ದಿತು. ಮೂರನೆಯದಾಗಿ, ಕಂಪನಿಯನ್ನು ಖಾಸಗಿ ಕಾರ್ಯಾಚರಣೆಗೊಳಿಸುವವರಿಗೆ ಗುತ್ತಿಗೆಗೆ ನೀಡುವ ತೀರ್ಮಾನವನ್ನು (ನವೆಂಬರ್ 2020) ಕಾರ್ಯಗತಗೊಳಿಸಲಿಲ್ಲ.

ವಿಷಯವನ್ನು ಸರ್ಕಾರದ ಗಮನಕ್ಕೆ ಮಾರ್ಚ್ 2022ರಲ್ಲಿ ತಿಳಿಸಲಾಯಿತು, ಅವರ ಉತ್ತರವನ್ನು ನಿರೀಕ್ಷಿಸಲಾಗುತ್ತಿದೆ (ಮೇ 2022).

## ಕವಿನಿ ಅನಿಲ ವಿದ್ಯುತ್ ನಿಗಮ ನಿಯಮಿತ

**2.2.7.** ಕವಿನಿ ಅನಿಲ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಜಿಪಿಸಿಎಲ್) ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) ಪೂರ್ಣ ಮಾಲೀಕತ್ವದ ಉಪ–ಕಂಪನಿಯಾಗಿರುತ್ತದೆ, ಅದನ್ನು ಏಪ್ರಿಲ್ 1996ರಲ್ಲಿ ಬೆಂಗಳೂರಿಗೆ ಸಮೀಪದ ರಾಮನಗರ ಜಿಲ್ಲೆಯ ಬಿಡದಿಯಲ್ಲಿ ರಾಜ್ಯದ ಪ್ರಪ್ರಥಮ ಅನಿಲ ಆಧಾರಿತ ಕ್ರೋಡೀಕೃತ ಆವರ್ತನ ವಿದ್ಯುತ್ ಸ್ಥಾವರವನ್ನು (ಸಿಸಿಪಿಪಿ) ಸ್ಥಾಪಿಸುವ ಉದ್ದೇಶದಿಂದ ಸ್ಥಾಪಿಸಲಾಗಿದ್ದಿತು. ಕೆಪಿಸಿಜಿಪಿಸಿಎಲ್ 31 ಮಾರ್ಚ್ 2021ರಲ್ಲಿದ್ದಂತೆ ₹ 33.85 ಕೋಟಿ ಮೊತ್ತದಷ್ಟು ಕ್ರೋಡೀಕೃತ ನಷ್ಟವನ್ನು ಅನುಭವಿಸಿದ್ದಿತು.

### ಕ್ರೋಢೀಕೃತ ಆವರ್ತನ ವಿದ್ಯುತ್ ಸ್ಥಾವರವನ್ನು (ಸಿಸಿಪಿಪಿ) ಪೂರ್ಣಗೊಳಿಸುವಲ್ಲಿ ವಿಪರೀತವಾದಂತಹ ವಿಳಂಬ

**2.2.7.1.** 1990ರ ಸಾಲುಗಳಲ್ಲಿ ವಿಪರೀತವಾದಂತಹ ವಿದ್ಯುತ್ ಕೊರತೆಯನ್ನು ಹಾಗೂ ಬೆಂಗಳೂರು ನಗರದಲ್ಲಿ ಒಂದು ಸಮರ್ಪಿತ ವಿದ್ಯುತ್ ಸ್ಥಾವರದ ಅನುಪಸ್ಥಿತಿಯನ್ನು ಪರಿಗಣಿಸಿದಂತೆ, ಕರ್ನಾಟಕ ಸರ್ಕಾರವು ಬಿಡದಿಯಲ್ಲಿ 700 ಮೆವ್ಯಾ ಸಾಮರ್ಥ್ಯದ ಕ್ರೋಡೀಕೃತ ಆವರ್ತನ ವಿದ್ಯುತ್ ಸ್ಥಾವರ (ಸಿಸಿಪಿಪಿ) ಸ್ಥಾಪನೆಯ ಪ್ರಸ್ತಾವನೆಗೆ ತನ್ನ ಅನುಮೋದನೆ ನೀಡಿತು (ಮೇ 2001). ಏಪ್ರಿಲ್ 2010/ಜುಲೈ 2013ರಲ್ಲಿ ಪ್ರಾರಂಭಿಸಲಾದ ಟೆಂಡರು ಪ್ರಕ್ರಿಯೆಯು ಕಾನೂನು ಸವಾಲುಗಳನ್ನು ಎದುರಿಸಿತ್ತಾದ್ದರಿಂದ, ಯೋಜನೆಯನ್ನು ಪ್ರತಿಯೊಂದೂ 350 ಮೆವ್ಯಾಗಳಂತೆ ಎರಡು ಸ್ಥಾವರಗಳನ್ನು ಬಿಡದಿ ಮತ್ತು ಯಲಹಂಕದಲ್ಲಿ ಸ್ಥಾಪಿಸುವ ಪ್ರಸ್ತಾವನೆಯನ್ನು ಮಾಡಲಾಯಿತು. ಆದಾಗ್ಯೂ, ಬಿಡದಿಯಲ್ಲಿನ ಯೋಜನೆಯನ್ನು ವಿದ್ಯುತ್ತು ಅಧಿಕ ಪ್ರಮಾಣದಲ್ಲಿ ಸಿಗುತ್ತಿರುವ ಕಾರಣವನ್ನು ನೀಡಿ ಮುಂದೂಡಲಾಯಿತು (ಜೂನ್ 2017). ಯಲಹಂಕದಲ್ಲಿನ ಯೋಜನೆಯನ್ನು ಗಮನಾರ್ಹವಾಗಿ ವಿಳಂಬಗೊಂಡಿತ್ತು ಹಾಗೂ ಡಿಸೆಂಬರ್ 2021ರಲ್ಲಿದ್ದಂತೆ ಕರ್ನಾಟಕ ಸರ್ಕಾರವು ತನ್ನ ಅನುಮೋದನೆ ನೀಡಿದನಂತರ 20 ವರ್ಷಗಳು ಕಳೆದನಂತರವೂ ಈ ಕೆಳಗೆ ಚರ್ಚಿಸಲಾಗಿರುವ ಕಾರಣಗಳಿಂದಾಗಿ ಅದರ ಕಾರ್ಯಾಚರಣೆಗಳನ್ನು ಇನ್ನೂ ಪಾರಂಭಿಸಿರಲಿಲ್ಲ.

ಯಲಹಂಕದಲ್ಲಿ 350 ಮೆವ್ಯಾ ಸಾಮರ್ಥ್ಯದ ಕ್ರೋಢೀಕೃತ ಆವರ್ತನ ವಿದ್ಯುತ್ ಸ್ಥಾವರ (ಸಿಸಿಪಿಪಿ) ಸ್ಥಾಪನೆಗಾಗಿ ಇಪಿಸಿ ಗುತ್ತಿಗೆಯನ್ನು ಮೆ. ಬಿಎಚ್ಇಎಲ್, ಇವರಿಗೆ ₹ 1,571.18 ಕೋಟಿ ಮೊತ್ತದಷ್ಟು ಅಂದಾಜು ಯೋಜನಾ ವೆಚ್ಚದಲ್ಲಿ ಪೂರ್ಣಗೊಳಿಸುವಿಕೆಗಾಗಿ 30 ತಿಂಗಳುಗಳ ನಿಗದಿತ ಅವಧಿಯೊಂದಿಗೆ (ಮೇ 2018ರ ಒಳಗೆ) ವಹಿಸಲಾಯಿತು (ನವಂಬರ್ 2015). ಆದಾಗ್ಯೂ, ಕೆಪಿಸಿ ಜಿಪಿಸಿಎಲ್‌ನ ನಿರ್ದೇಶಕರುಗಳ ಮಂಡಳಿಗೆ ವಿವರಿಸಿರುವಂತೆ (ಜನವರಿ 2020) ಅಗತ್ಯ ಸಿಬ್ಬಂದಿ,

ಯಂತ್ರೋಪಕರಣಗಳು ಹಾಗೂ ಸಾಮಗ್ರಿಗಳನ್ನು ಸಂಗ್ರಹಿಸುವಲ್ಲಿ ಮೆ. ಬಿಎಚ್ಇಎಲ್, ಇವರ ಅಸಾಮರ್ಥ್ಯತೆಯ ಕಾರಣ ಯೋಜನೆಯು ವಿಳಂಬಗೊಂಡಿತ್ತು. ವಾಸ್ತವಿಕವಾಗಿ, ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು (ಇಂಧನ), ಉಪಕರಣವನ್ನು ಬೆಂಚುಮಾರ್ಕು ಮಾನದಂಡದ ಆಧಾರದ ಮೇರೆಗೆ ಸರಬರಾಜು ಮಾಡುವ ಬಗ್ಗೆ ನಡೆದ ಚರ್ಚೆಯ ವೇಳೆಯಲ್ಲಿ (ನವಂಬರ್ 2014), ಮೆ. ಬಿಎಚ್ಇಎಲ್, ಇವರು ಸರಬರಾಜುಗಳಲ್ಲಿ/ ಈ ಹಿಂದಿನ ಆದೇಶಗಳನ್ನು/ ಗುತ್ತಿಗೆಗಳನ್ನು ಕಾರ್ಯಗತಗೊಳಿಸುವಲ್ಲಿನ ವಿಳಂಬಗಳ ಹಾಗೂ ಕಾಮಗಾರಿ ಹೊರೆಯನ್ನು ನಿರ್ವಹಿಸುವಲ್ಲಿ ಅದರ ಅಸಾಮರ್ಥ್ಯತೆಯನ್ನು ಗಮನಕ್ಕೆ ತೆಗೆದುಕೊಂಡರು. ಈ ಹಿಂದಿನ ಆದೇಶಗಳಲ್ಲಿ ಮೆ. ಬಿಎಚ್ಇಎಲ್, ಇವರಿಂದ ಆಗಿದ್ದ ವಿಳಂಬಗಳನ್ನು ಗಮನಿದ ಹೊರತಾಗಿಯೂ, ಯೋಜನೆಯನ್ನು ಮೆ. ಬಿಎಚ್ಇಎಲ್, ಇವರಿಗೆ ವಹಿಸಲಾಗಿದ್ದಿತು. ಯೋಜನೆಯನ್ನು ನಿಗದಿತ ದಿನಾಂಕದ (ಮೇ 2018) ನಂತರ 43 ತಿಂಗಳುಗಳು ಕಳೆದನಂತರವೂ ಜನವರಿ 2022ರಲ್ಲಿದ್ದಂತೆಯೂ ಕಾರ್ಯಾಚರಣೆಗೆ ಮುಕ್ತಗೊಳಿಸಿರಲಿಲ್ಲ. ಕಂಪನಿಯು ಜನವರಿ 2022ರಲ್ಲಿದ್ದಂತೆ ₹ 2,150.70 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಭರಿಸಿದ ಹೊರತಾಗಿಯೂ ಯಾವುದೇ ವರಮಾನವನ್ನು ಗಳಿಸಿರಲಿಲ್ಲ. ಕೆಪಿಸಿ ಜಿಪಿಸಿಎಲ್ ಮಾಡಿದ್ದ ಆಯವ್ಯಯ ಪ್ರಕ್ಷೇಪಣೆಯ ಅನುಸಾರ, 2019–20ರಲ್ಲಿ ವಿದ್ಯುತ್ತಿನ ಮಾರಾಟ ದರವು ಯೂನಿಟ್ಟು ಒಂದಕ್ಕೆ ₹ 6.35ರಿಂದ 2021–22ರಲ್ಲಿ ಯೂನಿಟ್ಟು ಒಂದಕ್ಕೆ ₹ 5.19ಕ್ಕೆ ಇಳಿಮುಖಗೊಂಡಿದ್ದಿತು, ಇದರಿಂದ ಭರಿಸಲಾಗಿದ್ದ ವೆಚ್ಚಗಳನ್ನು ವಸೂಲಾತಿ ಮಾಡಿಕೊಳ್ಳುವಲ್ಲಿ ಇನ್ನೂ ಹೆಚ್ಚಿನ ಜಟಿಲತೆಗಳು ಉಂಟಾಗುತ್ತವೆ ಮತ್ತು ಇದರಿಂದಾಗಿ ಕಂಪನಿಯು ಹೆಚ್ಚುವರಿ ನಷ್ಟಗಳನ್ನು ಅನುಭವಿಸುವುದು ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು.

ಮೆ. ಬಿಎಚ್ಇಎಲ್, ಇವರಿಗೆ ಹಣಕಾಸು ಇಲಾಖೆಯು ನೀಡಿರುವ 1 ಜುಲೈ 2014ರ ಅಧಿಸೂಚನೆಯ ಮೂಲಕ ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಅಡಿಯಲ್ಲಿ ವಿನಾಯತಿ ಪಡೆದುಕೊಂಡನಂತರ ಪರಸ್ಪರ ತಿಳಿವಳಿಕೆ ಪತ್ರದ ಆಧಾರದ ಮೇರೆಗೆ ಗುತ್ತಿಗೆಯನ್ನು ನೀಡಲಾಗಿರುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಮೇ 2022). ಮೆ. ಬಿಎಚ್ಇಎಲ್ ಕೂಡ ಯೋಜನೆಯನ್ನು ಪೂರ್ಣಗೊಳಿಸುವ ಸಲುವಾಗಿನ ನಿಗದಿತ ದಿನಾಂಕಕ್ಕೆ ಬದ್ಧವಾಗಿರುವುದಾಗಿ ಭರವಸೆ ನೀಡಿತ್ತು (ನವಂಬರ್ 2014). ಯೋಜನೆಯನ್ನು ಕಾರ್ಯೋದ್ಯುಕ್ತಗೊಳಿಸಲು ವಿಳಂಬಕ್ಕೆ ಕಾರಣವೆಂದರೆ ಸಿವಿಲ್ ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬ ಹಾಗೂ ಇಲೆಕ್ಟ್ರೋ–ಮೆಕಾನಿಕಲ್ ಕಾಮಗಾರಿಗಳಿಗಾಗಿ ಫ್ರಂಟ್‌ಗಳು ಲಭ್ಯವಿಲ್ಲದಿರುವುದು ಹಾಗೂ ಅಕ್ಟೋಬರ್ 2020ರಲ್ಲಿ ಸಂಭವಿಸಿದ ಬೆಂಕಿ ಅವಗಡ. ಸಂಭಾವ್ಯ ಅಪಾಯ ಹಾಗೂ ವೆಚ್ಚಗಳನ್ನು ಮೆ. ಬಿಎಚ್ಇಎಲ್‌ನ ಜವಾಬ್ದಾರಿಗೆ ಹೊರಿಸಿ ಕೆಪಿಸಿಎಲ್ ಬಾಕಿಯಿರುವ ಸಿವಿಲ್ ಕಾಮಗಾರಿಗಳನ್ನು ಹಿಂಪಡೆಯಿತು ಹಾಗೂ ಅಲ್ಲದೆಯೇ ಬೆಂಕಿ ಅವಗಡದಲ್ಲಿ ಹಾಳಾಗಿದ್ದ ಅನಿಲ ಟರ್ಬೈನಿನ ಕಾಮಗಾರಿಯನ್ನು ಪುನರ್–ಪ್ರಾರಂಭಿಸಲಾಗಿರುವುದು. ಅನಿಲ ಸರಬರಾಜು ಹಾಗೂ ವಿದ್ಯುತ್ ಸರಬರಾಜಿನ ಯೂನಿಟ್ಟು ಒಂದರ ದರಕ್ಕೆ ಸಂಬಂಧಿಸಿದಂತೆ ಸ್ಥಾವರವನ್ನು ಊರ್ಜಿತಗೊಳ್ಳುವ ಆಧಾರದ ಮೇರೆಗೆ ನಡೆಸುವ ರೀತಿಯಲ್ಲಿ ದರಗಳನ್ನು ತಗ್ಗಿಸುವ ಸಲುವಾಗಿ ಕೆಪಿಸಿಎಲ್ ಜಿಎಐಎಲ್ ಜೊತೆ ದರಸಂಧಾನ ಮಾಡುವ ಸಲುವಾಗಿ ಅವಿರತವಾಗಿ ಪ್ರಯತ್ನಿಸುತ್ತಿರುವುದು.

ಈ ಹಿಂದಿನ ಆದೇಶಗಳು/ಗುತ್ತಿಗೆಗಳ ಸರಬರಾಜು/ಕಾರ್ಯಗತಗೊಳಿಸುವಿಕೆಯಲ್ಲಿನ ವಿಳಂಬಗಳು ಹಾಗೂ ಕಾಮಗಾರಿಗಳ ಹೊರೆಯನ್ನು ನಿರ್ವಹಿಸುವಲ್ಲಿನ ಅದರ ಅಸಾಮರ್ಥ್ಯತೆಗಳ ವಾಸ್ತವಾಂಶಗಳನ್ನು ಗಮನಿಸಿದ್ದಾಗ್ಯೂ ಕಂಪನಿಯು ಮೆ. ಬಿಎಚ್ಇಎಲ್, ಇವರಿಗೆ ಕಾಮಗಾರಿಯನ್ನು ನೀಡುವ ಆಯ್ಕೆ ಮಾಡಿಕೊಂಡಿತು ಎಂಬ ವಾಸ್ತವಾಂಶವು ಉಳಿದುಕೊಳ್ಳುತ್ತದೆ. ಮುಂದುವರೆದು, ಸ್ಥಾವರದ ಕಾರ್ಯಾಚರಣೆಯ ಕಾರ್ಯಸಾಧ್ಯತೆಯು ಅನಿಲ ಖರೀದಿ ದರಗಳ ಮೇಲೆ ಅವಲಂಭಿತಗೊಳ್ಳುತ್ತದೆ, ಆದರೆ ಅದು ಇನ್ನೂ ಸಾಕಾರಗೊಂಡಿರುವುದಿಲ್ಲ ಎಂಬುದು ಸುಸ್ಪಷ್ಟವಾಗುತ್ತದೆ.

***ತ್ಯಾಜ್ಯದಿಂದ ಇಂಧನ ವಿದ್ಯುತ್ ಸ್ಥಾವರವು ಕಾರ್ಯಸಾಧ್ಯತೆಯಿಂದ ಕೂಡಿರದಿದ್ದುದು.***

**2.2.7.2.** ಕಂಪನಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಸ್ವೀಕರಿಸಿದ (ಮೇ 2015) ಒಂದು ಪ್ರಸ್ತಾವನೆಯ ಆಧಾರದ ಮೇರೆಗೆ ಹಾಗೂ ಕರ್ನಾಟಕ ಸರ್ಕಾರದ ನೇತೃತ್ವದಲ್ಲಿದ್ದ ಒಂದು ಸಮಿತಿಯು ತೆಗೆದುಕೊಂಡ (ನವೆಂಬರ್ 2018) ತೀರ್ಮಾನದ ಅನುಸಾರ ಬಿಡದಿಯಲ್ಲಿ 15 ಮೆವ್ಯಾ

ಸಾಮರ್ಥ್ಯದ ತ್ಯಾಜ್ಯದಿಂದ ಇಂಧನ ವಿದ್ಯುತ್ ಸ್ಥಾವರ ಸ್ಥಾಪನೆಗೆ ಯೋಜಿಸಿತು. ಯೋಜನೆಯನ್ನು ಅಕ್ಟೋಬರ್ 2022ರಲ್ಲಿ ಪೂರ್ಣಗೊಳಿಸಲು ನಿಗದಿತವಾಗಿದ್ದಿತು. ಈ ಕೆಳಗೆ ಚರ್ಚಿಸಿರುವಂತೆ ವೆಚ್ಚಗಳನ್ನು ಕಡಿಮೆ ಪ್ರಮಾಣದಲ್ಲಿ ವಸೂಲಾತಿ ಮಾಡಲಾಗುವ ಕಾರಣದಿಂದ ಯೋಜನೆಯು ಕಾರ್ಯಸಾಧ್ಯತೆಯಿಂದ ಕೂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು.

ಕೆಪಿಸಿಎಲ್ ಪ್ರಾರಂಭಿಕವಾಗಿ 5 ಮೆವ್ಯಾ ಸಾಮರ್ಥ್ಯದ ತ್ಯಾಜ್ಯದಿಂದ ಇಂಧನ ವಿದ್ಯುತ್ ಉತ್ಪಾದನಾ ಸ್ಥಾವರನ್ನು ಸ್ಥಾಪಿಸುವ ಸಲುವಾಗಿ ಹಾಗೂ ಅದನ್ನು ಎಂಎಸ್‌ಡಬ್ಲ್ಯು/ಆರ್‌ಡಿಎಫ್ ಸರಬರಾಜು 500 ಟಿಪಿಡಿಗೆ ಹೆಚ್ಚಳಗೊಂಡಂತೆಲ್ಲಾ 15 ಮೆವ್ಯಾ ಸಾಮರ್ಥ್ಯಕ್ಕೆ ಹೆಚ್ಚಳಗೊಳಿಸುವ ಸಲುವಾಗಿ ದಿನವೊಂದಕ್ಕೆ 150–200 ಟನ್ನುಗಳಷ್ಟು ಪ್ರತ್ಯೇಕಿಸಲ್ಪಟ್ಟಂತಹ ತ್ಯಾಜ್ಯಗಳ ಉಚಿತ ಸರಬರಾಜಿಗಾಗಿ ಬೃಬೆಂಮಪಾಯೊಂದಿಗೆ ಪರಸ್ಪರ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿತು (ಜನವರಿ 2019). 5 ಮೆವ್ಯಾ ಸ್ಥಾವರಕ್ಕೆ ಒಟ್ಟಾರೆ ಯೋಜನಾ ವೆಚ್ಚವನ್ನು ₹ 241.53 ಕೋಟಿ ಎಂಬುದಾಗಿ ಲೆಕ್ಕಹಾಕಲಾಯಿತು ಹಾಗೂ ಅದರ ಪೈಕಿ ಬಂಡವಾಳ ವೆಚ್ಚವು ₹ 132.58 ಕೋಟಿ ಆಗಿದ್ದಿತು ಹಾಗೂ ಕಾರ್ಯಾಚರಣೆಗಳ ವೆಚ್ಚವು 10 ವರ್ಷಗಳಿಗೆ ₹ 108.95 ಕೋಟಿ ಆಗಿದ್ದಿತು.

11.5 ಮೆವ್ಯಾ ಸಾಮರ್ಥ್ಯದ ಇಪಿಸಿ ಆಧಾರದ ಮೇರೆಗಿನ ತ್ಯಾಜ್ಯದಿಂದ ಇಂಧನ ವಿದ್ಯುತ್ ಯೋಜನೆಯ ಕಾರ್ಯಗತಗೊಳಿಸುವ ಸಲುವಾಗಿ ₹ 240 ಕೋಟಿ ಮೊತ್ತಕ್ಕೆ ಕಾಮಗಾರಿಯನ್ನು ಅಕ್ಟೋಬರ್ 2022ರ ವೇಳೆಗೆ ಪೂರ್ಣಗೊಳಿಸಬೇಕೆಂಬ ಷರತ್ತಿನೊಂದಿಗೆ ಯಶಸ್ವಿ ಸವಾಲುದಾರರಾಗಿದ್ದ ಮೆ. ಐಎಸ್‌ಜಿಇಸಿ ಹೆವಿ ಇಂಜಿನಿಯರಿಂಗ್ ಲಿಮಿಟೆಡ್, ನೋಯ್ಡಾ, ಇವರಿಗೆ ಕಾಮಗಾರಿ ನೀಡಿಕೆ ಪತ್ರವನ್ನು ನೀಡಲಾಯಿತು (ಅಕ್ಟೋಬರ್ 2020). ಕಾಮಗಾರಿಗಳು ಪ್ರಗತಿಯಲ್ಲಿದ್ದವು ಹಾಗೂ ₹ 47.80 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಭರಿಸಲಾಗಿದ್ದಿತು (ಜನವರಿ 2022).

ಯೂನಿಟ್ಟು ಒಂದಕ್ಕೆ ಅಂದಾಜು ವೆಚ್ಚವು ಬೃಬೆಂಮಪಾಯ ಕಾಣಿಕೆ ಇಲ್ಲದೆಯೇ ₹ 10.20 ಆಗುತ್ತದೆ, ಬೃಬೆಂಮಪಾಯ ಕಾಣಿಕೆಯೊಂದಿಗೆ ಯೂನಿಟ್ಟು ಒಂದಕ್ಕೆ ₹ 7 ಆಗುತ್ತದೆ (₹ 66.29 ಕೋಟಿ ಮೊತ್ತದಷ್ಟು ಬಂಡವಾಳ ವೆಚ್ಚದ ಶೇಕಡ 50ರಷ್ಟು) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಯೂನಿಟ್ಟು ಒಂದಕ್ಕೆ ವೆಚ್ಚವನ್ನು ಲೆಕ್ಕಹಾಕುವ ಸಲುವಾಗಿ ಸವಾಲುದಾರರು ತಿಳಿಸಿದ್ದ ₹ 58.76 ಕೋಟಿ ಮೊತ್ತಕ್ಕೆ ಪ್ರತಿಯಾಗಿ ಎರಡು ವರ್ಷಗಳಿಗೆ ₹ 36 ಕೋಟಿ ಕಾರ್ಯಾಚರಣೆ ಮತ್ತು ನಿರ್ವಹಣಾ ವೆಚ್ಚಗಳನ್ನು ಪರಿಗಣಿಸಲಾಗಿದ್ದಿತು, ಇದು ಯೂನಿಟ್ಟು ಒಂದಕ್ಕೆ ವೆಚ್ಚವನ್ನು ಇನ್ನೂ ಹೆಚ್ಚಳಗೊಳಿಸುವುದು. ಇದೇ ವೇಳೆಯಲ್ಲಿ, ಕವಿನಿಆ 01.04.2021ರಿಂದ ಕಾರ್ಯೋದ್ಯುಕ್ತಗೊಳಿಸಲಾಗುವ ಎಲ್ಲಾ ತ್ಯಾಜ್ಯದಿಂದ ಇಂಧನ ವಿದ್ಯುತ್ ಉತ್ಪಾದನಾ ಯೋಜನೆಗಳಿಗೆ ಯೂನಿಟ್ಟು ಒಂದಕ್ಕೆ ₹ 5.62ರ ಒಂದು ಸಾಮಾನ್ಯ ದರವನ್ನು ಪ್ರಸ್ತಾಪಿಸಿದ್ದಿತು. ಈ ರೀತಿಯಾಗಿ ಯೂನಿಟ್ಟು ಒಂದಕ್ಕೆ ₹ 1.38 ರಷ್ಟು ಕಡಿಮೆ ಪ್ರಮಾಣದಲ್ಲಿ ವಸೂಲಾತಿಯಾಗುವುದರಿಂದ ಅದು ಯೋಜನೆಯನ್ನು ಕಾರ್ಯಸಾಧ್ಯವಾಗದಂತೆ ಮಾಡುವುದು.

ಯೋಜನೆಯು ಪೂರ್ಣಗೊಂಡನಂತರ ಯೋಜನೆಗೆ ನಿರ್ದಿಷ್ಟ ದರಪಟ್ಟಿಗೆ ಅನುಮೋದನೆ ನೀಡುವಂತೆ ಕವಿವಿಆವನ್ನು ಸಂಪರ್ಕಿಸಲಾಗುವುದು ಹಾಗೂ ಅನುಮೋದಿತ ವಿದ್ಯುತ್ ದರಪಟ್ಟಿಯ ಆಧಾರ ಮೇರೆಗೆ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದೊಂದಿಗೆ ಒಂದು ವಿದ್ಯುತ್ ಖರೀದಿ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗುವುದು ಎಂಬುದಾಗಿ ಸರ್ಕಾರವು ಉತ್ತರಿಸಿತು (ಮೇ 2022).

## ನಿರ್ಣಯಗಳು

1. **ಸಾರಿಗೆ ನಿಗಮಗಳು (ಕರಾರಸಾನಿ, ವಾಕರಸಾನಿ, ಕಕರಸಾನಿ, ಬೆಂಮಸಾನಿ):** ನಿಗಮಗಳು ಸರ್ಕಾರದಿಂದ ಅನುಮೋದಿತಗೊಂಡಿದ್ದ ಸ್ವಯಂಚಾಲಿತ ದರ ಹೊಂದಾಣಿಕೆ ಸೂತ್ರದ ಅನುಸಾರ ಏಪ್ರಿಲ್ 2015ರಿಂದ ಫೆಬ್ರವರಿ 2020ರ ಅವಧಿಯಲ್ಲಿ ದರಪರಿಷ್ಕರಣೆಯನ್ನು ಜಾರಿಗೆ ತರಲಿಲ್ಲ. ವಿವಿಧ ಪ್ರವರ್ಗಗಳ ಪ್ರಯಾಣಿಕರುಗಳಿಗೆ ನೀಡಲಾಗಿದ್ದ ರಿಯಾಯಿತಿಗಳ ಕಡೆಗೆ ಮಾಡಲಾಗಿದ್ದ ವೆಚ್ಚಗಳ ಅರ್ಹ ಪಾಲನ್ನು ಆಯವ್ಯಯ ಅನುವಿಗೆ ಸೀಮಿತಗೊಳಿಸಲಾಯಿತು, ಅದರಿಂದಾಗಿ

2000–01ರಿಂದ 2020–21ರ ಅವಧಿಗೆ ಸಂಬಂಧಿಸಿದಂತೆ ₹ 4,265.80 ಕೋಟಿ ಮೊತ್ತದಷ್ಟು ಸ್ವೀಕೃತಿಗಳಲ್ಲಿ ಕೊರತೆಯಿದ್ದಿತು. ವಸೂಲಾತಿ ಮಾಡದೇ ಇದ್ದಂತಹ ವೆಚ್ಚಗಳು 2015–16ರಿಂದ 2019–20ರಲ್ಲಿ ಕಾರ್ಯಾಚರಣೆಗೊಳಿಸಲಾಗಿದ್ದ ಕಿಲೋಮೀಟರು ಒಂದಕ್ಕೆ ₹ 0.46 ರಿಂದ ₹ 13.52ವರೆಗೆ ಹೆಚ್ಚಳಗೊಂಡಿದ್ದವು. ಮುಂದುವರೆದು, ಮೋಟಾರು ವಾಹನ ತೆರಿಗೆ ಪಾವತಿಯನ್ನು ಮುಂದೂಡುವ ಆಯ್ಕೆಯು, ಅವುಗಳು ವಿನಾಯಿತಿ ಅವಧಿಯು ಮುಕ್ತಾಯಗೊಂಡ ಕೂಡಲೆಯೇ ಮೋಟಾರು ವಾಹನ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸಬೇಕಿದ್ದಿತಾದ್ದರಿಂದ, ನಿಗಮಗಳಿಗೆ ತಮ್ಮ ನಷ್ಟಗಳನ್ನು ಮರುತುಂಬಿಕೊಳ್ಳುವಲ್ಲಿ ಸಹಾಯಕವಾಗಲಿಲ್ಲ

2. **ಎಚ್‌ಡಿಬಿಆರ್‌ಟಿಎಸ್ ನಿಯಮಿತ:** ಸವಿವರ ಕಾರ್ಯಸಾಧ್ಯತೆ ವರದಿಯಲ್ಲಿ ಚಿಂತಿಸಲಾಗಿದ್ದಂತಹ ಪ್ರಮಾಣಕ/ಸ್ಟಾಂಡರ್ಡ್ ಬಸ್ಸುಗಳಿಗೆ ಪ್ರತಿಯಾಗಿ ವಾಸ್ತವಿಕ ಕಾರ್ಯಾಚರಣೆಗಳನ್ನು ತುಲನಾತ್ಮಕವಾಗಿ ಸ್ವಲ್ಪಮಟ್ಟಿಗೆ ಕಡಿಮೆ ಪ್ರಮಾಣದ ಇಂಧನ ದಕ್ಷತೆ ಹೊಂದಿದ್ದಂತಹ ಪ್ರಮಾಣಕ/ಸ್ಟಾಂಡರ್ಡ್ ಗುಣಮಟ್ಟದ ಎಸಿ ಬಸ್ಸುಗಳ (ಓಲ್ವೋ) ಮೂಲಕ ಮಾಡಲಾಗಿದ್ದಿತು. 2019–20 ಹಾಗೂ 2020–21ರಲ್ಲಿ ಎಸಿ ಬಸ್ಸುಗಳು ಸಾಧಿಸಿದ್ದ ಇಂಧನ ದಕ್ಷತೆಯು ಪ್ರಮಾಣಕ/ಸ್ಟಾಂಡರ್ಡ್ ಬಸ್ಸುಗಳಿಗೆ ಚಿಂತಿಸಲಾಗಿದ್ದ ಲೀಟರು ಒಂದಕ್ಕೆ 3.50 ಕಿಮೀ ಪ್ರತಿಯಾಗಿ ಲೀಟರು ಒಂದಕ್ಕೆ ಅನುಕ್ರಮವಾಗಿ 2.49 ಕಿಮೀಗಳು ಹಾಗೂ 2.57 ಕಿಮೀಗಳಾಗಿತ್ತು. ಇದು 2019–21ರಲ್ಲಿ ಕಾರ್ಯಾಚರಣೆ ದಕ್ಷತೆಯ ಮೇಲೆ ಪರಿಣಾಮ ಬೀರಿತು ಹಾಗೂ ₹ 10.01 ಕೋಟಿ ಮೊತ್ತದಷ್ಟು ಹೆಚ್ಚುವರಿ ಕಾರ್ಯಾಚರಣೆ ವೆಚ್ಚಗಳಿಗೆ ದಾರಿ ಮಾಡಿಕೊಟ್ಟಿತು. ಮುಂದುವರೆದು, ಎಸಿ ಬಸ್ಸುಗಳ ಕಾರ್ಯಾಚರಣೆಗಾಗಿ ಎಸಿಯೇತರ ಬಸ್ಸುಗಳ ದರಗಳನ್ನು ಅಳವಡಿಸಿಕೊಳ್ಳಲಾಗಿದ್ದಿತು. ಅಲ್ಲದೆಯೇ, ಉನ್ನತ ಮಟ್ಟದ ಅಧಿಕಾರ ಹೊಂದಿದ್ದ ಸಮಿತಿಯು ಮಾಡಿದ್ದ ಶಿಫಾರಸುಗಳಾದ ದರಗಳ ಪರಿಷ್ಕರಣೆ, ಮೋಟಾರು ವಾಹನ ತೆರಿಗೆ ಮನ್ನಾ ಮಾಡುವುದು, ಸಾರ್ವಜನಿಕ ಸಾರಿಗೆ ಇಂಧನ ಸೆಸ್ ವಿಧಿಸುವಿಕೆ, ಇತ್ಯಾದಿಗಳನ್ನು ಕಾರ್ಯಗತಗೊಳಿಸಿರಲಿಲ್ಲ.

3. **ವಿದ್ಯುತ್ ಸರಬರಾಜು ಕಂಪನಿಗಳು (ಗುವಿಸಕಂ ಮತ್ತು ಹುವಿಸಕಂ):** ಮಾರ್ಚ್ 2021ರ ಅಂತ್ಯದಲ್ಲಿದ್ದಂತೆ, 2007–08ರಿಂದ 2020–21ರ ಅವಧಿಗೆ ಸಂಬಂಧಿಸಿದ್ದ ₹ 6,879.99 ಕೋಟಿ ಮೊತ್ತದಷ್ಟು ವಿದ್ಯುತ್ ದರಪಟ್ಟಿ ಸಹಾಯಧನ ಹಾಗೂ ಇತರೆ ಕೋರಿಕೆಗಳ ಕಡೆಗೆ ಸರ್ಕಾರಕ್ಕೆ ಮಾಡಲಾಗಿದ್ದ ಪಾವತಿಗಾಗಿನ ಕೋರಿಕೆಗಳು ಬಾಕಿ ಉಳಿದಿದ್ದವು. ಬ್ಯಾಂಕುಗಳೂ ಹಾಗೂ ಹಣಕಾಸು ಸಂಸ್ಥೆಗಳಿಂದ ಪಡೆಯಲಾಗಿದ್ದ ಸಾಲಗಳ ಮೇಲೆ ಬಡ್ಡಿ ಪಾವತಿಗಳು ಆರು ವರ್ಷಗಳ ಅವಧಿಯಲ್ಲಿ (2015–16ರಿಂದ 2020–21) ಹುವಿಸಕಂಯಲ್ಲಿ ಶೇಕಡಾ 130ರಷ್ಟು ಹಾಗೂ ಗುವಿಸಕಂಯಲ್ಲಿ ಶೇಕಾಡಾ 176ರಷ್ಟು ಹೆಚ್ಚಳಗೊಂಡಿದ್ದವು. ಗ್ರಾಹಕರುಗಳಿಗೆ ಬಿಲ್ಲುಗಳನ್ನು ನೀಡುವಲ್ಲಿ ಹಾಗೂ ಅವರಿಂದ ವಸೂಲಾತಿ ಮಾಡುವಲ್ಲಿ ತ್ವರಿತ ಕ್ರಮವನ್ನು ತೆಗೆದುಕೊಂಡಿರಲಿಲ್ಲ ಎಂಬುದನ್ನು ಕವಿನಿಆವು ಗಮನಿಸಿದ್ದಿತು ಹಾಗೂ ವಿದ್ಯುತ್ ಖರೀದಿ ಬಿಲ್ಲುಗಳ ಮೇಲೆ ಭರಿಸಿದ್ದ ₹ 2,616.63 ಕೋಟಿ ಮೊತ್ತದಷ್ಟು ವಿಳಂಬ ಪಾವತಿ ಸರ್‌ಚಾರ್ಜ್ ಮೊತ್ತವನ್ನು ತಿರಸ್ಕರಿಸಿತು.

4. **ಕೆಪಿಸಿ ಜಿಪಿಸಿಎಲ್:** ಬಿಡದಿಯಲ್ಲಿ ಸಂಯೋಜಿತ ಆವರ್ತನ ವಿದ್ಯುತ್ ಸ್ಥಾವರ ಯೋಜನೆಯನ್ನು ಮುಂದಕ್ಕೆ ಹಾಕಲಾಗಿದ್ದಿತಾದಲ್ಲಿ, ಯಲಹಂಕದಲ್ಲಿನ ಯೋಜನೆಯನ್ನು ಗಮನಾರ್ಹವಾಗಿ ವಿಳಂಬಗೊಳಿಸಲಾಗಿದ್ದಿತು ಹಾಗೂ ಕಾರ್ಯೋದ್ಯುಕ್ತಗೊಳಿಸಲು ನಿಗದಿತಗೊಂಡಿದ್ದ ದಿನಾಂಕ ಮೇ 2018ಕ್ಕೆ ಪ್ರತಿಯಾಗಿ ಅದರ ಕಾರ್ಯಾಚರಣೆಗಳನ್ನು ಇನ್ನೂ ಕಾರ್ಯೋದ್ಯುಕ್ತಗೊಳಿಸಿರಲಿಲ್ಲ (ಜನವರಿ 2022). ಕಂಪನಿಯು ಯೋಜನೆಯ ಮೇಲೆ ₹ 2,150.70 ಕೋಟಿ ಮೊತ್ತದಷ್ಟು ಗಮನಾರ್ಹ ವೆಚ್ಚವನ್ನು ಭರಿಸಿದ್ದಿತು. ಮುಂದುವರೆದು, ಬಿಡದಿಯಲ್ಲಿನ ತ್ಯಾಜ್ಯದಿಂದ ಇಂಧನ ಯೋಜನೆಗೆ ಸಂಬಂಧಿಸಿದಂತೆ ಕವಿನಿಆವು ಪ್ರಸ್ತಾಪಿಸಿರುವ ಸಾಮಾನ್ಯ ದರಪಟ್ಟಿಯನ್ನು ಪರಿಗಣಿಸಿದಂತೆ ಯೂನಿಟ್ಟು ಒಂದಕ್ಕೆ ₹ 1.38 ರಷ್ಟು ಕಡಿಮೆ ಪ್ರಮಾಣದಲ್ಲಿ ವಸೂಲಾತಿಯಾಗುವುದು.

5. **ಕೆಎಸ್‌ಸಿಡಿಸಿಎಲ್ ಮತ್ತು ಮೈಷುಗರ್:** ಕೆಎಸ್‌ಸಿಡಿಸಿಎಲ್‌ನಲ್ಲಿ ಮಾರಾಟ ವಹಿವಾಟು ಇಳಿಕೆಗೊಡಿರುವುದಕ್ಕೆ ಪ್ರಮುಖವಾಗಿ ತಯಾರಿಕಾ ಘಟಕಗಳನ್ನು ತಾಂತ್ರಿಕವಾಗಿ

ಮೇಲ್ದರ್ಜೆಗೇರಿಸುವುದರಲ್ಲಿ ಕೊರತೆ, ಸರ್ಕಾರಿ ಸಂಸ್ಥೆಗಳ ಆದೇಶಗಳ ಮೇಲೆ ಅತಿಯಾದ ಅವಲಂಬನೆ ಮತ್ತು ದೇಶೀಯ ಹಾಗೂ ಅಂತರ ರಾಷ್ಟ್ರೀಯ ಮಾರುಕಟ್ಟೆಗಳನ್ನು ಕಂಡುಕೊಳ್ಳದೆಯಿರುವುದು ಕಾರಣವಾಗಿತ್ತು.

ಮೈಷುಗರ್‌ಗೆ ಸಂಬಂಧಿಸಿದಂತೆ ಕಂಪನಿಯನ್ನು 2005ರಲ್ಲಿಯೇ ರೋಗಗ್ರಸ್ತ ಎಂಬುದಾಗಿ ಘೋಷಿಸಿದ್ದ ಹೊರತಾಗಿಯೂ, ಯಾವುದೇ ರಚನಾತ್ಮಕ ಕ್ರಮಗಳನ್ನು ತೆಗೆದುಕೊಂಡಿರಲಿಲ್ಲ. ಕಂಪನಿಯು ಸಲ್ಲಿಸಿದ್ದ ಕರಡು ಪುನರ್ವಸತಿ ಯೋಜನೆಯನ್ನು ಕಾರ್ಯಗತಗೊಳಿಸಿರಲಿಲ್ಲ. ಕಂಪನಿಯನ್ನು ರೋಗಗ್ರಸ್ತ ಎಂಬುದಾಗಿ ಘೋಷಿಸಿದನಂತರವೂ ಕರ್ನಾಟಕ ಸರ್ಕಾರವು ₹ 526.51 ಕೋಟಿ ಮೊತ್ತದಷ್ಟು ಹಣಕಾಸನ್ನು ಹೂಡಿಕೆ ಮಾಡಿದ್ದಿತು (2006–07ರಿಂದ 2020–21). ಕಂಪನಿಯನ್ನು ಖಾಸಗಿ ಕಾರ್ಯನಿರ್ವಹಣಾಕಾರರುಗಳಿಗೆ ಗುತ್ತಿಗೆಗೆ ನೀಡುವ ನವೆಂಬರ್ 2020ರ ನಿರ್ಣಯವು ಫಲಪ್ರದವಾಗಲಿಲ್ಲ. ಒಂದು ಬಾಹ್ಯ ಸಂಸ್ಥೆಯು ಮಾಡಿದ ಮೌಲ್ಯಮಾಪನ ಅಧ್ಯಯನವು ಸಕ್ಕರೆಯ ಸರಾಸರಿ ಮಾರಾಟ ದರಗಳು ಸ್ಥಿರವಾಗಿರುವುದರೊಂದಿಗೆ ಕಬ್ಬು ಖರೀದಿ ದರಗಳು, ಪರಿವರ್ತನಾ ದರಗಳು ಹೆಚ್ಚಳಗೊಂಡಿರುವುದು ಹಾಗೂ ಹಳೆಯ ಯಂತ್ರಗಳ ಕಾರ್ಯಾಚರಣೆಗಳಲ್ಲಿ ದಕ್ಷತೆ ಇಲ್ಲದಿರುವುದು, ಇತರೆ ಉತ್ಪನ್ನ ಮಾರ್ಗಗಳ (ಡಿಸ್ಟಿಲರಿ/ಸಹ–ಉತ್ಪನ್ನ ಸ್ಥಾವರ) ಸೀಮಿತ ಕಾರ್ಯಾಚರಣೆ/ಕಾರ್ಯಾಚರಣೆಗೊಂಡಿರದಿದ್ದುದು, ಇತ್ಯಾದಿಗಳು ನಷ್ಟಗಳಿಗೆ ಕಾರಣವಾಗಿರುವುದು ಎಂಬುದಾಗಿ ತಿಳಿಸಿದ್ದಿತು.

***ಶಿಫಾರಸುಗಳು:***

1. **ಸರ್ಕಾರವು ಅನ್ವಯಗೊಳ್ಳುವಂತಹ ಪ್ರಮಾಣಕಗಳು, ನಿಯಮಗಳು ಮತ್ತು ನಿಯಂತ್ರಣಗಳನ್ನು ಪರಿಗಣಿಸಿದಂತೆ ವಿವಿಧ ಪ್ರವರ್ಗಗಳ ನಾಗರೀಕರುಗಳಿಗೆ ನೀಡಲಾಗಿರುವ ರಿಯಾಯಿತಿಯ ಕಡೆಗೆ ಸಾರಿಗೆ ನಿಗಮಗಳಿಗೆ ಹಾಗೂ ವಿಸಕಂಗಳಿಗೆ ಅರ್ಹ ಸಹಾಯಧನಗಳನ್ನು ಬಿಡುಗಡೆಗೊಳಿಸಬೇಕು. ವಿಸಕಂಗಳು ಮುಂದುವರೆದು, ವಿದ್ಯುತ್ ಬಿಲ್ಲುಗಳ ಸಂಗ್ರಹಣೆಯ ದಕ್ಷತೆಯನ್ನು ಉತ್ತಮಗೊಳಿಸುವ ಸಲುವಾಗಿ ಗ್ರಾಹಕರಿಗೆ ಸ್ಮಾರ್ಟ್ ಮೀಟರುಗಳನ್ನು ಅಳವಡಿಸುವ ಸಾಧ್ಯತೆಯನ್ನು ಕಂಡುಕೊಳ್ಳಬೇಕು**
2. **ಯೋಜನೆಯು ಊರ್ಜಿತಗೊಳ್ಳಬಲ್ಲಂತಹ ಕಾರ್ಯಾಚರಣೆಗಳನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಉನ್ನತ ಅಧಿಕಾರ ಹೊಂದಿರುವ ಸಮಿತಿಯು ಮಾಡಿರುವ ಶಿಫಾರಸುಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಎಚ್‌ಡಿಬಿಆರ್‌ಟಿಎಸ್ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.**
3. **ಯಲಹಂಕದಲ್ಲಿ 350 ಮೆವ್ಯಾ ಸಿಸಿಪಿಪಿ ಯೋಜನೆಯನ್ನು ಕಾರ್ಯೋದ್ಯುಕ್ತಗೊಳಿಸುವ ಹಾಗೂ ಕಾರ್ಯಾಚರಣೆಗೊಳಿಸುವುದನ್ನು ಕವಿನಿ ಜೆಪಿಸಿಲ್ ತ್ವರಿತಗೊಳಿಸಬೇಕು ಹಾಗೂ ಅಲ್ಲದೆಯೇ ಕವಿನಿಆದಿಂದ ಯೋಜನೆಗೆ ನಿರ್ದಿಷ್ಟ ದರಪಟ್ಟಿಗೆ ಅನುಮೋದನೆ ಪಡೆಯುವ ಮೂಲಕ ಬಿಡದಿಯಲ್ಲಿನ ತ್ಯಾಜ್ಯದಿಂದ ಇಂಧನ ಯೋಜನೆಯ ಕಾರ್ಯಾಚರಣೆಗಳು ಕಾರ್ಯಸಾಧ್ಯವಾಗುವುದನ್ನು ಖಚಿತಪಡಿಸಿಕೊಳ್ಳಬೇಕು.**
4. **ಕರ್ನಾಟಕ ರಾಜ್ಯ ತೆಂಗಿನ ನಾರು ಅಭಿವೃದ್ಧಿ ನಿಗಮ ನಿಯಮಿತವು ತಂತ್ರಜ್ಞಾನವನ್ನು ಮೇಲ್ದರ್ಜೆಗೇರಿಸುವುದರ ಮೂಲಕ ತನ್ನ ತಯಾರಿಕಾ ಯೂನಿಟ್ಟುಗಳನ್ನು ಆಧುನೀಕರಣಗೊಳಿಸಬೇಕು ಹಾಗೂ ನಾರು ಉತ್ಪನ್ನಗಳ ಮಾರಾಟಗಳಿಗಾಗಿ ದೇಶೀಯ ಮತ್ತು ಅಂತರ ರಾಷ್ಟ್ರೀಯ ಮಾರುಕಟ್ಟೆಗಳನ್ನು ಕಂಡುಕೊಳ್ಳುವ ಮೂಲಕ ಸರ್ಕಾರದ ಬೆಂಬಲದ ಮೇಲೆ ವಿಪರೀತವಾಗಿ ಅವಲಂಭಿಸುವುದನ್ನು ಕಡಿಮೆಗೊಳಿಸಬೇಕು.**
5. **ಮೌಲ್ಯಮಾಪನ ಅಧ್ಯಯನದಲ್ಲಿ ಸ್ಪಷ್ಟಪಡಿಸಿರುವಂತೆ ಮೈಸೂರು ಸಕ್ಕರೆ ಕಂಪನಿ ನಿಯಮಿತದ ನಷ್ಟಗಳಿಗೆ ಕಾರಣವಾಗಿರುವ ಅಂಶಗಳು ಅವೆಂದರೆ ಕಬ್ಬಿನ ಖರೀದಿ ಬೆಲೆಯಲ್ಲಿನ ಹಾಗೂ ಪರಿವರ್ತನ ವೆಚ್ಚದಲ್ಲಿ ಹೆಚ್ಚಳ, ಹಳೆಯ ಯಂತ್ರಗಳ ಕಾರ್ಯಾಚರಣೆಗಳಲ್ಲಿನ ಅದಕ್ಷತೆಗಳು, ಇತ್ಯಾದಿ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಸರ್ಕಾರವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು.**

**ಬೆಂಗಳೂರು ಮಹಾನಗರ ಸಾರಿಗೆ ನಿಗಮ**

### *2.3. ಅನುದಾನವನ್ನು ಉಪಯೋಗಿಸಿಕೊಳ್ಳದಿದ್ದ ಕಾರಣ ನಷ್ಟ ಅನುಭವಿಸಿದ್ದು.*

**ಟೆಂಡರುಗಳನ್ನು ಆಹ್ವಾನಿಸಿದ ನಂತರ ಬೆಂಮಸಾನಿವು ಬಸ್ಸುಗಳ ಮಾದರಿಯನ್ನು ಬದಲಾಯಿಸಿದ್ದರಿಂದ, ಬಾರತ ಸರ್ಕಾರದಿಂದ ಹಣಕಾಸಿನ ಸಹಾಯದಿಂದ ಬೆಂಮಸಾನಿವು ಪರಿಸರ–ಸ್ನೇಹಿ ಬಸ್ಸುಗಳನ್ನು ಖರೀದಿಸುವ ಕ್ರಮವು ಸಾಕಾರಗೊಳ್ಳಲಿಲ್ಲ, ಅದು ₹ 170.31 ಕೋಟಿ ಮೊತ್ತದಷ್ಟು ಕೇಂದ್ರ ಸರ್ಕಾರದ ಅನುದಾನವು ನಷ್ಟವಾಗುವಲ್ಲಿ ಪರಿಣಮಿಸಿದ್ದಲ್ಲದೆಯೇ ಗುರಿಯಾಗಿಸಿಕೊಳ್ಳಲಾಗಿದ್ದ ವಾಯುಮಾಲಿನ್ಯವನ್ನು ತಗ್ಗಿಸುವ ಉದ್ದೇಶದ ಪ್ರಯೋಜನವನ್ನು ನಗರಕ್ಕೆ ವಂಚಿಸಿದಂತಾಯಿತು.**

ಪರಿಸರ–ಸ್ನೇಹಿ ವಾಹನಗಳನ್ನು ಖರೀದಿಸುವ ಸಲುವಾಗಿ ಭಾರತ ಸರ್ಕಾರವು ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ ಹಣಕಾಸಿನ ಸಹಾಯವನ್ನು ನೀಡಿತು. ಬೆಂಗಳೂರು ಮೆಟ್ರೊಪಾಲಿಟನ್ ಸಾರಿಗೆ ನಿಗಮದ (ಬೆಂಮಸಾನಿ) ದೂರದೃಷ್ಟಿ ಹಾಗೂ ಅಭಿಯಾನವು ಪರಿಸರ–ಸ್ನೇಹಿ ಹಾಗೂ ಊರ್ಜಿತಗೊಳ್ಳಬಲ್ಲಂತಹ ಪರಿಪಾಠಗಳನ್ನು ಅಳವಡಿಸಿಕೊಳ್ಳುವುದು ಹಾಗೂ ಸುರಕ್ಷಿತ, ಉತ್ತಮ, ಆರಾಮದಾಯಕ, ಮಿತವ್ಯಯತೆಯಿಂದ ಕೂಡಿದ ಹಾಗೂ ಪರಿಸರ–ಸ್ನೇಹಿ ಸಾರಿಗೆ ಅನುಕೂಲತೆಗಳನ್ನು ಒದಗಿಸುವುದಾಗಿದ್ದಿತು. ಲೆಕ್ಕಪರಿಶೋಧನೆಯು ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಿತು ಹಾಗೂ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

#### *2.3.1* ವಿದ್ಯುತ್ ಬಸ್ಸುಗಳನ್ನು ಖರೀದಿಸದಿದ್ದುದು

ಬೆಂಮಸಾನಿವು ತನ್ನ ನಿರ್ದೇಶಕರುಗಳ ಮಂಡಳಿಯ 87ನೇ ಸಭೆಯಲ್ಲಿ (ಅಕ್ಟೋಬರ್ 2016) ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಯಿಂದ (ಡಿಎಚ್ಐ) ಹಣಕಾಸಿನ ನೆರವಿನೊಂದಿಗೆ ಇಂಗಾಲದ ಹೆಜ್ಜೆಗುರುತು ಹಾಗೂ ಹೊರಸೂಸುವಿಕೆಗಳನ್ನು ಕಡಿಮೆ ಮಾಡಲು ಹೈಬ್ರೀಡ್ ಮತ್ತು ವಿದ್ಯುತ್ ವಾಹನಗಳನ್ನು ತ್ವರಿತ ಅಳವಡಿಸಿಕೊಳ್ಳುವಿಕೆ ಹಾಗೂ ತಯಾರಿಕೆಯ (ಎಫ್ಎಎಂಇ– I) ಹಂತ Iರ ಅಡಿಯಲ್ಲಿ 150 ವಿದ್ಯುತ್ ಬಸ್ಸುಗಳ ಖರೀದಿಗೆ ಅನುಮೋದನೆ ನೀಡಿತು. ಬೆಂಮಸಾನಿವು ವಿದ್ಯುತ್ ವಾಹನಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ತನ್ನ ಅಭಿಪ್ರಾಯಗಳನ್ನು ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಗೆ (ಡಿಎಚ್ಐ) ತಿಳಿಸುವ ವೇಳೆಯಲ್ಲಿ (ನವೆಂಬರ್ 2016) ಒಟ್ಟಾರೆಯಾಗಿ ಒಂದು ಸಲ ಪಾವತಿ ಮಾಡಿ ಖರೀದಿಸುವುದಕ್ಕಿಂತ ಒಂದು ದೀರ್ಘಾವಧಿ ಗುತ್ತಿಗೆ ಆಧಾರವು ಲಾಭದಾಯಕವಾಗಿರುತ್ತದೆ ಎಂಬುದಾಗಿ ಸಲಹೆ ನೀಡಿತು. ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಯು (ಡಿಎಚ್ಐ) 80 ವಿದ್ಯುತ್ ಬಸ್ಸುಗಳ ಖರೀದಿಗಾಗಿ ₹ 82.23 ಕೋಟಿ[74] ಮೊತ್ತದಷ್ಟು ಸಹಾಯಾನುಧಾನದ ಅನುಮೋದನೆಯನ್ನು ತಿಳಿಸಿತು (ಡಿಸೆಂಬರ್ 2017 ಮತ್ತು ಮಾರ್ಚ್ 2018). ಬೆಂಮಸಾನಿವು ನಿವ್ವಳ ಮೌಲ್ಯ ಗುತ್ತಿಗೆ[75] ಮಾದರಿಯಲ್ಲಿ (ಜಿಸಿಸಿ) 150 ವಿದ್ಯುತ್ ಬಸ್ಸುಗಳ ಸರಬರಾಜಿಗಾಗಿ ಟೆಂಡರುಗಳನ್ನು ಆಹ್ವಾನಿಸಿತು (ಡಿಸೆಂಬರ್ 2017) ಹಾಗೂ 80[76] ಬಸ್ಸುಗಳ ಕಾರ್ಯಾಚರಣೆಗೊಳಿಸುವ ಸಲುವಾಗಿ ಮೆ. ಒಲೆಕ್ಟ್ರಾ ಗ್ರೀನ್‌ಟೆಕ್ ಲಿಮಿಟೆಡ್[77], ಇವರಿಗೆ ಆಸಕ್ತಿ ಪತ್ರವನ್ನು ನೀಡಲಾಯಿತು (ಫೆಬ್ರವರಿ ಮತ್ತು ಮಾರ್ಚ್ 2018). ಅದೇ ವೇಳೆಯಲ್ಲಿ, ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಯು (ಡಿಎಚ್ಐ) ವಿದ್ಯುತ್ ಬಸ್ಸುಗಳ ವಿವಿಧ ಮಾಡೆಲ್ಲುಗಳಿಗೆ ದರಗಳನ್ನು ನಿರ್ದಿಷ್ಟವಾಗಿ ತಿಳಿಸಿತು ಹಾಗೂ ಮಾಡೆಲ್ಲುಗಳ ಜಂಟಿ ಮಾಲೀಕತ್ವಕ್ಕೆ ಒಪ್ಪಿಗೆಯನ್ನು ಕೋರಿತು (ಮೇ 2018). ಬೆಂಮಸಾನಿವು ಜಂಟಿ ಮಾಲೀಕತ್ವಕ್ಕೆ ತನ್ನ ಒಪ್ಪಿಗೆಯನ್ನು ತಿಳಿಸಿದ (ಜುಲೈ 2018) ನಂತರ, ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ

[74] ₹ 74.76 ಕೋಟಿ 80 ಬಸ್ಸುಗಳ ಖರೀದಿಯ ಕಡೆಗೆ ಹಾಗೂ ₹ 7.47 ಕೋಟಿ ಚಾರ್ಜಿಂಗ್ ಮೂಲಸೌಕರ್ಯಗಳ ವೆಚ್ಚಗಳ ಕಡೆಗೆ.

[75] ಈ ವ್ಯವಸ್ಥೆಯಲ್ಲಿ ಖಾಸಗಿಯವರು ನಗರ ಸಾರಿಗೆ ಕಾರ್ಯಾಚರಣೆಗಳನ್ನು ಹಾಗೂ ನಿರ್ವಹಣೆಯನ್ನು ನಡೆಸಿಕೊಂಡು ಹೋಗುವರು ಹಾಗೂ ಪಾವತಿಗಳನ್ನು ಪ್ರತಿ ಬಸ್ಸು ಓಡಿರುವ ಕಿಲೋಮೀಟರುಗಳು, ಬಸ್ಸು ಒಂದಕ್ಕೆ, ಗಂಟೆ ಒಂದರ ಸೇವೆ ಅಥವಾ ಯಾವುದಾದರೂ ಎರಡರ ಅಥವಾ ಎಲ್ಲದರ ಸಂಯೋಜನೆ ಆಧಾರದ ಮೇರೆಗೆ ಮಾಡಲಾಗುವುದು.

[76] 12 ಮೀಟರುಗಳ 60 ಸಂಖ್ಯೆಗಳಷ್ಟು ಎಸಿ ಬಸ್ಸುಗಳು ಹಾಗೂ 9 ಮೀಟರುಗಳ ಎಸಿಯೇತರ 20 ಸಂಖ್ಯೆಗಳ ಬಸ್ಸುಗಳು.

[77] ಈ ಮೊದಲು ಮೆ. ಗೋಲ್ಡ್‌ಸ್ಟೋನ್ ಇನ್‌ಫ್ರಾಟೆಕ್ ಲಿಮಿಟೆಡ್ ಎಂಬುದಾಗಿ ಕರೆಯಲ್ಪಡುತ್ತಿದ್ದುದು.

ಉದ್ದಿಮೆಗಳ ಇಲಾಖೆಯು (ಡಿಎಚ್ಐ) ವಿದ್ಯುತ್ ಬಸ್ಸುಗಳ ಖರೀದಿಯ ಕಡೆಗೆ ₹ 18.69 ಕೋಟಿ[78] ಮೊತ್ತದಷ್ಟು ಸಹಾಯಧನವನ್ನು ಬಿಡುಗಡೆಗೊಳಿಸಿತು (ಆಗಸ್ಟ್ 2018). ಅನುದಾನದ ಉಳಿದ ಮೊತ್ತದ ಬಿಡುಗಡೆಗೆ ಹಾಕಲಾಗಿದ್ದ ಷರತ್ತು ಎಂದರೆ ಅನುದಾನಗಳನ್ನು ಉಪಯೋಗಿಸಿಕೊಳ್ಳಲು ವಿಫಲಗೊಂಡಲ್ಲಿ ಅನುದಾನವನ್ನು ಶೇಕಡಾ 10ರಷ್ಟು ಬಡ್ಡಿಯೊಂದಿಗೆ ಮರುಪಾವತಿ ಮಾಡತಕ್ಕದ್ದು ಎಂಬುದಾಗಿದ್ದಿತು.

ಆದಾಗ್ಯೂ, ಬೆಂಮಸಾನಿವು ತದನಂತರದಲ್ಲಿ ನಡೆದ ಸಭೆಯಲ್ಲಿ (ಸೆಪ್ಟಂಬರ್ 2018) ಟೆಂಡರನ್ನು ರದ್ದುಗೊಳಿಸಲು ತೀರ್ಮಾನಿಸಿತು ಹಾಗೂ ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯು ಡಿಪೋ ಮೂಲಸೌಕರ್ಯಗಳನ್ನು ಸಂಬಂಧಿತ ಅಸ್ತಿತ್ವ/ಸಂಸ್ಥೆಯೊಂದಿಗೆ ಹಂಚಿಕೊಳ್ಳುವುದನ್ನು ಒಳಗೊಂಡಿರುತ್ತದೆ ಹಾಗೂ ಬೆಂಮಸಾನಿದ ಚಾಲಕರುಗಳಿಗೆ ಉದ್ಯೋಗದ ಅವಕಾಶಗಳಿಂದ ವಂಚಿಸುತ್ತದೆಯಾದ್ದರಿಂದ ಅದು ಅನುಕೂಲಕರವಾಗಿರುವುದಿಲ್ಲ ಎಂಬ ಕಾರಣದ ಮೇರೆಗೆ ವಿದ್ಯುತ್ ಬಸ್ಸುಗಳ ಒಟ್ಟಾರೆಯಾಗಿ ಒಂದು ಸಲದ ಪಾವತಿಯ ಮೂಲಕ ಖರೀದಿಸುವ ಆಯ್ಕೆಯನ್ನು ಮಾಡಿಕೊಂಡಿತು. ಬೆಂಮಸಾನಿವು ವಿದ್ಯುತ್ ಬಸ್ಸುಗಳನ್ನು ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯ ಮೂಲಕ ಅಥವಾ ಒಟ್ಟಾರೆಯಾಗಿ ಒಂದು ಸಲದ ಪಾವತಿಯ ಮೂಲಕ ಖರೀದಿಸುವ ಮಾದರಿಯ ಮೂಲಕ ಕಾರ್ಯಾಚರಣೆಗೊಳಿಸತಕ್ಕದ್ದೋ ಎಂಬುದರ ಬಗ್ಗೆ ಸರ್ಕಾರದಿಂದಲೂ ಸಹ ನಿರ್ದೇಶನಗಳನ್ನು ಕೋರಿತು (ಸೆಪ್ಟಂಬರ್ 2018). ತದನಂತರದಲ್ಲಿ, ಬೆಂಮಸಾನಿವು ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯಿಂದ ಒಟ್ಟಾರೆಯಾಗಿ ಒಂದು ಸಲದ ಪಾವತಿಯ ಮೂಲಕ ಖರೀದಿಸುವ ಮಾದರಿಗೆ ಬದಲಾಯಿಸುವಂತೆ ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಯನ್ನು (ಡಿಎಚ್ಐ) ಕೋರಿತು (ಫೆಬ್ರವರಿ 2019) ಹಾಗೂ ಖರೀದಿ ಪ್ರಕ್ರಿಯೆಗಳನ್ನು ಅಂತಿಮರೂಪಕ್ಕೆ ತರುವ ಸಲುವಾಗಿ ಆರು ತಿಂಗಳುಗಳ ಕಾಲಾವಧಿಯ ವಿಸ್ತರಣೆಯನ್ನೂ ಸಹ ಕೋರಿತು. ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಇಲಾಖೆಯು (ಡಿಎಚ್ಐ) ಕೋರಿಕೆಯನ್ನು ತಿರಸ್ಕರಿಸುವ ವೇಳೆಯಲ್ಲಿಯೇ (ಫೆಬ್ರವರಿ 2019) ಅನುದಾನವನ್ನು ಫೆಬ್ರವರಿ 2019ರ ಅಂತ್ಯದೊಳಗೆ ಉಪಯೋಗಿಸಿಕೊಳ್ಳುವಂತೆ ಒತ್ತಾಯಿಸಿತು. ತದನಂತರದಲ್ಲಿ ಬೆಂಮಸಾನಿವು ತಾನು ಸ್ವೀಕರಿಸಿದ್ದ ₹ 18.69 ಕೋಟಿ ಅನುದಾನವನ್ನು ₹ 81.47 ಲಕ್ಷ ಬಡ್ಡಿಯೊಂದಿಗೆ ಮರುಪಾವತಿಸಿತು.

ಒಟ್ಟಾರೆಯಾಗಿ ಒಂದು ಸಲದ ಪಾವತಿಯ ಮೂಲಕ ಖರೀದಿಸುವ ಮಾದರಿಗಾಗಿ ಒತ್ತಾಯಿಸಲು ಬೆಂಮಸಾನಿವು ತೆಗೆದುಕೊಂಡ ನಿರ್ಣಯವು ಈ ಕೆಳಗಿನ ಕಾರಣಗಳಿಂದಾಗಿ ಸಮರ್ಥನೀಯವಾಗಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಸೆಪ್ಟಂಬರ್ 2021).

1. ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯನ್ನು ಅಳವಡಿಸಿಕೊಳ್ಳುವ ತೀರ್ಮಾನವನ್ನು ಒಂದು ಸಹಭಾಗಿಗಳ ಸಲಹಾ ಕಾರ್ಯಾಗಾರದ (ಡಿಸೆಂಬರ್ 2017) ಆಧಾರದ ಮೇರೆಗೆ ತೆಗೆದುಕೊಳ್ಳಲಾಗಿದ್ದಿತು ಹಾಗೂ ಅದರಂತೆಯೇ ಟೆಂಡರಿನಲ್ಲಿ ನಿರ್ದಿಷ್ಟಪಡಿಸಲಾಗಿದ್ದಂತೆ ದಿನ ಒಂದಕ್ಕೆ 200 ಕಿಮೀಗಳ ಕಾರ್ಯಾಚರಣೆಗಳ ಭರವಸೆಯೊಂದಿಗೆ ಟೆಂಡರುಗಳನ್ನು ಆಹ್ವಾನಿಸಲಾಗಿದ್ದಿತು;

2. ಸಹಾಯಧನದ ಮೊದಲ ಕಂತು ಅಂದರೆ ₹ 18.69 ಕೋಟಿ ಮೊತ್ತದ ಬಿಡುಗಡೆಗಾಗಿ ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ವಲಯ ಉದ್ದಿಮೆಗಳ ಇಲಾಖೆಯು ಮಾಡಿದ್ದ ಒತ್ತಾಯದಂತೆ ಪ್ರಮಾಣಾನುಗುಣವಾದಂತಹ ಮಾಲಿಕತ್ವವನ್ನು ಆಳವಡಿಸಿಕೊಳ್ಳಲು ಬೆಂಮಸಾನಿವು ತನ್ನ ಒಪ್ಪಿಗೆ ತಿಳಿಸಿದ್ದಿತು. ಅನುದಾನವನ್ನು ಸ್ವೀಕರಿಸಿದನಂತರವೂ ಕೂಡ, ಬೆಂಮಸಾನಿವು ನಿವ್ವಳ ಮೌಲ್ಯ ಗುತ್ತಿಗೆ ಮಾದರಿ ಹಾಗೂ ಒಂದು ಸಲದ ಪಾವತಿಯ ಮೂಲಕ ಖರೀದಿಸುವ ಮಾದರಿಗಳ ನಡುವಿನ ಹಣಕಾಸು ಬಾಧ್ಯತೆಗಳ ಸವಿವರ ತುಲನೆಗಳನ್ನು ಮಾಡಿದ್ದಿತು (ಸೆಪ್ಟಂಬರ್ 2018). ಒಂದು ಸಲದ ಪಾವತಿಯ ಮೂಲಕ ಖರೀದಿಸುವ ಮಾದರಿ ಅಡಿಯಲ್ಲಿ ಕಿಮೀ ಒಂದಕ್ಕೆ ಕಾರ್ಯಾಚರಣೆಗಳ ಒಟ್ಟಾರೆ ವೆಚ್ಚವು

[78] ₹ 14.95 ಕೋಟಿ 80 ಬಸ್ಸುಗಳ ಖರೀದಿಯ ಕಡೆಗೆ ಹಾಗೂ ₹ 3.74 ಕೋಟಿ ಚಾರ್ಜಿಂಗ್ ಮೂಲಸೌಕರ್ಯಗಳ ವೆಚ್ಚಗಳ ಕಡೆಗೆ.

ನಿವ್ವಳ ಮೌಲ್ಯ ಗುತ್ತಿಗೆ ಮಾದರಿಗಿಂತ[79]. ಅಧಿಕವಾಗಿದ್ದಿತು. ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯು, ಈ ರೀತಿಯಾಗಿ, ಗುತ್ತಿಗೆ ಅವಧಿಯಾದ್ಯಂತ ಬಸ್ಸು ಒಂದಕ್ಕೆ ಸುಮಾರು ₹ 1.07 ಕೋಟಿ ಮೊತ್ತದಷ್ಟು ಉಳಿತಾಯವನ್ನು ನೀಡುತ್ತಿದ್ದಿತು;

3. ಬೆಂಮಸಾನಿದ ಕೋರಿಕೆಯ ಮೇರೆಗೆ ಭಾರತೀಯ ವಿಜ್ಞಾನ ಸಂಸ್ಥೆಯು ಮಾಡಿದ್ದಂತಹ ಮೌಲ್ಯಮಾಪನ ವರದಿಯ (ಜನವರಿ 2019) ಅನುಸಾರ, ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯು ಎಸಿ ಬಸ್ಸುಗಳಿಗೆ 193 ಕಿಮೀಗಳನ್ನೂ ಮೀರಿದ ಹಾಗೂ ಎಸಿಯೇತರ ಬಸ್ಸುಗಳಿಗೆ 167 ಕಿಮೀಗಳನ್ನು ಮೀರಿದ ಚಾಲನೆಗಳಿಗೆ ಕಾರ್ಯಾಚರಣೆಗಳ ಕಡಿಮೆ ಪ್ರಮಾಣದ ದರಗಳನ್ನು ನೀಡುತ್ತಿದ್ದಿತು;

4. ಬೆಂಮಸಾನಿವು ಮಾಡಿದ ನಿರ್ಧಾರಣೆಯ ಅನುಸಾರ, ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯ ಅಡಿಯಲ್ಲಿ ಸ್ವೀಕರಿಸಲಾಗಿದ್ದ ದರಗಳು ದೇಶದಲ್ಲಿಯೇ ಅತ್ಯಂತ ಕಡಿಮೆ ಪ್ರಮಾಣದ ದರಗಳಾಗಿದ್ದವು ಹಾಗೂ ಅಲ್ಲದೆಯೇ ತನ್ನ ಪ್ರಸ್ತುತ ಪ್ರಚಲಿತದಲ್ಲಿರುವ ಸಾಮಾನ್ಯ ಹಾಗೂ ಎಸಿ ಪ್ರೀಮಿಯಂ ಬಸ್ಸುಗಳ ಕಾರ್ಯಾಚರಣೆಗಳ ವೆಚ್ಚಗಳಿಗಿಂತಲೂ ಕಡಿಮೆಯಾಗಿದ್ದಿತು.

ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯನ್ನು ವಿವಿಧ ಅಧ್ಯಯನ ವರದಿಗಳು ಒಪ್ಪಿಕೊಂಡಿದ್ದವು ಮತ್ತು ಆದ್ದರಿಂದ ಅಳವಡಿಸಿಕೊಳ್ಳಬೇಕಾದ ಖರೀದಿ ಮಾದರಿಯ ಬಗ್ಗೆ ಬೆಂಮಸಾನಿವು ಸರ್ಕಾರದ ನಿರ್ದೇಶನಗಳನ್ನು ಕೋರಿದ್ದು ಯಾವುದೇ ಸಮರ್ಥನೆಯಿಂದ ಕೂಡಿರಲಿಲ್ಲ.

ಬೆಂಮಸಾನಿದ ಕಡೆಯಿಂದ ತಕ್ಕದಲ್ಲದ ಆದ್ಯತೆಯು ₹ 82.23 ಕೋಟಿ ಮೊತ್ತದಷ್ಟು ಅನುದಾನವನ್ನು ಕಳೆದುಕೊಳ್ಳುವಲ್ಲಿ ಹಾಗೂ ದೊಡ್ಡ ಪ್ರಮಾಣದಲ್ಲಿ ಬಸ್ಸುಗಳನ್ನು ಸೇರಿಸಿಕೊಳ್ಳುವ ಮೊದಲು ಪಡೆದುಕೊಳ್ಳಬಹುದಾಗಿದ್ದಂತಹ ಅಮೂಲ್ಯವಾದಂತಹ ಕಾರ್ಯಾಚರಣೆಯ ಮಾಹಿತಿಗಳಿಂದ ವಂಚಿತಗೊಂಡಿದ್ದಿತು.

ಇದನ್ನು ಗಮನಕ್ಕೆ ತಂದನಂತರ (ಡಿಸೆಂಬರ್ 2021), ಸರ್ಕಾರವು ಬೆಂಮಸಾನಿದ ವ್ಯವಸ್ಥಾಪಕ ನಿರ್ದೇಶಕರವರ ಉತ್ತರವನ್ನು ಅನುಮೋದಿಸಿದ್ದಿತು (ಏಪ್ರಿಲ್ 2022). ಅವರ ಉತ್ತರವು ಸರ್ಕಾರವು ಹಣಕಾಸಿನ ಸಹಾಯ ಮಾಡಿದ್ದಲ್ಲಿ ಅಥವಾ ಬಡ್ಡಿ ಪಾವತಿ ಬಾಧ್ಯತೆಯನ್ನು ವಹಿಸಿಕೊಂಡಿದ್ದಲ್ಲಿ ಹಾಗೂ ವಿದ್ಯುತ್ ವಾಹನ ಕಾರ್ಯನೀತಿಯಲ್ಲಿ ಚಿಂತಿಸಿದ್ದಂತೆ ಮೋಟಾರು ವಾಹನಗಳ ಮೇಲಿನ ತೆರಿಗೆ ವಿನಾಯಿತಿ ನೀಡಿದ್ದಲ್ಲಿ, ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯ ಅಡಿಯಲ್ಲಿನ ಕಿಮೀ ಒಂದರ ಕಾರ್ಯಾಚರಣೆಯ ದರಗಳಿಗಿಂತ ಒಂದು ಸಲದ ಪಾವತಿಯ ಮೂಲಕ ಖರೀದಿಸುವ ಮಾದರಿ ಅಡಿಯಲ್ಲಿ ಕಿಮೀ ಒಂದರ ದರಗಳು ಕಡಿಮೆ ದರದಲ್ಲಿ ಆಗುತ್ತದೆ, ಎಂಬುದಾಗಿ ತಿಳಿಸಿದ್ದಿತು (ಜನವರಿ 2022). ಬೆಂಮಸಾನಿವು ಮಾಡಿದ್ದಂತಹ ತುಲನಾತ್ಮಕ ವಿಶ್ಲೇಷಣೆ ಹಾಗೂ ಅಧ್ಯಯನಗಳು ನಿವ್ವಳ ಮೌಲ್ಯ ಗುತ್ತಿಗೆ ಮಾದರಿಯು ಹೆಚ್ಚಿನ ಪ್ರಯೋಜನಕಾರಿಯಾಗಿದ್ದಿತು ಎಂಬುದನ್ನು ತೋರಿಸಿದ್ದಿತಾದ್ದರಿಂದ, ಉತ್ತರವು ಒಪ್ಪುವಂತಿಲ್ಲ. ಅಲ್ಲದೆಯೇ, ಬೆಂಮಸಾನಿವು ಖರೀದಿ ಮಾದರಿಯಲ್ಲಿನ ಬದಲಾವಣೆಯನ್ನು ಕೋರುವ ಮೊದಲು ನಿವ್ವಳ ಮೌಲ್ಯ ಗುತ್ತಿಗೆ ಮಾದರಿಗಾಗಿ ಟೆಂಡರುಗಳನ್ನೂ ಸಹ ಅಂತಿಮರೂಪಕ್ಕೆ ತಂದಿದ್ದಿತು. ವೆಚ್ಚವನ್ನು ಕರ್ನಾಟಕ ಸರ್ಕಾರವು ಭರಿಸುವುದರಿಂದ ಕಾರ್ಯಾಚರಣೆಯಲ್ಲಿನ ಊಹಾತ್ಮಕ ಕಡಿಮೆಯಾಗಿರುವಿಕೆಯು ಪರಿಪೂರ್ಣವಾಗಿಲ್ಲ ಹಾಗೂ ಸತ್ಯತೆಯಿಂದ ಕೂಡಿರುವುದಿಲ್ಲ.

### *2.3.2. ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (ಸಿಎನ್‌ಜಿ) ಬಸ್ಸುಗಳನ್ನು ಖರೀದಿಸದಿದ್ದುದು.*

ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಅಭಿಯಾನ (ಜೆಎನ್‌ಎನ್‌ಯುಆರ್‌ಎಂ) ಅಡಿಯಲ್ಲಿ ಭಾರತ ಸರ್ಕಾರದ ನಗರಾಭಿವೃದ್ಧಿ ಮಂತ್ರಾಲಯವು ನೀಡಿರುವ (ಜುಲೈ 2013)

[79] ನಿವ್ವಳ ಮೌಲ್ಯ ಗುತ್ತಿಗೆ ಮಾದರಿಗೆ ಕಿಮೀ ಒಂದಕ್ಕೆ ₹ 60.76 ಕ್ಕೆ ಪ್ರತಿಯಾಗಿ ಒಂದು ಸಲದ ಪಾವತಿಯ ಮೂಲಕ ಖರೀದಿಸುವ ಮಾದರಿಗೆ ಕಿಮೀ ಒಂದಕ್ಕೆ ₹ 84.71 ಆಗುತ್ತದೆ.

ಮಾರ್ಗಸೂಚಿಗಳು[80] ಸಿಎನ್‌ಜಿ ಬಸ್ಸುಗಳ ಖರೀದಿಗಾಗಿ ಶೇಕಡಾ 35ರಷ್ಟು ಹಣಕಾಸಿನ ನೆರವಿಗೆ ಅನುವು ಮಾಡಿರುತ್ತವೆ, ಉಳಿದ ಮೊತ್ತವನ್ನು ಬೆಂಮಸಾನಿ (ಶೇಕಡ 50) ಹಾಗೂ ಕರ್ನಾಟಕ ಸರ್ಕಾರ (ಶೇಕಡಾ 15) ಭರಿಸತಕ್ಕದ್ದು. ಆಯವ್ಯಯ ಭಾಷಣದಲ್ಲಿ (2014) ಮುಖ್ಯ ಮಂತ್ರಿಯವರು ನಗರ ಸಾರಿಗೆ ವಾಹನಗಳಲ್ಲಿ ಹಂತಾನುಹಂತವಾಗಿ ಸಿಎನ್‌ಜಿ ಬಸ್ಸುಗಳನ್ನು ಪರಿಚಯಿಸಲಾಗುವುದು/ ಪ್ರಾರಂಭಿಸಲಾಗುವುದು ಎಂಬುದಾಗಿ ಪ್ರಕಟಿಸಿದ್ದರು.

ತದನಂತರದಲ್ಲಿ, ಬೆಂಮಸಾನಿವು ನಗರಾಭಿವೃದ್ಧಿ ಮಂತ್ರಾಲಯದಿಂದ ಅನುಮೋದನೆಯ ಮಾಹಿತಿಯನ್ನು ಪಡೆದುಕೊಂಡನಂತರ (ಸೆಪ್ಟಂಬರ್ 2014) ವಿಸ್ತರಿಸಲ್ಪಟ್ಟಿರುವ ಜೆಎನ್‌ಎನ್‌ಯುಆರ್‌ಎಂ ಯೋಜನೆ ಅಡಿಯಲ್ಲಿ ಅಂದಾಜು ₹ 176 ಕೋಟಿ ಮೊತ್ತದಷ್ಟು ಟೆಂಡರು ಮೌಲ್ಯದಲ್ಲಿ 400 ಮಿಮಿ ನೆಲದ ಎತ್ತರ (ಫ್ಲೋರ್ ಹೈಟ್) ಇರುವಂತಹ (ಅರೆ ತಗ್ಗಿನಲ್ಲಿರುವ ನೆಲ – ಎಸ್‌ಎಲ್‌ಎಫ್) 271 ಸಂಖ್ಯೆಗಳಷ್ಟು ಸಿಎನ್‌ಜಿ ಎಸಿಯೇತರ ಬಸ್ಸುಗಳ ಖರೀದಿಗಾಗಿ ಟೆಂಡರುಗಳನ್ನು ಆಹ್ವಾನಿಸಿತು (ಸೆಪ್ಟಂಬರ್ 2014) ಹಾಗೂ ಕೇವಲ ಒಂದು ಕಂಪನಿಯು ಟೆಂಡರಿನಲ್ಲಿ ಭಾಗವಹಿಸಿದ್ದಿತು ಹಾಗೂ ತನ್ನ ದರಗಳನ್ನು ಘೋಷಿಸಿದ್ದಿತು (ಮೆ. ಟಾಟಾ ಮೋಟಾರ್ಸ್). ಬೆಂಗಳೂರಿಗೆ ಸಿಎನ್‌ಜಿ ಅನಿಲ ಸರಬರಾಜಿಗಾಗಿ ಅಗತ್ಯ ಮೂಲಸೌಕರ್ಯಗಳನ್ನು ನಿರ್ಮಿಸಿದ್ದಂತಹ ಭಾರತ ಸರ್ಕಾರದ ಒಂದು ಉದ್ದಿಮೆಯಾಗಿರುವ ಮೆ. ಜಿಎಐಎಲ್ ಗ್ಯಾಸ್, ಇವರು ಸಿಎನ್‌ಜಿ ಸರಬರಾಜಿಗಾಗಿ ಮೂಲಸೌಕರ್ಯ ನಿರ್ಮಾಣಕ್ಕಾಗಿ ಬೆಂಮಸಾನಿದಿಂದ ಭೂಮಿಯನ್ನು ಒದಗಿಸುವಂತೆ ಕೋರಿದರು (ಸೆಪ್ಟಂಬರ್ 2010). ಬೆಂಮಸಾನಿದ ನಿರ್ದೇಶಕರುಗಳ ಮಂಡಳಿಯ 81ನೇ ಸಭೆಯು (ಮೇ 2015) ಬೆಂಮಸಾನಿದ ಬಸ್ಸುಗಳಿಗೆ ಪ್ರತ್ಯೇಕವಾಗಿ ಸಿಎನ್‌ಜಿ ಸರಬರಾಜಿಗಾಗಿ ಜಿಎಐಎಲ್ ಗ್ಯಾಸ್, ಇವರಿಗೆ ನಾಲ್ಕು[81] ಡಿಪೋಗಳಲ್ಲಿ ಭೂಮಿಯನ್ನು ಉಚಿತವಾಗಿ ಒದಗಿಸುವ ನಿರ್ಣಯವನ್ನು ಕೈಗೊಂಡಿತು. ಬಸ್ಸುಗಳ ನೆಲದ ಎತ್ತರದಲ್ಲಿ ಬದಲಾವಣೆಗಾಗಿ[82] ಹಾಗೂ 271 ಬಸ್ಸುಗಳ ಖರೀದಿಗಾಗಿ ಆಹ್ವಾನಿಸಲಾಗಿರುವ ಟೆಂಡರನ್ನು ರದ್ದುಗೊಳಿಸುವ ಸಲುವಾಗಿ ನಗರಾಭಿವೃದ್ಧಿ ಮಂತ್ರಾಲಯದ ಅನುಮೋದನೆಯನ್ನು ಕೋರುವ ಸಲುವಾಗಿಯೂ ಹಾಗೂ ನಗರಾಭಿವೃದ್ಧಿ ಮಂತ್ರಾಲಯದಿಂದ ಅನುಕೂಲಕರ ಉತ್ತರವು ಬರದಿದ್ದಲ್ಲಿ, ಪ್ರಾಯೋಗಿಕ/ಪರೀಕ್ಷಾರ್ಥ ಆಧಾರದ ಮೇರೆಗೆ ಕನಿಷ್ಠ 10 ಸಿಎನ್‌ಜಿ ಬಸ್ಸುಗಳ ಕಾರ್ಯಾಚರಣೆಗೊಳಿಸುವ ಸಲುವಾಗಿಯೂ ಸಭೆಯು ನಿರ್ಣಯ ಕೈಗೊಂಡಿತು (ನಿರ್ಣಯ ಸಂಖ್ಯೆ 1542). ಕೋರಿಕೆಯನ್ನು ನಗರಾಭಿವೃದ್ಧಿ ಮಂತ್ರಾಲಯವು ಒಪ್ಪಿಕೊಳ್ಳಲಿಲ್ಲವಾದ್ದರಿಂದ (ಸೆಪ್ಟಂಬರ್ 2015) ಟೆಂಡರನ್ನು ರದ್ದುಗೊಳಿಸಲಾಯಿತು (ಮಾರ್ಚ್ 2016). ಇದೇ ವೇಳೆಯಲ್ಲಿ, ಜಿಎಐಎಲ್ ಗ್ಯಾಸ್ ₹ 17.34 ಕೋಟಿ ವೆಚ್ಚದಲ್ಲಿ ಅನುಮೋದಿತ ಸ್ಥಳಗಳಲ್ಲಿ ಸಿಎನ್‌ಜಿ ಅನಿಲ ತುಂಬುವ ಸ್ಟೇಷನ್ನುಗಳನ್ನು ಕಾರ್ಯೋದ್ಯುಕ್ತಗೊಳಿಸಿತು (ಸೆಪ್ಟಂಬರ್ 2016 ಹಾಗೂ ಡಿಸೆಂಬರ್ 2017ರ ನಡುವೆ) ತನ್ನ ಬಳಕೆಗಾಗಿಯೇ ಪ್ರತ್ಯೇಕವಾಗಿ ನಿರ್ಮಿಸಲಾಗಿದ್ದರೂ ಸಹ ಬೆಂಮಸಾನಿವು ಈ ಮೂಲಸೌಕರ್ಯವನ್ನು ಉಪಯೋಗಿಸಿಕೊಳ್ಳಲಿಲ್ಲ.

ಲೆಕ್ಕಪರಿಶೋಧನೆಯ ಪರಿಶೀಲನೆಯು (ಜುಲೈ 2021) ಈ ಕೆಳಗಿನ ಲೋಪದೋಷಗಳನ್ನು ತೋರಿಸಿಕೊಟ್ಟಿತು:

1. ಬೆಂಮಸಾನಿವು 400 ಮಿಮಿ ನೆಲ ಎತ್ತರ ಇರುವ ಬಸ್ಸುಗಳ ಖರೀದಿಗಾಗಿ ಟೆಂಡರುಗಳನ್ನು ನೀಡಿದ್ದಿತು ಹಾಗೂ ತದನಂತರದಲ್ಲಿ ಅದನ್ನು 900 ಮಿಮೀ/1150 ಮಿಮೀ ನೆಲದ ಎತ್ತರಕ್ಕೆ ಬದಲಾವಣೆಗೊಳಿಸಿತು. ಬೆಂಮಸಾನಿವು 400 ಮಿಮೀ ನೆಲದ ಎತ್ತರವಿರುವ ಫಾಸ್ಸಿಲ್ ಇಂಧನ ಆಧಾರಿತ ಬಸ್ಸುಗಳ ಖರೀದಿಯನ್ನು ಕೂಡ ಯೋಜಿಸಿದ್ದಿತು ಹಾಗೂ ₹ 709.76 ಕೋಟಿ ವೆಚ್ಚದಲ್ಲಿ 2156 ಸಂಖ್ಯೆಗಳಷ್ಟು ಡೀಸೆಲ್ ಬಸ್ಸುಗಳನ್ನು 2015–16 ಹಾಗೂ 2019–20ರ ನಡುವೆ ಖರೀದಿಸಿದ್ದಿತು, ಈ ಬಸ್ಸುಗಳು ಎತ್ತರದಲ್ಲಿರುವ ನೆಲದ ಬಸ್ಸುಗಳನ್ನೂ ಒಳಗೊಂಡಿದ್ದಿತು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಆದ್ದರಿಂದ ಸಿಎನ್‌ಜಿ

[80] ಜವಾಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಅಭಿಯಾನದ (ಜೆಎನ್‌ಎನ್‌ಯುಆರ್‌ಎಂ) ಅಡಿಯಲ್ಲಿ ಬಸ್ಸುಗಳ ಖರೀದಿಗಾಗಿ ಹಾಗೂ ಸಂಬಂಧಿತ ಮೂಲಸೌಕರ್ಯಗಳಿಗಾಗಿ ಹಣಕಾಸು ಒದಗಿಸುವ ಸಲುವಾಗಿ ಮಾರ್ಗಸೂಚಿಗಳು.

[81] ಪೀಣ್ಯಾದಲ್ಲಿ 2 ಡಿಪೋಗಳು ಹಾಗೂ ಹೆಣ್ಣೂರು, ಸುಮನಹಳ್ಳಿಯಲ್ಲಿ ಪ್ರತಿಯೊಂದರಲ್ಲೂ 1.

[82] 400 ಮಿಮಿ ನೆಲದ ಎತ್ತರ (ಅರೆ ತಗ್ಗಿನಲ್ಲಿರುವ ನೆಲ)ದಿಂದ 900 ಮಿಮಿ/1150 ಮಿಮಿ ನೆಲದ ಎತ್ತರವಿರುವ ಬಸ್ಸುಗಳಿಗೆ.

ಬಸ್ಸುಗಳಿಗೆ ನೆಲದ ಎತ್ತರದಲ್ಲಿ ಮಾರ್ಪಾಡಿಗಾಗಿ ಕೋರಿಕೆಗೆ ಯಾವುದೇ ತಾಂತ್ರಿಕ ಸಮರ್ಥನೆಯಿರಲಿಲ್ಲ;

2. ಜಿಎಐಎಲ್ ಗ್ಯಾಸ್ ಸಿಎನ್‌ಜಿ ಬಸ್ಸುಗಳ ಖರೀದಿಗಾಗಿ ಕಪೆಕ್ಸ್, ಒಪೆಕ್ಸ್, ಇತ್ಯಾದಿ ಹಣಕಾಸು ಒದಗಿಸುವಿಕೆ ಮುಂತಾದ ಅನೇಕ ವಾಗ್ದಾನಗಳನ್ನು (ಆಫರ್ಸ್) ಪ್ರಸ್ತಾಪಿಸಿದ್ದಿತು. ಅಲ್ಲದೆಯೇ, ಬೆಂಮಸಾನಿ ಮತ್ತು ಕರಾರಸಾನಿದಿಂದ ಸಿಎನ್‌ಜಿ ಬಸ್ಸುಗಳ ಒಳಸೇರ್ಪಡೆಗೊಳಿಸಿಕೊಳ್ಳುವ/ ಖರೀದಿಸುವ ಸಲುವಾಗಿ ಒಂದು ಕಾರ್ಯನೀತಿ/ಯೋಜನೆಯನ್ನು ರೂಪಿಸಿಕೊಳ್ಳುವಂತೆ ಪೆಟ್ರೋಲಿಯಂ ಮತ್ತು ಪ್ರಾಕೃತಿಕ ಅನಿಲದ ಮಂತ್ರಿಯವರ ಕೋರಿಕೆಯ (ಜನವರಿ 2021) ಆಧಾರದ ಮೇರೆಗೆ ಕರ್ನಾಟಕದ ಮುಖ್ಯ ಮಂತ್ರಿಯವರು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಕಾಯದರ್ಶಿಯವರು, ಸಾರಿಗೆ ಇಲಾಖೆ, ಇವರಿಗೆ ನಿರ್ದೇಶನಗಳನ್ನು ನೀಡಿದ್ದರು (ಫೆಬ್ರವರಿ 2021). ಆದಾಗ್ಯೂ, ಬೆಂಮಸಾನಿವು ಸಿಎನ್‌ಜಿ ಬಸ್ಸುಗಳ ಖರೀದಿಗಾಗಿನ ಈ ಪ್ರಸ್ತಾವನೆಗಳನ್ನು ಇನ್ನೂ ಪರಿಗಣಿಸಬೇಕಿದೆ, ಇದರಿಂದಾಗಿ ಭರಿಸಲಾಗಿರುವ ₹ 17.34 ಕೋಟಿ ವೆಚ್ಚವು ನಾಲ್ಕು ವರ್ಷಗಳಿಂದಲೂ ನಿಷ್ಫಲ ವೆಚ್ಚವಾಗಿ ಉಳಿದಿರುವುದು. ಅಲ್ಲದೆಯೇ, ಪರಿಸರ–ಸ್ನೇಹಿ/ಹಸಿರು ಇಂಧನದ ಅನುಕೂಲತೆಗಳನ್ನು ಸಹ ಪಡೆದುಕೊಳ್ಳಲಾಗಲಿಲ್ಲ;

3. ಬೆಂಮಸಾನಿದ ಕೋರಿಕೆಯಂತೆ ಸಿಐಎಸ್‌ಟಿಯುಪಿ[83] ನಡೆಸಿದ ಅಧ್ಯಯನದ ವರದಿಯು ಸಿಎನ್‌ಜಿ ಬಸ್ಸುಗಳು ಕಡಿಮೆ ಪ್ರಮಾಣದಲ್ಲಿ ವಾಯುಮಾಲಿನ್ಯಕ್ಕೆ ಕಾರಣವಾಗಿರುತ್ತವೆ ಹಾಗೂ ಹಾಗೂ ಹೆಚ್ಚಿನ ದಕ್ಷತೆಯಿಂದ ಕೂಡಿರುತ್ತವೆ ಎಂಬುದಾಗಿ ತನ್ನ ನಿರ್ಣಯವನ್ನು ತಿಳಿಸಿದ್ದಿತು (2015). ಆದಾಗ್ಯೂ, ಬೆಂಮಸಾನಿವು ತನ್ನ ನಿರ್ದೇಶಕರುಗಳ ಮಂಡಳಿಯ 81ನೇ ಸಭೆಯಲ್ಲಿ ನಿರ್ಣಯವನ್ನು ಕೈಗೊಂಡಿದ್ದಂತೆ, ಸಿಎನ್‌ಜಿ ಬಸ್ಸುಗಳನ್ನು ಒಂದು ಪ್ರಾಯೋಗಿಕ/ಪರೀಕ್ಷಾರ್ಥ ಆಧಾರದ ಮೇರೆಗೂ ಖರೀದಿಸಿರಲಿಲ್ಲ.

ಈ ರೀತಿಯಾಗಿ, ಟೆಂಡರುಗಳನ್ನು ಆಹ್ವಾನಿಸಿದ ನಂತರ ಮಾದರಿಯ ಅಂದರೆ ಬಸ್ಸುಗಳ ನೆಲದ ಎತ್ತರದ ಬದಲಾವಣೆಗಾಗಿ ಮಾಡಲಾದ ಕೋರಿಕೆಯು ಟೆಂಡರುಗಳನ್ನು ರದ್ದುಗೊಳಿಸುವಲ್ಲಿ ಮುಕ್ತಾಯಗೊಂಡಿತು ಹಾಗೂ ₹ 88.08 ಕೋಟಿ ಮೊತ್ತದಷ್ಟು ಅನುದಾನದ ಸಹಾಯವು ನಷ್ಟವಾಯಿತು ಹಾಗೂ ಆರು ವರ್ಷಗಳವರೆಗೆ ಕಡಿಮೆ ಪ್ರಮಾಣದಲ್ಲಿನ ಹೊಗೆ ಉಗುಳುವಿಕೆಯ ಪ್ರಯೋಜನಗಳನ್ನು ಪಡೆದುಕೊಳ್ಳದಿರುವಲ್ಲಿ ಪರಿಣಮಿಸಿದ್ದಿತು.

ಇದನ್ನು ಗಮನಕ್ಕೆ ತಂದನಂತರ (ಡಿಸೆಂಬರ್ 2021) ಸಿಎನ್‌ಜಿ ಬಸ್ಸುಗಳ ಖರೀದಿಯು ಸರ್ಕಾರದಿಂದ, ಜಿಎಐಎಲ್‌ನಿಂದ ಹಾಗೂ ಇತರೆ ಮೂಲಗಳಿಂದ ಹಣಕಾಸಿನ ಸಹಾಯದ ಅನುಪಸ್ಥಿತಿಯಲ್ಲಿ ಬೆಂಮಸಾನಿಕ್ಕೆ ಸಂಬಂಧಿಸಿದಂತೆ ಆರ್ಥಿಕವಾಗಿ ಕಾರ್ಯಸಾಧ್ಯತೆಯಿಂದ ಕೂಡಿರುವುದಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಏಪ್ರಿಲ್ 2022). ಭಾರತ ಸರ್ಕಾರವು ಅನುದಾನಗಳನ್ನು ಒದಗಿಸಿದ್ದಿತಾದ್ದರಿಂದ ಹಾಗೂ ಅವುಗಳನ್ನು ಬೆಂಮಸಾನಿವು ಉಪಯೋಗಿಸಿಕೊಳ್ಳಲಿಲ್ಲವಾದ್ದರಿಂದ ಹಾಗೂ ಅದರ ಬದಲಾಗಿ ಯಾವುದೇ ತಾಂತ್ರಿಕ ಸಮರ್ಥನೆಗಳು ಇಲ್ಲದೆಯೇ ಬಸ್ಸುಗಳ ಮಾದರಿಯಲ್ಲಿನ ಬದಲಾವಣೆಯನ್ನು ಕೋರಲಾಗಿದ್ದಿತಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಮುಂದುವರೆದು, ಮೆ. ಜಿಎಐಎಲ್ ಕೂಡ ಬದಲಿ ಪ್ರಸ್ತಾವನೆಗಳನ್ನು ನೀಡಿದ್ದಿತು, ಆದರೆ ಬೆಂಮಸಾನಿವು ಅವುಗಳನ್ನು ಮುಂದುವರೆಸಲಿಲ್ಲ. ಆದ್ದರಿಂದ ಆರ್ಥಿಕ ಸಹಾಯಗಳು ಇರಲಿಲ್ಲ ಎಂಬುದಾಗಿ ತಿಳಿಸಿರುವುದು ಸರಿಯಾಗಿರುವುದಿಲ್ಲ.

ಆದ್ದರಿಂದ ವ್ಯಾವಹಾರಿಕವಾದಂತಹ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿನ ವಿಫಲತೆಯು ₹ 170.31 ಕೋಟಿ[84] ಮೊತ್ತದಷ್ಟು ಹಣಕಾಸಿನ ನೆರವಿನ ನಷ್ಟವಾಗುವಲ್ಲಿ ಪರಿಣಮಿಸಿದ್ದಿತು ಹಾಗೂ ತತ್ಪರಿಣಾಮವಾಗಿ ಪರಿಸರ–ಸ್ನೇಹಿ ಸಾರ್ವಜನಿಕ ಸಂಚಾರವನ್ನು ಒದಗಿಸಲಾಗಲಿಲ್ಲವಾದ್ದರಿಂದ ವಾಯು ಮಾಲೀನ್ಯವನ್ನು ತಗ್ಗಿಸಲಾಗಿರಲಿಲ್ಲ.

[83] ಮೂಲ ಸೌಕರ್ಯ ಊರ್ಜಿತಗೊಳ್ಳಬಲ್ಲಂತಹ ಸಾರಿಗೆ ಮತ್ತು ನಗರ ಯೋಜನಾ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆ.

[84] ವಿದ್ಯುತ್ ಬಸ್ಸುಗಳಿಗೆ ₹ 82.23 ಕೋಟಿ + ಸಿಎನ್‌ಜಿ ಬಸ್ಸುಗಳಿಗೆ ₹ 88.08 ಕೋಟಿ.

***ಶಿಫಾರಸು:***

**ಸಂಸ್ಥೆಗೆ ಆರ್ಥಿಕವಾಗಿ ಹಾಗೂ ಅಲ್ಲದೆಯೇ ಸಾರ್ವಜನಿಕರಿಗೆ ಸವಿಸ್ತೃತವಾಗಿ ಪ್ರಯೋಜನಕಾರಿಯಾಗುವಂತಹ ಅನುದಾನಗಳನ್ನು ಭವಿಷ್ಯದಲ್ಲಿ ನಿಗಮವು ಬಿಟ್ಟುಕೊಡಕೂಡದು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ.**

**ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ**

### *2.4. ವಿದ್ಯುತ್ ಉತ್ಪಾದನೆಯ ವರಮಾನದಲ್ಲಿ ನಷ್ಟ*

**ಸೋಗಿ ಮತ್ತು ಮಾವಿನಹುಂಡದಲ್ಲಿ ಪವನ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಸಲುವಾಗಿ ಅರಣ್ಯ ಭೂಮಿಯ ಗುತ್ತಿಗೆ ಅವಧಿಯನ್ನು ನವೀಕರಿಸುವಲ್ಲಿನ ವಿಫಲತೆ ಹಾಗೂ ಸಂಪರ್ಕ ರಸ್ತೆಯ ಬಳಕೆಗಾಗಿ ಅರಣ್ಯ ಅಧಿಕಾರಿಗಳಿಂದ ಪೂರ್ವಾನುಮತಿ ಪಡೆಯದಿದ್ದುದು ₹ 65.78 ಕೋಟಿ ಮೊತ್ತದಷ್ಟು ಉಪಕರಣಗಳು ಆರು ತಿಂಗಳಿಂದ ನಾಲ್ಕು ವರ್ಷಗಳವರೆಗೆ ಉತ್ಪಾದನೆಗೆ ಉಪಯೋಗಿಸದೇ ವ್ಯರ್ಥವಾಗಿ ಇರುವಲ್ಲಿ ಪರಿಣಮಿಸಿದ್ದಿತು. ಕಂಪನಿಯು ₹ 30.34 ಕೋಟಿ ಮೊತ್ತದಷ್ಟು ವರಮಾನವನ್ನು ಕಳೆದುಕೊಂಡಿತು.**

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು (ಕಂಪನಿ) ಎರಡು ಪವನ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಅಂದರೆ ಮಾವಿನಹುಂಡದಲ್ಲಿ (ಬೆಳಗಾವಿ ಜಿಲ್ಲೆ) 2.0 ಮೆಗಾ ವ್ಯಾಟ್ (ಮೆವ್ಯಾ) ಸಾಮರ್ಥ್ಯದೊಂದಿಗೆ ಒಂದು ಹಾಗೂ ಮತ್ತೊಂದನ್ನು 2.5 ಮೆವ್ಯಾ ಸಾಮರ್ಥ್ಯದೊಂದಿಗೆ ಸೋಗಿಯಲ್ಲಿ (ಬಳ್ಳಾರಿ ಜಿಲ್ಲೆ) ಸ್ಥಾಪಿಸಿತು (2003–04). ಮಾವಿನಹುಂಡ ಯೋಜನೆಯನ್ನು 34.55 ಹೆಕ್ಟೇರುಗಳಷ್ಟು ಸ್ವಂತ/ಗುತ್ತಿಗೆ ಕಂದಾಯ ಭೂಮಿಯಲ್ಲಿ[85] ಕಾರ್ಯಾಚರಣೆಗೊಳಿಸಲಾಗಿದ್ದಿತಾದಲ್ಲಿ ಸೋಗಿ ಯೋಜನೆಯನ್ನು 18 ಹೆಕ್ಟೇರುಗಳಷ್ಟು ಮಾರ್ಗಾಂತರಣ ಮಾಡಾಲಾಗಿದ್ದ ಅರಣ್ಯ ಭೂಮಿಯಲ್ಲಿ ಕಾರ್ಯಾಚರಣೆಗೊಳಿಸಲಾಗಿದ್ದಿತು. ಈ ಯೋಜನೆಗಳಿಂದ ವಿದ್ಯುತ್ ಉತ್ಪಾದನೆಯು ಅಂದಾಜು ಮಾಡಲಾಗಿದ್ದ ಮಟ್ಟಗಳಿಗಿಂತ ಅಧಿಕ ಪ್ರಮಾಣದಲ್ಲಿ ಬಂದಿದ್ದರಿಂದ ಹಾಗೂ ಕನಿಷ್ಠ ವೆಚ್ಚದಲ್ಲಿ ಪ್ರಸಕ್ತ ಇರುವಂತಹ ಮೂಲಸೌಕರ್ಯಗಳೊಂದಿಗೆಯೇ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವಂತಹ ಇನ್ನೂ ಹೆಚ್ಚಿನ ಸಾಮರ್ಥ್ಯವಿದ್ದಿತಾದ್ದರಿಂದ, ಕಂಪನಿಯು ಮಾವಿನಹುಂಡ ಮತ್ತು ಸೋಗಿಯಲ್ಲಿ ಪ್ರತಿಯೊಂದೂ 6 ಮೆಗಾ ವ್ಯಾಟ್ (ಮೆವ್ಯಾ) ಸಾಮರ್ಥ್ಯದೊಂದಿಗೆ ಎರಡು ಹೆಚ್ಚುವರಿ ಪವನ ವಿದ್ಯುತ್ ಉತ್ಪಾದನಾ ಯೋಜನೆಗಳನ್ನು ಸ್ಥಾಪಿಸುವ ಪ್ರಸ್ತಾವನೆಯನ್ನು ಮಾಡಿತು (ಸೆಪ್ಟಂಬರ್ 2005).

ಕಂಪನಿಯು ಎರಡೂ ಯೋಜನೆಗಳಿಂದ 29.24 ದಶಲಕ್ಷ ಯೂನಿಟ್ಟುಗಳಷ್ಟು (ಮಿಯೂ) ನಿವ್ವಳ ವಾರ್ಷಿಕ ವಿದ್ಯುತ್ ಉತ್ಪಾದನೆಯ ಪ್ರಕ್ಷೇಪಣೆಯೊಂದಿಗೆ ಸವಿವರ ಯೋಜನಾ ವರದಿಗಳನ್ನು ತಯಾರಿಸಿತು (ಮಾರ್ಚ್ 2009/ಸೆಪ್ಟೆಂಬರ್ 2011). ಯೋಜನೆಗಳನ್ನು ಕಾರ್ಯಗತಗೊಳಿಸುವ ಸಲುವಾಗಿ ಟೆಂಡರುಗಳನ್ನು ಮಾರ್ಚ್ 2006[86] ಹಾಗೂ ಮಾರ್ಚ್ 2008ರ ನಡುವೆ (ಮೂರು ಸಲ) ಹಾಗೂ ತದನಂತರದಲ್ಲಿ ಆಗಸ್ಟ್ 2012 ಹಾಗೂ ಅಕ್ಟೋಬರ್ 2013ರಲ್ಲಿ ಕರೆಯಲಾಗಿದ್ದಿತು (ಎರಡು ಸಲ), ಬಂದಂತಹ ಸವಾಲುಗಳು ಏಕೈಕ ಸವಾಲುಗಳಾಗಿದ್ದವಾದ್ದರಿಂದ ಅವು ಸಾಕಾರಗೊಂಡಿರಲಿಲ್ಲ.

ಗುತ್ತಿಗೆಯನ್ನು ಆರನೇ ಟೆಂಡರಿನಲ್ಲಿ (ಆಗಸ್ಟ್ 2014ರಲ್ಲಿ ಆಹ್ವಾನಿಸಿದ) ಸ್ವೀಕರಿಸಲಾದ ಸವಾಲಿಗೆ ಮೆ. ಸುರ್ಝ್‌ಲೋನ್ ಎನರ್ಜಿ ಲಿಮಿಟೆಡ್ (ಏಕೈಕ ಅರ್ಹತೆಯನ್ನು ಹೊಂದಿದ್ದ ಸವಾಲುದಾರರು), ಇವರಿಗೆ ಟರ್ನ್‌ಕೀ ಆಧಾರದ ಮೇರೆಗೆ ₹ 87.36 ಕೋಟಿಯಷ್ಟು[87] ಒಟ್ಟಾರೆ ಗುತ್ತಿಗೆ ಮೌಲ್ಯಕ್ಕೆ ಏಪ್ರಿಲ್ 2015ರಲ್ಲಿ ನೀಡಲಾಗಿದ್ದಿತು. ಗುತ್ತಿಗೆಯು ವಿನ್ಯಾಸ/ರೂಪುರೇಖೆ, ತಯಾರಿಕೆ, ಸರಬರಾಜು,

---

[85] 10.27 ಹೆಕ್ಟೇರುಗಳು ಗುತ್ತಿಗೆ ಭೂಮಿ ಹಾಗೂ 24.28 ಹೆಕ್ಟೇರುಗಳು ಸ್ವಂತ ಭೂಮಿ.

[86] ಸವಿವರ ಯೋಜನಾ ವರದಿಗಳನ್ನು ತಯಾರಿಸುವ ಮೊದಲು, ಮೂರು ಟೆಂಡರುಗಳನ್ನು ಮಾರ್ಚ್ 2006 ಮತ್ತು ಮಾರ್ಚ್ 2008ರ ನಡುವೆ ಆಹ್ವಾನಿಸಲಾಗಿದ್ದಿತು.

[87] ಮಾವಿನಹುಂಡಕ್ಕಾಗಿ ₹ 58.88 ಕೋಟಿ ಹಾಗೂ ಸೋಗಿಗಾಗಿ ₹ 28.48 ಕೋಟಿ.

ಸ್ಥಾಪಿಸುವುದು, ಪರೀಕ್ಷಣೆ, ಕಾರ್ಯೋದ್ಯುಕ್ತಗೊಳಿಸುವಿಕೆ, ಕಾರ್ಯಾಚರಣೆ ಮೂರು ವರ್ಷಗಳ[88] ನಿರ್ವಹಣೆಯನ್ನು ಒಳಗೊಂಡಿದ್ದಿತು. ಗುತ್ತಿಗೆ ಷರತ್ತುಗಳ ಅನುಸಾರ, ಮಾವಿನಹುಂಡ ಮತ್ತು ಸೋಗಿಯಲ್ಲಿನ ಅನುಕ್ರಮವಾಗಿ 8.4 ಮೆವ್ಯಾ ಹಾಗೂ 4.2 ಮೆವ್ಯಾ ಸಾಮರ್ಥ್ಯದೊಂದಿಗಿನ[89] ಯೋಜನೆಗಳನ್ನು ಕಾಮಗಾರಿಯನ್ನು ನೀಡಿದ ದಿನಾಂಕದಿಂದ ಹನ್ನೆರಡು ತಿಂಗಳುಗಳ ಒಳಗೆ ಅಂದರೆ, ಏಪ್ರಿಲ್ 2016ರ ಒಳಗೆ ಪೂರ್ಣಗೊಳಿಸಬೇಕಿದ್ದಿತು. ಗುತ್ತಿಗೆಯ ಷರತ್ತುಗಳ[90] ಅನುಸಾರ, ಕಂಪನಿಯು ಗುತ್ತಿಗೆದಾರರಿಗೆ ತಮ್ಮ ಗುತ್ತಿಗೆ ಕಾಮಗಾರಿಗಳಿಗೆ ಸಜ್ಜುಗೊಳ್ಳುವ ಸಲುವಾಗಿ ಗುತ್ತಿಗೆ ಮೌಲ್ಯದ ಶೇಕಡಾ 30ರಂತೆ ಏಪ್ರಿಲ್ 2015ರಲ್ಲಿ ಬಡ್ಡಿರಹಿತವಾಗಿ ₹ 24.67 ಕೋಟಿ[91] ಮೊತ್ತದಷ್ಟು ಮುಂಗಡಗಳನ್ನು ಪಾವತಿಸಿದ್ದಿತು ಹಾಗೂ ಕಾಮಗಾರಿ ನಿವೇಶನಕ್ಕೆ ತರಲಾಗಿದ್ದ ಸಾಮಗ್ರಿಗಳ ಸರಬರಾಜುಗಳ ಮೌಲ್ಯದ ಶೇಕಡಾ 50ರ ಕಡೆಗೆ ಫೆಬ್ರವರಿ 2016/ಅಕ್ಟೋಬರ್ 2017ರಲ್ಲಿ ₹ 41.11 ಕೋಟಿ[92] ಮೊತ್ತವನ್ನು ನೀಡಿದ್ದಿತು. ಆದಾಗ್ಯೂ, ಯೋಜನೆಗಳನ್ನು ಮಾರ್ಚ್ 2018ರಲ್ಲಿ (ಮಾವಿನಹುಂಡ) ಹಾಗೂ ಮೇ 2020ರಲ್ಲಿ (ಸೋಗಿ) ಅಂದರೆ ನಿಗದಿತ ದಿನಾಂಕಗಳಿಂದ ಅನುಕ್ರಮವಾಗಿ ಎರಡು ಹಾಗೂ ನಾಲ್ಕು ವರ್ಷಗಳು ಕಳೆದನಂತರ ಕಾರ್ಯೋದ್ಯುಕ್ತಗೊಳಿಸಲಾಗಿದ್ದಿತು.

ಯೋಜನಾ ನಿವೇಶನಕ್ಕೆ ಪ್ರಸಕ್ತ ಇರುವಂತಹ ಸಂಪರ್ಕ ರಸ್ತೆಯು ಉಪಕರಣಗಳ ಸಾಗಾಣಿಕೆಗೆ ಕಾರ್ಯಸಾಧ್ಯವಾಗಿರುವುದಿಲ್ಲ ಹಾಗೂ ಅಗಲೀಕರಣದ ಅಗತ್ಯತೆಯನ್ನು ಹೊಂದಿರುತ್ತದೆ ಎಂಬ ವಾಸ್ತವಾಂಶವನ್ನು ಮಾವಿನಹುಂಡದ ಸವಿವರ ಯೋಜನಾ ವರದಿಯು ತಿಳಿಸಿದ್ದಿತು (ಸೆಪ್ಟೆಂಬರ್ 2011) ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಜನವರಿ 2021). ಈ ವಾಸ್ತವಾಂಶವನ್ನು ಅರಿತಿದ್ದೂ ಸಹ, ಕಂಪನಿಯು ಗುತ್ತಿಗೆದಾರರ ಕೋರಿಕೆಯ ಮೇರೆಗೆ (ಮಾರ್ಚ್ 2015) ಗುತ್ತಿಗೆಯನ್ನು ನೀಡಿದ ನಂತರ ಕ್ರಮ ವಹಿಸಿತು (ಜುಲೈ 2015). ಸಂಪರ್ಕ ರಸ್ತೆಯ ಅಗಲೀಕರಣವು ಅರಣ್ಯ ಭೂಮಿಯ ಮಾರ್ಗಾಂತರಣದ (0.94 ಹೆಕ್ಟೇರುಗಳು) ಅಗತ್ಯತೆಯನ್ನುಂಟು ಮಾಡಿದ್ದರಿಂದ ಅರಣ್ಯ ಅಧಿಕಾರಿಗಳಿಂದ ಅನುಮತಿಯನ್ನು ಪಡೆದುಕೊಳ್ಳುವ ಪ್ರಕ್ರಿಯೆಯು ಎರಡೂವರೆ ವರ್ಷಗಳನ್ನು ತೆಗೆದುಕೊಂಡಿತು (ಡಿಸೆಂಬರ್ 2017).

ಮುಂದುವರೆದು, ಸೋಗಿ ಯೋಜನೆಗೆ ಸಂಬಂಧಿಸಿದಂತೆ, ಗುತ್ತಿಗೆ ನವೀಕರಣ ಅರ್ಜಿಯನ್ನು ಸಲ್ಲಿಸುವ ಪ್ರಕ್ರಿಯೆಯು ಹದಿನೆಂಟು ತಿಂಗಳುಗಳನ್ನು ತೆಗೆದುಕೊಂಡಿತು (ಡಿಸೆಂಬರ್ 2013ರಿಂದ ಆಗಸ್ಟ್ 2015) ಹಾಗೂ ಮುಂದುವರೆದು, ಅರಣ್ಯ ಅಧಿಕಾರಿಗಳಿಂದ ಅನುಮತಿ ಪಡೆಯಲು ನಾಲ್ಕು ವರ್ಷಗಳು ಬೇಕಾಯಿತು (ಜನವರಿ 2019). ಇದು ಕಂಪನಿಯಿಂದ ನಿಖರವಾದಂತಹ ಮಾರ್ಗವನ್ನು ಅನುಸರಿಸುವಲ್ಲಿನ ಕೊರತೆಯನ್ನು ಹಾಗೂ ಪರಿಣಾಮಕಾರಿತ್ವದಿಂದ ಕೂಡಿರದ ಅನುಸರಣಾ ಮಾರ್ಗಗಳನ್ನು ತೋರಿಸುತ್ತಿದ್ದಿತು. ಕಂಪನಿಯು ಅರಣ್ಯ ಇಲಾಖೆಯ ಅನುಮತಿಯನ್ನು ತ್ವರಿತವಾಗಿ ಪಡೆದುಕೊಳ್ಳುವ ಸಲುವಾಗಿ ವಿಷಯವನ್ನು ಆಡಳಿತದ/ಸರ್ಕಾರದ ಸೂಕ್ತ ಮಟ್ಟದಲ್ಲಿ ತೆಗೆದುಕೊಂಡು ಹೋಗಿರಲಿಲ್ಲ.

ಮೇಲೆ ತಿಳಿಸಲಾದ ಲೋಪದೋಷಗಳ ಕಾರಣ ಯೋಜನೆಗಳನ್ನು ಮಾರ್ಚ್ 2018/ಮೇ 2020ರಲ್ಲಿ ನಿಗದಿತ ದಿನಾಂಕಗಳ ನಂತರ ಎರಡು ಹಾಗೂ ನಾಲ್ಕು ವರ್ಷಗಳು ಕಳೆದ ನಂತರ ಕಾರ್ಯೋದ್ಯುಕ್ತಗೊಳಿಸಲಾಗಿದ್ದಿತು. ತತ್ಪರಿಣಾಮವಾಗಿ, ನಿವೇಶನಗಳಿಗೆ ತರಲಾಗಿದ್ದಂತಹ ಹಾಗೂ

[88] ಕಾರ್ಯಾಚರಣೆ ಮತ್ತು ನಿರ್ವಹಣೆಯು ಕಾರ್ಯೋದ್ಯುಕ್ತಗೊಂಡ ದಿನಾಂಕದಿಂದ ಎರಡು ವರ್ಷಗಳ ವಾರಂಟಿ ಅವಧಿಯು ಮುಕ್ತಾಯಗೊಂಡ ನಂತರ ಪ್ರಾರಂಭಗೊಳ್ಳುತ್ತದೆ.

[89] ತಂತ್ರಜ್ಞಾನದ ಮುನ್ನಡೆ ಹಾಗೂ ಪ್ರಸಕ್ತ ಇರುವಂತಹ ಅನುಕೂಲತೆಗಳನ್ನು ಉತ್ತಮವಾಗಿ ಉಪಯೋಗಿಸುವ ಸಲುವಾಗಿ ಸಾಮರ್ಥ್ಯವನ್ನು ಹೆಚ್ಚಳಗೊಳಿಸಲಾಯಿತು.

[90] ಗುತ್ತಿಗೆಯ ವಿಶೇಷ ಷರತ್ತುಗಳ ಷರತ್ತು 16ರ ಅನುಸಾರ, ಗುತ್ತಿಗೆ ಮೌಲ್ಯದ ಶೇಕಡಾ 30ರಷ್ಟನ್ನು ಬ್ಯಾಂಕು ಖಾತರಿಯ ಪ್ರತಿಯಾಗಿ ಗುತ್ತಿಗೆದಾರರು ಕಾಮಗಾರಿಗೆ ಸಜ್ಜುಗೊಳ್ಳುವ ಸಲುವಾಗಿ ಪಾವತಿಸಬೇಕಿದ್ದಿತು, ನಿವೇಶನದಲ್ಲಿ ಸಾಮಗ್ರಿಗಳು ಬಂದನಂತರ ಗುತ್ತಿಗೆ ಮೌಲ್ಯದ ಶೇಕಡಾ 50ರಷ್ಟನ್ನು ಪಾವತಿಸಬೇಕಿದ್ದಿತು, ಶೇಕಡಾ 15ರಷ್ಟನ್ನು ಸ್ಥಾವರದ ಸ್ಥಾಪನೆಯ ನಂತರ ಉಳಿದ ಐದರಷ್ಟನ್ನು ಯೋಜನೆಯನ್ನು ಯಶಸ್ವಿಯಾಗಿ ಕಾರ್ಯೋದ್ಯುಕ್ತಗೊಳಿಸಿದನಂತರ ಪಾವತಿಸಬೇಕಿದ್ದಿತು.

[91] ಮಾವಿನಹುಂಡ ಯೋಜನೆಗೆ ₹ 16.61 ಕೋಟಿ ಹಾಗೂ ಸೋಗಿ ಯೋಜನೆಗೆ ₹ 8.06 ಕೋಟಿ ಮೊತ್ತಗಳನ್ನು 27 ಏಪ್ರಿಲ್ 2015ರಂದು ಪಾವತಿಸಲಾಗಿದ್ದಿತು.

[92] ಮಾವಿನಹುಂಡ ಯೋಜನೆಗೆ ₹ 27.68 ಕೋಟಿ ಹಾಗೂ ಸೋಗಿ ಯೋಜನೆಗೆ ₹ 13.43 ಕೋಟಿ ಮೊತ್ತಗಳನ್ನು ಅನುಕ್ರಮವಾಗಿ 17 ಅಕ್ಟೋಬರ್ 2017 ಮತ್ತು 25 ಫೆಬ್ರವರಿ 2016ರಂದು ಪಾವತಿಸಲಾಗಿದ್ದಿತು.

ಅವುಗಳ ಮೇಲೆ ಕಂಪನಿಯು ₹ 65.78 ಕೋಟಿ ಮೊತ್ತವನ್ನು ಹೂಡಿಕೆ ಮಾಡಲಾಗಿದ್ದಂತಹ ಯಂತ್ರಗಳನ್ನು (ಗಾಳಿ ಟರ್ಬೈನುಗಳು) ವಿದ್ಯುತ್ ಉತ್ಪಾದನೆಗೆ ಒಳಪಡಿಸದೆಯೇ ಆರು ತಿಂಗಳುಗಳಿಂದ ನಾಲ್ಕು ವರ್ಷಗಳವರೆಗೆ (ಮಾವಿನಹುಂಡಕ್ಕೆ ಸಂಬಂಧಿಸಿದಂತೆ ಅಕ್ಟೋಬರ್ 2017ರಿಂದ ಮಾರ್ಚ್ 2018 ಹಾಗೂ ಸೋಗಿ ಯೋಜನೆಗೆ ಸಂಬಂಧಿಸಿದಂತೆ ಫೆಬ್ರವರಿ 2016ರಿಂದ ಮೇ 2020ರವರೆಗೆ) ಯಾವುದೇ ಉತ್ಪಾದನೆಯಿಲ್ಲದೆಯೇ ವ್ಯರ್ಥವಾಗಿ ಉಳಿದುಕೊಂಡಿದ್ದವು. ಅಲ್ಲದೆಯೇ, ಕಂಪನಿಯು ₹ 30.34 ಕೋಟಿ[93] ಮೊತ್ತದಷ್ಟು ಸಂಭಾವ್ಯ ವರಮಾನವನ್ನು ಹಾಗೂ ಬಳಸದೇ ಇದ್ದ ಯಂತ್ರಗಳ ಸರಬರಾಜುಗಳ ಕಡೆಗೆ ಗುತ್ತಿಗೆದಾರರಿಗೆ ನೀಡಲಾಗಿದ್ದ ಮುಂಗಡದ ಮೇಲೆ ₹ 9.61 ಕೋಟಿ[94] ಮೊತ್ತದಷ್ಟು ಬಡ್ಡಿ ಗಳಿಕೆಯನ್ನು ಕಳೆದುಕೊಂಡಿದ್ದಿತು. ಇನ್ನೂ ಪ್ರಮುಖವಾಗಿ ಸೆಪ್ಟಂಬರ್ 2005ರಲ್ಲಿ ಪರಿಕಲ್ಪನೆಗೆ ಬಂದಂತಹ ವಿದ್ಯುತ್ ಉತ್ಪಾದನೆಯ ಸಾಮರ್ಥ್ಯವನ್ನು ಹೆಚ್ಚಳಗೊಳಿಸುವ ಉದ್ದೇಶವನ್ನು ಕೇವಲ ಮಾರ್ಚ್ 2018/ಮೇ 2020ರಲ್ಲಿ ಅಂದರೆ 13ರಿಂದ 15 ವರ್ಷಗಳು ಕಳೆದನಂತರ ಸಾಧಿಸಲಾಗಿದ್ದಿತು.

ಯೋಜನೆಗಳನ್ನು ಏಕೈಕ ಸವಾಲುಗಳು/ಅಧಿಕ ಮೌಲ್ಯದ ಟೆಂಡರುಗಳು ಹಾಗೂ ಕಂಪನಿಯ ಅವಿರತ ಪ್ರಯತ್ನಗಳ ಹೊರತಾಗಿಯೂ ಅರಣ್ಯ ಇಲಾಖೆಯ ಅನುಮತಿಯನ್ನು ಪಡೆಯುವಲ್ಲಿಯ ವಿಳಂಬದ, ಕಾರಣ ನಿಗದಿತ ಕಾಲಮಿತಿಯೊಳಗೆ ಕಾರ್ಯೋದ್ಯುಕ್ತಗೊಳಿಸಲಾಗಲಿಲ್ಲ ಎಂಬುದಾಗಿ ಸರ್ಕಾರವು ಉತ್ತರಿಸಿತು (ಏಪ್ರಿಲ್ 2022). ಯೋಜನೆಯ ಅವಧಿಯು ಅದರ ಕಾರ್ಯೋದ್ಯುಕ್ತಗೊಳಿಸುವಿಕೆಯ/ ವಾಣಿಜ್ಯ ಕಾರ್ಯಾಚರಣೆಗಳು ಪ್ರಾರಂಭಗೊಂಡ ದಿನಾಂಕದಿಂದ ಪ್ರಾರಂಭಗೊಳ್ಳುವುದರಿಂದ, ವರಮಾನ ಉತ್ಪತ್ತಿಯು ಮುಂದಕ್ಕೆ ಹೋಗಿದ್ದಿತು.

ಗುತ್ತಿಗೆಯು ಸಾಕಾರಗೊಳ್ಳಲು ತೆಗೆದುಕೊಳ್ಳಲಾದಂತಹ ಗಮನಾರ್ಹವಾದಂತಹ ಅವಧಿಯನ್ನು (8 ವರ್ಷಗಳು – ಮಾರ್ಚ್ 2006ರಿಂದ ಆಗಸ್ಟ್ 2014) ಪರಿಗಣಿಸಿದಂತೆ ಹಾಗೂ ಕಂಪನಿಯು ಓರ್ವ ಏಕೈಕ ಸವಾಲುದಾರರಿಗೆ ಏಪ್ರಿಲ್ 2015ರಲ್ಲಿ ಗುತ್ತಿಗೆಯನ್ನು ನೀಡುವುದರೊಂದಿಗೆ ಅಂತಿಮವಾಗಿ ಮುಕ್ತಾಯಗೊಂಡಿದ್ದಿತಾದ್ದರಿಂದ, ಏಕೈಕ/ಅಧಿಕ ಮೌಲ್ಯದ ಸವಾಲುಗಳ ಕಾರಣ ಯೋಜನೆಯು ವಿಳಂಬಗೊಂಡಿದ್ದಿತು ಎಂಬ ವಾದವು ಒಪ್ಪಿಕೊಳ್ಳುವಂತಿಲ್ಲ. ಅಲ್ಲದೆಯೇ ಕಂಪನಿಯು ಸವಿವರ ಯೋಜನಾ ವರದಿಗಳನ್ನು ತಯಾರಿಸಲು ಹಾಗೂ ಟೆಂಡರುಗಳನ್ನು ಆಹ್ವಾನಿಸಲು ನಾಲ್ಕು ವರ್ಷಗಳನ್ನು (ಡಿಸೆಂಬರ್ 2008ರಿಂದ ಆಗಸ್ಟ್ 2012) ತೆಗೆದುಕೊಂಡಿತು. ಅರಣ್ಯ ಇಲಾಖೆಯ ಅನುಮತಿಗೆ ಸಂಬಂಧಿಸಿದಂತೆ, ಕಂಪನಿಯು ಅವಿರತವಾಗಿ ಪ್ರಯತ್ನಿಸಿದ್ದಿತು ಎಂಬುದಾಗಿ ನೀಡಿರುವ ಉತ್ತರವು ಯಾವುದೇ ಸಾಕ್ಷ್ಯಾಧಾರಗಳ ಬೆಂಬಲದಿಂದ ಕೂಡಿರಲಿಲ್ಲ. ಕಂಪನಿಯು ₹ 30.34 ಕೋಟಿ ಮೊತ್ತದಷ್ಟು ಸಂಭಾವ್ಯ ವರಮಾನವನ್ನು ಕಳೆದುಕೊಂಡಿದ್ದಿತು, ಯೋಜನೆಯನ್ನು ನಿಗದಿತ ವೇಳಾಪಟ್ಟಿಯಂತೆ ಏಪ್ರಿಲ್ 2016ರಲ್ಲಿ ಪೂರ್ಣಗೊಳಿಸಿದ್ದಲ್ಲಿ, ಅಂತಹ ವರಮಾನವನ್ನು ಗಳಿಸಬಹುದಾಗಿದ್ದಿತು ಎಂಬುದು ಸಹ ವಾಸ್ತವಾಂಶದಿಂದ ಕೂಡಿರುತ್ತದೆ.

---

[93] ಏಪ್ರಿಲ್ 2020ರಿಂದ ಮಾರ್ಚ್ 2021ರಲ್ಲಿ ಈ ಎರಡು ಯೋಜನೆಗಳಿಂದ 2.65 ದಶಲಕ್ಷ ಯೂನಿಟ್ಟುಗಳಷ್ಟು (ಮಿಯೂಗಳು) ನೈಜ ಸರಾಸರಿ ಮಾಸಿಕ ವಿದ್ಯುತ್ ಉತ್ಪಾದನೆಯನ್ನು ಪರಿಗಣಿಸಿದಂತೆ ಮಾವಿನಹೊಂಡ ಹಾಗೂ ಸೋಗಿ ಯೋಜನೆಗಳಿಗೆ ನಷ್ಟವನ್ನು ಅನುಮೋದಿತ ವಿದ್ಯುತ್ ದರಪಟ್ಟಿಯಲ್ಲಿನ ಯೂನಿಟ್ಟು ಒಂದಕ್ಕೆ ಅನುಕ್ರಮವಾಗಿ ₹ 3.26 ಹಾಗೂ ₹ 3.74ರ ದರಗಳಲ್ಲಿ ಲೆಕ್ಕಹಾಕಲಾಗಿರುವುದು ಮಾವಿನಹುಂಡ ಯೋಜನೆಗೆ 24 ತಿಂಗಳುಗಳ (ಏಪ್ರಿಲ್ 2016ರಿಂದ ಮಾರ್ಚ್ 2018) ಹಾಗೂ ಸೋಗಿ ಯೋಜನೆಗೆ 50 ತಿಂಗಳುಗಳ (ಏಪ್ರಿಲ್ 2016ರಿಂದ ಮೇ 2020) ವಿಳಂಬಗಳನ್ನು ವಿದ್ಯುತ್ ಉತ್ಪಾದನೆಯ ನಷ್ಟವನ್ನು ಲೆಕ್ಕಹಾಕುವ ಸಲುವಾಗಿ ಪರಿಗಣಿಸಲಾಗಿರುವುದು.

[94] ಬಡ್ಡಿಯನ್ನು ಗುತ್ತಿಗೆದಾರರಿಗೆ ಸಜ್ಜುಗೊಳ್ಳುವ ಸಲುವಾಗಿ ನೀಡಲಾದ ಮುಂಗಡ ಹಾಗೂ ಸಾಮಗ್ರಿಗಳ ಸರಬರಾಜಿಗಾಗಿ ನೀಡಲಾದ ಮುಂಗಡಗಳೆರಡಕ್ಕೂ ವರ್ಷ ಒಂದಕ್ಕೆ ಶೇಕಡಾ 6ರ ಕನಿಷ್ಟ ದರದಲ್ಲಿ ಯೋಜನೆಗಳು ಪೂರ್ಣಗೊಳ್ಳಲು ನಿಗದಿತ ದಿನಾಂಕ/ಪಾವತಿಯ ವಾಸ್ತವಿಕ ದಿನಾಂಕದಿಂದ ಯೋಜನೆಗಳನ್ನು ಕಾರ್ಯೋದ್ಯುಕ್ತಗೊಳಿಸಲಾದ ದಿನಾಂಕದವರೆಗೆ ಲೆಕ್ಕಹಾಕಲಾಗಿರುವುದು.

*ಶಿಫಾರಸು:*

**ಯೋಜನೆಗಳನ್ನು ಪ್ರಾರಂಭಿಸುವುದಕ್ಕೆ ಸಾಕಷ್ಟು ಮುಂಚಿತವಾಗಿ ಕಂಪನಿಯು ಸವಿವರ ಯೋಜನಾ ವರದಿಗಳನ್ನು ತಯಾರಿಸಿರುವುದನ್ನು ಹಾಗೂ ಅಗತ್ಯ ಶಾಸನಬದ್ಧ ಅನುಮತಿಗಳನ್ನು ಪಡೆದಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿದೆ. ಶಾಸನಬದ್ಧ ಅನುಮತಿಗಳನ್ನು ಸಮಯೋಚಿತವಾಗಿ ಪಡೆದುಕೊಳ್ಳುವಲ್ಲಿ ಯಾವುದಾದರೂ ಅಡಚಣೆಗಳು ಇದ್ದಲ್ಲಿ, ಯೋಜನೆಗಳು ಪೂರ್ಣಗೊಳ್ಳುವಲ್ಲಿ ವಿಳಂಬಗಳನ್ನು ತಪ್ಪಿಸುವ ರೀತಿಯಲ್ಲಿ ವಿಷಯವನ್ನು ವ್ಯವಸ್ಥಾಪನೆಯ/ಸರ್ಕಾರದ ಸೂಕ್ತ ಮಟ್ಟದಲ್ಲಿ ತೆಗೆದುಕೊಂಡು ಹೋಗಬೇಕು.**

**ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ**

### *2.5. ಸುಬಾಬುಲ್ ಮರಗಿಡಗಳ ಮೇಲೆ ಅನುತ್ಪಾದಕ ಹೂಡಿಕೆ*

**ಪ್ರಾಯೋಗಿಕ ನೆಡುತೋಪಿನ ಇಳುವರಿ ಫಲಿತಾಂಶಗಳಿಗೆ ಕಾಯದೇ ದೊಡ್ಡ ಮಟ್ಟದಲ್ಲಿ ವಾಣಿಜ್ಯಿಕ ಉಪಯೋಗಕ್ಕೆ ಸುಬಾಬುಲ್ ಗಿಡಗಳ ನೆಡುತೋಪುಗಳನ್ನು ಬೆಳೆಸುವುದಕ್ಕೆ ಸಂಬಂಧಿಸಿದಂತೆ ವಿವೇಚನೆಯಿಂದ ಕೂಡಿರದ ತೀರ್ಮಾನ ಹಾಗೂ ನೆಡುತೋಪುಗಳ ಅಸಮರ್ಪಕ ನಿರ್ವಹಣೆಯು ನೆಡುತೋಪು ಯೋಜನೆಯ ಮೇಲೆ ಒಟ್ಟಾರೆಯಾಗಿ ₹ 9.25 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ಹೂಡಿಕೆಯಲ್ಲಿ ಪರಿಣಮಿಸಿದ್ದಿತು.**

ಕರ್ನಾಟಕ ಸರ್ಕಾರವು ಫೆಬ್ರವರಿ 2017ರಲ್ಲಿ ರಾಜ್ಯದಲ್ಲಿ ನೀಲಗಿರಿ ಮರಗಳನ್ನು ಬೆಳೆಯುವುದು, ಅವುಗಳ ನೆಡುತೋಪುಗಳನ್ನು ಮಾಡುವುದನ್ನು ನಿರ್ಬಂಧಿಸಿ ಒಂದು ಅಧಿಸೂಚನೆಯನ್ನು ಹೊರಡಿಸಿತು. ಇದು ತಿಳ್ಳುಮರದ (ಪಲ್ಪ್‌ವುಡ್) ಅಗತ್ಯತೆಯನ್ನು ಪೂರೈಸುವ ಸಲುವಾಗಿ ಬದಲಿ ಗಿಡಗಳನ್ನು ಕಂಡುಕೊಳ್ಳಲು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತಕ್ಕೆ (ಕೆಎಫ್‌ಡಿಸಿಎಲ್) ಪ್ರೇರಣೆಯಾಯಿತು ಹಾಗೂ ಇದರಿಂದ ಸುಬಾಬುಲ್ ಅನ್ನು ಆಯ್ದುಕೊಳ್ಳಲಾಯಿತು. 2016ರಲ್ಲಿ, ಬೆಂಗಳೂರು ವಿಭಾಗದಲ್ಲಿ[95] 40 ಹೆಕ್ಟೇರುಗಳಲ್ಲಿ ಒಂದು ಪ್ರಾಯೋಗಿಕ ಯೋಜನೆಯನ್ನು ಕೈಗೊಳ್ಳಲಾಯಿತು. ಯೋಜನಾ ವರದಿಯ ಅನುಸಾರ, ಪ್ರತಿಫಲದ ಆಂತರಿಕ ದರವನ್ನು ಶೇಕಡಾ 18.18 ಎಂಬುದಾಗಿ ಪರಿಗಣಿಸಲಾಗಿದ್ದಿತು, ಟನ್ನು ಒಂದಕ್ಕೆ ಮಾರಾಟ ಮಾಡಬಹುದಾದ ದರವು ₹ 3,500 ಎಂಬುದಾಗಿ ನಿರೀಕ್ಷಿಸುವುದರೊಂದಿಗೆ 4ನೇ, 8ನೇ ಹಾಗೂ 12ನೇ ಸಾಲಿನ ಅಂತ್ಯದಲ್ಲಿ ಅನುಕ್ರಮವಾಗಿ ಹೆಕ್ಟೇರು ಒಂದಕ್ಕೆ 40 ಟನ್ನುಗಳು, 30 ಟನ್ನುಗಳು ಹಾಗೂ 20 ಟನ್ನುಗಳಷ್ಟು ಫಸಲು ಬರಬಹುದು ಎಂಬುದಾಗಿ ನಿರೀಕ್ಷಿಸಲಾಗಿದ್ದಿತು. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು (ಕೆಎಫ್‌ಡಿಸಿಎಲ್) 2017ರಲ್ಲಿ ಪರಿಪಾಠಗಳ ಪ್ಯಾಕೇಜನ್ನೂ ಸಹ ಅನುಮೋದಿಸಿದ್ದಿತು, ಈ ಪ್ಯಾಕೇಜು ಸುಬಾಬುಲ್ ನೆಡುತೋಪನ್ನು ಬೆಳೆಸುವುದು ಹಾಗು ನಿರ್ವಹಿಸಿಕೊಂಡು ಹೋಗುವುದರ ಬಗ್ಗೆ ಅನುಸರಿಸಬೇಕಾದ ಕಾರ್ಯಾಚರಣೆಗಳು / ಕಾರ್ಯಚಟುವಟಿಕೆಗಳನ್ನು ನಿರ್ದಿಷ್ಟಪಡಿಸಿದ್ದಿತು.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ (ಕೆಎಫ್‌ಡಿಸಿಎಲ್) ನಿರ್ದೇಶಕರುಗಳ ಮಂಡಳಿಯು, ಸ್ವಯಂ ತಾನೇ ತಿಳಿಸಿರುವಂತೆ ಪ್ರಾಯೋಗಿಕ ಯೋಜನೆಯಲ್ಲಿ ಒಂದು ಆಶ್ವಾಸನೆಯಿಂದ ಕೂಡಿದ ಬೆಳವಣಿಗೆಯ ಆಧಾರದ ಮೇರೆಗೆ ಒಟ್ಟಾರೆ 1,041[96] ಹೆಕ್ಟೇರುಗಳಷ್ಟು ಪ್ರದೇಶದಲ್ಲಿ ಸುಬಾಬುಲ್ ನೆಡುತೋಪುಗಳನ್ನು ಬೆಳೆಸಲು ಅನುಮೋದನೆ ನೀಡಿತು (ಮಾರ್ಚ್ 2017). ಅಕ್ಟೋಬರ್ 2021ರ ಅಂತ್ಯಕ್ಕೆ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು (ಕೆಎಫ್‌ಡಿಸಿಎಲ್) ಒಟ್ಟಾರೆ 1,041 ಹೆಕ್ಟೇರುಗಳಷ್ಟು ಪ್ರದೇಶದಲ್ಲಿ ಸುಬಾಬುಲ್ ನೆಡುತೋಪುಗಳನ್ನು ಬೆಳೆಸುವುದರ ಕಡೆಗೆ ₹ 9.25 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಭರಿಸಿದ್ದಿತು.

---

[95] ಅಗರಂ ಘಟಕದಲ್ಲಿ.

[96] 2017ರಲ್ಲಿ 196.7 ಹೆಕ್ಟೇರು ಮತ್ತು 2017ರ ನೆಡುತೋಪುಗಳ ಬದುಕುಳಿಯುವ ದರ 95 ಎಂದು ಪರಿಗಣಿಸಿ 2018ರಿಂದ 2020ರ ಸಾಲುಗಳಿಗೆ 801.7 ಹೆಕ್ಟೇರಿನ ಅನುಮೋದನೆ.

2016–17ರಲ್ಲಿ ಬೆಳೆಸಲಾದ ಸುಬಾಬುಲ್ ನೆಡುತೋಪು 2019–20ರಲ್ಲಿ ಕೊಯ್ಲು ಮಾಡುವುದು ಬಾಕಿಯಿದ್ದಿತು. ಆದಾಗ್ಯೂ, ವಿಭಾಗೀಯ ವ್ಯವಸ್ಥಾಪಕರು, ಚಿಕ್ಕಮಗಳೂರು, ಇವರು ಕಾರ್ಯನಿರ್ವಾಹಕ ನಿರ್ದೇಶಕರವರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಫ್‌ಡಿಸಿಎಲ್), ಇವರಿಗೆ ಬರೆದ ತಮ್ಮ ಪತ್ರದಲ್ಲಿ (ಜುಲೈ 2020) 2016ರಿಂದ 2019ರಲ್ಲಿ ಬೆಳೆದಿರುವ ಸುಬಾಬುಲ್ ನೆಡುತೋಪುಗಳು ನಿಕೃಷ್ಟಮಟ್ಟದ ಮಳೆಯ ಕಾರಣ ನಿಕೃಷ್ಟಮಟ್ಟದ ಬೆಳವಣಿಗೆಯನ್ನು ತೋರಿಸಿರುತ್ತವೆ ಎಂಬುದಾಗಿ ವರದಿ ಮಾಡಿದ್ದರು ಹಾಗೂ ನಿರೀಕ್ಷಿತ ಇಳುವರಿಯನ್ನು ಪಡೆಯಲು ಸಾಧ್ಯವಿರುವುದಿಲ್ಲವಾದ್ದರಿಂದ ಕೊಯ್ಲು ಮಾಡುವುದನ್ನು ಮೂರು ವರ್ಷಗಳಷ್ಟು ಮುಂದೂಡುವಂತೆ ಶಿಫಾರಸು ಮಾಡಿದ್ದರು. ಕಾರ್ಯನಿರ್ವಾಹಕ ನಿರ್ದೇಶಕರು (ಇಡಿ) ಪಲ್ಪ್‌ವುಡ್ ವಿಭಾಗ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ (ಕೆಎಫ್‌ಡಿಸಿಎಲ್), ಇವರು ವ್ಯವಸ್ಥಾಪಕ ನಿರ್ದೇಶಕರಿಗೆ ಸಲ್ಲಿಸಿದ್ದ ವರದಿಯಲ್ಲಿ (ಏಪ್ರಿಲ್ 2020/ಅಕ್ಟೋಬರ್ 2020) ಸುಬಾಬುಲ್ ನೆಡುತೋಪುಗಳ ನಿಕೃಷ್ಟಮಟ್ಟದ ಬೆಳವಣಿಗೆಗೆ ನಿಕೃಷ್ಟಮಟ್ಟದ ಮಳೆ ಪ್ರಾಥಮಿಕ ಕಾರಣ ಎಂಬುದಾಗಿ ತಿಳಿಸಿದ್ದರು ಹಾಗೂ ಪಾತಿ ಮಾಡುವುದು, ಕಳೆ ಕೀಳುವುದು ಹಾಗೂ ಗೊಬ್ಬರಗಳನ್ನು ಹಾಕುವುದು ಕೂಡ ನೆಡುತೋಪುಗಳ ಸಮರ್ಪಕ ಬೆಳವಣಿಗೆಗೆ ಅಗತ್ಯವಾಗಿರುತ್ತದೆ ಹಾಗೂ ನೀಲಗಿರಿ ನೆಡುತೋಪುಗಳಿಗೆ ಅನ್ವಯಗೊಳ್ಳುವ ಮಾಹಿತಿ ಸಂಗ್ರಹಣೆಯನ್ನು ಸುಬಾಬುಲ್ ನೆಡುತೋಪಿಗೆ ಅನ್ವಯಗೊಳಿಸುವುದು ಸರಿಯಲ್ಲ ಎಂಬುದಾಗಿಯೂ ತಿಳಿಸಿದ್ದರು. ನಿಕೃಷ್ಟಮಟ್ಟದ ಮಳೆಯ ಸಂದರ್ಭದಲ್ಲಿ, ರೈತರುಗಳು ತಮ್ಮ ಹೊಲಗಳಲ್ಲಿ ಬೆಳೆದಿರುವ ಸುಬಾಬುಲ್ ನೆಡುತೋಪುಗಳಿಗೆ ನೀರನ್ನು ಒದಗಿಸುವರು, ನೆಡುತೋಪುಗಳನ್ನು ಅರಣ್ಯ ಭೂಮಿಯಲ್ಲಿ ಬೆಳೆದಿರುವುದರಿಂದ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು ನೀರನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ ಎಂಬುದಾಗಿಯೂ ಕಾರ್ಯನಿರ್ವಾಹಕ ನಿರ್ದೇಶಕರು ತಿಳಿಸಿದ್ದರು. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ, ಇವರು ಕಾರ್ಯನಿರ್ವಾಹಕ ನಿರ್ದೇಶಕರು ಹಾಗೂ ವಿಭಾಗೀಯ ವ್ಯವಸ್ಥಾಪಕರುಗಳ ಜೊತೆಗಿನ ಒಂದು ಸಭೆಯಲ್ಲಿ (ನವಂಬರ್ 2020) 2021–22ರಿಂದ ಹೊಸದಾಗಿ ಸುಬಾಬುಲ್ ನೆಡುತೋಪುಗಳನ್ನು ಬೆಳೆಸುವುದನ್ನು ಕೈಗೆತ್ತಿಕೊಳ್ಳಕೂಡದು ಎಂಬುದಾಗಿ ತೀರ್ಮಾನಿಸಿದರು.

ವಿವಿಧ ವಿಭಾಗೀಯ ವ್ಯವಸ್ಥಾಪಕರುಗಳು ಮಾಡಿದ ಶಿಫಾರಸುಗಳನ್ನು ಪರಿಗಣಿಸಿ, ಯೋಜನಾ ವರದಿಯಲ್ಲಿ ಉದ್ದೇಶಿಸಿದ್ದಂತೆ 2019–20ರಿಂದ ಇಳುವರಿಯನ್ನು ಕೋಯ್ಲು ಮಾಡಲಿಲ್ಲ.

ದಾಖಲೆಗಳನ್ನು ಲೆಕ್ಕಪರಿಶೋಧನೆಯು ಮಾಡಿದ ಪರಿಶೀಲನೆಯು ಈ ಕೆಳಗಿನ ಅಂಶಗಳನ್ನು ತೋರಿಸಿಕೊಟ್ಟಿತು (ಮಾರ್ಚ್ 2021):

1. ಹೆಚ್ಚುವರಿ ನೆಡುತೋಪುಗಳನ್ನು ಕೈಗೆತ್ತಿಕೊಳ್ಳುವ ತೀರ್ಮಾನವನ್ನು 2016ರಲ್ಲಿ 40 ಹೆಕ್ಟೇರುಗಳಲ್ಲಿ ಕೈಗೆತ್ತಿಕೊಳ್ಳಲಾದ ಪ್ರಾಯೋಗಿಕ ಯೋಜನೆಯಲ್ಲಿ ಗಮನಿಸಲಾದ ಆಶ್ವಾಸನೆಯುಕ್ತ ಬೆಳವಣಿಗೆಯ ಆಧಾರದ ಮೇರೆಗೆ ತೆಗೆದುಕೊಳ್ಳಲಾಗಿದ್ದಿತು. ನೆಡುತೋಪುಗಳು ಕೇವಲ ಆರು ತಿಂಗಳುಗಳ ಹಳೆಯದಾಗಿದ್ದವು ಹಾಗೂ ವಾಣಿಜ್ಯ ಪ್ರಮಾಣದಲ್ಲಿ ನೆಡುತೋಪುಗಳನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಸಮರ್ಪಕ ಬೆಳವಣಿಗೆಗೆ ಮಾಹಿತಿಯು ಲಭ್ಯವಿರಲಿಲ್ಲ;

2. ಜೀವಿತಗೊಳ್ಳಬಹುದಾದ ದರವು ಉತ್ತಮವಾಗಿರುವುದಾಗಿ ಕಂಡುಬಂದಿದ್ದರೂ ಸಹ, ನೆಡುತೋಪುಗಳ ಬೆಳವಣಿಗೆಯು ನಿರೀಕ್ಷಿತ ಮಟ್ಟದಲ್ಲಿರಲಿಲ್ಲ. ಮಾರ್ಚ್ 2018ರಲ್ಲಿ ನಿಕೃಷ್ಟಮಟ್ಟದ ಬೆಳವಣಿಗೆಯನ್ನು ಗಮನಿಸಿದ್ದಾಗ್ಯೂ, ತದನಂತರದಲ್ಲಿ ₹ 7.13 ಕೋಟಿ ವೆಚ್ಚಗಳನ್ನು ಭರಿಸಿ 801.7 ಹೆಕ್ಟೇರುಗಳ ಪ್ರದೇಶದಲ್ಲಿ ಸುಬಾಬುಲ್ ನೆಡುತೋಪುಗಳನ್ನು ಬೆಳೆಸಲಾಗಿದ್ದಿತು, ಇದನ್ನು ತಪ್ಪಿಸಬಹುದಾಗಿದ್ದಿತು;

3. ಸುಬಾಬುಲ್ ನೆಡುತೋಪುಗಳ ನಿರ್ವಹಣೆಗಾಗಿ ಅನುಮೋದಿಸಲಾಗಿದ್ದ ಪರಿಪಾಠಗಳ ಪ್ಯಾಕೇಜು ತಾತ್ಕಾಲಿಕ ಸ್ವರೂಪದ್ದಾಗಿತ್ತು ಹಾಗೂ 2ನೇ, 3ನೇ ಹಾಗೂ 4ನೇ ಸಾಲಿನ ನಿರ್ವಹಣೆಗಾಗಿ ಗೊಬ್ಬರಗಳನ್ನು ಹಾಕುವುದು, ಕಳೆ ಕೀಳುವುದು, ಇವುಗಳನ್ನು ಅನುವು ಮಾಡಿರಲಿಲ್ಲ. ಆದಾಗ್ಯೂ, ಪರಿಪಾಠಗಳ ಪ್ಯಾಕೇಜು ಹಣಕಾಸಿನ ಬಾಧ್ಯತೆಗಳನ್ನು ಪರಿಗಣಿಸಿದಂತೆ ಮುಂದಿನ ಕಾರ್ಯಾಚರಣೆಗಳನ್ನು ಕೈಗೆತ್ತಿಕೊಳ್ಳಬಹುದು ಎಂಬುದಾಗಿ

ತಿಳಿಸಲಾಗಿದ್ದಿತು. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತದ ಕೋರಿಕೆಯ ಮೇರೆಗೆ, ಇಂಡಿಯನ್ ಟೊಬ್ಯಾಕೋ ಕಂಪನಿ, ಭದ್ರಾಚಲಂ (ಐಟಿಸಿ), ಇಲ್ಲಿಂದ ಒಂದು ತಂಡವು ಸುಬಾಬುಲ್ ನೆಡುತೋಪುಗಳಿಗೆ ಭೇಟಿ ನೀಡಿತು ಹಾಗೂ ಗಿಡಗಳ ಸುತ್ತ ಪಾತಿ ಕಟ್ಟುವ ಮೂಲಕ ಕಳೆಗಳನ್ನು ನಿಯಂತ್ರಿಸುವುದನ್ನು, ಗೊಬ್ಬರ ಹಾಕುವುದನ್ನು ಹಾಗೂ ಬೇಸಿಗೆಯಲ್ಲಿ ನೀರು ಒದಗಿಸುವುದನ್ನು ಶಿಫಾರಸು ಮಾಡಿತು. ಆದಾಗ್ಯೂ, ಈ ಸಲಹೆಗಳನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು ಕಾರ್ಯಗತಗೊಳಿಸಿರಲಿಲ್ಲ ಹಾಗೂ ಈ ಕ್ರಮಗಳನ್ನು ತೆಗೆದುಕೊಳ್ಳದಿರಲು ಕಾರಣಗಳು ದಾಖಲೆಗಳಲ್ಲಿ ಇರಲಿಲ್ಲ;

4. ಇಂಡಿಯನ್ ಟೊಬ್ಯಾಕೋ ಕಂಪನಿಯ ತಂಡವು ತನ್ನ ಭೇಟಿಯ ವೇಳೆಯಲ್ಲಿ (2018) ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಯೆಮ್ಮೆದೊಡ್ಡಿಯ ಭೂಮಿಯು ಗಟ್ಟಿಯಾಗಿರುವುದು ಹಾಗೂ ಕಲ್ಲುಗಳಿಂದ ಕೂಡಿದ ಮಣ್ಣಿನಿಂದ ಕೂಡಿರುವುದು ಹಾಗೂ ಉತ್ತಮ ಇಳುವರಿ ಕೊಡುವುದು ಅಸಂಭವವಾಗಿರುತ್ತದೆ ಎಂಬುದನ್ನೂ ಸಹ ಗಮನಿಸಿತು. ಈ ಸಲಹೆಯನ್ನು ತಿರಸ್ಕರಿಸಿ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು 2018 ಹಾಗೂ 2020ರ ನಡುವೆ ಯೆಮ್ಮೆದೊಡ್ಡಿಯಲ್ಲಿ 120.3 ಹೆಕ್ಟೇರುಗಳ ಪ್ರದೇಶದಲ್ಲಿ ₹ 1.20 ಕೋಟಿ ವೆಚ್ಚದಲ್ಲಿ ಸುಬಾಬುಲ್ ನೆಡುತೋಪು ಬೆಳೆಸುವುದನ್ನು ಕೈಗೆತ್ತಿಕೊಂಡಿತು (ನವಂಬರ್ 2021), ಇದನ್ನು ತಪ್ಪಿಸಬಹುದಾಗಿದ್ದಿತು;

5. 2017ರಲ್ಲಿ ಬೆಳೆಸಿದ ನೆಡುತೋಪುಗಳಿಗೆ ಸಂಬಂಧಿಸಿದಂತೆ ನಿರ್ದೇಶಕರುಗಳ ಮಂಡಳಿಯ ಅನುಮೋದನೆಯನ್ನು ಪಡೆಯದೆಯೇ ಕೋಯ್ಲು ಮಾಡುವುದನ್ನು ಎಂಟನೇ ವರ್ಷಕ್ಕೆ ಮುಂದೂಡಲಾಯಿತು;

6. ಸುಬಾಬುಲ್ ನೆಡುತೋಪುಗಳ ಬೆಳವಣಿಗೆಯನ್ನು ಅವುಗಳ ಕೋಯ್ಲು ಮಾಡುವ ಸಲುವಾಗಿನ ನಿಗದಿತ ಸಾಲಿನವರೆವಿಗೂ ಉತ್ತಮವಾಗಿರುವುದಾಗಿ ಪರಿಗಣಿಸಲಾಗಿದ್ದಿತು ಹಾಗೂ ಮೂರನೇ ವರ್ಷದ ನಂತರ ಅವುಗಳ ನಿಕೃಷ್ಟಮಟ್ಟದ ಬೆಳವಣಿಗೆಗೆ ಕಾರಣಗಳನ್ನು ಸಹ ಕಂಪನಿಯು ತನಿಖೆ ಮಾಡಲಿಲ್ಲ.

ಇದನ್ನು ಸ್ಪಷ್ಟಪಡಿಸಿದನಂತರ, ನೆಡುತೋಪುಗಳ ನಿಕೃಷ್ಟಮಟ್ಟದ ಬೆಳವಣಿಗೆಗೆ ಸ್ಸಿಲ್ಲಿಡ್ ಇನ್‌ಫೆಸ್ಟೇಷನ್ ಹಾಗೂ ದೀರ್ಘಾವಧಿಯ ಒಣಹವೆಯಿಂದುಂಟಾದ ಪುನರುತ್ಪಾದಕ ಬೆಳವಣಿಗೆಯು ಪ್ರಮುಖ ಕಾರಣಗಳಾಗಿದ್ದವು ಎಂಬುದಾಗಿ ಸರ್ಕಾರವು ಉತ್ತರಿಸಿತು (ಫೆಬ್ರವರಿ 2022). 2016ರ ನೆಡುತೋಪುಗಳಿಗಾಗಿ ಮೌಲ್ಯಮಾಪನವನ್ನು 2019ರಲ್ಲಿ ಕೈಗೆತ್ತಿಕೊಳ್ಳಲಾಗಿದ್ದಿತು ಹಾಗೂ 2017, 2018, 2019ರ ನೆಡುತೋಪುಗಳಿಗೆ ಮೌಲ್ಯಮಾಪನವನ್ನು 2020ರಲ್ಲಿ ಕೈಗೆತ್ತಿಕೊಳ್ಳಲಾಯಿತು ಎಂಬುದಾಗಿಯೂ ತಿಳಿಸಿತು. ಈ ಮೌಲ್ಯಮಾಪನಗಳು ಉತ್ತಮ ಜೀವಿಸುವಿಕೆ ಶೇಕಡಾವಾರನ್ನು, ಆದರೆ ಕಡಿಮೆ ಪ್ರಮಾಣದ ಇಳುವರಿಯನ್ನು ಸೂಚಿಸುತ್ತಿದ್ದವು.

ಸ್ಸಿಲ್ಲಿಡ್ ಇನ್‌ಫೆಸ್ಟೇಷನ್‌ನ[97] ಸಂಭಾವ್ಯತೆ ಹಾಗೂ ಹೂವು ಕಚ್ಚುವ ಸಮಸ್ಯೆಗಳ ಬಗ್ಗೆ ಇಂಡಿಯನ್ ಟೊಬ್ಯಾಕೊ ಕಂಪನಿಯ ತಂಡವು ಎಚ್ಚರಿಕೆ ನೀಡಿತ್ತಾದ್ದರಿಂದ ಹಾಗೂ ಅದರ ಹೊರತಾಗಿಯೂ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು ಅದಕ್ಕೆ ತಕ್ಕಂತೆ ಪರಿಪಾಠಗಳ ಪ್ಯಾಕೇಜನ್ನು ಪರಿಷ್ಕರಿಸಲಿಲ್ಲವಾದ್ದರಿಂದ ಉತ್ತರವು ಒಪ್ಪುವಂತಿಲ್ಲ. ಅಲ್ಲದೆಯೇ, ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತವು 2017 ಸಾಲಿನಲ್ಲಿ ಹಾಗೂ ತದನಂತರದ ಸಾಲುಗಳಲ್ಲಿ ಹೊಸದಾಗಿ ನೆಡುತೋಪುಗಳನ್ನು ಕೈಗೆತ್ತಿಕೊಳ್ಳುವುದನ್ನು ತಪ್ಪಿಸಬಹುದಾಗಿದ್ದಿತು, 2019–20ರಲ್ಲಿ ಪ್ರಾಯೋಗಿಕ ಯೋಜನೆಯ ಫಲಿತಾಂಶಗಳನ್ನು ಪಡೆದುಕೊಳ್ಳುವ ತನಕ ಅದನ್ನೂ ಸಹ ಮಾಡಲಿಲ್ಲ. ವಿವೇಚನೆಯಿಂದ ಕೂಡಿರದ ತೀರ್ಮಾನವು 2017 ಮತ್ತು 2020ರ ನಡುವೆ ನೆಡುತೋಪುಗಳನ್ನು ಬೆಳೆಸುವ ಸಲುವಾಗಿ ₹ 9.25 ಕೋಟಿ ಮೊತ್ತದಷ್ಟು ತಪ್ಪಿಸಬಹುದಾಗಿದ್ದ ಹೂಡಿಕೆ ಮಾಡುವಲ್ಲಿ ಪರಿಣಮಿಸಿದ್ದಿತು.

[97] ಸ್ಸಿಲ್ಲಿಡ್‌ಗಳು ಒಂದು ಬಗೆಯ ಸಣ್ಣ ಕೀಟಗಳು, ಇವು ಗಿಡಗಳ ರಸವನ್ನು ಹೀರುತ್ತವೆ ಹಾಗೂ ಅಂತಹ ಕೀಟಗಳನ್ನು ನಿಯಂತ್ರಿಸದಿದ್ದಲ್ಲಿ ಗಿಡಗಳು ಹಾಳಾಗುವಿಕೆಯ ಸಾಧ್ಯತೆಯು ಹೆಚ್ಚಾಗಬಹುದು.

*ಶಿಫಾರಸು:*

**ಕಂಪನಿಯು ಅಂತಹ ನೆಡುತೋಪು ಯೋಜನೆಗಳನ್ನು ಕೈಗೆತ್ತಿಕೊಳ್ಳುವ ವೇಳೆಯಲ್ಲಿ ಪ್ರಾಯೋಗಿಕ ಯೋಜನೆಗಳ ಫಲಿತಾಂಶಗಳನ್ನು ಗುರುತರವಾಗಿ/ನಿಖರವಾಗಿ ಅಧ್ಯಯನ ಮಾಡತಕ್ಕದ್ದು ಹಾಗೂ ಅಗತ್ಯ ಕಾರ್ಯಾಚರಣೆಗಳನ್ನು ವೈಜ್ಞಾನಿಕ ರೀತಿಯಲ್ಲಿ ನಡೆಸಿಕೊಂಡು ಹೋಗತಕ್ಕದ್ದು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು.**

**ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ**

### *2.6. ಹೆಚ್ಚಳಗೊಳಿಸಲ್ಪಟ್ಟ ದರಗಳಲ್ಲಿ ಸಾಮಗ್ರಿಗಳ ಖರೀದಿ*

ಕಿಯಾನಿಕ್ಸ್ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿರದ ಉತ್ಪನ್ನಗಳನ್ನು ಖರೀದಿಸಿ ಹಾಗೂ ಸರ್ಕಾರದ ಇಲಾಖೆಗೆ ಸರಬರಾಜು ಮಾಡಿದ್ದರಿಂದ ಸರ್ಕಾರವು ₹ 11.13 ಕೋಟಿ ಮೊತ್ತದಷ್ಟು ನಷ್ಟವನ್ನು ಭರಿಸಿತು ಹಾಗೂ ಅಲ್ಲದೆಯೇ ಕಿಯಾನಿಕ್ಸ್ ಕರ್ನಾಟಕ ಸಾರ್ವಜನಿಕ ಖರೀದಿಗಳಲ್ಲಿ ಹಾಗೂ ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮದ ಅಡಿಯಲ್ಲಿ ನೀಡಲಾಗಿರುವ 4(ಜಿ) ವಿನಾಯಿತಿಗೆ ಸಂಬಂಧಿತ ಅನುವನ್ನು ಉಲ್ಲಂಘಿಸಿರುವುದು.

ಸರ್ಕಾರವು ತನ್ನ ಟಿಪ್ಪಣಿಯ (ಜೂನ್ 2019) ಮೂಲಕ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಡಿಯಲ್ಲಿನ ವಿದ್ಯಾರ್ಥಿ ನಿಲಯಗಳಿಗೆ 15 ಕಿಗ್ರಾಂ ಸಾಮರ್ಥ್ಯದ ವಾಶಿಂಗ್ ಮೆಷಿನ್‌ಗಳನ್ನು ಒದಗಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ (ಎಂಡಬ್ಲ್ಯುಡಿ) ನಿರ್ದೇಶಿಸಿತು. ಅಲ್ಲದೆಯೇ, ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತದ (ಕಿಯಾನಿಕ್ಸ್[98]) ಮೂಲಕ ದರಪಟ್ಟಿಯನ್ನು ಪಡೆದುಕೊಂಡು ₹ 15 ಕೋಟಿ ಮೊತ್ತಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆಯೂ ಅದು ಆದೇಶಿಸಿದ್ದಿತು. ಸರ್ಕಾರವು ಮತ್ತೊಂದು ಟಿಪ್ಪಣಿಯ (ಮಾರ್ಚ್ 2020) ಮೂಲಕ ಅರೆ–ಸ್ವಯಂಚಾಲಿತ ಚಪಾತಿ ಮಾಡುವ ಯಂತ್ರಗಳನ್ನು ವಿದ್ಯಾರ್ಥಿನಿಲಯಗಳಿಗೆ ಖರೀದಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ನಿರ್ದೇಶಿಸಿದ್ದಿತು.

ಆದ್ದರಿಂದ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 270 ಹಾಸ್ಟೆಲುಗಳಿಗೆ 270 ವಾಶಿಂಗ್ ಮೆಷಿನ್‌ಗಳ ಸರಬರಾಜಿಗಾಗಿ (ಜೂನ್ 2019) ಹಾಗೂ 82 ಅರೆ–ಸ್ವಯಂಚಾಲಿತ ಚಪಾತಿ ಮಾಡುವ ಯಂತ್ರಗಳನ್ನು (ಮಾರ್ಚ್ 2020) ಕಿಯಾನಿಕ್ಸ್ ಪ್ರತ್ಯೇಕ ಕೋರಿಕೆಗಳನ್ನು ಕಿಯಾನಿಕ್ಸ್ ತಿಳಿಸುವ ದರಗಳ ಆಧಾರದ ಮೇರೆಗೆ ಸರಬರಾಜು ಮಾಡುವ ಸಲುವಾಗಿ ಸ್ವೀಕರಿಸಿತು. ಅರೆ–ಸ್ವಯಂಚಾಲಿತ ಚಪಾತಿ ತಯಾರಿಸುವ ಯಂತ್ರಗಳಿಗೆ ಸಂಬಂಧಿಸಿದಂತೆ, ಕಿಯಾನಿಕ್ಸ್ ಮೂಲಕ ದರ ಪಟ್ಟಿಯನ್ನು ಪಡೆದುಕೊಳ್ಳುವ ಸಲುವಾಗಿ ಸರ್ಕಾರದಿಂದ ನೇರವಾಗಿ ಆದೇಶಗಳಿರಲಿಲ್ಲ ಮತ್ತು ಆದಾಗ್ಯೂ, ಅದನ್ನು ವಾಷಿಂಗ್ ಮೆಷಿನ್‌ನ ಜೊತೆಗೆ ಸರಬರಾಜು ಮಾಡುವ ಸಲುವಾಗಿ ಕಿಯಾನಿಕ್ಸ್‌ಗೆ ಸರಬರಾಜು ಆದೇಶವನ್ನು ನೀಡಲಾಗಿದ್ದಿತು. ಸರಬರಾಜು ಆದೇಶಗಳನ್ನು ಸ್ವೀಕರಿಸಿದನಂತರ, ಕಿಯಾನಿಕ್ಸ್ ತನ್ನ ಅನುಮೋದಿತ ಪಟ್ಟಿಯಲ್ಲಿದ್ದ ವ್ಯಾಪಾರಿ ಸಹಭಾಗಿಗಳಿಂದ (ಬಿಎ) ದರಗಳನ್ನು ತಿಳಿಸುವಂತೆ ಕೋರಿ ನಿರ್ಬಂಧಿತ ದರ ಸವಾಲುಗಳನ್ನು ಆಹ್ವಾನಿಸಿತು (ಜುಲೈ 2019 ಹಾಗೂ ಏಪ್ರಿಲ್ 2020) ಹಾಗೂ ತದನಂತರದಲ್ಲಿ ಅತೀ ಕಡಿಮೆ ದರಗಳನ್ನು ತಿಳಿಸಿದ್ದಂತಹ ತನ್ನ ಅನುಮೋದಿತ ಪಟ್ಟಿಯಲ್ಲಿದ್ದಂತಹ ಈ ಕೆಳಗಿನ ಸಂಸ್ಥೆಗಳಿಗೆ ಖರೀದಿ ಆದೇಶಗಳನ್ನು ನೀಡಲಾಗಿದ್ದಿತು (ಸೆಪ್ಟೆಂಬರ್ 2019 ಹಾಗೂ 2020).

- ಮೆ. ಸಿದ್ದಾರ್ಥ ಏಜನ್ಸೀಸ್ – ವಾಶಿಂಗ್ ಮೆಷಿನ್‌ಗಳಿಗಾಗಿ.

[98] 1976ರಲ್ಲಿ ಸ್ಥಾಪಿಸಲಾದಂತಹ ಕಿಯಾನಿಕ್ಸ್ ಮಾಹಿತಿ ತಂತ್ರಜ್ಞಾನ ಶಿಕ್ಷಣವನ್ನು ಹಾಗೂ ಮಾಹಿತಿ ತಂತ್ರಜ್ಞಾನ ಅನುಕೂಲತೆಯಿರುವ ಸೇವೆಗಳನ್ನು ಒದಗಿಸುವುದು, ಇನ್ನಿತರವುಗಳ ಜೊತೆಗೆ ಸರ್ಕಾರಿ ಸಂಸ್ಥೆಗಳಿಗೆ ಅನುಕೂಲತೆಗಳ ನಿರ್ವಹಣಾ ಸೇವೆಗಳನ್ನು ಒದಗಿಸುವುದು, ಗಣಕಯಂತ್ರ ಯಂತ್ರಾಂಶಗಳನ್ನು, ತಂತ್ರಾಂಶಗಳನ್ನು ಮಾರುಕಟ್ಟೆಗೆ ಬಿಡುವುದು, ವಿದ್ಯುನ್ಮಾನ ಉಪಕರಣಗಳನ್ನು ವಿವಿಧ ಸರ್ಕಾರಿ ಸಂಸ್ಥೆಗಳಿಗೆ ಒದಗಿಸುವುದು, ಸರ್ಕಾರಿ ಸಂಸ್ಥೆಗಳಿಗೆ ಇ–ಟೆಂಡರಿಂಗ್ ಪರಿಹಾರಕಗಳನ್ನು ಒದಗಿಸುವುದು, ಇತ್ಯಾದಿಗಳಲ್ಲಿ ತೊಡಗಿಸಿಕೊಂಡಿರುವುದು.

- ಮೆ. ನ್ಯೂಜೆನ್ ಸೆಕ್ಯುರಿಟಿ ಸಲ್ಯೂಷನ್ಸ್ – ಚಪಾತಿ ಮಾಡುವ ಸಾಧನಗಳು/ಯಂತ್ರಗಳಿಗಾಗಿ.

ಕಿಯಾನಿಕ್ಸ್ ಉತ್ಪನ್ನಗಳ ಸರಬರಾಜಿಗಾಗಿ ಹಾಗೂ ಸೇವೆಗಳನ್ನು ಪಡೆದುಕೊಳ್ಳುವ ಸಲುವಾಗಿ ಸಂಸ್ಥೆಗಳನ್ನು ತನ್ನ ಪಟ್ಟಿಯಲ್ಲಿ ಅನುಮೋದಿಸಿಟ್ಟುಕೊಳ್ಳುವ ಪರಿಪಾಠವನ್ನು ಹೊಂದಿರುವುದು. ಸಂಸ್ಥೆಗಳ ಅನುಮೋದಿತ ಪಟ್ಟಿಯ ತಯಾರಿಕೆಗಾಗಿನ ಮಾರ್ಗಸೂಚಿಗಳ/ಆರ್‌ಎಫ್‌ಪಿ ಅನುಸಾರ, ಸಂಸ್ಥೆಗಳು ಮೂಲತ: ಉಪಕರಣ ತಯಾರಕರುಗಳಾಗಿರತಕ್ಕದ್ದು (ಒಇಎಂ) ಅಥವಾ ಸಂಬಂಧಿತ ಉಪಕರಣಗಳ ಅಧಿಕೃತವಾಗಿ ಮನ್ನಣೆ ಪಡೆದಿರುವ ವಿತರಕರು/ವರ್ತಕರಾಗಿರತಕ್ಕದ್ದು. ಮೇಲೆ ತಿಳಿಸಲಾದ ಎರಡೂ ಸಂಸ್ಥೆಗಳು ಯಾವುದೇ ಉತ್ಪನ್ನಗಳಿಗೆ ಮೂಲತ: ಉಪಕರಣ ತಯಾರಕರಾಗಿರಲಿಲ್ಲ (ಒಇಎಂ) ಅಥವಾ ಅಧಿಕೃತವಾಗಿ ಮನ್ನಣೆ ಪಡೆದಿರುವ ವರ್ತಕರಾಗಿರಲಿಲ್ಲ (ಆಥರೈಸ್ಡ್ ಡಿಸ್ಟ್ರಿಬ್ಯೂಟರ್ಸ್) ಎಂಬುದನ್ನು ಲೆಕ್ಕಪರಿಶೋಧನೆಯ ಪರಿಶೀಲನೆಯು ತೋರಿಸಿಕೊಟ್ಟಿತು ಮತ್ತು ಆದ್ದರಿಂದ ಇವುಗಳನ್ನು ಅನುಮೋದಿತ/ಅಧಿಕೃತ ಪಟ್ಟಿಯಲ್ಲಿ ಸೇರಿಸಬಾರದಿದ್ದಿತು. ಆದಾಗ್ಯೂ, ಕಿಯಾನಿಕ್ಸ್ ತನ್ನ ಅನುಮೋದಿತ /ಅಧಿಕೃತ ಪಟ್ಟಿಯಲ್ಲಿ ಈ ಎರಡು ಸಂಸ್ಥೆಗಳನ್ನು ಸಂಸ್ಥೆಗಳ ಅನುಮೋದಿತ ಪಟ್ಟಿಯ ತಯಾರಿಕೆಗಾಗಿನ ಮಾರ್ಗಸೂಚಿಗಳ/ಆರ್‌ಎಫ್‌ಪಿಯನ್ನು ಉಲ್ಲಂಘಿಸಿ ತನ್ನ ಅನುಮೋದಿತ ಪಟ್ಟಿಯಲ್ಲಿ ಸೇರಿಸಿದ್ದಿತು ಹಾಗೂ ಇದರಿಂದ ಆ ಸಂಸ್ಥೆಗಳು ನಿರ್ಬಂಧಿತ ದರ ಸವಾಲುಗಳ ಪ್ರಕ್ರಿಯೆಯಲ್ಲಿ ಭಾಗವಹಿಸಿ ಉತ್ಪನ್ನಗಳನ್ನು ಸರಬರಾಜು ಮಾಡುವ ಆದೇಶಗಳನ್ನು ಪಡೆಯಲು ಅನುವುಮಾಡಿತು.

ಸಾಮಗ್ರಿಗಳನ್ನು ನೇರವಾಗಿ ವಿದ್ಯಾರ್ಥಿನಿಲಯಗಳಿಗೆ ಜುಲೈ 2020 ಹಾಗೂ ಜುಲೈ 2021ರ ನಡುವೆ ಸರಬರಾಜು ಮಾಡಲಾಗಿದ್ದಿತು ಹಾಗೂ ಕಿಯಾನಿಕ್ಸ್ ವಿದ್ಯಾರ್ಥಿ ನಿಲಯಗಳ ಅಧಿಕಾರಿಗಳಿಂದ ಸಾಮಗ್ರಿ ವಿತರಣೆಯ ಪ್ರಮಾಣಪತ್ರಗಳನ್ನು ಪಡೆದುಕೊಂಡನಂತರ ₹ 15.52 ಕೋಟಿ ಮೊತ್ತವನ್ನು ಸಹಭಾಗಿ ಸಂಸ್ಥೆಗಳಿಗೆ ಬಿಡುಗಡೆಗೊಳಿಸಿತು.

ಲೆಕ್ಕಪರಿಶೋಧನೆಯು ಕಿಯಾನಿಕ್ಸ್ ಅನುಸರಿಸುತ್ತಿರುವ ಖರೀದಿ ಪ್ರಕ್ರಿಯೆಯನ್ನು ಪರಿಶೀಲಿಸಿತು (ಜನವರಿ 2021) ಹಾಗೂ ಈ ನಿಟ್ಟಿನಲ್ಲಿ ಗಮನಿಸಲಾದ ಅಂಶಗಳನ್ನು ಈ ಕೆಳಗೆ ವಿವರಿಸಲಾಗಿದೆ:

1. ಮಾಹಿತಿ ತಂತ್ರಜ್ಞಾನ ಸಂಬಂಧಿತ ಸರಕುಗಳು ಮತ್ತು ಸೇವೆಗಳನ್ನು ಖರೀದಿಗಾಗಿ/ಪಡೆದುಕೊಳ್ಳುವ ಸಲುವಾಗಿ ಹಾಗೂ ಮಾಹಿತಿ ತಂತ್ರಜ್ಞಾನ ಸಂಬಂಧಿತ ಉತ್ಪನ್ನಗಳು/ಸೇವೆಗಳನ್ನು ಖರೀದಿಸುವ/ಪಡೆದುಕೊಳ್ಳುವ ಸಲುವಾಗಿ ಮಾತ್ರ ಸರ್ಕಾರವು ಕಿಯಾನಿಕ್ಸ್ ಗೆ 4(ಜಿ) ಅನುಮತಿಯನ್ನು ನೀಡಿದ್ದಿತು. ಆದಾಗ್ಯೂ, ಕಿಯಾನಿಕ್ಸ್ ಒಂದು ಸುತ್ತೋಲೆ ಮೂಲಕ (ಜುಲೈ 2019) 4(ಜಿ) ವಿನಾಯಿತಿಯನ್ನು ಉಲ್ಲೇಖಿಸುವ ಮೂಲಕ ಸರ್ಕಾರಿ ಇಲಾಖೆಗಳು/ಸಂಸ್ಥೆಗಳು ಆದೇಶಗಳನ್ನು ನೀಡುವಂತೆ ಕೋರಿದ್ದಿತು ಹಾಗೂ ತದನಂತರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಮಾಹಿತಿ ತಂತ್ರಜ್ಞಾನೇತರ ಉತ್ಪನ್ನಗಳು/ಸೇವೆಗಳಿಗಾಗಿ ಆದೇಶಗಳನ್ನು ನೀಡಿತು, ಇದು ನಿಯಮಬಾಹಿರ ಕ್ರಮವಾಗಿದ್ದಿತು.

2. ವಾಷಿಂಗ್ ಮೆಷಿನ್‌ಗಳು ಹಾಗೂ ಚಪಾತಿ ಮಾಡುವ ಸಾಧನಗಳು ಗ್ರಾಹಕರು ಉಪಯೋಗಿಸುವ ಉತ್ಪನ್ನಗಳು, ಅವುಗಳು ಮಾರುಕಟ್ಟೆಯಲ್ಲಿ ಸಿದ್ಧವಾಗಿ ಲಭ್ಯವಿರುತ್ತವೆ ಹಾಗೂ ಅವುಗಳ ದರಗಳು ತಯಾರಕರುಗಳ/ಅಧಿಕೃತ ವರ್ತಕರುಗಳ ಜಾಲತಾಣಗಳಲ್ಲಿ (06 ಜನವರಿ 2022ರಲ್ಲಿದ್ದಂತೆ ದರಗಳು) ಲಭ್ಯವಿರುತ್ತವೆ. ಆದಾಗ್ಯೂ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು 270 ವಾಷಿಂಗ್ ಮೆಷಿನ್‌ಗಳು ಹಾಗೂ 82 ಚಪಾತಿ ಮಾಡುವ ಸಾಧನಗಳ ಸರಬರಾಜು ಮಾಡುವ ಸಲುವಾಗಿ ₹ 16.30 ಕೋಟಿ ಮೊತ್ತವನ್ನು ಕಿಯಾನಿಕ್ಸ್‌ಗೆ ಬಿಡುಗಡೆಗೊಳಿಸಿತು. ಕಿಯಾನಿಕ್ಸ್ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ತಿಳಿಸಿದ ದರಗಳು ಈ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಭ್ಯವಿರುವ ದರಗಳಿಗಿಂತ ಮೂರರಿಂದ ನಾಲ್ಕು ಪಟ್ಟು ಅಧಿಕವಾಗಿದ್ದವು. ದಾಖಲೆಗಳ ಪರಿಶೀಲನೆಯು ಕಿಯಾನಿಕ್ಸ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ಈ ಉತ್ಪನ್ನಗಳನ್ನು ಯಾವ ದರಗಳಲ್ಲಿ ಖರೀದಿಸಬಹುದು ಎಂಬುದರ ಬಗ್ಗೆ ಖಚಿತಪಡಿಸಿಕೊಳ್ಳುವ ಸಲುವಾಗಿ ಯಾವುದೇ ಪ್ರಯತ್ನಗಳನ್ನು ಮಾಡಿರಲಿಲ್ಲ. ಇದು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ₹ 10.59 ಕೋಟಿ ಮೊತ್ತವು ನಷ್ಟವಾಗುವಲ್ಲಿ ಪರಿಣಮಿಸಿದ್ದಿತು.

**ಕೋಷ್ಟಕ ಸಂಖ್ಯೆ 2.6.1: ಹೆಚ್ಚಳಗೊಳಿಸಲ್ಪಟ್ಟಿದ್ದ ದರಗಳ ಕಾರಣ ಭರಿಸಲಾಗಿದ್ದ ಹೆಚ್ಚುವರಿ ವೆಚ್ಚ**

**(₹ ಲಕ್ಷದಲ್ಲಿ)**

| ಕ್ರಮ ಸಂಖ್ಯೆ | ಐಟಂ | ಸರಬರಾಜು ಮಾಡಲಾದ ಸಂಖ್ಯೆಗಳು | ಯೂನಿಟ್ಟು ಒಂದಕ್ಕೆ ದರ | ಮಾರುಕಟ್ಟೆ ದರ | ವ್ಯತ್ಯಾಸ | ಹೆಚ್ಚುವರಿ ವೆಚ್ಚ |
|---|---|---|---|---|---|---|
| 1 | ಎಲ್ ಜಿ ವಾಷಿಂಗ್ ಮೆಷಿನ್‌ಗಳು | 182 | 4.56 | 1.00 | 3.56 | 647.76 |
| 2 | ಸ್ಟಾರ್‌ಫಿಶ್ ವಾಷಿಂಗ್ ಮೆಷಿನ್ | 51 | 4.56 | 2.70 | 1.86 | 94.81 |
| 3 | ಅರೆ–ಸ್ವಯಂಚಾಲಿತ ಚಪಾತಿ ಮಾಡುವ ಸಾಧನ | 82 | 3.09 | 1.20 | 1.89 | 154.77 |
| | **ಒಟ್ಟು** | **315** | | | | **897.34** |
| | ಕೂಡುವುದು ಜಿಎಸ್‌ಟಿ 18% | | | | | 161.52 |
| | **ಒಟ್ಟಾರೆ ಮೊತ್ತ** | | | | | **1058.86** |

**ಮೂಲ : ಕಿಯಾನಿಕ್ಸ್‌ನಿಂದ ಪಡೆದುಕೊಂಡ ವಿವರಗಳಿಂದ ಲೆಕ್ಕಪರಿಶೋಧನೆಯು ಸಂಕಲಿಸಿರುವುದು.**

3. ಅಲ್ಪಸಂಖ್ಯಾತರುಗಳ ಕಲ್ಯಾಣ ಇಲಾಖೆಯು ವಾಷಿಂಗ್ ಮೆಷಿನ್‌ಗಳ ಸರಬರಾಜಿಗಾಗಿ ತಮ್ಮ ಆದೇಶಗಳಲ್ಲಿ ಯಂತ್ರಗಳ ದರಗಳು ಮಾರುಕಟ್ಟೆ ದರಗಳಿಗೆ ಅನುಗುಣವಾಗಿರತಕ್ಕದ್ದು ಹಾಗೂ ಸ್ಪರ್ಧಾತ್ಮಕವಾಗಿರತಕ್ಕದ್ದು ಹಾಗೂ ಬ್ರಾಂಡು ಮತ್ತು ಮಾಡೆಲ್ ವಿವರಗಳನ್ನು ಕಿಯಾನಿಕ್ಸ್ ತಿಳಿಸತಕ್ಕದ್ದು ಎಂಬುದಾಗಿ ಷರತ್ತುಗಳನ್ನು ನಿರ್ದಿಷ್ಟಪಡಿಸಿದ್ದಿತು. ಆದಾಗ್ಯೂ, ಕಿಯಾನಿಕ್ಸ್ ಈ ವಿವರಗಳನ್ನು ನೀಡಿದ್ದಕ್ಕೆ ಸಂಬಂಧಿಸಿದಂತೆ ದಾಖಲೆಗಳಲ್ಲಿ ಏನೂ ಇರಲಿಲ್ಲ. ಅಲ್ಲದೆಯೇ ಸಹಭಾಗಿ ವ್ಯಾಪಾರಿಗಳು ಅಂದರೆ ಮೆ. ಸಿದ್ಧಾರ್ಥ ಏಜನ್ಸೀಸ್, ಇವರು ನೀಡಿದ್ದ ಇನ್ವಾಯ್ಸುಗಳು ಹಾಗೂ ವಿದ್ಯಾರ್ಥಿನಿಲಯಗಳಿಂದ ಪಡೆದುಕೊಳ್ಳಲಾಗಿರುವ ದಾಸ್ತಾನು ಪ್ರಮಾಣಪತ್ರಗಳು ಬ್ರಾಂಡ್ ಮತ್ತು ಮಾಡೆಲ್ ವಿವರಗಳನ್ನು ಒಳಗೊಂಡಿರುವುದಿಲ್ಲ. ಮೆ. ಸಿದ್ಧಾರ್ಥ ಏಜನ್ಸೀಸ್ ವಾಷಿಂಗ್ ಮೆಷಿನ್‌ಗಳ ಎರಡು ಬ್ರಾಂಡುಗಳನ್ನು (ಎಲ್‌ಜಿ–15 ಕಿಗ್ರಾಂ ಸಾಮರ್ಥ್ಯ ಹಾಗೂ ಸ್ಟಾರ್‌ಫಿಶ್–18 ಕಿಗ್ರಾಂ ಸಾಮರ್ಥ್ಯ) ವಿದ್ಯಾರ್ಥಿನಿಲಯಗಳಿಗೆ ಸರಬರಾಜು ಮಾಡಿದ್ದರು.

4. 4(ಜಿ) ವಿನಾಯಿತಿಯಲ್ಲಿ ನಿರ್ದಿಷ್ಟಪಡಿಸಲಾಗಿರುವ ಷರತ್ತುಗಳ ಅನುಸಾರ, ಕಿಯಾನಿಕ್ಸ್ ಸಿಬ್ಬಂದಿ ಸರಬರಾಜಿಗೆ ಮಾತ್ರ ಶೇಕಡಾ 5ರವರೆಗೆ ಸೇವಾ ಶುಲ್ಕಗಳನ್ನು ಪಡೆದುಕೊಳ್ಳಲು ಅನುಮತಿ ನೀಡಲಾಗಿರುವುದು. ಆದಾಗ್ಯೂ, ಕಿಯಾನಿಕ್ಸ್ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸರಕುಗಳನ್ನು ಸರಬರಾಜು ಮಾಡಿದ್ದಕ್ಕಾಗಿ ಷರತ್ತುಗಳನ್ನು ಉಲ್ಲಂಘಿಸಿ ಶೇಕಡಾ 3 ಅಥವಾ ಶೇಕಡ 5ರಂತೆ ₹ 54.49 ಲಕ್ಷ[99] ಮೊತ್ತದಷ್ಟು ಸೇವಾ ಶುಲ್ಕಗಳನ್ನು ವಸೂಲಾತಿ ಮಾಡಿದ್ದಿತು.

ಕಿಯಾನಿಕ್ಸ್ ವಾಷಿಂಗ್ ಮೆಷಿನ್‌ಗಳು ಹಾಗೂ ಚಪಾತಿ ಮಾಡುವ ಸಾಧನಗಳನ್ನು ಹೆಚ್ಚಳಗೊಳಿಸಲ್ಪಟ್ಟ ದರಗಳಲ್ಲಿ ಮೂಲತ: ಉಪಕರಣ ತಯಾರಕರುಗಳಾಗಿರದವರಿಂದ (ಒಇಎಂಯೇತರ)/ಅನಧಿಕೃತ ವರ್ತಕರುಗಳಿಂದ ಖರೀದಿಸಿದ್ದು ಹಾಗೂ ಸರ್ಕಾರಕ್ಕೆ ಮಾರಾಟ ಮಾಡಿದ್ದು ₹ 11.13 ಕೋಟಿ ಮೊತ್ತವು ನಷ್ಟವಾಗುವುದರಲ್ಲಿ ಪರಿಣಮಿಸಿದ್ದಿತು ಹಾಗೂ ಅಲ್ಲದೆಯೇ ಕಿಯಾನಿಕ್ಸ್ ಅನಧಿಕೃತವಾಗಿ ಸೇವಾ ಶುಲ್ಕಗಳನ್ನು (₹ 54.49 ಲಕ್ಷ) ವಸೂಲಾತಿ ಮಾಡಿದ್ದಿತು. ಮುಂದುವರೆದು, ಈ ಪ್ರಕರಣದಲ್ಲಿ ಖರೀದಿಸಲಾಗಿರುವ ಸರಕುಗಳು ಮಾಹಿತಿ ತಂತ್ರಜ್ಞಾನೇತರ ಉತ್ಪನ್ನಗಳು ಆಗಿರುವುದರಿಂದ, ಮಾಹಿತಿ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸಂಬಂಧಿತ ಉತ್ಪನ್ನಗಳಿಗೆ ಮಾತ್ರ ಅನ್ವಯಗೊಳ್ಳುತ್ತಿದ್ದ 4(ಜಿ) ವಿನಾಯಿತಿಯನ್ನು ಕಿಯಾನಿಕ್ಸ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯು ದುರುಪಯೋಗಪಡಿಸಿಕೊಂಡಿರುವವು. ಉತ್ತರದಾಯಿತ್ವ/ಜವಾಬ್ದಾರಿಯನ್ನು ನಿಗದಿಪಡಿಸುವ ಸಲುವಾಗಿ ಹಾಗೂ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಸಂಬಂಧಿಸಿದವರಿಂದ ವಸೂಲಾತಿ ಮಾಡುವ ಸಲುವಾಗಿ ಸರ್ಕಾರವು ಒಂದು ಸವಿವರ ತನಿಖೆಯನ್ನು ನಡೆಸುವ ಅಗತ್ಯತೆಯನ್ನು ಈ ಪ್ರಕರಣವು ಹೊಂದಿರುತ್ತದೆ.

ಈ ವಿಷಯವನ್ನು ಸರ್ಕಾರಕ್ಕೆ ತಿಳಿಸಿದನಂತರ (ಫೆಬ್ರವರಿ 2022), ಸರ್ಕಾರದ ಉತ್ತರವು ಈ ಕೆಳಗಿನಂತೆ ಆಗಿದ್ದಿತು:

[99] ವಾಷಿಂಗ್ ಮೆಷಿನ್‌ಗಳಿಗೆ ₹ 38.77 ಲಕ್ಷ + ಚಪಾತಿ ಮಾಡುವ ಸಾಧನಗಳಿಗೆ ₹ 15.72 ಲಕ್ಷ.

1. ಕಿಯಾನಿಕ್ಸ್‌ನ ಸಂಸ್ಥಾಪನಾ ಜ್ಞಾಪನಾಪತ್ರವು (ಮೆಮೊರಾಂಡಮ್ ಆಫ್ ಅಸೋಸಿಯೇಷನ್) ವಿದ್ಯುನ್ಮಾನ/ವಿದ್ಯುಚ್ಛಕ್ತಿಯ ಹಾಗೂ ಯಾಂತ್ರಿಕ ಉಪಕರಣಗಳ ಭಾರತೀಯ ಅಥವಾ ಸಾಗರೋತ್ತರ ತಯಾರಕರ/ವರ್ತಕರ ಏಜೆಂಟ್/ಪ್ರತಿನಿಧಿಯಾಗಿ ವರ್ತಿಸುವ ಅಧಿಕಾರವನ್ನು ನೀಡಿರುತ್ತದೆ;

2. ಮೂಲ ಉಪಕರಣ ತಯಾರಕರು ಉತ್ಪನ್ನಗಳನ್ನು ನೇರವಾಗಿ ಗ್ರಾಹಕರುಗಳಿಗೆ ಪ್ರತಿನಿಧಿಗಳು/ವರ್ತಕರುಗಳ ಮೂಲಕವಲ್ಲದೆಯೇ ಮಾರಾಟ ಮಾಡುವುದಿಲ್ಲ ಹಾಗೂ ಸಾಮಗ್ರಿಗಳನ್ನು ಅಲ್ಪಸಂಖ್ಯಾತರುಗಳ ಕಲ್ಯಾಣ ಇಲಾಖೆಯ ಜೊತೆ ಸಮಾಲೋಚಿಸುವುದರೊಂದಿಗೆ ಎಲ್ 1 ವರ್ತಕರಿಂದ ಖರೀದಿಸಲಾಗಿರುವುದು. ವೆಚ್ಚಗಳು ಸಾಗಾಣಿಕೆ, ಸ್ಥಾಪನೆ, ವಿದ್ಯುಚ್ಛಕ್ತಿ/ನಲ್ಲಿ ಸಂಪರ್ಕ, ವರ್ತಕರ ಲಾಭಾಂಶ ಶುಲ್ಕಗಳು ವಿಸ್ತರಿಸಲ್ಪಟ್ಟ ಖಾತರಿ ಅವಧಿ, ಇತ್ಯಾದಿಗಳನ್ನು ಒಳಗೊಂಡಿರುತ್ತದೆ;

3. 65 ಸ್ಟಾರ್‌ಫಿಶ್ ವಾಷಿಂಗ್ ಮೆಷಿನ್‌ಗಳನ್ನು ಸರಬರಾಜು ಮಾಡಿದನಂತರ, ಕೋವಿಡ್ 19ರ ಲಾಕ್‌ಡೌನ್ ಕಾರಣ ಸ್ಟಾರ್‌ಫಿಶ್ ವಾಷಿಂಗ್ ಮೆಷಿನ್‌ಗಳ ಸರಬರಾಜಿನಲ್ಲಿ ಕೊರತೆಯನ್ನು ಎದುರಿಸಲಾಯಿತು, ಅದಕ್ಕೆ ಸಮನಾದ ಯಂತ್ರಗಳನ್ನು (185 ಸಂಖ್ಯೆಗಳು) ಸರಬರಾಜು ಮಾಡಲು ಮಾರಾಟಗಾರರು ಅಲ್ಪಸಂಖ್ಯಾತರುಗಳ ಕಲ್ಯಾಣ ಇಲಾಖೆಯ ಅನುಮತಿ ಪಡೆದರು. ವಿದ್ಯಾರ್ಥಿನಿಲಯಗಳು ಯಂತ್ರಗಳನ್ನು ಸ್ವೀಕರಿಸಿದವು, ಆದರೆ ವರ್ತಕರು 185 ಯೂನಿಟ್ಟುಗಳ ನಿರ್ದಿಷ್ಟನಿರೂಪಣೆಗಳನ್ನು ವಿದ್ಯಾರ್ಥಿನಿಲಯದ ಅಧಿಕಾರಿಗಳು ಅಥವಾ ಕಿಯಾನಿಕ್ಸ್‌ಗೆ ತಿಳಿಸಲಿಲ್ಲ, ಆದರೆ ಸ್ಟಾರ್‌ಫಿಶ್ ವಾಷಿಂಗ್ ಮೆಷಿನ್‌ಗೆ ಸಮನಾಗಿ ಯಂತ್ರ ಒಂದಕ್ಕೆ ₹ 4,55,900 ರಂತೆ ಬಿಲ್ಲು ಮಾಡಿರುವರು. ಇದು ವಿಶ್ವಾಸದ ಉಲ್ಲಂಘನೆಯಾಗಿದ್ದಿತು ಹಾಗೂ ಟೆಂಡರು ಷರತ್ತುಗಳ ಉಲ್ಲಂಘನೆಯಾಗಿದ್ದಿತು. ಹೆಚ್ಚುವರಿಯಾದ ₹ 7.77 ಕೋಟಿ ಮೊತ್ತದ ವಸೂಲಾತಿಗಾಗಿ ವರ್ತಕರಿಗೆ ನೋಟೀಸನ್ನು ನೀಡಲಾಗಿರುವುದು;

4. ಚಪಾತಿ ತಯಾರಿಸುವ ಸಾಧನಕ್ಕೆ ಸಂಬಂಧಿಸಿದಂತೆ ಯೂನಿಟ್ಟು ಒಂದಕ್ಕೆ ₹ 2.20 ಲಕ್ಷ ಹಾಗೂ ಜಿಎಸ್‌ಟಿ ಸೇರಿದಂತೆ ಎಲ್ಲಾ ಇತರೆ ವೆಚ್ಚಗಳೊಂದಿಗೆ ಯೂನಿಟ್ಟು ಒಂದಕ್ಕೆ ಒಟ್ಟಾರೆ ವೆಚ್ಚವು ₹ 3,64,325 ಆಗುತ್ತದೆ ಹಾಗೂ ಹೆಚ್ಚಿಸಲ್ಪಟ್ಟ ದರಗಳಲ್ಲಿ ಖರೀದಿಸಿಲ್ಲ.

ಈ ಕೆಳಗಿನ ಅಂಶಗಳ ಕಾರಣ ಉತ್ತರವು ಒಪ್ಪುವಂತಿಲ್ಲ:

1. ವಾಷಿಂಗ್ ಮೆಷಿನ್‌ಗಳು ಮತ್ತು ಚಪಾತಿ ಮಾಡುವ ಸಾಧನಗಳು ಹಣಕಾಸು ಇಲಾಖೆಯು ನೀಡಿರುವ 4(ಜಿ) ವಿನಾಯಿತಿಯನ್ನು ನೀಡಲಾಗಿರುವಂತಹ ಮಾಹಿತಿ ತಂತ್ರಜ್ಞಾನ ಉತ್ಪನ್ನಗಳ ಪ್ರವರ್ಗಗಳ ಅಡಿಯಲ್ಲಿ ಬರುವುದಿಲ್ಲ;
2. ಕಿಯಾನಿಕ್ಸ್ ಅಲ್ಪಸಂಖ್ಯಾತರುಗಳ ಕಲ್ಯಾಣ ಇಲಾಖೆಯು ಕಾಮಗಾರಿ ಆದೇಶದಲ್ಲಿ ನಿರ್ದಿಷ್ಟಪಡಿಸಿದ್ದ ಷರತ್ತುಗಳ ಅನುಸಾರ, ವರ್ತಕರು ಒಪ್ಪಿಕೊಂಡಿರುವ ಮಾರಾಟ ದರಗಳು ಸ್ಪರ್ಧಾತ್ಮಕ ಮಾರುಕಟ್ಟೆ ದರಗಳ ಅನುಸಾರ ಆಗಿರುವುದನ್ನು ಖಚಿತಪಡಿಸಿಕೊಳ್ಳುವಲ್ಲಿ ವಿಫಲಗೊಂಡಿದ್ದಿತು;
3. ಅರೆ–ಸ್ವಯಂಚಾಲಿತ ಚಪಾತಿ ತಯಾರಿಸುವ ಸಾಧನವನ್ನು ಎಲ್ 1 ವರ್ತಕರಿಂದ ಖರೀದಿಸಲಾಯಿತು ಎಂಬುದಾಗಿ ನೀಡಲಾಗಿರುವ ಉತ್ತರವನ್ನು, ಮೂಲ ದರವು (ಯೂನಿಟ್ಟು ಒಂದಕ್ಕೆ ₹ 2.20 ಲಕ್ಷ) ಗರಿಷ್ಠ ಚಿಲ್ಲರೆ ಮಾರಾಟದ ದರವಾದ ₹ 1.20 ಲಕ್ಷಕ್ಕಿಂತ ಅಧಿಕವಾಗಿರುವುದರಿಂದ ಹಾಗೂ ಸಗಟು ಖರೀದಿ ಮಾಡಿದಲ್ಲಿ ಅದು ಇನ್ನೂ ಕಡಿಮೆ ದರಕ್ಕೆ ಲಭ್ಯವಾಗುವುದರಿಂದ ಒಪ್ಪಿಕೊಂಡಿರಲಿಲ್ಲ

ಆದಾಗ್ಯೂ, ವರ್ತಕರಿಂದ ₹ 7.77 ಕೋಟಿ ಮೊತ್ತದ ವಸೂಲಾತಿಗಾಗಿ ತಗಾದೆ ನೋಟೀಸನ್ನು ನೀಡಿರುವುದರಿಂದ, ಖರೀದಿಸಿದ ಹಾಗೂ ಅಲ್ಪಸಂಖ್ಯಾತರುಗಳ ಕಲ್ಯಾಣ ಇಲಾಖೆಗೆ ಸರಬರಾಜು ಮಾಡಿದ ಉತ್ಪನ್ನಗಳ ವಾಸ್ತವಿಕ/ಸ್ಪರ್ಧಾತ್ಮಕ ಮಾರುಕಟ್ಟೆ ದರಗಳನ್ನು ಖಚಿತಪಡಿಸಿಕೊಳ್ಳುವಲ್ಲಿ ಕಿಯಾನಿಕ್ಸ್ ವಿಫಲಗೊಂಡಿದ್ದಿತು ಎಂಬುದು ಸಾಬೀತುಗೊಳ್ಳುತ್ತದೆ.

*ಶಿಫಾರಸು:*

**ಈ ಪ್ರಕರಣದಲ್ಲಿ ಉತ್ತರದಾಯಿತ್ವ/ಜವಾಬ್ದಾರಿಯನ್ನು ನಿಗದಿಪಡಿಸುವ ಸಲುವಾಗಿ ಹಾಗೂ ಅಧಿಕ ಪ್ರಮಾಣದಲ್ಲಿ ಪಾವತಿಸಿರುವ ಮೊತ್ತವನ್ನು ಸಂಬಂಧಿಸಿದವರಿಂದ ವಸೂಲಾತಿ ಮಾಡುವ ಸಲುವಾಗಿ ಸರ್ಕಾರವು ಸವಿವರ ತನಿಖೆಯನ್ನು ನಡೆಸಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು.**

**ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

### *2.7. ನದಿ ಮರಳು ಆಮದಿನ ಮೇಲೆ ಮಾಡಲಾದ ಅನುತ್ಪಾದಕ ಹೂಡಿಕೆ*

**ಮಾರುಕಟ್ಟೆ ಸ್ಥಿತಿಗತಿ ಹಾಗೂ ಮಾರಾಟಗಳ ಸಾಧ್ಯತೆಯನ್ನು ಅಧ್ಯಯನ ಮಾಡದೆಯೇ ಮರಳನ್ನು ಆಮದು ಮಾಡಿಕೊಂಡಿದ್ದು ₹ 21.14 ಕೋಟಿ ಮೊತ್ತದಷ್ಟು ಮರಳಿನ ದಾಸ್ತಾನು ನಾಲ್ಕು ವರ್ಷಗಳ ಕಾಲ ನಿರುಪಯುಕ್ತವಾಗಿ ಇದ್ದಿತು ಹಾಗೂ ₹ 10.57 ಕೋಟಿ ಮೊತ್ತದ ಹೂಡಿಕೆಯು ಅನುತ್ಪಾದಕವಾಗಿದ್ದಿತು.**

ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ[100] (ಎಂಎಸ್‌ಐಎಲ್/ಕಂಪನಿ) ನಿರ್ದೇಶಕರುಗಳ ಮಂಡಳಿಯು, ತನ್ನ 15 ಮೇ 2017ರಂದು ನಡೆದ ಸಭೆಯಲ್ಲಿ ರಾಜ್ಯದಲ್ಲಿನ ನಿರ್ಮಾಣ ಕೈಗಾರಿಕೆಯಲ್ಲಿ ಉಪಯೋಗಿಸಲಾಗುವ ಪ್ರಾಕೃತಿಕ ನದಿ ಮರಳಿನ ಸಮಸ್ಯೆಯನ್ನು ಬಗೆಹರಿಸುವ ಸಲುವಾಗಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಕಂಪನಿಗೆ ಆಧ್ಯತೆಯ ದೇಶಗಳಿಂದ ಮರಳನ್ನು ಆಮದು ಮಾಡಿಕೊಳ್ಳುವ ಮೂಲಕ ಬದಲಿ ಮೂಲಗಳನ್ನು ಕಂಡುಕೊಳ್ಳುವಂತೆ ಹಾಗೂ ರಾಜ್ಯದ ಉದ್ದಗಲಕ್ಕೂ ಸಗಟು ಹಾಗೂ ಚಿಲ್ಲರೆ ಮಾರಾಟಕ್ಕೆ ಅನುಕೂಲ ಕಲ್ಪಿಸಬೇಕು ಎಂಬುದಾಗಿ ಸಲಹೆ ನೀಡಿದ್ದರ ಬಗ್ಗೆ ಚರ್ಚಿಸಿತು. ನಿರ್ದೇಶಕರುಗಳ ಮಂಡಳಿಯು ಚರ್ಚೆಗಳನಂತರ, ವಿಶ್ವ ಮಟ್ಟದ ಟೆಂಡರುಗಳನ್ನು ಆಹ್ವಾನಿಸುವ ಮೂಲಕ ಆಧ್ಯತೆಯ ದೇಶಗಳಿಂದ ಮರಳನ್ನು ಆಮದು ಮಾಡಿಕೊಳ್ಳಲು ಹಾಗೂ 'ಎಂಎಸ್‌ಐಎಲ್ ಬ್ರಾಂಡ್' ಅಡಿಯಲ್ಲಿ ವ್ಯಾಪಾರ ಮಾಡಲು ತನ್ನ ಅನುಮೋದನೆ ನೀಡಿತು (ಮೇ 2017).

ಅದರಂತೆಯೇ, ಕಂಪನಿಯು ತಿಂಗಳು ಒಂದಕ್ಕೆ 3 ಲಕ್ಷ ಮೆಟ್ರಿಕ್ ಟನ್ನುಗಳಷ್ಟು (ಮೆಟಗಳು) ಪ್ರಾಕೃತಿಕ ನದಿ ಮರಳನ್ನು ಐದು ವರ್ಷಗಳ ಕಾಲ ಸರಬರಾಜು ಮಾಡುವ ಸಲುವಾಗಿ ವಿಶ್ವ ಮಟ್ಟದ ಟೆಂಡರುಗಳನ್ನು ಆಹ್ವಾನಿಸಿತು (ಮೇ 2017). ಪ್ರಾರಂಭಿಕ ಸರಕಿನ ವಿತರಣೆಯನ್ನು 10 ಹಡಗು ಹೊರೆಗಳಲ್ಲಿ 10 ತಿಂಗಳುಗಳಲ್ಲಿ 50,000 ಮೆಟಗಳಂತೆ ಸರಬರಾಜು ಮಾಡಬೇಕಿದ್ದಿತು. ಟೆಂಡರಿನ ಅಂದಾಜು ಮೌಲ್ಯವನ್ನು ಪ್ರಾರಂಭಿಕ ಸರಕಿನ ವಿತರಣೆಗೆ (ಅಂದರೆ ಮೆಟ ಒಂದಕ್ಕೆ ₹ 3,000ದಂತೆ) ₹ 150 ಕೋಟಿ ಎಂಬುದಾಗಿ ಸೂಚಿಸಲಾಗಿದ್ದಿತು. ಅದಕ್ಕೆ ಪ್ರತಿಯಾಗಿ, ಗುತ್ತಿಗೆಯನ್ನು ಏಕೈಕ ಅರ್ಹತೆಯನ್ನು ಹೊಂದಿದ ಸವಾಲುದಾರರಿಗೆ ಅಂದರೆ ಮೆ. ಪೊಸೀಡೊನ್ ಎಫ್‌ಝುಡ್‌ಇ[101] (ಸರಬರಾಜುದಾರರು), ಯುಎಇ, ಇವರಿಗೆ ಮೆಟ ಒಂದಕ್ಕೆ ₹ 2,300ರ[102] ದರದಲ್ಲಿ ನೀಡಲಾಗಿದ್ದಿತು (ಜುಲೈ 2017) ದರವನ್ನು ತದನಂತರದಲ್ಲಿ ಮೆಟ ಒಂದಕ್ಕೆ ₹ 2,100ಕ್ಕೆ[103]ಪರಿಷ್ಕರಿಸಲಾಯಿತು.

---

[100] ರಾಜ್ಯ ಸಾರ್ವಜನಿಕ ವಲಯದ ಒಂದು ಉದ್ದಿಮೆಯಾಗಿದ್ದು ವಿವಿಧ ಉತ್ಪನ್ನಗಳು ಮತ್ತು ಸೇವೆಗಳಲ್ಲಿ ವ್ಯವಹರಿಸುತ್ತದೆ.

[101] ಮೆ.ಕುಮ್ಪುಲನ್ ಸೆಮೆಸ್ಟ ಎಸ್‌ಡಿಎನ್ ಬಿಎಚ್‌ಡಿ, ಮಲೇಶಿಯಾ ಸರ್ಕಾರದ ಮಾಲಿಕತ್ವದಲ್ಲಿರುವ ಕಂಪನಿ, ಮೆ. ಕೃಷ್ಣಪಟ್ಟಣಂ ಪೋರ್ಟ್ ಕಂಪನಿ ಲಿಮಿಟೆಡ್ ಹಾಗೂ ಮೆ. ಧನವೀರ್ ಪೋರ್ಟಿಂಗ್ ಪ್ರೈವೇಟ್ ಲಿಮಿಟೆಡ್, ಚೆನ್ನೈ, ಇವರುಗಳ ಒಂದು ಒಕ್ಕೂಟ.

[102] ದರವು ರೈಲ್ವೇ ಸಾಗಣೆ ಖರ್ಚುಗಳು ಹೊರತುಪಡಿಸಿ (ಕೃಷ್ಣಪಟ್ಟಣಂ ಬಂದರಿಂದ ಕಂಪನಿಯು ತಿಳಿಸಿರುವ ಸ್ಥಳಗಳಿಗೆ ಮೆ.ಟನ್ ಒಂದಕ್ಕೆ ₹ 814 ಹಾಗೂ ಜಿಎಸ್‌ಟಿ ಮೆ.ಟನ್ ಒಂದಕ್ಕೆ ₹ 155.70).

[103] ಕರ್ನಾಟಕ ಸರ್ಕಾರದ ನಿರ್ದೇಶನಗಳಂತೆ (ಸೆಪ್ಟೆಂಬರ್ 2018) ಮಾರಾಟದ ಮಾದರಿಯನ್ನು ಬ್ಯಾಗಿನಲ್ಲಿ ತುಂಬಿರುವ ಮರಳಿಗೆ ಬದಲಾಗಿ ಬ್ಯಾಗಿನಲ್ಲಿ ತುಂಬಿರದ ಮರಳಿಗೆ/ಸಗಟು ಪ್ರಮಾಣದ ಮರಳಿಗೆ ಬದಲಾವಣೆಗೊಳಿಸಿದಿದ್ದರಿಂದ ದರವನ್ನು ಪರಿಷ್ಕರಿಸಲಾಯಿತು. ದರವು ಮೆಟ ಒಂದಕ್ಕೆ ₹ 814ರಂತೆ ರೈಲ್ವೆ ಸಾಗಣೆ ವೆಚ್ಚ ಹಾಗೂ ಶೇಕಡಾ 5ರ ಜಿಎಸ್‌ಟಿಯನ್ನು ಹೊರತುಗೊಂಡಿದೆ.

ಕಂಪನಿಯು ಎರಡು ಖರೀದಿ ಆದೇಶಗಳನ್ನು ಸರಬರಾಜುದಾರರಿಗೆ ನೀಡಿತು (ಜುಲೈ 2017/ಡಿಸೆಂಬರ್ 2017) ಹಾಗೂ ₹ 25.09 ಕೋಟಿ[104] ಮೌಲ್ಯದ 1,03,872.77 ಮೆಟಗಳಷ್ಟು ಒಟ್ಟಾರೆ ಪರಿಮಾಣದ ಮರಳನ್ನು ಆಮದು ಮಾಡಿಕೊಂಡಿತು ಹಾಗೂ ಆಂದ್ರ ಪ್ರದೇಶದ ಕೃಷ್ಣಪಟ್ಟಣಂ ಬಂದರಿನಲ್ಲಿ ದಾಸ್ತಾನು ಮಾಡಲಾಯಿತು. ಉಳಿದ ಮೊತ್ತವನ್ನು ಬಂದರಿನಿಂದ ದಾಸ್ತಾನನ್ನು ಸಾಗಣೆ ಮಾಡಿದನಂತರ ಪಾವತಿಸಬೇಕಾಗಿರುವುದರೊಂದಿಗೆ ₹ 14.52 ಕೋಟಿ ಮೊತ್ತವನ್ನು ಸರಬರಾಜುದಾರರಿಗೆ ಪಾವತಿಸಲಾಯಿತು (ನವಂಬರ್ 2017 ಹಾಗೂ ಮೇ 2018ರ ನಡುವೆ).

ಈ ನಿಟ್ಟಿನಲ್ಲಿ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು (ಡಿಸೆಂಬರ್ 2019/ಸೆಪ್ಟೆಂಬರ್ 2020):

1. ಗುತ್ತಿಗೆಯನ್ನು ಓರ್ವ ಏಕೈಕ ಅರ್ಹತೆಯನ್ನು ಹೊಂದಿದ್ದ ಸವಾಲುದಾರರಿಗೆ (ಮೆ. ಪೊಸೀಡೊನ್ ಎಫ್‌ಝುಡ್‌ಇ) ನೀಡುವ ತೀರ್ಮಾನ ತೆಗೆದುಕೊಂಡಿದ್ದುದು ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಅಡಿಯಲ್ಲಿ ನೀಡಲಾಗಿರುವ 3 ಡಿಸೆಂಬರ್ 2002ರ ಸುತ್ತೋಲೆಯ ಉಲ್ಲಂಘನೆಯಾಗಿದ್ದಿತು, ಈ ಸುತ್ತೋಲೆಯು, ಏಕೈಕ ಬಿಡ್ಡು ಇದ್ದಲ್ಲಿ/ಸ್ಪರ್ಧಾತ್ಮಕತೆಯ ಕೊರತೆಯಿದ್ದಲ್ಲಿ ಅಥವಾ ಪ್ರತಿಕ್ರಿಯೆಯು ಬಂದಿರುವ ಸವಾಲಿನ ಮೌಲ್ಯವು ಅಂದಾಜು ಮೌಲ್ಯಕ್ಕಿಂತ ಗಮನಾರ್ಹವಾಗಿ ಅಧಿಕವಾಗಿದ್ದಲ್ಲಿ, ಮೊದಲ ಆಯ್ಕೆಯು ಟೆಂಡರನ್ನು ತಿರಸ್ಕರಿಸುವುದು ಹಾಗೂ ಹೊಸದಾಗಿ ಟೆಂಡರನ್ನು ಆಹ್ವಾನಿಸುವುದು ಎಂಬುದಾಗಿ ನಿರ್ದಿಷ್ಟಪಡಿಸಿದ್ದಿತು. ಮುಂದುವರೆದು, ಟೆಂಡರಿಗೆ ಇಡಲಾಗಿದ್ದ ₹ 150 ಕೋಟಿ ಅಂದಾಜು ಮೊತ್ತಕ್ಕೆ ಆಧಾರಗಳನ್ನು ದಾಖಲೆಗಳಲ್ಲಿ ಇಟ್ಟಿರಲಿಲ್ಲ.

2. ಕಂಪನಿಯು ಜುಲೈ 2017ರಲ್ಲಿ ನೀಡಿದ್ದ ಖರೀದಿ ಆದೇಶಕ್ಕೆ ಪ್ರತಿಯಾಗಿ ಅಕ್ಟೋಬರ್ 2017ರಲ್ಲಿ 54,190 ಮೆಟಗಳಷ್ಟು ಮರಳನ್ನು ಸ್ವೀಕರಿಸಿದ್ದಿತು ಹಾಗೂ ಕೇವಲ 935 ಮೆಟಗಳಷ್ಟು ಮರಳನ್ನು ಜನವರಿ 2018ರಲ್ಲಿ ಮಾರಾಟ ಮಾಡಲು ಸಾಧ್ಯವಾಗಿದ್ದಿತು. ಇದೇ ವೇಳೆಯಲ್ಲಿ, ಕಂಪನಿಯು ಎರಡನೆಯ ಖರೀದಿ ಆದೇಶವನ್ನು ಡಿಸೆಂಬರ್ 2017ರಲ್ಲಿ ನೀಡಿತು, ಇದಕ್ಕೆ ಪ್ರತಿಯಾಗಿ 49,682.77 ಮೆ.ಟನ್‌ಗಳಷ್ಟು ಮರಳನ್ನು ಜನವರಿ 2018ರಲ್ಲಿ ಸ್ವೀಕರಿಸಿತು. ಕಂಪನಿಯು ಮೊದಲ ಮತ್ತು ಎರಡನೆಯ ತಂಡಗಳಲ್ಲಿ ಆಮದು ಮಾಡಿಕೊಂಡಿದ್ದಂತಹ ಒಟ್ಟಾರೆ 1,03,872.77 ಮೆಟಗಳಷ್ಟು ಮರಳಿನ ಪರಿಮಾಣಕ್ಕೆ ಪ್ರತಿಯಾಗಿ ಕೇವಲ 14,759 ಮೆಟಗಳಷ್ಟು ಮರಳನ್ನು ಮಾರಾಟ ಮಾಡಿದ್ದಿತು ಹಾಗೂ ₹ 3.95 ಕೋಟಿ ಪಡೆದುಕೊಂಡಿತ್ತು. ಉಳಿದ 89,113.77 ಮೆಟಗಳಷ್ಟು ದಾಸ್ತಾನು ಕೃಷ್ಣಪಟ್ಟಣಂ ಬಂದರಿನಲ್ಲಿ ಮಾರಾಟವಾಗದೆಯೇ ಉಳಿದಿರುವುದು (ಏಪ್ರಿಲ್ 2022).

   ಮೊದಲ ತಂಡದ ಪೈಕಿ ಯಾವುದೇ ಪರಿಮಾಣವೂ ಮಾರಾಟವಾಗಿರಲಿಲ್ಲವಾದ್ದರಿಂದ ಅಥವಾ ಖರೀದಿ ಆದೇಶವನ್ನು ನೀಡುವ ಸಮಯದಲ್ಲಿ ಮಾರಾಟಕ್ಕಾಗಿನ ಆದೇಶಗಳು ಬಾಕಿಯಿರಲಿಲ್ಲವಾದ್ದರಿಂದ ಎರಡನೆಯ ಖರೀದಿ ಆದೇಶವನ್ನು ನೀಡಲು ತೆಗೆದುಕೊಂಡಂತಹ ತೀರ್ಮಾನವು ವಿವೇಚನೆಯಿಂದ ಕೂಡಿರಲಿಲ್ಲ ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು. ಅಲ್ಲದೆಯೇ, ಗುತ್ತಿಗೆಯ ಷರತ್ತಿನ ಅನುಸಾರ (ಖರೀದಿ ಆದೇಶಕ್ಕೆ ಲಗತ್ತಿಸಲಾಗಿದ್ದ ಗುತ್ತಿಗೆಯ ಸಾಮಾನ್ಯ ಷರತ್ತುಗಳ ಷರತ್ತು ಸಂಖ್ಯೆ 9.4) ಕಂಪನಿಯು ದೇಶೀಯ ಮಾರುಕಟ್ಟೆಯಲ್ಲಿ ಬೇಡಿಕೆ ಹಾಗೂ ಸರಬರಾಜಿನ ಆಧಾರದ ಮೇರೆಗೆ ಮರಳನ್ನು ಹಡಗಿಗೆ ತುಂಬುವುದಕ್ಕೆ ಸಂಬಂಧಿತ ನಿಗದಿತ ನಿರ್ದೇಶನವನ್ನು ಬದಲಾಯಿಸುವ ಹಕ್ಕನ್ನು ಕಂಪನಿಯು ಹೊಂದಿದ್ದಿತು. ಇದು ಸರಬರಾಜುದಾರನಿಂದ ವಿರೋಧ/ತಕರಾರಿಗೆ

[104] 1,03,872.77 ಮೆಟಗಳು, ಮೆಟ ಒಂದಕ್ಕೆ ₹ 2,300ರಂತೆ + ಜಿಎಸ್‌ಟಿ ಬ್ಯಾಗುಗಳಲ್ಲಿರುವ ಮರಳಿಗೆ ಹಾಗೂ ಕಂಪನಿಯ 15.2.2021ರ ಉತ್ತರದಲ್ಲಿ ಖಚಿತಪಡಿಸಿರುವಂತೆ ಸಗಟು ಮರಳಿಗೆ ಮೆಟ ಒಂದಕ್ಕೆ ₹ 2,140/2,100ರಂತೆ + ಜಿಎಸ್‌ಟಿ.

ಒಳಪಟ್ಟಿರಲಿಲ್ಲ. ಕಂಪನಿಯು ಮಾರ್ಚ್ 2021ರಲ್ಲಿದ್ದಂತೆ ₹ 1.90 ಕೋಟಿ[105] ಮೌಲ್ಯದಷ್ಟು ಪರೋಕ್ಷ ವೆಚ್ಚಗಳನ್ನು ಭರಿಸಿದ್ದಲ್ಲದೆಯೇ, ದಾಸ್ತಾನು ಹಾಳಾಗಿದ್ದರಿಂದ /ಕೊರೆದುಹೋಗಿದ್ದರಿಂದ[106], ₹ 5 ಕೋಟಿ ಮೊತ್ತದಷ್ಟು ನಷ್ಟವನ್ನು ಭರಿಸಿದ್ದಿತು ಎಂಬುದನ್ನೂ ಸಹ ಲೆಕ್ಕಪರಿಶೋಧನೆಯು ಗಮನಿಸಿತು. ಕಂಪನಿಯು ಎರಡನೆಯ ಖರೀದಿ ಆದೇಶವನ್ನು ನೀಡಿರದಿದ್ದಲ್ಲಿ ಕಡೆಯ ಪಕ್ಷ ₹ 10.96 ಕೋಟಿ ಮೌಲ್ಯದ 49,682.77 ಮೆಟಗಳಷ್ಟು ಮರಳಿನ (ಎರಡನೆಯ ತಂಡದ ಖರೀದಿ) ದಾಸ್ತಾನನ್ನು ನಿರುಪಯುಕ್ತವಾಗಿ ಇಡುವುದನ್ನು ತಪ್ಪಿಸಬಹುದಾಗಿದ್ದಿತು.

3. ನಿಕೃಷ್ಟಮಟ್ಟದ ಮಾರಾಟಕ್ಕೆ ಕಾರಣಗಳೆಂದರೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಪ್ರಕ್ಷೇಪಿಸಿದ ಬೇಡಿಕೆ ಸರಬರಾಜುಗಳ ನಡುವಿನ ಅಂತರದ ಆಧಾರದ ಮೇರೆಗೆ, ಮಾರುಕಟ್ಟೆ ಪರಿಸ್ಥಿತಿಯ ಹಾಗೂ ಮಾರಾಟಗಳ ಸಾಧ್ಯತೆಗಳನ್ನು ಅದರಲ್ಲೂ ವಿಶೇಷವಾಗಿ ಮಾರುಕಟ್ಟೆಯಲ್ಲಿ ಅಗ್ಗದ ದರಗಳಲ್ಲಿ ಲಭ್ಯವಿದ್ದಂತಹ ಕಾಳಸಂತೆಯ ಮಾರುಕಟ್ಟೆ ಹಾಗೂ ಬದಲಿ ಸಾಮಗ್ರಿಗಳ (ಎಂ ಸ್ಯಾಂಡ್[107]) ಬಗ್ಗೆ ಸ್ವತಂತ್ರ ವಿಶ್ಲೇಷಣೆಗಳನ್ನು ಮಾಡದೆಯೇ, ಆಮದು ಸಾಹಸಕಾರ್ಯದಲ್ಲಿ ತೊಡಗಿದ್ದು. ಮುಂದುವರೆದು, ಗುತ್ತಿಗೆಯ ಒಂದು ಭಾಗವಾಗಿ[108], ಮೆ. ಓಶನ್ ಏಜನ್ಸೀಸ್, ಇವರನ್ನು ಬಂದರಿನಿಂದ ವಿವಿಧ ಸಿಐಎಫ್ ಸ್ಥಳಗಳಿಗೆ ಸಾಗಣೆ ಮಾಡುವ ಹಾಗೂ ಲಾಜಿಸ್ಟಿಕ್ ಸಲುವಾಗಿ ನೇಮಕ ಮಾಡಲಾಗಿದ್ದಿತು (ಅಕ್ಟೋಬರ್ 2017). ಆದಾಗ್ಯೂ, ಮೆ. ಓಶನ್ ಏಜನ್ಸೀಸ್, ಇವರ ಪಾತ್ರವನ್ನು ತದನಂತರದಲ್ಲಿ ಒಂದು ಪೂರಕ ಒಡಂಬಡಿಕೆಯ ಮೂಲಕ (1 ಮಾರ್ಚ್ 2019) ಟೆಂಡರಿನ ಮೂಲಕ ಅವರ ಸಾಮರ್ಥ್ಯಗಳನ್ನು ನಿರ್ಧಾರಣೆ ಮಾಡದೆಯೇ ಓರ್ವ ಏಕೈಕ ಮಾರಾಟಗಳ ಪ್ರತಿನಿಧಿ ಎಂಬುದಾಗಿ ಪಾತ್ರವಹಿಸಲು ನೇಮಕ ಮಾಡಲಾಯಿತು. ಅಲ್ಲದೆಯೇ, ಯಾವುದೇ ನಿರ್ದಿಷ್ಟ ಮಾರಾಟದ ಗುರಿಯನ್ನು ಪ್ರತಿನಿಧಿಗೆ ನಿಗದಿಪಡಿಸಿರಲಿಲ್ಲ. ಈ ರೀತಿಯಾಗಿ ಕಂಪನಿಯು ದಾಸ್ತಾನಿನ ವಿಲೇವಾರಿಗಾಗಿ ಓರ್ವ ಏಕೈಕ ಪ್ರತಿನಿಧಿಯನ್ನು ಅವಲಂಬಿಸಬೇಕಾಯಿತು. ಇದು ಸಾಮಗ್ರಿಯ ಮಾರಾಟದ ನಿರೀಕ್ಷೆಗಳನ್ನು ಇನ್ನಷ್ಟು ಹಿಡಿದಿಟ್ಟಿತ್ತು. ಕಂಪನಿಯ ನಿಕೃಷ್ಟಮಟ್ಟದ ಪೂರ್ವಭಾವಿ ಯೋಜನೆಯು ಆಮದಿನ ನಾಲ್ಕು ವರ್ಷಗಳ (ಅಕ್ಟೋಬರ್ 2017ರಿಂದ ಅಕ್ಟೋಬರ್ 2021) ಅವಧಿಯಾದ್ಯಂತ ಮಾಡಲಾದ ನಿಕೃಷ್ಟಮಟ್ಟದ ಮಾರಾಟಗಳಲ್ಲಿ (14,759 ಮೆಟಗಳು, ಒಟ್ಟಾರೆ ಆಮದಿನ ಶೇಕಡ 14) ಪ್ರತಿಬಿಂಬಿಸುವುದು.

ಈ ರೀತಿಯಾಗಿ ಮಾರುಕಟ್ಟೆಯ ಸ್ಥಿತಿಗತಿಯನ್ನು, ಮಾರಾಟಗಳ ಸಾಧ್ಯತೆಗಳನ್ನು ಅಧ್ಯಯನ ಮಾಡದೆಯೇ ಮರಳನ್ನು ಆಮದು ಮಾಡಿಕೊಳ್ಳಲು ಹಾಗೂ ಅವರ ಸಾಮರ್ಥ್ಯಗಳನ್ನು ನಿರ್ಧಾರಣೆ ಮಾಡದೆಯೇ ದಾಸ್ತಾನುಗಳನ್ನು ವಿಲೇವಾರಿ/ಮಾರಾಟ ಮಾಡುವ ಸಲುವಾಗಿ ಯಾವುದೇ ಕಾಲಮಿತಿಯ ಗುರಿಗಳನ್ನು ನಿಗದಿಪಡಿಸದೆಯೇ ಏಕೈಕ ಮಾರಾಟಗಳ ಪ್ರತಿನಿಧಿಯನ್ನಾಗಿ ನೇಮಕ ಮಾಡಲು ಕಂಪನಿಯು ತೆಗೆದುಕೊಂಡ ತೀರ್ಮಾನವು ₹ 21.14 ಕೋಟಿ ಮೌಲ್ಯದ 89,113.77 ಮೆಟಗಳಷ್ಟು ಮರಳಿನ ದಾಸ್ತಾನು ನಾಲ್ಕು ವರ್ಷಗಳವರೆಗೆ ನಿರುಪಯುಕ್ತವಾಗಿ ಉಳಿಯುವಲ್ಲಿ ಹಾಗೂ ದಾಸ್ತಾನಿನ ಕೊರೆತ/ಹಾಳಾಗುವಿಕೆಯ ಕಾರಣ ₹ 5 ಕೋಟಿ ಮೊತ್ತವು ನಷ್ಟವಾಗುವಲ್ಲಿ ಪರಿಣಮಿಸಿದ್ದಿತು. ಸರಬರಾಜುದಾರರಿಗೆ ಮುಂಗಡ ಪಾವತಿಯ ರೂಪದಲ್ಲಿ ಮಾಡಲಾಗಿರುವ ₹ 10.57 ಕೋಟಿ[109] ಮೌಲ್ಯದ ಹೂಡಿಕೆಯು ಯಾವುದೇ ಪ್ರತಿಫಲಗಳಿಲ್ಲದೆಯೇ ನಿಷ್ಫಲವಾಗಿ ಉಳಿದಿರುವುದು ಹಾಗೂ

---

[105] ಮೆ. ಎನ್. ಹೆಗ್ಡೆ ಅಂಡ್ ಅಸೋಸಿಯೇಟ್ಸ್, ಚಾರ್ಟರ್ಡ್ ಅಕೌಂಟೆಂಟ್‌ಗಳು, ಇವರ 3 ಸೆಪ್ಟೆಂಬರ್ 2021ರ ವಿಶೇಷ ಲೆಕ್ಕಪರಿಶೋಧನಾ ವರದಿಯ ಅನುಸಾರ. ಪರೋಕ್ಷ ವೆಚ್ಚಗಳ ಸ್ವರೂಪವು ಲಭ್ಯವಿರುವುದಿಲ್ಲ.

[106] ನಷ್ಟಗಳನ್ನು 31 ಮಾರ್ಚ್ 2021ರಲ್ಲಿದ್ದಂತೆ ದಾಸ್ತಾನಿನ ಮೌಲ್ಯದ ಸವೆತ/ಕೊರೆತ/ಹಾಳಾಗಿರುವುದರ ಕಡೆಗೆ ಕಂಪನಿಯ ಲೆಕ್ಕಪತ್ರಗಳ ಪುಸ್ತಕಗಳಲ್ಲಿ ಪರಿಗಣಿಸಲಾಗಿರುವುದು.

[107] ಎಂ–ಮರಳು/ಸ್ಯಾಂಡ್ ಅನ್ನು ನಿರ್ಮಾಣಗಳಲ್ಲಿ ನದಿ ಮರಳಿಗೆ ಬದಲಾಗಿ ಉಪಯೋಗಿಸಲಾಗುವುದು, ಇದು ಒಂದು ಕೃತಕ ಮರಳು ಹಾಗೂ ಗಟ್ಟಿ ಕಲ್ಲುಗಳನ್ನು ಅರೆದು ಪುಡಿ ಮಾಡಿ ಉತ್ಪಾದಿಸಲಾಗುವುದು.

[108] ಗುತ್ತಿಗೆಯ ಸಾಮಾನ್ಯ ಷರತ್ತುಗಳ ಷರತ್ತು 12.

[109] ಪಾವತಿಸಲಾದ ಒಟ್ಟಾರೆ ಮುಂಗಡ ₹ 14.52 ಕೋಟಿ, ಇದರಿಂದ ಮಾರಾಟದಿಂದ ಪಡೆಯಲಾದ ₹ 3.95 ಕೋಟಿ ವರಮಾನವನ್ನು ಕಳೆಯುವುದು.

₹ 2.48 ಕೋಟಿ[110] ಮೊತ್ತದಷ್ಟು ಬಡ್ಡಿಯು ನಷ್ಟವಾಗುವಲ್ಲಿ ಪರಿಣಮಿಸಿರುವುದು. ಅತೀ ಪ್ರಮುಖವಾಗಿ, ಪ್ರಕ್ಷೇಪಿಸಲಾಗಿದ್ದಂತೆ ಬೇಡಿಕೆ ಸರಬರಾಜಿನ ಅಂತರವನ್ನು ಹೋಗಲಾಡಿಸುವ ಸಲುವಾಗಿ ನದಿ ಮರಳಿನ ಆಮದಿನ ಉದ್ದೇಶವನ್ನು ನಾಲ್ಕು ವರ್ಷಗಳೇ ಕಳೆದರೂ ಈಡೇರಿಸಿಕೊಳ್ಳಲಾಗಲಿಲ್ಲ.

ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮವನ್ನು ತಕ್ಕುದಾದ ರೀತಿಯಲ್ಲಿ ಅನುಸರಿಸುವ ಮೂಲಕ ಗಮನಾರ್ಹವಾಗಿ ಪ್ರತಿಕ್ರಿಯೆ ನೀಡಿದ್ದ ಸವಾಲುದಾರರಿಗೆ ಸರಬರಾಜು ಗುತ್ತಿಗೆಯನ್ನು ನೀಡಲಾಗಿದ್ದಿತು ಎಂಬುದಾಗಿ ಸರ್ಕಾರವು ಉತ್ತರಿಸಿತು (ಮೇ 2022). ಪ್ರಾಕೃತಿಕ ನದಿ ಮರಳಿನ ಸರಬರಾಜು ಕಾಮಗಾರಿ ಗುತ್ತಿಗೆ ಪ್ರವರ್ಗದ ಅಡಿಯಲ್ಲಿ ಬರುವುದಿಲ್ಲವಾದ್ದರಿಂದ ಮೇಲೆ ಉಲ್ಲೇಖಿಸಲಾಗಿರುವ ದಿನಾಂಕ 3 ಡಿಸೆಂಬರ್ 2002ರ ಸುತ್ತೋಲೆಯು ಪ್ರಸಕ್ತ ಟೆಂಡರಿಗೆ ಅನ್ವಯಗೊಳ್ಳುವುದಿಲ್ಲ. ಈ ದೃಷ್ಟಾಂತ ಪ್ರಕರಣದಲ್ಲಿ ಇಬ್ಬರು ಟೆಂಡರುದಾರರುಗಳು ಭಾಗವಹಿಸಿದ್ದರು, ಓರ್ವ ಸವಾಲುದಾರರು ಪ್ರತಿಕ್ರಿಯಾತ್ಮಕವಾಗಿ ಕಂಡುಬರಲಿಲ್ಲವಾದ್ದರಿಂದ ಟೆಂಡರು ಅಂತಿಮವಾಗಿ ಏಕೈಕ ಸವಾಲಾಗಿ ಪರಿವರ್ತಿತಗೊಂಡಿದ್ದಿತು. ಎರಡನೆಯ ಖರೀದಿ ಆದೇಶವನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಲೋಪದೋಷಗಳನ್ನು ಒಪ್ಪಿಕೊಳ್ಳುವ ವೇಳೆಯಲ್ಲಿ, ಇನ್ನು ಮುಂದಿನ ಖರೀದಿ ಆದೇಶವನ್ನು ನೀಡದಂತೆ ಅಗತ್ಯ ತಿದ್ದುಪಡಿ ಮಾಡಲಾಯಿತು ಎಂಬುದಾಗಿ ತಿಳಿಸಿತು. ಕೃಷ್ಣಪಟ್ಟಣಂ ಬಂದರಿನಿಂದ 31 ಮಾರ್ಚ್ 2022ರ ಒಳಗೆ ದಾಸ್ತಾನನ್ನು ವಿಲೇವಾರಿ ಮಾಡುವಂತೆ ಮೆ. ಓಶನ್ ಏಜನ್ಸೀಸ್, ಇವರಿಗೆ 12 ನವಂಬರ್ 2021ರಂದು ಒಂದು ಅಂತಿಮ ನೋಟೀಸನ್ನು ನೀಡಲಾಗಿದೆ ಹಾಗೂ 15 ದಿನಗಳ ಒಳಗೆ ಪ್ರಾಕೃತಿಕ ನದಿ ಮರಳನ್ನು ವಿಲೇವಾರಿ ಮಾಡುವಂತೆ, ತಪ್ಪಿದಲ್ಲಿ ಕಾನೂನು ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಒಂದು ಕಾನೂನು ನೋಟೀಸನ್ನು ಮೆ. ಪೊಸೀಡೊನ್ ಎಫ್‌ಝುಡ್‌ಇ, ಇವರಿಗೆ ನೀಡಲಾಗಿದೆ (7 ಮೇ 2022) ಎಂಬುದಾಗಿಯೂ ತಿಳಿಸಲಾಗಿದ್ದಿತು.

ಕರ್ನಾಟಕ ಸಾರ್ವಜನಿಕ ಖರೀದಿಗಳು ಮತ್ತು ಸೇವೆಗಳನ್ನು ಪಡೆದುಕೊಳ್ಳುವಲ್ಲಿ ಪಾರದರ್ಶಕತೆ ಅಧಿನಿಯಮವು ಪ್ರಸಕ್ತ ಗುತ್ತಿಗೆಯಲ್ಲಿ ಅನ್ವಯಗೊಳ್ಳುವುದಿಲ್ಲ ಎಂಬ ಉತ್ತರವನ್ನು ಒಪ್ಪಲಾಗದು. ದಿನಾಂಕ 3 ಡಿಸೆಂಬರ್ 2002ರ ಸುತ್ತೋಲೆಯ ಕಂಡಿಕೆಗಳು 5.1 ಮತ್ತು 5.2 ಕಾಮಗಾರಿಗಳು/ಸರಕುಗಳನ್ನು ಸ್ಪರ್ಧಾತ್ಮಕ ಟೆಂಡರಿನ ಮೂಲಕ ಪಡೆದುಕೊಳ್ಳುವ ಸಲುವಾಗಿ ಅಧಿನಿಯಮದ ಅಡಿಯಲ್ಲಿ ವಿವರಿಸಿರುವ ಎಲ್ಲಾ ಸಂಸ್ಥೆಗಳು/ಅಸ್ತಿತ್ವಗಳಿಗೆ ಅನ್ವಯಗೊಳ್ಳುವುದನ್ನು ಕಡ್ಡಾಯಗೊಳಿಸಿರುವುದು. ಅಲ್ಲದೆಯೇ, ಕರ್ನಾಟಕ ಸರ್ಕಾರವು ನೀಡಿರುವ ಸುತ್ತೋಲೆಯ (20 ಮಾರ್ಚ್ 2017) ಅನುಸಾರ, ಪ್ರಾರಂಭಿಕ ಹಂತದಲ್ಲಿ ತಾಂತ್ರಿಕ ಅರ್ಹತೆಯನ್ನು ನಿರ್ಧಾರಣೆ ಮಾಡುವ ಮೊದಲು ಅನೇಕ ಸಂಖ್ಯೆ ಸವಾಲುಗಳನ್ನು ಸ್ವೀಕರಿಸಿದ್ದಲ್ಲಿ, ಆದರೆ ಕೇವಲ ಏಕೈಕ ಸವಾಲುದಾರರು ವಾಣಿಜ್ಯ/ಹಣಕಾಸಿನ ಸವಾಲಿನಲ್ಲಿ ಅರ್ಹತೆಯನ್ನು ಹೊಂದಿದಲ್ಲಿ, ಅದನ್ನು ಒಂದು ಏಕೈಕ ಸವಾಲು ಎಂಬುದಾಗಿ ಪರಿಗಣಿಸತಕ್ಕದ್ದು. ಮುಂದುವರೆದು, ಮೆ. ಓಶನ್ ಏಜನ್ಸೀಸ್ 30 ಏಪ್ರಿಲ್ 2022ರಲ್ಲಿದ್ದಂತೆಯೂ ದಾಸ್ತಾನನ್ನು ಸಾಗಣೆ ಮಾಡಿರಲಿಲ್ಲ, ಆದರೂ ಕಂಪನಿಯು ಯಾವುದೇ ಕಾನೂನಾತ್ಮಕ ಕ್ರಮಗಳನ್ನು ಕೈಗೊಳ್ಳಲಿಲ್ಲ. ಈ ರೀತಿಯಾಗಿ, ₹ 21.14 ಕೋಟಿ ಮೌಲ್ಯದ 89,113.77 ಮೆಟಗಳಷ್ಟು ಮರಳು ಕೃಷ್ಣಪಟ್ಟಣಂ ಬಂದರಿನಲ್ಲಿ ಖರೀದಿ ಮಾಡಿದ ದಿನಾಂಕದಿಂದ (ಅಕ್ಟೋಬರ್ 2017ರಿಂದ ಏಪ್ರಿಲ್ 2022) ನಾಲ್ಕೂವರೆ ವರ್ಷಗಳಿಂದ ಮಾರಾಟವಾಗದೆಯೇ ಉಳಿದುಕೊಂಡಿರುವುದು, ಹಾಗೂ ಇದರಿಂದ ಮರಳಿನ ದಾಸ್ತಾನಿನ ಕೊರತೆ/ಹಾಳಾಗುವಿಕೆಯ ಕಾರಣ ದಾಸ್ತಾನಿನ ಮೌಲ್ಯದಲ್ಲಿ ₹ 5 ಕೋಟಿ ಮೌಲ್ಯವು ತಗ್ಗಿರುವುದು.

***ಶಿಫಾರಸು:***

**ಕಂಪನಿಗೆ ನಷ್ಟವಾಗಲು ಕಾರಣವಾದ ಲೋಪದೋಷಗಳಿಗೆ ಜವಾಬ್ದಾರಿಗಳನ್ನು/ಹೊಣೆಗಾರಿಕೆಯನ್ನು ನಿಗದಿಗೊಳಿಸುವ ಸಲುವಾಗಿ ಹಾಗೂ ಸರ್ಕಾರಿ ಸಂಸ್ಥೆಗಳು (ಅವೆಂದರೆ ಲೋಕೋಪಯೋಗಿ ಇಲಾಖೆ, ಜಲ ಸಂಪನ್ಮೂಲಗಳ ಇಲಾಖೆ, ಇತ್ಯಾದಿಗಳು) ಕಾರ್ಯಗತಗೊಳಿಸುವ ಕಾಮಗಾರಿಗಳಲ್ಲಿ ಬಳಸುವ ಸಲುವಾಗಿ ಮರಳನ್ನು ಉಪಯೋಗಿಸುವ ಸಾಧ್ಯತೆಯನ್ನು ಕಂಡುಕೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು. ಕಂಪನಿಯು ಸರಬರಾಜುದಾರರು ಹಾಗೂ ಮಾರಾಟ ಪ್ರತಿನಿಧಿಯ ಮೇಲೆ ಗುತ್ತಿಗೆ ಷರತ್ತುಗಳ ಅನುಸಾರ ಕ್ರಮಗಳನ್ನು ಕೈಗೊಳ್ಳಬೇಕು.**

[110] ಬಡ್ಡಿಯನ್ನು ₹ 10.57 ಕೋಟಿಯ ಮೇಲೆ ವರ್ಷ ಒಂದಕ್ಕೆ ಕನಿಷ್ಠ ಬಡ್ಡಿ ದರ ಶೇಕಡಾ 6ರಂತೆ ಪಾವತಿಯ ಕಡೆಯ ದಿನಾಂಕದಿಂದ (ಮೇ 2018) ಏಪ್ರಿಲ್ 2022ರ ವರೆಗೆ 47 ತಿಂಗಳುಗಳಿಗೆ ಲೆಕ್ಕಹಾಕಲಾಗಿರುವುದು.

**ಕರ್ನಾಟಕ ರಾಜ್ಯ ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ**

### *2.8. ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ ಅನರ್ಹ ಲಾಭಗಳನ್ನು ಮಾಡಿಕೊಟ್ಟಿದ್ದುದು*

**ಮಾರುಕಟ್ಟೆಯಲ್ಲಿ ಇದ್ದಂತಹ ದರಗಳಿಗಿಂತ ಬಹಳಷ್ಟು ಕಡಿಮೆ ದರಗಳಲ್ಲಿ ಭೂಮಿಯ ಬೆಲೆಯನ್ನು ನಿಗದಿ ಮಾಡಿದ್ದು ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ಗೆ ₹ 4.05 ಕೋಟಿ ಮೊತ್ತದಷ್ಟು ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಪರಿಣಮಿಸಿದ್ದಿತು.**

ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್‌ನ ಅಧ್ಯಕ್ಷರು ಸ್ಥಳೀಯ ಕ್ರಿಕೆಟು ಆಟಗಾರರುಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಒಂದು ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕಾಗಿ ಗದಗದಲ್ಲಿ ಸುಮಾರು 15 ಎಕರೆಗಳಷ್ಟು ಭೂಮಿಯನ್ನು ಒದಗಿಸುವಂತೆ ಗದಗ ಜಿಲ್ಲೆಯ ಜಿಲ್ಲಾಧಿಕಾರಿಯವರನ್ನು ಕೋರಿದರು (ಜನವರಿ 2014). ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ ಒಂದು ಸಭೆಯಲ್ಲಿ ಕರ್ನಾಟಕ ರಾಜ್ಯ ಜವಳಿ ಮೂಲಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದ (ಕಂಪನಿ) ಸ್ವಾಮ್ಯದಲ್ಲಿರುವ[111] 35 ಎಕರೆಗಳು 34 ಗುಂಟೆಗಳಷ್ಟು ವಿಸ್ತೀರ್ಣದ ಭೂಮಿಯ ಪೈಕಿ 12 ಎಕರೆಗಳಷ್ಟು ಭೂಮಿಯನ್ನು ಕೆಎಸ್‌ಸಿಎಗೆ ನೀಡುವ ನಿರ್ಣಯವನ್ನು ಕೈಗೊಳ್ಳಲಾಯಿತು (ಮೇ 2015). ಕಂಪನಿಯ ವ್ಯವಸ್ಥಾಪಕ ನಿರ್ದೇಶಕರವರು ಭೂಮಿಯನ್ನು ಕೆಎಸ್‌ಸಿಎಗೆ ವರ್ಗಾವಣೆ ಮಾಡಲು ತಮ್ಮ "ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ" ಎಂಬುದಾಗಿ ಪ್ರಮಾಣಪತ್ರವನ್ನು ಕರ್ನಾಟಕ ಸರ್ಕಾರಕ್ಕೆ ನೀಡಿದರು (ನವಂಬರ್ 2015). ತದನಂತರದಲ್ಲಿ, ಕಂಪನಿಯ ನಿರ್ದೇಶಕರುಗಳ ಮಂಡಳಿಯು ಭೂಮಿಯನ್ನು (12 ಎಕರೆಗಳು) ಕೆಎಸ್‌ಸಿಎಗೆ ವರ್ಗಾಯಿಸುವ ಸಲುವಾಗಿ ತನ್ನ ಅನುಮೋದನೆ ನೀಡಿತು (ಜನವರಿ 2016/ಮೇ 2016) ಹಾಗೂ ಭೂಮಿಯ ವರ್ಗಾವಣೆಯನ್ನು ಪ್ರಸಕ್ತ ಇರುವಂತಹ ಮಾರುಕಟ್ಟೆ ದರದಲ್ಲಿ ಹಾಗೂ ಚಾಲ್ತಿಯಲ್ಲಿರುವ ಭೂ ಸ್ವಾಧೀನ ಅಧಿನಿಯಮದ ಅನುಸಾರ ಮಾಡುವ ವಿಷಯ ಸರ್ಕಾರದ ಪರಿಗಣನೆಯ ಅಡಿಯಲ್ಲಿರುವುದು ಎಂಬುದನ್ನು ಪರಿಗಣಿಸಿತು.

ಅದರಂತೆಯೇ, ಕರ್ನಾಟಕ ಸರ್ಕಾರವು ಕಂಪನಿಯ ಸ್ವಾಮ್ಯದಲ್ಲಿದ್ದ 35 ಎಕರೆಗಳು 34 ಗುಂಟೆಗಳ ಪೈಕಿ 12 ಎಕರೆಗಳನ್ನು ಕೆಎಸ್‌ಸಿಎಗೆ ಈ ಕೆಳಗಿನ ಷರತ್ತುಗಳೊಂದಿಗೆ ವರ್ಗಾಯಿಸುವ ಸಲುವಾಗಿ ತನ್ನ ಆಡಳಿತಾತ್ಮಕ ಅನುಮೋದನೆ ನೀಡಿತು (28 ಮೇ 2016).

i. ಕೆಎಸ್‌ಸಿಎ 12 ಎಕರೆಗಳಷ್ಟು ಭೂಮಿಯನ್ನು ಗದಗದ ಜಿಲ್ಲಾಧಿಕಾರಿಯವರು ಹೊಸ ಕರ್ನಾಟಕ ಭೂ ಸ್ವಾಧೀನ ಅಧಿನಿಯಮ (ನ್ಯಾಯಸಮ್ಮತ ಪರಿಹಾರ ಹಾಗೂ ಭೂ ಸ್ವಾಧೀನದಲ್ಲಿ ಪಾರದರ್ಶಕತೆ, ಪುನರ್ವಸತಿ ಮತ್ತು ಪುನರ್–ವ್ಯವಸ್ಥೆ) ಅಧಿನಿಯಮ 2013ರ ಅನುಸಾರ ನಿಗದಿಗೊಳಿಸಿದ ಪ್ರಸಕ್ತ ಮಾರುಕಟ್ಟೆ ದರದಲ್ಲಿ ಪಾವತಿಸುವ ಮೂಲಕ ಖರೀದಿಸಬೇಕು. ಮಾರಾಟದ ಮೌಲ್ಯವನ್ನು ಕಂಪನಿಗೆ ಪಾವತಿಸಬೇಕಿದ್ದಿತು.

ii. ಕ್ರಿಕೆಟ್ ಸ್ಟೇಡಿಯಂ ಅನ್ನು ಎರಡು ವರ್ಷಗಳ ಒಳಗೆ ನಿರ್ಮಿಸುವುದು, ತಪ್ಪಿದಲ್ಲಿ ಭೂಮಿಯನ್ನು ಸರ್ಕಾರಕ್ಕೆ ಹಿಂತಿರುಗಿಸತಕ್ಕದ್ದು.

ಭೂಮಿಯನ್ನು ಎಕರೆ ಒಂದಕ್ಕೆ ₹ 6.25 ಲಕ್ಷದಂತೆ ₹ 75 ಲಕ್ಷ ಮೌಲ್ಯದೊಂದಿಗೆ ಕಾರ್ಯದರ್ಶಿ, ಕೆಎಸ್‌ಸಿಎ[112], ಇವರ ಹೆಸರಿನಲ್ಲಿ ನೋಂದಣಿ ಮಾಡಿಸಲಾಯಿತು (ಜುಲೈ 2016). ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಭರಿಸಿದ್ದ ಭೂ ಸ್ವಾಧೀನ ಮತ್ತು ಅಭಿವೃದ್ಧಿ ವೆಚ್ಚಗಳನ್ನು ಪರಿಗಣಿಸಿದಂತೆ ಭೂಮಿಯ ಬೆಲೆಯನ್ನು ಗದಗದ ಜಿಲ್ಲಾಧಿಕಾರಿಯವರು ಜೂನ್ 2015ರಷ್ಟು ಮುಂಚಿತವಾಗಿಯೇ ನಿರ್ಧಾರಣೆ ಮಾಡಿದ್ದರು.

---

[111] ಗದಗದ ನರಸಾಪುರದ ಭೂಮಿಯು ಮೆ. ಗದಗ ಸಹಕಾರಿ ಕೈಗಾರಿಕಾ ಎಸ್ಟೇಟ್ ಲಿಮಿಟೆಡ್ (ಜಿಸಿಐಇಎಲ್), ಇವರಿಗೆ ಸೇರಿದ್ದು, ಇದನ್ನು ಕರ್ನಾಟಕ ಸರ್ಕಾರವು ಕಂಪನಿಗೆ ವರ್ಗಾಯಿಸಿದ್ದಿತು (ಮಾರ್ಚ್ 2002). ಭೂಮಿಯ ಹಕ್ಕನ್ನು ಕಂಪನಿಯ ಹೆಸರಿಗೆ ವರ್ಗಾಯಿಸಿರುವುದಿಲ್ಲ (ಜನವರಿ 2022).

[112] ಭೂಮಿಯು ಕಂಪನಿಯ ಹೆಸರಿನಲ್ಲಿ ವರ್ಗಾವಣೆಗೊಳ್ಳುವುದು ಬಾಕಿಯಿದ್ದಂತೆ ಮಾರಾಟ ಪತ್ರಕ್ಕೆ ಅಧ್ಯಕ್ಷರು, ಜಿಸಿಐಇಎಲ್, ಇವರು ಸಹಿ ಮಾಡಿದರು.

ಕೆಎಸ್‌ಸಿಎಗೆ ವರ್ಗಾವಣೆ ಮಾಡಲಾದ ಭೂಮಿಯ ಬೆಲೆಯನ್ನು ಕರ್ನಾಟಕ ಸರ್ಕಾರದ ಆಡಳಿತಾತ್ಮಕ ಅನುಮೋದನೆಯಲ್ಲಿ ನಿರ್ದಿಷ್ಟಪಡಿಸಿರುವಂತೆ ಹೊಸ ಕರ್ನಾಟಕ ಭೂ ಸ್ವಾಧೀನ ಅಧಿನಿಯಮದ ಅಧ್ಯಾಯ IVರ ಷರತ್ತು 26 ಮತ್ತು ಷರತ್ತು 30ರ ಅನುಸಾರ ಪ್ರಸಕ್ತ ಚಾಲ್ತಿಯಲ್ಲಿರುವ ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸದೆಯೇ ಎಕರೆ ಒಂದಕ್ಕೆ ₹ 6.25 ಲಕ್ಷ ಎಂಬುದಾಗಿ ನಿರ್ಧಾರಣೆ ಮಾಡಿದ್ದರು ಎಂಬುದನ್ನು ಲೆಕ್ಕಪರಿಶೋಧನೆಯು ಗಮನಿಸಿತು (ಮಾರ್ಚ್ 2020). ಗದಗದ ನರಸಾಪುರದಲ್ಲಿ ಅಭಿವೃದ್ಧಿ ಪಡಿಸಲಾಗಿರುವ ಭೂಮಿಯ ಮಾರಾಟಕ್ಕೆ ಕಕೈಪ್ರಅಮಂಯು ನಿಗದಿಪಡಿಸಿರುವ[113] ಎಕರೆ ಒಂದಕ್ಕೆ ₹ 10 ಲಕ್ಷ ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸಿದಂತೆ ಕೆಎಸ್‌ಸಿಎ 12 ಎಕರೆಗಳಿಗೆ ಪಾವತಿಸಬೇಕಾದ ಕನಿಷ್ಠ ಖರೀದಿ ಮೌಲ್ಯವು ₹ 1.20 ಕೋಟಿ ಆಗುತ್ತದೆ. ಮುಂದುವರೆದು, ಹೊಸ ಭೂ ಸ್ವಾಧೀನ ಅಧಿನಿಯಮ, 2013ರ ಅನುಸಾರ, ಗ್ರಾಮೀಣ ಪ್ರದೇಶಗಳಲ್ಲಿ ಭೂ ಸ್ವಾಧೀನ ಉದ್ದೇಶಗಳಿಗಾಗಿ ಮಾರಾಟ ದರಗಳನ್ನು ಭೂಮಿಯ ಮಾರುಕಟ್ಟೆ ಮೌಲ್ಯವನ್ನು (ಪರಿಚ್ಛೇದ 26ರ[114] ಅನುಸಾರ ನಿರ್ಧಾರಣೆ ಮಾಡತಕ್ಕದ್ದು), ಫ್ಯಾಕ್ಟರ್ 'ಎರಡರಿಂದ' ಗುಣಿಸಿ ಅದಕ್ಕೆ ಭೂಮಿಯ ಮಾರುಕಟ್ಟೆ ಮೌಲ್ಯದ ಶೇಕಡಾ 100ರ ದರದಲ್ಲಿ ಹೆಚ್ಚುವರಿ/ಸೋಲೇಷಿಯಮ್ ಸೇರಿಸಿ ನಿರ್ಧಾರಣೆ ಮಾಡತಕ್ಕದ್ದು. ಈ ಅಂಶಗಳನ್ನು ಪರಿಗಣಿಸಿದಂತೆ 12 ಎಕರೆಗಳಷ್ಟು ಭೂಮಿಯ ಬೆಲೆಯು ₹ 4.80 ಕೋಟಿ[115] ಆಗುತ್ತದೆ.

ಈ ರೀತಿಯಾಗಿ ಕೆಎಸ್‌ಸಿಎಗೆ ಎಕರೆ ಒಂದಕ್ಕೆ ₹ 6.25 ಲಕ್ಷ ದರದಲ್ಲಿ ಭೂಮಿ ವರ್ಗಾವಣೆ ಮಾಡಲು ತೆಗೆದುಕೊಂಡ ತೀರ್ಮಾನವು ಸಮರ್ಥಿಸಲಾಗಿರಲಿಲ್ಲ ಮತ್ತು ಕರ್ನಾಟಕ ಸರ್ಕಾರವು ನೀಡಿದ್ದ ಆಡಳಿತಾತ್ಮಕ ಅನುಮೋದನೆಯಲ್ಲಿ ನಿರ್ದಿಷ್ಟಪಡಿಸಲಾಗಿದ್ದ ಷರತ್ತುಗಳ ಉಲ್ಲಂಘನೆಯಾಗಿದ್ದಿತು. ಇದು ಕೆಎಸ್‌ಸಿಎಗೆ ₹ 45 ಲಕ್ಷ ಮೊತ್ತದಷ್ಟು (ಎಕರೆ ಒಂದಕ್ಕೆ ₹ 10 ಲಕ್ಷ ದರದಲ್ಲಿ) ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿಗೆ ದಾರಿಮಾಡಿಕೊಟ್ಟಿದ್ದಿತು. ಹೊಸ ಭೂ ಸ್ವಾಧೀನ ಅಧಿನಿಯಮದ ಅನುಸಾರ ಫ್ಯಾಕ್ಟರುಗಳನ್ನು ಪರಿಗಣಿಸಿದ್ದಲ್ಲಿ, ಮಾರಾಟದ ಪ್ರತಿಫಲವು ₹ 4.05 ಕೋಟಿಗೆ ಹೆಚ್ಚಳಗೊಳ್ಳುತ್ತದೆ. (₹ 4.80 ಕೋಟಿಯಿಂದ ₹ 75ಲಕ್ಷ ಕಳೆದನಂತರ). ಮುಂದುವರೆದು, ಕೆಎಸ್‌ಸಿಎ ಭೂ ವರ್ಗಾವಣೆಯ ಒಂದು ಷರತ್ತನ್ನು ಉಲ್ಲಂಘಿಸಿದ್ದಿತು, ಅದೇಂದರೆ ಸ್ಟೇಡಿಯಂ ನಿರ್ಮಾಣವನ್ನು ಭೂಮಿಯ ಹಂಚಿಕೆಯ ದಿನಾಂಕದಿಂದ ಎರಡು ವರ್ಷಗಳ ಒಳಗೆ ಪೂರ್ಣಗೊಳಿಸಬೇಕಿದ್ದಿತು, ಆದರೆ ಭೂಮಿಯ ನೋಂದಣಿಯಾಗಿ (ಜುಲೈ 2016) ಐದು ವರ್ಷಗಳೇ ಕಳೆದರೂ ಸ್ಟೇಡಿಯಂನ ನಿರ್ಮಾಣವು ಇನ್ನೂ ಪ್ರಾರಂಭಗೊಂಡಿರಲಿಲ್ಲ (ಏಪ್ರಿಲ್ 2022) ಆದಾಗ್ಯೂ, ಕಂಪನಿಯು ಕೆಎಸ್‌ಸಿಎಯಿಂದ ಭೂಮಿಯನ್ನು ಪುನರ್–ಸ್ವಾಧೀನಪಡಿಸಿಕೊಳ್ಳಲಿಲ್ಲ.

ಭೂಮಿಯ ಬೆಲೆಯನ್ನು ಹೊಸ ಭೂ ಸ್ವಾಧೀನ ಅಧಿನಿಯಮದ ಅನುಸಾರ ₹ 4.80 ಕೋಟಿ ಮೌಲ್ಯಕ್ಕೆ ನಿಗದಿಪಡಿಸಬೇಕಿದ್ದಿತು ಹಾಗೂ ಅದರಂತೆಯೇ ಭೂಮಿಯ ಬೆಲೆಯನ್ನು ಪುನರ್–ನಿಗದಿಗೊಳಿಸುವ ಸಲುವಾಗಿ ಹಾಗೂ ವ್ಯತ್ಯಾಸದ ಮೌಲ್ಯವನ್ನು ಕಂಪನಿಗೆ ಪಾವತಿಸುವಂತೆ ಕೆಎಸ್‌ಸಿಎಗೆ ನಿರ್ದೇಶನ ನೀಡುವಂತೆ ಒಂದು ಪ್ರಸ್ತಾವನೆಯನ್ನು ಸರ್ಕಾರದ ಕಾರ್ಯದರ್ಶಿಯವರು, ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆ, ಇವರಿಗೆ ಸಲ್ಲಿಸಲಾಗಿರುವುದು ಎಂಬುದಾಗಿ ಸರ್ಕಾರವು ತಿಳಿಸಿತು (ಮೇ 2022). ಗದಗದ ಜಿಲ್ಲಾಧಿಕಾರಿಯವರು ಭೂಮಿಯ ಬೆಲೆಯನ್ನು ನಿರ್ಧಾರಣೆ ಮಾಡುವಲ್ಲಿ ಒಳಗೊಂಡಿದ್ದ ಪ್ರಕ್ರಿಯೆಯನ್ನು ಕಂಪನಿಯೊಂದಿಗೆ ಸಮಾಲೋಚಿಸುವುದರೊಂದಿಗೆ ಮಾಡಿರಲಿಲ್ಲ

[113] ಇದು 31 ಡಿಸೆಂಬರ್ 2016ರಲ್ಲಿದ್ದಂತೆ (ಈ ಹಿಂದೆ ಪರಿಷ್ಕರಿಸಿರುವುದು ಮಾರ್ಚ್ 2012ರಲ್ಲಿ) ಕೆಐಎಡಿಬಿ ನಿಗದಿಗೊಳಿಸಿದ ತಾತ್ಕಾಲಿಕ ದರಗಳನ್ನು ಪ್ರತಿನಿಧಿಸುತ್ತದೆ.

[114] ಮೌಲ್ಯವನ್ನು (ಎ) ಮಾರುಕಟ್ಟೆ ಮೌಲ್ಯ, ಭೂಮಿಯು ಇರುವಂತಹ ಪ್ರದೇಶದಲ್ಲಿ ಮಾರಾಟ ಮಾಡಲು, ಮಾರಾಟ ಪತ್ರಗಳು ಅಥವಾ ಮಾರಾಟಕ್ಕಾಗಿ ಒಡಂಬಡಿಕೆಗಳು ಭಾರತೀಯ ಮುದ್ರಾಂಕ ಅಧಿನಿಯಮ, 1899 (1899ರ 2)ರಲ್ಲಿ ನಿರ್ದಿಷ್ಟ ಪಡಿಸಿದಂತೆ ಯಾವುದಾದರೂ ಇದ್ದಲ್ಲಿ, ಅಥವಾ (ಬಿ) ಸಮೀಪದ ಗ್ರಾಮದಲ್ಲಿ ಅಥವಾ ಆಜುಬಾಜಿನ ಪ್ರದೇಶದಲ್ಲಿ ಅದೇ ರೀತಿಯ ಭೂ ಪ್ರದೇಶಕ್ಕೆ ಸರಾಸರಿ ಮಾರಾಟ ಮೌಲ್ಯ, ಅಥವಾ (ಸಿ) ಖಾಸಗಿ ಕಂಪನಿಗಳಿಗಾಗಿ ಅಥವಾ ಸಾರ್ವಜನಿಕ ಖಾಸಗಿ ಪಾಲುದಾರಿಕೆ ಯೋಜನೆಗಳಿಗಾಗಿ, ಅದಕ್ಕಾಗಿ ಭೂ ಸ್ವಾಧೀನಕ್ಕಾಗಿ ಪರಿಚ್ಛೇದ (2)ರ ಉಪಪರಿಚ್ಛೇದ (2)ರ ಅಡಿಯಲ್ಲಿ ಒಪ್ಪಿಕೊಳ್ಳಲ್ಪಟ್ಟಿರುವ ಪರಿಹಾರದ ಮೊತ್ತ, ಇವುಗಳನ್ನು ಪರಿಗಣಿಸಿದಂತೆ ಇವುಗಳಲ್ಲಿ ಯಾವುದು ಅಧಿಕವೋ ಅದರಂತೆ ನಿರ್ಧಾರಣೆ ಮಾಡಾಲಾಗುವುದು.

[115] ಎಕರೆ ಒಂದಕ್ಕೆ ₹ 10 ಲಕ್ಷ × 2 (ಅಧಿನಿಯಮದ ಮೊದಲ ಷೆಡ್ಯೂಲಿನ ಅನುಸಾರ ಅಂಶ/ಫ್ಯಾಕ್ಟರ್) + ಶೇಕಡಾ 100ರಷ್ಟು ಹೆಚ್ಚುವರಿ ಮೊತ್ತ/ಸೋಲೇಷಿಯಮ್.

ಹಾಗೂ ಹಂಚಿಕೆಯ ಷರತ್ತುಗಳನ್ನು ಪೂರೈಸದಿರುವುದಕ್ಕಾಗಿ ಭೂಮಿಯನ್ನು ಕೆಎಸ್‌ಸಿಎಯಿಂದ ಪುನರ್–ಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ನಿರ್ಣಯವನ್ನು ಸರ್ಕಾರದಿಂದ ತೆಗೆದುಕೊಳ್ಳಬೇಕಾಗಿರುತ್ತದೆ.

ಕಂಪನಿಯು ಭೂಮಿಯ ಬೆಲೆಯನ್ನು ಹೊಸ ಕರ್ನಾಟಕ ಭೂ ಸ್ವಾಧೀನ ಅಧಿನಿಯಮದ ಅನುಸಾರ ಪ್ರಸಕ್ತ ಚಾಲ್ತಿಯಲ್ಲಿರುವ ಮಾರುಕಟ್ಟೆ ದರಗಳ ಅನುಸಾರ ನಿರ್ಧಾರಣೆ ಮಾಡಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಹಾಗೂ ತದನಂತರ ಕೆಎಸ್‌ಸಿಎ ಸ್ಟೇಡಿಯಂ ನಿರ್ಮಾಣದಲ್ಲಿ ತಪ್ಪಿತಸ್ಥಗೊಂಡಿರುವುದಕ್ಕೆ ಸಂಬಂಧಿಸಿದಂತೆ ಭೂಮಿಯನ್ನು ಪುನರ್–ಸ್ವಾಧೀನಪಡಿಸಿಕೊಳ್ಳುವಲ್ಲಿ/ ಹಿಂಪಡೆದುಕೊಳ್ಳುವಲ್ಲಿ ವಿಫಲಗೊಂಡಿದ್ದಿತು ಎಂಬ ವಾಸ್ತವಾಂಶವು ಉಳಿದುಕೊಂಡಿದ್ದಿತು. ಇದು ಕರ್ನಾಟಕ ಸರ್ಕಾರದ ಆಡಳಿತಾತ್ಮಕ ಅನುಮೋದನೆಯ ಉಲ್ಲಂಘನೆಯಾಗಿದ್ದಿತು.

***ಶಿಫಾರಸು:***

**ಕರ್ನಾಟಕ ಸರ್ಕಾರದ ಆಡಳಿತಾತ್ಮಕ ಅನುಮೋದನೆಯಲ್ಲಿ ನಿರ್ದಿಷ್ಟಪಡಿಸಿರುವಂತೆ ಭೂಮಿ ವರ್ಗಾವಣೆಯ ಷರತ್ತುಗಳ ಅನುಸಾರ ಕೆಎಸ್‌ಸಿಎಯಿಂದ ಭೂಮಿಯನ್ನು ಪುನರ್–ಸ್ವಾಧೀನಪಡಿಸಿಕೊಳ್ಳುವ/ ಹಿಂಪಡೆದುಕೊಳ್ಳುವ ಸಲುವಾಗಿ ಕ್ರಮಗಳನ್ನು ಕೈಗೊಳ್ಳಬೇಕು ಎಂಬುದಾಗಿ ಲೆಕ್ಕಪರಿಶೋಧನೆಯು ಈ ಮೂಲಕ ಶಿಫಾರಸು ಮಾಡುತ್ತಿರುವುದು.**

**ಬೆಂಗಳೂರು** | **(ವಿಮಲೇಂದ್ರ ಎ. ಪಟವರ್ಧನ್)**
**ದಿನಾಂಕ** | **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)**
**ಕರ್ನಾಟಕ**

**ಮೇಲು ರುಜು ಮಾಡಲಾಗಿದೆ**

**ನವದೆಹಲಿ** | **(ಗಿರೀಶ್ ಚಂದ್ರ ಮುರ್ಮು)**
**ದಿನಾಂಕ** | **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**

# ಅನುಬಂಧಗಳು

## ಅನುಬಂಧ–1

*(ಕಂಡಿಕೆ 1.4ರಲ್ಲಿ ಉಲ್ಲೇಖಿಸಲಾಗಿದೆ)*

**ಸತತ ಉಳಿತಾಯಗಳನ್ನು ತೋರಿಸುವ ಅನುದಾನಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನದ ಸಂಖ್ಯೆ ಮತ್ತು ಹೆಸರು | ಉಳಿತಾಯದ ಮೊತ್ತ | | | | |
|---|---|---|---|---|---|---|
| | | **2016–17** | **2017–18** | **2018–19** | **2019–20** | **2020–21** |
| | **ರಾಜಸ್ವ (ಪುರಸ್ಕೃತ)** | | | | | |
| 1 | 5–ಗೃಹ ಮತ್ತು ಸಾರಿಗೆ | 13.15 (0) | 36.39 (1) | 401.87 (5) | 576.26 (7) | 1,253.26 (12) |
| 2 | 6–ಮೂಲಸೌಕರ್ಯ ಅಭಿವೃದ್ಧಿ | 11.98 (47) | 6.56 (73) | 0.28 (3) | 0.15 (0) | 19.89 (19) |
| 3 | 8–ಅರಣ್ಯ, ಜೀವಿಪರಿಸರ ಮತ್ತು ಪರಿಸರ | 32.09 (2) | 83.80 (5) | 115.48 (7) | 86.43 (5) | 266.79 (16) |
| 4 | 15–ಮಾಹಿತಿ ತಂತ್ರಜ್ಞಾನ | 0.80 (0) | 0.60 (0) | 0.46 (0) | 66.57 (34) | 0.63 (0) |
| 5 | 16–ವಸತಿ | 259.51 (7) | 492.58 (11) | 915.89 (24) | 467.63 (13) | 835.29 (29) |
| 6 | 18–ವಾಣಿಜ್ಯ ಮತ್ತು ಕೈಗಾರಿಕೆ | 37.43 (4) | 133.47 (13) | 132.13 (11) | 239.65 (18) | 120.45 (8) |
| 7 | 19–ನಗರಾಭಿವೃದ್ಧಿ | 673.13 (7) | 767.74 (7) | 353.14 (4) | 940.19 (9) | 1,241.56 (14) |
| 8 | 20–ಲೋಕೋಪಯೋಗಿ | 0 (0) | 202.42 (7) | 102.50 (3) | 596.68 (18) | 211.01 (7) |
| 9 | 25–ಕನ್ನಡ ಮತ್ತು ಸಂಸ್ಕೃತಿ | 35.62 (11) | 38.89 (10) | 82.02 (26) | 28.54 (12) | 23.39 (12) |
| 10 | 27–ಕಾನೂನು | 72.89 (11) | 79.63 (10) | 59.28 (6) | 61.67 (6) | 159.06 (14) |
| | **ರಾಜಸ್ವ (ಪ್ರಭೃತ)** | | | | | |
| 1 | 5–ಗೃಹ ಮತ್ತು ಸಾರಿಗೆ | 0.37 (8) | 0.36 (16) | 0.03 (0) | 0.02 (0) | 0.01 (5) |
| 2 | 8–ಅರಣ್ಯ, ಜೀವಿಪರಿಸರ ಮತ್ತು ಪರಿಸರ | 146.34 (49) | 0 (0) | 358.62 (93) | 19.81 (98) | 4.65 (23) |
| 3 | 16–ವಸತಿ | 0.67 (1) | 0 (0) | 0 (0) | 0 (0) | 1.74 (1) |
| 4 | 19–ನಗರಾಭಿವೃದ್ಧಿ | 0.12 (25) | 0 (0) | 620.38 (100) | 675.91 (100) | 0 (0) |
| 5 | 20–ಲೋಕೋಪಯೋಗಿ | 10.74 (39) | 0 (0) | 17.88 (56) | 27.81 (70) | 41.65 (78) |
| 6 | 27–ಕಾನೂನು | 0 (0) | 0 (0) | 63.44 (9) | 46.17 (18) | 48.12 (18) |
| | **ಬಂಡವಾಳ (ಪುರಸ್ಕೃತ)** | | | | | |
| 1 | 5–ಗೃಹ ಮತ್ತು ಸಾರಿಗೆ | 0 (0) | 12.54 (2) | 108.46 (13) | 101.24 (12) | 57.71 (7) |
| 2 | 6–ಮೂಲಸೌಕರ್ಯ ಅಭಿವೃದ್ಧಿ | 5.12 (0) | 21.26 (3) | 37.74 (6) | 41.56 (7) | 150.30 (20) |
| 3 | 8–ಅರಣ್ಯ, ಜೀವಿಪರಿಸರ ಮತ್ತು ಪರಿಸರ | 0.57 (1) | 10.00 (50) | 0.14 (1) | 50.35 (43) | 47.85 (9) |
| 4 | 18–ವಾಣಿಜ್ಯ ಮತ್ತು ಕೈಗಾರಿಕೆ | 54.42 (12) | 41.15 (4) | 576.29 (38) | 416.18 (37) | 38.45 (3) |
| 5 | 19–ನಗರಾಭಿವೃದ್ಧಿ | 1338.68 (28) | 268.73 (5) | 328.40 (6) | 3380.77 (38) | 1,896.82 (19) |
| 6 | 20–ಲೋಕೋಪಯೋಗಿ | 532.90 (7) | 45.44 (1) | 1147.20 (13) | 1388.49 (17) | 859.34 (9) |
| 7 | 24–ಇಂಧನ | 41.12 (4) | 0 (0) | 12.95 (1) | 0 (0) | 8.23 (1) |
| 8 | 25–ಕನ್ನಡ ಮತ್ತು ಸಂಸ್ಕೃತಿ | 2.34 (8) | 2.26 (4) | 12.27 (30) | 80.27 (62) | 20.56 (32) |
| 9 | 27–ಕಾನೂನು | 0 (0) | 0.50 (1) | 1 (40) | 0 (0) | 0(0) |
| | **ಬಂಡವಾಳ (ಪ್ರಭೃತ)** | | | | | |
| 1 | 5–ಗೃಹ ಮತ್ತು ಸಾರಿಗೆ | 0 (0) | 0.01 (0) | 0 (0) | 0 (0) | 0 (0) |
| 2 | 16–ವಸತಿ | 0 (0) | 0.74 (0) | 0.01 (0) | 0.03 (0) | 0 (0) |
| 3 | 19–ನಗರಾಭಿವೃದ್ಧಿ | 0.39 (9) | 0 (0) | 0 (0) | 0 (0) | 0 (0) |
| 4 | 20–ಲೋಕೋಪಯೋಗಿ | 14.08 (33) | 0 (0) | 0 (0) | 0 (0) | 0 (0) |

**ಟಿಪ್ಪಣಿ:** ಕಂಸದಲ್ಲಿರುವ ಅಂಕೆಗಳು ಒಟ್ಟು ಅವಕಾಶಕ್ಕೆ ಉಳಿತಾಯದ ಶೇಕಡಾವಾರನ್ನು ಸೂಚಿಸುತ್ತದೆ.

**ಆಧಾರ:** ಸಂಬಂಧಿತ ವರ್ಷಗಳ ಪುನರ್ವಿನಿಯೋಗ ಲೆಕ್ಕಗಳು.

# ಅನುಬಂಧ–2

**(ಕಂಡಿಕೆ 1.7 ಮತ್ತು ಕಂಡಿಕೆ 1.11ರಲ್ಲಿ ಉಲ್ಲೇಖಿಸಲಾಗಿದೆ)**

**ಸಿಎಜಿರವರ (ಡಿಪಿಸಿ ಕಾಯ್ದೆ, 1971ರ ಅನುಚ್ಛೇದ 19(2), 19(3) ಮತ್ತು 20(1)ರಡಿಯಲ್ಲಿ ಲೆಕ್ಕಪರಿಶೋಧನೆ ಮಾಡಿದ ಸ್ವಾಯತ್ತ ಸಂಸ್ಥೆಗಳ ವಹಿಸುವಿಕೆಯ ಸಮೀಕ್ಷೆಯ ವಾರ್ಷಿಕ ಸಲ್ಲಿಕೆ**

| ಕ್ರಮ ಸಂಖ್ಯೆ | ಅನುಚ್ಛೇದದ ಅಡಿಯಲ್ಲಿ ಲೆಕ್ಕಪರಿಶೋಧನೆ ಮಾಡಿದ ಸಂಸ್ಥೆಯ ಹೆಸರು ಮತ್ತು ವಿಳಾಸ | ಸರ್ಕಾರದಿಂದ ಲೆಕ್ಕಪರಿಶೋಧನೆ ವಹಿಸಿದ ವರ್ಷಗಳು | ಯಾವ ವರ್ಷದವರೆಗೆ ಲೆಕ್ಕಪತ್ರಗಳನ್ನು ಸಲ್ಲಿಸಲಾಗಿದೆ | ಯಾವ ವರ್ಷದವರೆಗೆ ಲೆಕ್ಕಪರಿಶೋಧನಾ ವರದಿಯನ್ನು ಜಾರಿಮಾಡಲಾಗಿದೆ | ಶಾಸಕಾಂಗದಲ್ಲಿ ಲೆಕ್ಕಪರಿಶೋಧನಾ ವರದಿಯ ಮಂಡನೆ | ಯಾವ ವರ್ಷದವರೆಗೆ ಲೆಕ್ಕಪತ್ರಗಳು ಬಾಕಿ ಇವೆ | 30 ಜೂನ್ 2020ರಲ್ಲಿದ್ದಂತೆ ಲೆಕ್ಕಪತ್ರಗಳಲ್ಲಿನ ವಿಳಂಬದ ಅವದಿ |
|---|---|---|---|---|---|---|---|
| 1 | ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು 19(3)ನೇ ಅನುಚ್ಛೇದದಡಿಯಲ್ಲಿ | 2017–18 ರಿಂದ 2021–22 | 2020–21 | 2019–20 | 2018–19 | --- | --- |
| 2 | ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು 19(3)ನೇ ಅನುಚ್ಛೇದದಡಿಯಲ್ಲಿ | 2017–18 ರಿಂದ 2021–22 | 2018–19 | 2018–19 | 2018–19 | 2019–20 | 12 ತಿಂಗಳುಗಳು |
| 3 | ಕರ್ನಾಟಕ ಗೃಹಮಂಡಳಿ 19(3)ನೇ ಅನುಚ್ಛೇದದಡಿಯಲ್ಲಿ | 2016–17 ರಿಂದ 2020–21 | 2019–20 ಮತ್ತು 2020–21 | 2018–19 | 2017–18 | --- | --- |
| 4 | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ 19(3)ನೇ ಅನುಚ್ಛೇದದಡಿಯಲ್ಲಿ | 2020–21 ರಿಂದ 2024–25 | 2019–20 | 2018–19 | 2018–19 | --- | --- |
| 5 | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ 19(3)ನೇ ಅನುಚ್ಛೇದದಡಿಯಲ್ಲಿ | 2020–21 ರಿಂದ 2024–25 | 2020–21 | 2019–20 | 2018–19 | --- | --- |
| 6 | ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ 19(2)ನೇ ಅನುಚ್ಛೇದದಡಿಯಲ್ಲಿ | 19 (2) | 2019–20 | 2018–19 | 2017–18 | --- | --- |
| 7 | ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ 19(2)ನೇ ಅನುಚ್ಛೇದದಡಿಯಲ್ಲಿ | 19 (2) | 2020–21 | 2020–21 | 2018–19 | --- | --- |
| 8 | ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ 19(2)ನೇ ಅನುಚ್ಛೇದದಡಿಯಲ್ಲಿ | 19 (2) | 2017–18 ಮತ್ತು 2018–19 | --- | --- | --- | 12 ತಿಂಗಳುಗಳು |
| 9 | ಕರ್ನಾಟಕ ಜೈವಿಕ ವೈವಿಧ್ಯ ಮಂಡಳಿ 20(1)ನೇ ಅನುಚ್ಛೇದದಡಿಯಲ್ಲಿ | 2014–15 (ಮುಂದಿನ) | 2019–20 | 2019–20 | 2018–19 | --- | --- |
| 10 | ಪರಿಹಾರ ಅರಣ್ಯೀಕರಣ ನಿಧಿ ನಿರ್ವಹಣೆ ಮತ್ತು ಯೋಜನಾ ಪ್ರಾಧಿಕಾರ 20(1)ನೇ ಅನುಚ್ಛೇದದಡಿಯಲ್ಲಿ | 2009–10 (ಮುಂದಿನ) | 2016–18 | 2015–16 | -- | 2019–20 | 29 ತಿಂಗಳುಗಳು |
| 11 | ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ 19(3)ನೇ ಅನುಚ್ಛೇದದಡಿಯಲ್ಲಿ | 2019–20 ರಿಂದ 2023–24 | 2019–20 | 2018–19 | 2017–18 | 2020–21 | 6 ತಿಂಗಳುಗಳು |
| 12 | ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ 19(3)ನೇ ಅನುಚ್ಛೇದದಡಿಯಲ್ಲಿ | 2017–18 ರಿಂದ 2021–22 | 2019–20 | 2018–19 | 2018–19 | 2020–21 | 7 ತಿಂಗಳುಗಳು |
| 13 | ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ 19(2)ನೇ ಅನುಚ್ಛೇದದಡಿಯಲ್ಲಿ | 19(2) | 2019–20 | 2019–20 | 2018–19 | 2020–21 | 3 ತಿಂಗಳುಗಳು |

# ಅನುಬಂಧ–3

## (ಕಂಡಿಕೆ 1.10.1ರಲ್ಲಿ ಉಲ್ಲೇಖಿಸಲಾಗಿದೆ)

## 31 ಮಾರ್ಚ್ 2021ರವರೆಗೆ ಜಾರಿ ಮಾಡಿರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ಬಾಕಿಯ ವರ್ಷಾವಾರು ವಿವರಗಳು

| ಕ್ರಮ ಸಂಖ್ಯೆ | ಇಲಾಖೆ | ಒಂದು ವರ್ಷಕ್ಕೂ ಕಡಿಮೆ | | 1ರಿಂದ 2 ವರ್ಷಗಳು | | 2ರಿಂದ 5 ವರ್ಷಗಳು | | 5ರಿಂದ 10 ವರ್ಷಗಳು | | 10 ವರ್ಷಗಳಿಗೂ ಅಧಿಕ | | ಒಟ್ಟು | |
|---|---|---|---|---|---|---|---|---|---|---|---|---|---|
| | | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ | ಐಆರ್‌ಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
| 1 | ಅರಣ್ಯ, ಜೀವಿಪರಿಸರ ಮತ್ತು ಪರಿಸರ | 25 | 254 | 34 | 395 | 74 | 501 | 140 | 578 | 0 | 0 | **273** | **1,728** |
| 2 | ಸಾರಿಗೆ | 25 | 245 | 44 | 215 | 132 | 509 | 93 | 183 | 2 | 3 | **296** | **1,155** |
| 3 | ಲೋಕೋಪಯೋಗಿ | 55 | 567 | 46 | 329 | 165 | 1,023 | 158 | 545 | 0 | 0 | **424** | **2,464** |
| 4 | ಮೂಲಸೌಕರ್ಯ ಅಭಿವೃದ್ಧಿ | 2 | 15 | 2 | 13 | 6 | 44 | 5 | 20 | 0 | 0 | **15** | **92** |
| 5 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ | 1 | 5 | 1 | 7 | 8 | 56 | 9 | 35 | 0 | 0 | **19** | **103** |
| 6 | ಗೃಹ | 0 | 0 | 5 | 42 | 47 | 551 | 73 | 237 | 57 | 88 | **182** | **918** |
| 7 | ವಸತಿ | 1 | 33 | 0 | 0 | 6 | 118 | 24 | 194 | 63 | 105 | **94** | **450** |
| 8 | ನಗರಾಭಿವೃದ್ಧಿ | 3 | 55 | 23 | 262 | 29 | 290 | 62 | 347 | 83 | 148 | **200** | **1,102** |
| 9 | ಕಾನೂನು | 0 | 0 | 0 | 0 | 76 | 492 | 43 | 154 | 155 | 321 | **274** | **967** |
| 10 | ಕೈಗಾರಿಕೆಗಳು ಮತ್ತು ವಾಣಿಜ್ಯ | 0 | 0 | 22 | 106 | 31 | 168 | 34 | 195 | 8 | 10 | **95** | **479** |
| 11 | ಎಮ್‌ಎಸ್‌ಎಮ್‌ಇ ಮತ್ತು ಗಣಿಗಳು | 5 | 70 | 27 | 224 | 26 | 106 | 56 | 265 | 1 | 2 | **115** | **667** |
| 12 | ಪ್ರವಾಸೋದ್ಯಮ | 0 | 0 | 15 | 80 | 1 | 14 | 4 | 106 | 0 | 0 | **20** | **200** |
| 13 | ಫ್ಯಾಕ್ಟರಿಗಳು ಮತ್ತು ಬಾಯ್ಲರ್‌ಗಳು | 0 | 0 | 6 | 29 | 1 | 2 | 0 | 0 | 0 | 0 | **7** | **31** |
| 14 | ದತ್ತಿ | 0 | 0 | 5 | 74 | 2 | 18 | 4 | 38 | 2 | 4 | **13** | **134** |
| 15 | ಕನ್ನಡ ಮತ್ತು ಸಂಸ್ಕೃತಿ | 0 | 0 | 15 | 76 | 21 | 115 | 40 | 243 | 33 | 89 | **109** | **523** |
| 16 | ಇಂಧನ | 0 | 0 | 6 | 18 | 17 | 37 | 0 | 0 | 0 | 0 | **23** | **55** |
| | **ಒಟ್ಟು** | **117** | **1,244** | **251** | **1,870** | **642** | **4,044** | **745** | **3,140** | **404** | **770** | **2,159** | **11,068** |

## ಅನುಬಂಧ–4

***(ಕಂಡಿಕೆ 1.10.2ರಲ್ಲಿ ಉಲ್ಲೇಖಿಸಲಾಗಿದೆ)***

**31 ಡಿಸೆಂಬರ್ 2022ರಲ್ಲಿದ್ದಂತೆ ಬಾಕಿಯಿರುವ ಇಲಾಖಾ ಟಿಪ್ಪಣಿಗಳ ವಿವರಗಳು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ)**

| ಕ್ರಮ ಸಂಖ್ಯೆ | ಇಲಾಖೆ | 2003–04 | 2004–05 | 2005–06 | 2006–07 | 2007–08 | 2008–09 | 2009–10 | 2010–11 | 2011–12 | 2012–13 | 2013–14 | 2014–15 | 2015–16 | 2016–17 | 2017–18 | 2018–19 | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|
| 1 | ಅರಣ್ಯ, ಜೀವಿಪರಿಸರ ಮತ್ತು ಪರಿಸರ | | | | | | | | | | | | | | | | 3 | **3** |
| 2 | ಸಾರಿಗೆ | 5 | 1 | 1 | 4 | 4 | 4 | 2 | 3 | 3 | 1 | | | 2 | | | | **30** |
| 3 | ಲೋಕೋಪಯೋಗಿ | | | | | | | | | | | | | 2 | 1 | | 2 | **5** |
| 4 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ | | | | | | | | | | 1 | | | | | | | **1** |
| 5 | ನಗರಾಭಿವೃದ್ಧಿ | 1 | 1 | | 1 | | | 1 | | | | | | | 1 | | | **5** |
| 6 | ಗೃಹ | | | | | | | | 1 | | | | | | | | | **1** |
| 7 | ಕೈಗಾರಿಕೆಗಳು ಮತ್ತು ವಾಣಿಜ್ಯ | | | | | | | | 1 | | | 4 | | | | | | **5** |
| 8 | ಕನ್ನಡ ಮತ್ತು ಸಂಸ್ಕೃತಿ | | | | | | | | | | | | | | | 1 | | **1** |
| 9 | ಗಣಿ ಮತ್ತು ಭೂವಿಜ್ಞಾನ | | | 1 | | 1 | 1 | 3 | | 1 | 5 | 2 | 5 | 3 | 3 | 1 | 1 | **27** |
| | **ಒಟ್ಟು** | **6** | **2** | **2** | **5** | **5** | **5** | **6** | **5** | **4** | **7** | **6** | **5** | **7** | **5** | **2** | **6** | **78** |

# ಅನುಬಂಧ–5

## *(ಕಂಡಿಕೆ 1.10.3ರಲ್ಲಿ ಉಲ್ಲೇಖಿಸಲಾಗಿದೆ)*

## ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಚರ್ಚಿಸಬೇಕಿರುವ ಕಂಡಿಕೆಗಳು

| ಕ್ರಮ ಸಂಖ್ಯೆ | ಇಲಾಖೆ* | 2003–04 | 04–05 | 05–06 | 06–07 | 07–08 | 08–09 | 09–10 | 10–11 | 11–12 | 12–13 | 13–14 | 14–15 | 15–16 | 16–17 | 17–18 | 18–19 | ಒಟ್ಟು |
|---|---|---|---|---|---|---|---|---|---|---|---|---|---|---|---|---|---|---|
| 1 | ಅರಣ್ಯ, ಜೀವಿಪರಿಸರ ಮತ್ತು ಪರಿಸರ | 1 | | | | 1 | | | | 1 | | | 1 | 3 | 1 | | 3 | **11** |
| 2 | ಸಾರಿಗೆ | 5 | 1 | 1 | 4 | 4 | 4 | 2 | 3 | 3 | 1 | | | 2 | | | | **30** |
| 3 | ಲೋಕೋಪಯೋಗಿ | | | | | | | | | | 5 | | | 5 | 1 | | 3 | **14** |
| 4 | ಮೂಲಸೌಕರ್ಯ ಅಭಿವೃದ್ಧಿ, ಬಂದರುಗಳು & ಒಳನಾಡು ಜಲಸಾರಿಗೆ | 1 | | | | | | | | | | | | | | | | **1** |
| 5 | ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ | 2 | | | | | | | | | 2 | | | | | | | **4** |
| 6 | ಗೃಹ | | | | | | | | 1 | | | 1 | | | | | | **2** |
| 7 | ವಸತಿ | | 1 | 1 | | | | | | | 1 | 1 | | | | 1 | 1 | **6** |
| 8 | ನಗರಾಭಿವೃದ್ಧಿ | 1 | 1 | | 2 | 1 | | 1 | 3 | 2 | 1 | | | 2 | 2 | | | **16** |
| 9 | ಕೈಗಾರಿಕೆಗಳು ಮತ್ತು ವಾಣಿಜ್ಯ | | | | | | 1 | | 1 | | | 1 | 2 | | 1 | | | **6** |
| 10 | ಕನ್ನಡ ಮತ್ತು ಸಂಸ್ಕೃತಿ | | | | | | | | | | | | | | | 1 | | **1** |
| 11 | ಗಣಿ ಮತ್ತು ಭೂವಿಜ್ಞಾನ | | | 1 | | 1 | 1 | 3 | | 1 | 5 | 2 | 5 | 3 | 3 | 1 | 1 | **27** |
| 12 | ಪ್ರವಾಸೋದ್ಯಮ | | | | | | | | | | | | 1 | | 1 | | | **2** |
| | **ಒಟ್ಟು** | **10** | **3** | **3** | **6** | **7** | **6** | **6** | **8** | **7** | **15** | **5** | **9** | **15** | **9** | **3** | **8** | **120** |

* ಕರ್ನಾಟಕದಲ್ಲಿ ಎನ್‌ಪಿಡಬ್ಲ್ಯುಎಲ್‌ಎಸ್‌ನ ಆಡಳಿತದ ಮೇಲಿನ ಸ್ವತಂತ್ರ ವರದಿಯೊಂದನ್ನು ಒಳಗೊಂಡಿದೆ.

**ಅನುಬಂಧ–6**

***(ಕಂಡಿಕೆ 2.1ರಲ್ಲಿ ಉಲ್ಲೇಖಿಸಲಾಗಿದೆ)***

**ಕಣಿಮಿಣಿಕೆ ಹಂತ I ಅಡಿಯಲ್ಲಿ ಅಪೂರ್ಣ ರಚನೆಗಳನ್ನು ತೋರಿಸುವ ಚಿತ್ರಗಳು**

**ಚಿತ್ರ:1**



**ಭಾಗಶಃ ಸೂಪರ್ ರಚನೆ 1 ಬಿಹೆಚ್‌ಕೆ ಬ್ಲಾಕ್**

**ಚಿತ್ರ:2**



**1 ಬಿಹೆಚ್‌ಕೆ ಫ್ಲಾಟ್‌ನಲ್ಲಿ ನೀರಿನಿಂದಾದ ಅಡಚಣೆ**

**ಚಿತ್ರ:3**




**ಭಾಗಶಃ ಪೂರ್ಣಗೊಂಡ 2 ಬಿಹೆಚ್‌ಕೆ ಬ್ಲಾಕ್**

**ಚಿತ್ರ:4**




**ಭಾಗಶಃ ಪೂರ್ಣಗೊಂಡ 3 ಬಿಹೆಚ್‌ಕೆ ಬ್ಲಾಕ್**

**ಅನುಬಂಧ–7**

***(ಕಂಡಿಕೆ 2.4ರಲ್ಲಿ ಉಲ್ಲೇಖಿಸಲಾಗಿದೆ)***

**ಪಾಲಿಮರ್ ರಕ್ಷಣಾತ್ಮಕ ಲೇಪನಕ್ಕಾಗಿ ಭರಿಸಲಾದ ಹೆಚ್ಚುವರಿ ವೆಚ್ಚವನ್ನು ತೋರಿಸುವ ವಿವರಗಳು**

| ಕ್ರಮ ಸಂಖ್ಯೆ | ಪ್ಯಾಕೇಜ್ ಹೆಸರು | **RA** ಬಿಲ್ ವಿವರಗಳು | ಪೈಪ್ ವ್ಯಾಸ (ಮಿಮೀ) | ಕಾರ್ಯಗತಗೊಳಿಸಲಾದ ಪ್ರಮಾಣ (ಚದರ ಮೀಟರ್‌ಗಳಲ್ಲಿ) | ದರ/ಚ.ಮೀ (₹) | ವೆಚ್ಚ (₹ ನಲ್ಲಿ) | **RA** ಬಿಲ್ ಪಾವತಿ ದಿನಾಂಕ |
|---|---|---|---|---|---|---|---|
| 1 | ಜಿಬಿಎಸ್-1 | 18ನೇ RA ಬಿಲ್ | 900 | 4989.00 | 2399.00 | 11968611.00 | ಆಗಸ್ಟ್ -18 |
| | | | | 510.32 | 2399.00 | 1224257.68 | |
| | | | | 500.98 | 2399.00 | 1201851.02 | |
| | | | | 357.86 | 969.84 | 347066.94 | |
| | | | | 3365.00 | 2399.00 | 8072635.00 | |
| | | | | 682.63 | 2399.00 | 1637629.37 | |
| | | | | 13.24 | 1185.10 | 15690.72 | |
| 2 | ಜಿಬಿಎಸ್-2A | 20ನೇ RA ಬಿಲ್ | 400-800 | 10742.93 | 1409.00 | 15136788.37 | ಫೆಬ್ರವರಿ -18 |
| 3 | ಜಿಬಿಎಸ್-2B | 24ನೇ RA ಬಿಲ್ | >900 | 2393.95 | 629.00 | 1505794.55 | ಡಿಸೆಂಬರ್ -15 |
| 4 | ಜಿಬಿಎಸ್-2C | 20ನೇ RA ಬಿಲ್ | 400-800 | 2805.37 | 780.00 | 2188188.60 | ಜುಲೈ -16 |
| | | | >900 | 1799.54 | 800.00 | 1439632.00 | |
| 5 | ಜಿಬಿಎಸ್-2D | 31ನೇ RA ಬಿಲ್ | >900 | 24341.34 | 202.70 | 4933989.62 | ಜುಲೈ -16 |
| 6 | ಜಿಬಿಎಸ್-3A | 25ನೇ RA ಬಿಲ್ | 400-800 | 1019.96 | 1800.00 | 1835928.00 | ಮಾರ್ಚ್ -18 |
| 7 | ಜಿಬಿಎಸ್-3B | 45ನೇ RA ಬಿಲ್ | 400-800 | 3592.30 | 1150.00 | 4131145.00 | ಮಾರ್ಚ್ -18 |
| 8 | ಜಿಬಿಎಸ್-3D | 17ನೇ RA ಬಿಲ್ | 400-800 mm | 3013.44 | 1300.00 | 3917472.00 | ಮಾರ್ಚ್ -15 |
| | | | >900 | 1000.00 | 1300.00 | 1300000.00 | |
| 9 | ಜಿಬಿಎಸ್-3E | 23ನೇ RA ಬಿಲ್ | 400-800 | 467.08 | 1400.00 | 653912.00 | ಮಾರ್ಚ್ -16 |
| | | | >900 | 3348.00 | 1300.00 | 4352400.00 | |
| | | | | 1880.00 | 1300.00 | 2444000.00 | |
| 10 | ಜಿಬಿಎಸ್-3F | 20ನೇ RA ಬಿಲ್ | 400-800 | 4512.64 | 648.00 | 2924190.72 | ಆಗಸ್ಟ್ -16 |
| | | | >900 | 1600.00 | 648.00 | 1036800.00 | |
| | | | | 400.00 | 648.00 | 259200.00 | |
| | | | | 1239.93 | 648.00 | 803474.64 | |
| 11 | ಜಿಬಿಎಸ್-4A | 22ನೇ RA ಬಿಲ್ | 400-800 | 8018.20 | 648.00 | 5195793.60 | ಮಾರ್ಚ್ -15 |
| | | | >900 | 2249.85 | 648.00 | 1457902.80 | |
| 12 | ಜಿಬಿಎಸ್-4B | 42ನೇ RA ಬಿಲ್ | 400-800 | 8153.32 | 1150.00 | 9376318.00 | ಮಾರ್ಚ್ -17 |
| | | | >900 | 8970.00 | 1200.00 | 10764000.00 | |
| | | | | 2420.00 | 960.00 | 2323200.00 | |
| | | | | 2420.00 | 240.00 | 580800.00 | |
| 13 | ಜಿಬಿಎಸ್-4C | 43ನೇ RA ಬಿಲ್ | 400-800 | 9986.94 | 1150.00 | 11484981.00 | ಜೂನ್ -17 |
| | | | >900 | 12566.00 | 1200.00 | 15079200.00 | |
| 14 | ಜಿಬಿಎಸ್-4E | 22ನೇ RA ಬಿಲ್ | 2000 | 41363.93 | 2024.00 | 83720594.32 | ಆಗಸ್ಟ್-17 |
| | | | | 6529.23 | 2024.00 | 13215161.52 | |

## ಅನುಬಂಧ–7 (ಮುಂದುವರಿದಿದೆ)

| ಕ್ರಮ ಸಂಖ್ಯೆ | ಪ್ಯಾಕೇಜ್ ಹೆಸರು | RA ಬಿಲ್ ವಿವರಗಳು | ಪೈಪ್ ವ್ಯಾಸ (ಮಿಮೀ) | ಕಾರ್ಯಗತಗೊಳಿಸಲಾದ ಪ್ರಮಾಣ (ಚದರ ಮೀಟರ್‌ಗಳಲ್ಲಿ) | ದರ / ಚ.ಮೀ (₹) | ವೆಚ್ಚ (₹ ನಲ್ಲಿ) | RA ಬಿಲ್ ಪಾವತಿ ದಿನಾಂಕ |
|---|---|---|---|---|---|---|---|
| 15 | **ಜಿಬಿಎಸ್**-4F | 28ನೇ RA ಬಿಲ್ | 400-800 | 2380.00 | 2216.00 | 5274080.00 | ಮೇ -17 |
| | | | | 671.06 | 2216.00 | 1487068.96 | |
| | | | >900 | 34525.24 | 2156.00 | 74436417.44 | |
| 16 | **ಜಿಬಿಎಸ್**-5B | 36ನೇ RA ಬಿಲ್ (ಅಂತಿಮ) | 400-800 | 1637.70 | 1450.00 | 2374665.00 | ಜನವರಿ -11 |
| | | | >900 | 10474.00 | 1100.00 | 11521400.00 | |
| | | | | 1053.56 | 1100.00 | 1158916.00 | |
| 17 | **ಜಿಬಿಎಸ್**-06 | 15ನೇ RA ಬಿಲ್ (ಅಂತಿಮ) | | 9949.50 | 1900.00 | 18904050.00 | ಜುಲೈ -15 |
| 18 | **ಜಿಬಿಎಸ್**-7A | 36ನೇ RA ಬಿಲ್ | >900 | 4049.95 | 1150.00 | 4657442.50 | ಫೆಬ್ರವರಿ -17 |
| | | | | 1101.00 | 1200.00 | 1321200.00 | |
